ಬಿಸಿಲ
ಜುಲೈ 2000 ರೂ. 10

ಬದುಕು



ನಿರಂತರ ಪ್ರಕಟಣೆಯ 4 ನೇ ವರ್ಷ



ಆಪ್ತ ಸಮಾಲೋಚನೆ

ಓದುಗರ ಒತ್ತಾಸೆ ಮೇರೆಗೆ 'ಆಪ್ತ ಸಮಾಲೋಚನೆ' ಅಂಕಣ ಈ ಸಂಚಿಕೆಯಿಂದ ಮತ್ತೆ ಪ್ರಾರಂಭ! ಡಾ.ವಸುಂಧರಾ ಭೂಪತಿ ನಿಮ್ಮ ಗುಪ್ತ ಸಮಸ್ಯೆಗಳಿಗೆ ಉತ್ತರಿಸುತ್ತಾರೆ.

ಬದುಕು ದೀಪಾವಳಿ ವಿಶೇಷಾಂಕ 2000

ನಿಮಗೊಂದು ಸಂತಸದ ಸುದ್ದಿ!

ಈ ವರ್ಷವೂ 'ಬದುಕು' ದೀಪಾವಳಿ ವಿಶೇಷಾಂಕವನ್ನು ನಿಮ್ಮ ಕೈಗೆ ಇಡಲಿದ್ದೇವೆ.

ಬರಹಗಳಿಗೆ ಆಹ್ವಾನ

ಓದುಗರ ವೇದಿಕೆ

- **"ಐ ಲವ್ ಯೂ" ಎಂದ ಮಧುರ ಕ್ಷಣ!:** ನೀವು "ಐ ಲವ್ ಯೂ" ಎಂದ ಘಳಿಗೆಯ ನೆನಪು ನಿಮಗಿದೆಯೋ? 'ಐ ಲವ್ ಯೂ' ಎಂದು ನೀವು ಸಂಗಾತಿಯೆದುರು ಪಿಸುಗುಟ್ಟಿರಬಹುದು ಅಥವಾ ಮನದಲ್ಲೇ ಗುಟ್ಟಾಗಿ ಗುನುಗಿರಬಹುದು ಅಥವಾ ಪತ್ರದಲ್ಲೇ ಪ್ರಪ್ರಥಮವಾಗಿ ಬರೆದಿರಬಹುದು. ಆ ಮಧುರ ಕ್ಷಣವನ್ನು ನೆನೆದು ಒಂದು ಪುಟದಲ್ಲಿ ನಿಮ್ಮ ಭಾವನೆಗಳನ್ನು ಬರೆದು ಕಳಿಸಿ.
- **ಅಗಲಿದ ಆಪ್ತರು:** ನಿಮ್ಮ ಆಪ್ತರು ಅಗಲಿದ ಸುದ್ದಿ ಕೇಳಿದಾಗ ನಿಮಗೆ ಹೇಗೆನ್ನಿಸಿತು? ಆಗ ಅವರ ಬಗ್ಗೆ ನಿಮಗೆ ಉಂಟಾದ ಭಾವನೆಯನ್ನು ಒಂದು ಪುಟದಲ್ಲಿ ಬರೆದು ಕಳಿಸಿ.
- **50 ವರ್ಷ ಮುಂದೆ!:** ಪ್ರಪಂಚ ಇದೇ ವೇಗದಲ್ಲಿ ಬದಲಾಗುತ್ತಾ ಸಾಗಿದರೆ 50 ವರ್ಷಗಳ ನಂತರ ನಮ್ಮ ಜೀವನ ಹೇಗಿರಬಹುದು? ಈ ನಿಟ್ಟಿನಲ್ಲಿ ನಿಮ್ಮ ಊಹೆಯನ್ನು ಹರಿಯಲು ಬಿಡಿ. ಅನ್ನಿಸಿದ್ದನ್ನು ಒಂದು ಪುಟದಲ್ಲಿ ಬರೆಯಿರಿ.

ಕತೆ, ಹಾಸ್ಯ ಲೇಖನ

- ಹಸ್ತ ಪ್ರತಿಯಲ್ಲಿ 5 ಪುಟ ಮೀರದ ಕತೆ, ಹಾಸ್ಯ ಲೇಖನಗಳನ್ನು ಪ್ರಕಟಣೆಗಾಗಿ ಕಳಿಸಬಹುದು. ದೀರ್ಘ ಬರಹಗಳು ಖಂಡಿತಾ ಬೇಡ.

ಕವನ, ಹನಿಗವನ

- ಆಸಕ್ತರಿಗೆ ಅರ್ಥವಾಗುವಂತಹ ಕವನ, ಕಚಗುಳಿ ಇಡುವ ಹನಿಗವನಗಳಿಗೆ ಸ್ವಾಗತ.

ಲೇಖನ, ಬಿಡಿ ಬರಹ

- ಬದುಕು ವಿಶೇಷಾಂಕದಲ್ಲಿ ಸೇರಲು ಅರ್ಹವೆನಿಸುವ ನಿಮ್ಮ ಆಯ್ಕೆಯ ವಿಷಯಗಳ ಲೇಖನ, ಚಿತ್ರ ಲೇಖನ, ಬಿಡಿ ಬರಹಗಳನ್ನು ಧಾರಾಳವಾಗಿ ಕಳಿಸಿ.

ವ್ಯಂಗ್ಯ ಚಿತ್ರಗಳು

- 'ಬದುಕು' ವಿಶೇಷಾಂಕದಲ್ಲಿ ವ್ಯಂಗ್ಯ ಚಿತ್ರಗಳಿಗೆ ವಿಶೇಷ ಮನ್ನಣೆ. ಚುರುಕು ಗೆರೆಗಳ ವ್ಯಂಗ್ಯ ಚಿತ್ರಗಳಿಗೆ ಆದ್ಯತೆ.

ವಿಶೇಷ ಸೂಚನೆ

- ಅಸ್ವೀಕೃತ ಬರಹಗಳನ್ನು ಹಿಂದಿರುಗಿ ಪಡೆಯಲು ಸಾಕಷ್ಟು ಅಂಚೆ ಚೀಟಿ ಹಚ್ಚಿದ ಸ್ವವಿಳಾಸದ ಲಕೋಟೆ ಕಳಿಸಿ. ಅಂತಿಮ ದಿನಾಂಕ : **30.7.2000.**

ವಿಳಾಸ : ಸಂಪಾದಕರು, 'ಬದುಕು' ದೀಪಾವಳಿ ವಿಶೇಷಾಂಕ, ಅಂಕುರ ಪ್ರಕಾಶನ, 552, 15ನೇ ಮುಖ್ಯರಸ್ತೆ, 3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್, ಬಸವೇಶ್ವರನಗರ, ಬೆಂಗಳೂರು 560 079. ಫೋನ್ : 3227810.

ಬದುಕು

ಜುಲೈ 2000 ಸಂಪುಟ 4 ಸಂಚಿಕೆ 1

- ಮೂಢನಂಬಿಕೆ ಮನುಷ್ಯನ ವಿಸ್ಮಯದ ಕರಾಳ ಮುಖ ಮಾತ್ರ.

- ಡೀನ್ ಕೂಂಟ್ಜ್

- ದೇವರ ಬಹುದೊಡ್ಡ ಕೊಡುಗೆಗಳೆಂದರೆ ನಮ್ಮ ಹಲವು ಈಡೇರದ ಮೊರೆಗಳು.

-ಗರ್ತ್ ಬ್ರುಕ್ಸ್

- ಗೆಲುವನ್ನು ಅಳೆಯುವುದು ಸುಲಭ. ನಾವು ಹೊರಟ ಜಾಗದಿಂದ ಮುಟ್ಟಿದ ಜಾಗದವರೆಗಿನ ಹಾದಿ ಅಳೆದರೆ ಸಾಕು.

- ಮೈಕೇಲ್ ಕೋರ್ಡಾ

- ಹೃದಯ ಮತ್ತು ಮನಸ್ಸುಗಳ ನಡುವಣ ಸೇತುವೆಯ ಕೆಳಗೆ ಹುದುಗಿರುವ ವಿಕಾರ ಪ್ರಾಣಿಯೇ ನಮ್ಮ ಅಹಂ.

- ಡೆನಿಸ್ ಮಿಲರ್

- ಬದುಕು ಅತ್ಯಂತ ವ್ಯವಸ್ಥಿತವಾಗಿ ಇರುವಷ್ಟು ಎಂದೂ ಸರಳವಾಗಿರುವುದಿಲ್ಲ.

- ಮಾರ್ಥಾ ಸ್ಟೀವರ್ಟ್

ಸಂಪಾದಕ

ಚಂದ್ರಕಾಂತ ವಡ್ಡು

ಕಾರ್ಯ ನಿರ್ವಾಹಕ ಸಂಪಾದಕ

ಎಂ.ಎಲ್.ದೇಶಿಕರ್

ಉಪ ಸಂಪಾದಕ

ಎಚ್.ಆರ್. ವಸ್ತ್ರದ

ನಿರ್ವಹಣೆ

ಸಿದ್ದಪ್ಪ ವೈ. ಕಬ್ಬೂರ

ಅಕ್ಷರ ಜೋಡಣೆ

ಪ್ರಕಾಶ್ ಎಂ. ವಾಲಿ

ವಿ. ಕೋಕಿಲ

ವಿಳಾಸ :

'ಬದುಕು' ಮಾಸಪತ್ರಿಕೆ,

ಅಂಕುರ ಪ್ರಕಾಶನ, 552, 15ನೇ ಮೇನ್, 3ನೇ ಸ್ಟೇಜ್,

4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್, ಬಸವೇಶ್ವರ ನಗರ,

ಬೆಂಗಳೂರು - 560079 ☏ : 3227810

Printed, Published and Owned by Chandrakanta Vaddu, 552, 15th Main, 3rd Stage, 4th Block, Water Tank Road, Basaveshwaranagar, Bangalore-560 079. Tel : 080 3227810 Email:Ankura@rediffmail.com Pager No : 9622 738638 Editor : Chandrakanta Vaddu



ಮೌಲ್ಯ

ಆತ ಮಾತುಗಾರ.

ತನ್ನ ಮಾತಿಂದಲೇ ಕಣ್ಣು ತೆರೆಸಬಲ್ಲ ಮೋಡಿಗಾರ. ಆತನ ಪ್ರಸಿದ್ಧಿ ಕೇಳಿಯೇ ಕುತೂಹಲದಿಂದ ಬಂದವರೇ ಹೆಚ್ಚು.

ನೂರಕ್ಕೂ ಹೆಚ್ಚು ಜನ ತುಂಬಿದ ವಿಶೇಷ ಸಭೆ. ಆತ ಬಂದೊಡನೆ ನಿಃಶಬ್ದ ಮೂಡಿತು. ಎಲ್ಲರಿಗೂ ಮಾತುಗಾರ ಏನು ಮಾತಾಡುತ್ತಾನೋ ಎಂಬ ತವಕ. ಒಂದು ಸಣ್ಣ ಶಬ್ದವನ್ನೂ ತಪ್ಪಿಸಿಕೊಳ್ಳಬಾರದು ಎಂಬ ಕಾಳಜಿ.

ವೇದಿಕೆಯಲ್ಲಿ ಮಾತುಗಾರ ನಿಂತ. ಕೈಯಲ್ಲೊಂದು ಹೊಚ್ಚ ಹೊಸ ನೂರು ರೂಪಾಯಿ ನೋಟು. ಎಲ್ಲರಿಗೂ ಕಾಣುವಂತೆ ಎತ್ತಿ ಹಿಡಿದ. ಹೇಳಿದ.

'ನಿಮ್ಮಲ್ಲಿ ಯಾರಿಗೆ ಬೇಕು ಇದು?'

'ನನಗೆ ಬೇಕು' ಎಂಬಂತೆ ಎಲ್ಲರ ಕೈ ಮೇಲೆದ್ದವು.

'ಇರಿ. ಇದನ್ನು ನಿಮ್ಮಲ್ಲಿ ಒಬ್ಬರಿಗೆ ಕೊಡುವೆ. ಅದಕ್ಕೆ ಮುಂಚೆ ಸ್ವಲ್ಪ ಕೆಲಸ ಇದೆ' ಎನ್ನುತ್ತಾ ಎತ್ತಿ ಎಲ್ಲರಿಗೂ ಕಾಣುವಂತೆ ಹಿಡಿದಿದ್ದ ನೂರರ ಹೊಚ್ಚ ಹೊಸ ನೋಟನ್ನು ಹಿಂಡಿ ಹಿಪ್ಪೆ ಮಾಡಿದ. ನಂತರ ಹೇಳಿದ,

'ಯಾರಿಗೆ ಬೇಕು ಹೇಳಿ ಈಗಿದು?'

ಎಲ್ಲರ ಕೈಗಳೂ ಮೊದಲಿನಂತೆಯೇ ಮೇಲೆದ್ದವು.

ನಗುತ್ತಾ ಮಾತುಗಾರ ಹೇಳಿದ.

'ಇರಿ. ನಿಮ್ಮಲ್ಲಿ ಒಬ್ಬರಿಗೆ ಇದು ಸಿಗಬೇಕು. ಅದಕ್ಕೆ ಮುಂಚೆ ಒಂದು ಸಣ್ಣ ಕೆಲಸ ಇದೆ' ಎನ್ನುತ್ತಾ ಮುದುಡಿದ್ದ ನೋಟನ್ನು ನೆಲಕ್ಕೆ ಹಾಕಿ, ಬೂಟುಗಾಲಲ್ಲಿ ತುಳಿದ, ತಿಕ್ಕಿದ.

ಮೊದಲೇ ರೂಪ ಕಳೆದುಕೊಂಡು ವಿಕಾರವಾಗಿದ್ದ ನೋಟು ಬಣ್ಣಗೆಟ್ಟಿತು. ಅದನ್ನೆತ್ತಿ ಹಿಡಿದು ಹೇಳಿದ.

'ಯಾರಿಗೆ ಬೇಕು ಈ ನೋಟು?'

ಮತ್ತೆ ಅದೇ ಕೈಗಳು ಮೇಲೆದ್ದವು.

ವೇದಿಕೆಯ ಮೇಲಿದ್ದ ಮೇಜಿನ ಮೇಲೆ ವಿಕಾರವಾಗಿ, ಬಣ್ಣಗೆಟ್ಟಿದ್ದ ನೋಟು ಇಡುತ್ತಾ ಮಾತುಗಾರ ಹೇಳಿದ

'ಸ್ನೇಹಿತರೇ, ನೀವು ಇವತ್ತು ಒಂದು ಪಾಠ ಕಲಿತಿರಿ. ನೂರು ರೂಪಾಯಿ ನೋಟಿಗೆ ನಾನು ಏನೆಲ್ಲ ಮಾಡಿದರೂ, ಅದರ ಮೌಲ್ಯವೇನೂ ಕಡಿಮೆ ಆಗಲಿಲ್ಲ. ಈಗಲೂ ಅದು ನೂರು ರೂಪಾಯಿ ನೋಟೇ.....,

'ನಮ್ಮ ಜೀವನದಲ್ಲಿ ನಾವು ಬೀಳುತ್ತೇವೆ, ಮುದುಡುತ್ತೇವೆ, ನಾವು ತೆಗೆದುಕೊಳ್ಳುವ ನಿರ್ಧಾರಗಳಿಂದ ಧೂಳಲ್ಲಿ ಬಿದ್ದು ಹೊರಳುತ್ತೇವೆ. ಇಂಥ ಎಷ್ಟೋ ಸನ್ನಿವೇಶಗಳಲ್ಲಿ ನಾವು ಯಾವುದಕ್ಕೂ ಪ್ರಯೋಜನ ಇಲ್ಲ ಅಂದುಕೊಳ್ಳುತ್ತೇವೆ...

'ಆದರೆ ಒಂದು ನೆನಪಿಡಿ. ಏನೇ ಬಂದರೂ, ಏನೇ ಆದರೂ ನಮ್ಮ ಮೌಲ್ಯ ಬದಲಾಗುವುದಿಲ್ಲ... ಈ ನೋಟಿನ ಹಾಗೆ... ಆ ಕಾರಣಕ್ಕೇ ಪ್ರತಿಯೊಬ್ಬನೂ ವಿಶಿಷ್ಟ....'

ಟಪಾಲು

ಆಕರ್ಷಕ

ಜೂನ್ ತಿಂಗಳ 'ಬದುಕು' ಸಂಚಿಕೆಯು ವಿಶ್ವ ಸುಂದರಿ ಲಾರಾದತ್ತಾಳ ಆಕರ್ಷಕ ಮುಖಪುಟದೊಂದಿಗೆ ಚೆನ್ನಾಗಿ ಮೂಡಿ ಬಂದಿದೆ. ವಿಶ್ವ ಸುಂದರಿ ಸ್ಪರ್ಧೆಯ ವಿವಿಧ ಮಜಲುಗಳನ್ನು ಪರಿಚಯಿಸಿದ ಈ ಲೇಖನ ನಿಜಕ್ಕೂ ಪರಿಣಾಮಕಾರಿಯಾಗಿತ್ತು. ಹಾಗೇ ಹಿರಿಯ ರಾಜಕಾರಣಿ ಎಂ.ವೈ.ಘೋರ್ಪಡೆ ಬಗೆಗಿನ ಲೇಖನ ಅವರ ಬಾಲ್ಯದ ರೋಚಕ ಘಟನೆಗಳನ್ನು ಸ್ವಾರಸ್ಯವಾಗಿ ಚಿತ್ರಿಸುವುದಲ್ಲದೇ ಅವರ ವ್ಯಕ್ತಿತ್ವದ ನೈಜ ಪರಿಚಯ ಮಾಡಿ ಕೊಡುವಲ್ಲಿ ಯಶಸ್ವಿಯಾಗಿದೆ.

- ಅನ್ನಪೂರ್ಣ ಬಿ.ಪಾಟೀಲ, ನೇಬಗೇರಿ

ಸಂಗ್ರಹಯೋಗ್ಯ ಲೇಖನ

ಜೂನ್ 2000ನೇ ಸಂಚಿಕೆಯಲ್ಲಿ ಪ್ರಕಟವಾದ 'ಆ ಬಾಲ ವೃದ್ಧರನ್ನು ಕಾಡುವ ಅಸ್ತಮಾ' ಸಚಿತ್ರ ಲೇಖನ ತುಂಬಾ ಉಪಯುಕ್ತ ಹಾಗೂ ಸಂಗ್ರಹ ಯೋಗ್ಯವಾಗಿತ್ತು. ಶತಮಾನದ ಬರ, ಸುಂದರಿಯರ ಬೀಡಲ್ಲಿ ಕೋಲಾಹಲ ಲೇಖನಗಳು ತುಂಬಾ ಪರಿಣಾಮಕಾರಿಯಾಗಿ ಮೂಡಿ ಬಂದಿವೆ.

'ಬದುಕು' ಬಳಗಕ್ಕೆ ನನ್ನ ನಮನಗಳು.

- ಹನುಮಂತರಾವ್ ಭಜಂತ್ರಿ, ತುಳಸಿಗಿರಿ



ದೇಹ ಪ್ರದರ್ಶನ ಬೇಡ

ಜೂನ್ ಸಂಚಿಕೆಯಲ್ಲಿ ಪ್ರಕಟವಾದ ಅನಿತಾ ಆರ್.ಎಸ್. ಅವರ ಲೇಖನ 'ಸುಂದರಿಯರ ಬೀಡಲ್ಲಿ ಕೋಲಾಹಲ' ಲೇಖನ ವಿಶ್ವಸುಂದರಿಯ ಆಯ್ಕೆಯಲ್ಲಿ ಮ್ಯಾಚ್ ಫಿಕ್ಸಿಂಗ್‌ದ ಅನುಮಾನ ಕಂಡು ಬಂದರೆ ಅಚ್ಚರಿ ಇಲ್ಲ. ನಮಗೆ ಈ ವಿಶ್ವ ಸುಂದರಿಯ ಅಗತ್ಯವೂ ಇಲ್ಲ. ದೇಹ ಪ್ರದರ್ಶನಕ್ಕೆ ಈ ವೇದಿಕೆ ಬೇಡವೇ ಬೇಡ!

- ಗೋಪಾಲಕೃಷ್ಣ ಕಾಮತ್ (ಗೋಪಿ), ಹಿರೇಬೆಟ್ಟು

ಅಚ್ಚರಿಯಾಯ್ತು!

ಜೂನ್ ಸಂಚಿಕೆಯ ಮುಖಪುಟದಲ್ಲಿ ಅಳುತ್ತಿರುವ ಕಪಿಲ್‌ದೇವ್‌ರನ್ನು ಕಂಡು ಅವರ ಪರಿಸ್ಥಿತಿ ನೆನೆದು ಅಯ್ಯೋ ಎನಿಸಿತು. ಪಾಪ, ಅವರು ಅಪರಾಧಿಯೋ, ನಿರಪರಾಧಿಯೋ, ಅವರಿಗೆ ಇಂಥ ಆರೋಪ ಬರಬಾರದಿತ್ತು. ಹಾಗೆಯೇ 'ಕರ್ನಾಟಕ ರಾಜಕೀಯದ ಸ್ಫೋಟಕ ಸತ್ಯಗಳು' ಎಂಬ ಲೇಖನವನ್ನು ಓದಿ ಅಚ್ಚರಿಯಾಯ್ತು! ಕರ್ನಾಟಕದ ರಾಜಕಾರಣಿಗಳ ವಿವಿಧ ಮುಖಗಳನ್ನು ಪರಿಚಯಿಸಿದ ಈ ಲೇಖನ ನಿಜಕ್ಕೂ ರಾಜಕೀಯದ ಮೇಲೆ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗಿದೆ.

- ಎಸ್.ವಿಜಯಕುಮಾರ್ ಅರಭಾವಿ, ಗೋಕಾಕ

ಬದುಕು ಬಾಳಲಿ

ಸಂಚಿಕೆಯಿಂದ, ಸಂಚಿಕೆಗೆ ವೈವಿಧ್ಯಮಯ ವಿಷಯ, ವಿವರಗಳೊಂದಿಗೆ ಮೂಡಿ ಬರುತ್ತಿರುವ 'ಬದುಕು' ಪತ್ರಿಕೆಯ ಸಾಧನೆ ನಿಜಕ್ಕೂ ಅವರ್ಣನೀಯ. ಎಲ್ಲಿಯೂ ಸಿಗದ ಅಪರೂಪದ ಮಾಹಿತಿಗಳು ಈಗ 'ಬದುಕು'ದಲ್ಲಿ ಲಭ್ಯವಾಗುತ್ತಿವೆ. ಸೃಜನಶೀಲ ಓದುಗರ ಕನ್ನಡಿಯಾಗಿರುವ 'ಬದುಕು' ನೂರ್ಕಾಲ ಬಾಳಲಿ ಎಂದು ಹಾರೈಸುವೆ.

- ರಾಜಶೇಖರ್ ಎಚ್., ಸಿರುಗುಪ್ಪ

ಕಪಿಲ್ ನಿರಪರಾಧಿಯೇ?

ಈ ಸಂಚಿಕೆಯಲ್ಲಿ ಪ್ರಕಟವಾದ 'ಅಳುವ ಗಂಡಸನ್ನು ನಂಬಬೇಕೆ?' ಲೇಖನ ಓದಿ ನಿಜಕ್ಕೂ ಅಚ್ಚರಿಯಾಯ್ತು. ಲೇಖನ ಓದುತ್ತ ಹೋದಂತೆ ಕಪಿಲ್ ಟಿ.ವಿ.ಸಂದರ್ಶನದಲ್ಲಿ ಅತ್ತಿದ್ದು ಅನುಮಾನಕ್ಕೆಡೆ ಮಾಡಿ ಕೊಡುತ್ತದೆ. ಆದರೂ ಈ ವಿಷಯದಲ್ಲಿ ಕಪಿಲ್ ಅಪರಾಧಿಯೇ, ನಿರಪರಾಧಿಯೇ ಎಂಬ ಅನುಮಾನ ಮೂಡುವುದು ಸಹಜ. ಆದರೂ 'ಯಾವ ಹುತ್ತದಲ್ಲಿ ಯಾವ ಹಾವೋ' ಎಂಬ ಮಾತಿನಂತೆ ಈ ಬಗ್ಗೆ ತಲೆಕೆಡಿಸಿಕೊಳ್ಳದಿರುವುದೇ ವಾಸಿ.

- ಎ.ಎಸ್.ಅಂಟೀನ್, ಧಾರವಾಡ.

ಸಹಕಾರ ಅಗತ್ಯ

ಜೂನ್ ಸಂಚಿಕೆಯಲ್ಲಿ ಪ್ರಕಟವಾದ 'ಟ್ರಾಫಿಕ್ ಜಾಮ್ ಪರಿಹಾರವೇನು?' ಎಂಬ ಲೇಖನ ನಿಜಕ್ಕೂ ವಾಸ್ತವತೆಗೆ ತೀರಾ ಹತ್ತಿರವಾಗಿತ್ತು. ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಬೆಂಗಳೂರು ಮಹಾನಗರದಲ್ಲಿ ಟ್ರಾಫಿಕ್ ಜಾಮ್ ಸಮಸ್ಯೆ ಹೆಚ್ಚುತ್ತಲಿದೆ. ಈ ಬಗೆಗಿನ ವಿಶ್ಲೇಷಣೆಗಳು ಹಾಗೂ ಕೆಲವು ಪರಿಹಾರೋಪಾಯಗಳನ್ನು ಅಳವಡಿಸಿಕೊಂಡರೆ ನಿಜಕ್ಕೂ ಸ್ವಲ್ಪ ಮಟ್ಟಿಗೆ ಸಮಸ್ಯೆಯನ್ನು ಪರಿಹರಿಸಬಹುದೇನೋ ಎಂದೆನಿಸುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರಿನ ನಾಗರಿಕರ ಸಹಕಾರ ಅಗತ್ಯ.

- ಎಚ್.ಸೋಮಶೇಖರ್, ಬೆಂಗಳೂರು.

ಅಭಿಮಾನವೆನಿಸಿತು

ಪತ್ರಿಕಾರಂಗದ ವಿವಿಧ ಮಜಲುಗಳನ್ನು ಪರಿಚಯಿಸುವ 'ಕೊನೆಗೂ ನ್ಯಾಯ ಸಿಕ್ಕಿತು' ಲೇಖನ (ಜೂನ್ 2000) ತುಂಬಾ ಅರ್ಥಪೂರ್ಣವಾಗಿ ಮೂಡಿಬಂದಿದೆ. ತೇಜೋವಧೆ, ಬೆದರಿಸಿ ಹಣ ಮಾಡುವುದೇ ಈಗ ಪತ್ರಿಕೋದ್ಯಮದ ದಂಧೆ ಆಗಿರುವುದು ನಿಜಕ್ಕೂ ವಿಷಾದದ ಸಂಗತಿ. ಪತ್ರಿಕೆ ನಡೆಸುವುದೇ ಅಪಾಯಕಾರಿ ಎಂಬ ಪರಿಸ್ಥಿತಿ ನಿರ್ಮಾಣವಾಗಿರುವ ಇಂಥ ಸಂದರ್ಭದಲ್ಲಿ ಅನ್ಯಾಯದ ವಿರುದ್ಧ ಹೋರಾಡಿ ನ್ಯಾಯ ದೊರಕಿಸಿಕೊಂಡ 'ಡೆ ಮಾಕ್ರ್ಯಾಟಿಕ್ ರಿಪೋರ್ಟರ್' ಪತ್ರಿಕೆಯ ಸಾಹಸದ ಬಗ್ಗೆ ತಿಳಿದು ತುಂಬಾ ಅಭಿಮಾನವೆನಿಸಿತು.

- ಪವಾಡ ಬಸವರಾಜ ನಾಯಕ, ಮುದ್ದೇಬಿಹಾಳ



ಒಳ ನೋಟ

ರಾಜಕೀಯ

ಕತೆ/ಕವನ

ಲಲಿತ ಪ್ರಬಂಧ

ಪ್ರಚಲಿತ

ವಿಜ್ಞಾನ-ಆರೋಗ್ಯ

ಕ್ರೀಡೆ

ವಿಶೇಷ ಲೇಖನಗಳು

ಸ್ಥಿರ ಶೀರ್ಷಿಕೆಗಳು

ಮುಂದಿನ ಸಂಚಿಕೆಯಲ್ಲಿ

ಕೌದಿ ಕತೆ

ಪಾಲಕರಲ್ಲಿ ಒಂದು ಮನವಿ

ಜವಾಬ್ದಾರಿಯುತ ತಂದೆ-ತಾಯಿಯರಾದ ನಿಮಗೆ ಅನೇಕ ಕರ್ತವ್ಯಗಳಿವೆ.
ನಿಮ್ಮ ಮಕ್ಕಳಿಗೆ **'ದಾರಿ'** ತೋರಿಸುವುದೂ ನಿಮ್ಮ ಪ್ರಮುಖ ಕರ್ತವ್ಯ
ನಿಮ್ಮ ಮಕ್ಕಳ ಭವಿಷ್ಯದ **'ದಾರಿ'** ಗಾಗಿ ನೀವು ಖರ್ಚು ಮಾಡಬೇಕಾದುದು
ಕೇವಲ **5 ರೂಪಾಯಿ !**

ದಾರಿ

ವಾರ ಪತ್ರಿಕೆ

- **ವಿದ್ಯಾರ್ಥಿಗಳು, ನಿರುದ್ಯೋಗಿಗಳ ಕೈಪಿಡಿ.**
- **ವಿದ್ಯೆ-ಉದ್ಯೋಗಾವಕಾಶಗಳ ಸಮಗ್ರ ಮಾಹಿತಿ.**
- **ಮಾಹಿತಿಯ ಜೊತೆಗೆ ಮಾರ್ಗದರ್ಶನ.**
- ಪ್ರತಿ **ಶನಿವಾರ** ಮಾರುಕಟ್ಟೆಯಲ್ಲಿರುತ್ತದೆ.
- ಬೆಲೆ ಮಾತ್ರ, ಕೇವಲ **5 ರೂಪಾಯಿ.**
- ವಾರ್ಷಿಕ ಚಂದಾ : **ರೂ.** 250

ಅಂಕುರ ಪ್ರಕಾಶನ, 552, 15ನೇ ಮೇನ್, 3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್,
ಬಸವೇಶ್ವರನಗರ, ಬೆಂಗಳೂರು - 560 079 ✆ 3227810

ಇನ್ನಿಲ್ಲವಾದ ವಾಟಾಳ್ ಜಾದೂ !



ಟೋಪಿ ಮತ್ತು ಕನ್ನಡಕ ಇಲ್ಲದ ವಾಟಾಳ್ ನಾಗರಾಜ್ ಅವರನ್ನು ಇತ್ತೀಚೆಗೆ ಕಂಡವರು ಅಪರೂಪ. ಸದಾ ಇಂಥ ವೇಷದಲ್ಲಿ ಇವರು ಯಾಕಿರುತ್ತಾರೆ ಎಂದೂ ಹಲವರಿಗೆ ಕುತೂಹಲ.

ತಮ್ಮ ಮೂಲ ಸ್ವರೂಪವನ್ನು ಟೋಪಿ ಮತ್ತು ಕನ್ನಡಕಗಳಿಂದ ಮರೆ ಮಾಡಿಕೊಂಡ ಹಾಗೆ, ವ್ಯಕ್ತಿತ್ವವನ್ನೂ ಮರೆಮಾಚಿಕೊಂಡೇ ಬಂದಿದ್ದಾರೆ. ಕಾಲದಿಂದ ಕಾಲಕ್ಕೆ ಅವರು ಬದಲಾಗುತ್ತಾ ಬಂದರು. ಅವರ ಸದಾ ಕಾಲದ ಆಪ್ತರು ಎಂಬುವರೂ ಈಗ ಯಾರಿಲ್ಲ. ಚಾಮರಾಜನಗರ ಸಮೀಪದ ಸಣ್ಣ ಹಳ್ಳಿ ವಾಟಾಳು ಅವರ ಊರು. ಇವರನ್ನು ಸಾಕಿದ್ದು ಅಕ್ಕ. ಆಕೆ ಮಾಡಿಕೊಡುತ್ತಿದ್ದ ಇಡ್ಲಿ (ಅತ್ತಕಡೆ ಇದನ್ನು ಕಡುಬು ಎನ್ನುತ್ತಾರೆ) ಮಾರಿಕೊಂಡು ಇವರು ಬರಬೇಕಿತ್ತು. ಜೀವನ ನಿರ್ವಹಣೆ ಕಷ್ಟ. ಆದರೆ ಈ ವೃತ್ತಿ ಅವರಿಗೆ ಜನರೊಡನೆ ಬೆರೆಯುವ, ಅವರನ್ನು ಅರ್ಥ ಮಾಡಿಕೊಳ್ಳುವ ಅವಕಾಶ ನೀಡಿತು.

ಬಾಲ್ಯದಲ್ಲಿ ಹೊತ್ತಿನ ಊಟಕ್ಕಾಗಿ ಚಡಪಡಿಸುತ್ತಿದ್ದ ಈ ಮನುಷ್ಯ ಇವತ್ತು ಚಾಮರಾಜನಗರದಲ್ಲಿ ತೋಟ, ಜಮೀನು, ಬೆಂಗಳೂರಲ್ಲಿ ಮನೆ ಎಲ್ಲ ಗಳಿಸಿದ್ದಾರೆ. ಈ ಸ್ಥಿತ್ಯಂತರ ನಮ್ಮ ರಾಜಕೀಯದ ಜನರ ಬದುಕಿಗೇ ಒಂದು ಕನ್ನಡಿ ಇದ್ದ ಹಾಗೆ.

ಒಂದು ಕಾಲಕ್ಕೆ ಕನ್ನಡ ಪರ ಹೋರಾಡುವವರೆಂದರೆ ಪೋಲಿ, ಪುಂಡರು ಎಂಬ ಭಾವನೆ ಇತ್ತು. ಆ ಸಂದರ್ಭದಲ್ಲಿ ಕನ್ನಡ ಪರ ಚಳವಳಿಗೆ ಘನತೆಯನ್ನು ತಂದು ಕೊಟ್ಟವರು ಅನಕೃ ಮತ್ತು ಮ. ರಾಮಮೂರ್ತಿ ರೀತಿಯ ಹೋರಾಟಗಾರರು. ಅನಕೃ ತಮ್ಮ ಗಾಢ ತಿಳುವಳಿಕೆಯಿಂದ ಸಾಹಿತ್ಯ, ಸಂಗೀತ, ಕಲೆಗಳಲ್ಲಿಯೇ ಕನ್ನಡ ಪರ ಒಲವನ್ನು ಬಿತ್ತಿದವರು. ಅವರ ಪ್ರೇರಣೆಯಿಂದಲೇ ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು ಅವರಂಥವರು ವಚನಗಳನ್ನು ಹಾಡಲಾರಂಭಿಸಿದ್ದು. ಇನ್ನೊಂದೆಡೆ ರಾಮಮೂರ್ತಿ ಅವರಂಥವರು ಬೀದಿಗಿಳಿದು ಜಾಗೃತಿ ಮೂಡಿಸುವ ಕಾರ್ಯ ಕೈಗೆತ್ತಿಕೊಂಡರು.

> **ವಾಟಾಳ್ ಶಾಸಕರಾಗಿದ್ದ ಅವಧಿಯ ಉದ್ದಕ್ಕೂ ಅವರ ಜಮೀನು, ತೋಟ ಬೆಳೆಯಿತು. ಸರ್ಕಾರೀ ನೌಕರರು ಕೂಲಿಗಳಂತೆ ಅಲ್ಲಿ ದುಡಿಯಬೇಕಾಯಿತು. ಅವರೆಲ್ಲ ವಾಟಾಳ್ ಶತ್ರುಗಳಾದರು. ಹಾಗೇ ಗ್ರ್ಯಾನೈಟ್, ಲಿಕ್ಕರ್ ಮುಂತಾದ ಲಾಬಿಗಳ ಕುಳಗಳನ್ನೆಲ್ಲಾ ಇವರು ಎದುರು ಹಾಕಿಕೊಂಡಂತೆ ಕಂಡಿತು.**

ಈ ಹೋರಾಟದಲ್ಲಿ ರಾಮಮೂರ್ತಿ ಅವರ ಜೊತೆ ನಿಂತ ಹಲವರೆಂದರೆ ಪ್ರಭಾಕರ ರೆಡ್ಡಿ, ಅನಂತರಾಮು, ಸಂಜೀವಯ್ಯ, ಜಿ.ನಾರಾಯಣ ಕುಮಾರ್ ಮುಂತಾದವರು. ಇದೇ ಶ್ರೇಣಿಯಲ್ಲಿ ಇದ್ದವರು ವಾಟಾಳ್ ನಾಗರಾಜ್. ಆಗ ಬೆಂಗಳೂರು ಮಾರ್ವಾಡಿಗಳ ವ್ಯವಹಾರದ ಮುಷ್ಟಿಯಲ್ಲಿ, ತಮಿಳುನಾಡಿಂದ ವಲಸೆ ಬಂದು ನೆಲೆಸಿದ ದುಡಿಮೆಗಾರರ ನಡುವೆ ಸಿಕ್ಕಿ ಕನ್ನಡವೇ ಇಲ್ಲವಾಗಿ ಬಿಡುವ ಪರಿಸ್ಥಿತಿ. ಬೆಂಗಳೂರಲ್ಲಿ ಶಿವಾಜಿ ಗಣೇಶನ್ ಅಭಿನಯದ ಸಿನಿಮಾ ಬಿಡುಗಡೆ ಆಯಿತೆಂದರೆ ತಮಿಳರು ಭಾರೀ ಸಂಭ್ರಮದ ಮೆರವಣಿಗೆ ನಡೆಸುತ್ತಿದ್ದರು. ಆಗ ಕನ್ನಡಿಗರಲ್ಲೂ ಇಂಥ ಅಭಿಮಾನ ಮೂಡಿಸಬೇಕೆಂದು ಯತ್ನಿಸಿದವರು ವಾಟಾಳ್ ನಾಗರಾಜ್.

ಮೈಸೂರು ಬ್ಯಾಂಕ್ ಚೌಕ, ಚಿಕ್ಕಪೇಟೆ, ಅವೆನ್ಯೂ ರಸ್ತೆಗಳಲ್ಲಿ ದಿನವೂ ಇವರದು ಏನಾದರೊಂದು ಕಾರ್ಯಕ್ರಮ. ಇದೊಳ್ಳೆ ಪಿಡುಗು ಎಂದು ಪೊಲೀಸರ ಸಿಡಿಮಿಡಿ. ಸಾಧ್ಯವಾದಷ್ಟೂ ಇಂಥವರಿಗೆ ಒದ್ದು ಬುದ್ಧಿ ಕಲಿಸಬೇಕೆಂಬ ಪೊಲೀಸ್ ಬುದ್ಧಿ. ಹಾಗಾಗಿ ವಾಟಾಳರು ಆಗ ಲಾಠಿ ಏಟು ಇರಲಿ, ಪೊಲೀಸರ ಬೂಟಿನ ಏಟಿನ ರುಚಿಯನ್ನೂ ಕಂಡರು. ಅದನ್ನು ಈಗ ಅವರು ಹೆಮ್ಮೆಯಿಂದಲೂ ಹೇಳಿಕೊಳ್ಳುತ್ತಾರೆ. ಮುಂದೆ ಎಂಬತ್ತರ ದಶಕದಲ್ಲಿ ಕರ್ನಾಟಕದಲ್ಲೇ ವಿಚಿತ್ರ ತಳಮಳದ ಸ್ಥಿತಿ. ಆಗತಾನೇ ಮುಗಿದ ಎಮರ್ಜೆನ್ಸಿಯ ದಿನಗಳು. ಕೈಗೆ ಕೊಟ್ಟ ಲಗಾಮು ಸರಿಯಾಗಿ ಹಿಡಿಯಲಾರದೇ ಆಡಳಿತದ ರಥವಿಳಿದು ಹೋದ ಕಾಂಗ್ರೆಸ್ಸೇತರ ಪಕ್ಷಗಳು. ಮತ್ತೆ ವಿಜೃಂಭಿಸತೊಡಗಿದ ಇಂದಿರಾ.


ಎಮರ್ಜೆನ್ಸಿಯಲ್ಲಿ ನಾವೆಲ್ಲ ಜೀವ ತೆತ್ತು, ಪ್ರಾಣದ ಹಂಗು ತೊರೆದು ಹೋರಾಡಿದ್ದು ಇದಕ್ಕೇನಾ? ಎಂಬಂತೆ ಕಾಡತೊಡಗಿದ ಕ್ಷೋಭೆ. ಗಾಯದ ಮೇಲೆ ಬರೆಯ ಹಾಗೆ ಗುಂಡೂರಾವ್ ಸರ್ಕಾರದ ಹುಚ್ಚಾಟ. ಅದೇನಾಯಿತೋ! ವಾಟಾಳ್ ನಾಗರಾಜ್ ಗುಂಡೂರಾವ್‌ಗೆ ಆಪ್ತರಾದರು. ವುಡ್‌ಲ್ಯಾಂಡ್ಸ್ ಹೋಟೆಲಿನಲ್ಲಿ ಖಾಯಂ ವಸತಿ ದೊರೆಯಿತು. ನಾನಾ ರೀತಿಯ ಸೌಕರ್ಯ. ಆಗ ಗೋಕಾಕ್ ಚಳವಳಿಯ ಬಿಸಿ. ಊರೆಲ್ಲ ಒಂದು ದಾರಿ ಆದರೆ ಎಡವಟ್ಟನದೇ ಒಂದು ದಾರಿ ಎಂಬಂತೆ, ವಾಟಾಳ್ ಒಬ್ಬರೇ ಗುಂಡೂರಾವ್ ಪರ ನಿಂತು ಬಿಟ್ಟರು.

ಅವರಿಗೆ ಕನ್ನಡಕ್ಕಿಂತ ಬೇರೇನೋ ಮುಖ್ಯವಾಗಿತ್ತು. ಇವತ್ತಿಗೂ ಅದೇ ಮುಖ್ಯ ಎನ್ನಿಸಿಬಿಟ್ಟಿದೆ. ಬೀದಿಗಿಳಿದು ಹೋರಾಟ ಮಾಡಿ ಒದೆ ತಿಂದಿದ್ದು ಸಾಕು. ಇನ್ನು ಏನಿದ್ದರೂ ಆ ಹೋರಾಟದ ಪರಿಣಾಮವಾಗಿ ದಕ್ಕಬಹುದಾದ ಸುಖ ಅನುಭವಿಸುತ್ತಾ ಬದುಕಿಬಿಡೋಣ ಎಂಬಂತೆ ಅವರ ನಿಲುವು.

ಕನ್ನಡದ ಪರ ಎಂಬ ಧೋರಣೆಯನ್ನು ಅವರು ಆಗಾಗ ವ್ಯಕ್ತ ಪಡಿಸುತ್ತಾರೆ. ಆದರೆ ಅದು ಬರೀ ಬಾಯಿ ಮಾತು. ಅದಕ್ಕಾಗಿಯೇ 'ಓರಾಟಗಾರ' ಎಂಬ ಬಿರುದೂ ಅಂಟಿಕೊಂಡಿದೆ.

ಗುಂಡೂರಾಯರ ಸಖ್ಯದ ನಂತರ ರಾಜಕೀಯ, ಅದರಿಂದ ಸಿಗುವ ಸವಲತ್ತುಗಳಿಂದ ಆಕರ್ಷಿತರಾದ ವಾಟಾಳ್ ವಿಧಾನಸಭೆಯೊಳಗೂ ಪ್ರವೇಶಿಸಿದರು.

ತಮ್ಮ ಕತ್ತಿಯ ಝುಳಪಿನಂತಹ ಭಾಷಣದಿಂದ, ವಿಧಾನ ಸಭೆಯೊಳಗೂ ಬೀದಿ ಹೋರಾಟದ ವರಸೆಯಿಂದ ಕೆಲವೊಮ್ಮೆ ನಗೆಯನ್ನು, ಕೆಲವೊಮ್ಮೆ ಅಸಹ್ಯವನ್ನೂ ಹುಟ್ಟಿಸಿದರು.



ಅತ್ತ ರಾಜಕೀಯ ಸ್ಥಾನವೂ ಇಲ್ಲ, ಇತ್ತ ಬೀದಿ ಹೋರಾಟವೂ ಇಲ್ಲ. ಬಹಳಷ್ಟು ಸಲ ಇಂಥವರು ಅನುಭವಿಸುವ ಏಕಾಕಿತನ ಮತ್ತು ಅಸಹಾಯಕತೆಗಳೇ ಇವತ್ತು ಅವರ ಜೊತೆಗಿವೆ. ಅವರ ಎಲ್ಲ ಮಾತು, ವರ್ತನೆಗಳಿಗೆ ಇದ್ದ ಜಾದೂ ಇವತ್ತು ಮಾಯವಾಗಿಬಿಟ್ಟಿದೆ.

ಇಂಥದ್ದೇ ವರಸೆಯನ್ನು ವೀರೇಂದ್ರ ಪಾಟೀಲ್ ಮುಖ್ಯಮಂತ್ರಿ ಆಗಿದ್ದಾಗ ತೋರಿಸಲು ಹೋಗಿ 'ಹೊಟ್ಟೆಪಾಡಿನ ಹೋರಾಟ' ಎನಿಸಿಕೊಂಡು ಕೆಂಡಾಮಂಡಲವಾದರು. ಹಕ್ಕುಚ್ಯುತಿ ನಿರ್ಣಯ ತಂದರು. ಆಗ ಸಭಾಧ್ಯಕ್ಷರಾಗಿದ್ದ ಎಸ್.ಎಂ.ಕೃಷ್ಣ ಮುಂದೆ ಕೈಗಾರಿಕಾ ಸಚಿವರಾದರು. ವೀರೇಂದ್ರ ಪಾಟೀಲ್ ಮನೆ ಸೇರಿದರು.

ವಾಟಾಳ್ ಶಾಸಕರಾಗಿದ್ದ ಅವಧಿಯ ಉದ್ದಕ್ಕೂ ಅವರ ಜಮೀನು, ತೋಟ ಬೆಳೆಯಿತು. ಸರ್ಕಾರೀ ನೌಕರರು ಕೂಲಿಗಳಂತೆ ಅಲ್ಲಿ ದುಡಿಯಬೇಕಾಯಿತು. ಅವರೆಲ್ಲ ವಾಟಾಳ್ ಶತ್ರುಗಳಾದರು. ಹಾಗೇ ಗ್ರಾನೈಟ್, ಲಿಕ್ಕರ್ ಮುಂತಾದ ಲಾರಿಗಳ ಕುಳಗಳನ್ನೆಲ್ಲಾ ಇವರು ಎದುರು ಹಾಕಿಕೊಂಡಂತೆ ಕಂಡಿತು.

ವಾಸ್ತವವಾಗಿ ಇದೆಲ್ಲ ಒಂದು 'ಗಿಮಿಕ್' ಎನ್ನುವವರೇ ಹೆಚ್ಚು. ಬೆಳಿಗ್ಗೆ ವಿಧಾನಸಭೆಯಲ್ಲಿ ಯಾರ ವಿರುದ್ಧ ಮಾತಾಡುತ್ತಾರೋ, ಸಂಜೆ ಅವರ ಹೆಗಲ ಮೇಲೆ ಕೈ ಹಾಕಿಕೊಂಡು ಹೋಗುತ್ತಾರೆ ಎಂದೂ ಜನ ಅಂದರು.

ಒಟ್ಟಿನಲ್ಲಿ ಅವರು ಸ್ಥಿತಿವಂತರಾಗಿರುವುದಂತೂ ನಿಜ. ಹೇಗಾದರು? ಎಂಬುದಕ್ಕೆ ನೇರ ಉತ್ತರ ನೀಡುವುದು ಕಷ್ಟ. ಹೀಗೆ ಗಳಿಸಿದ ಸಿರಿವಂತಿಕೆ ರೂಢಿಸಿಕೊಳ್ಳಲು, ಕಾಯ್ದುಕೊಳ್ಳಲು ಅವರಿಗೀಗ ಶಾಸಕರೆಂಬ ಶ್ರೀರಕ್ಷೆ ಇಲ್ಲ. ಬೇಸತ್ತ ಚಾಮರಾಜನಗರದ ಜನ ಅವರನ್ನು ಈ ಬಾರಿ ಸೋಲಿಸಿ ಮನೆಗೆ ಕಳಿಸಿದ್ದಾರೆ.


ಆಮೇಲೆ ಅವರು ಸಣ್ಣ ಸುದ್ದಿಯಾಗಿದ್ದು ಗಡಿನಾಡು ಅಭಿವೃದ್ಧಿ ಆಯೋಗದ ಅಧ್ಯಕ್ಷರಾಗುವ ಮೂಲಕ. ಈಚಿನ ದಿನಗಳಲ್ಲಿ ಮೈಸೂರು ಪದವೀಧರ ಕ್ಷೇತ್ರಕ್ಕೆ, ಆನಂತರ ವಿಧಾನಸಭೆಯಿಂದ ಆಯ್ಕೆಯಾಗುವ ವಿಧಾನ ಪರಿಷತ್ತಿನ ಶಾಸಕರ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿ ದೊಡ್ಡ ರಾಜಕೀಯ ಸಂಚಲನ ಉಂಟು ಮಾಡಿದರು. ಯಾವುದೇ ರಾಜಕೀಯ ಸೆಣಸಿರಲಿ, ಅಲ್ಲಿ ತಾನೂ ಸ್ಪರ್ಧಿ ಎಂದು ತೋರಿಸಿಕೊಳ್ಳುವುದು ವಾಟಾಳರ ತಂತ್ರ. ಇದು ಕೆಲವು ಸಲ ಲಾಭದಾಯಕವಾಗಿ ಪರಿಣಮಿಸಿದೆ. ಈ ಬಾರಿ ಅದೇಕೋ ಅವರ ತಂತ್ರ ಕೈ ಕೊಟ್ಟಿದೆ.

ಅತ್ತ ರಾಜಕೀಯ ಸ್ಥಾನವೂ ಇಲ್ಲ, ಇತ್ತ ಬೀದಿ ಹೋರಾಟವೂ ಇಲ್ಲ. ಬಹಳಷ್ಟು ಸಲ ಇಂಥವರು ಅನುಭವಿಸುವ ಏಕಾಕಿತನ ಮತ್ತು ಅಸಹಾಯಕತೆಗಳೇ ಇವತ್ತು ಅವರ ಜೊತೆಗಿವೆ. ಅವರ ಎಲ್ಲ ಮಾತು, ವರ್ತನೆಗಳಿಗೆ ಇದ್ದ ಜಾದೂ ಇವತ್ತು ಮಾಯವಾಗಿಬಿಟ್ಟಿದೆ.

ಕೊನೆ ಹನಿ; ಏನೇ ಆಗಲಿ ವಾಟಾಳರು ಸುದ್ದಿಯಲ್ಲಿ ಇರುವುದರಲ್ಲಿ ಸಿದ್ಧ ಹಸ್ತರು. ಅದಕ್ಕಾಗಿ ಪತ್ರಿಕೆಯ ಹಲವರ ಸಖ್ಯ ಉಂಟು. ಇವರೂ ಅವರೂ ಪರಸ್ಪರ ಸಹಕಾರದಿಂದಲೇ ಸುದ್ದಿಗಳು ಮಿಂಚುತ್ತವೆ. ಇದರಿಂದ ಅವರಿಗೂ ಲಾಭವುಂಟು. ಇವರಿಗೂ ಲಾಭ ಉಂಟು.

■ ಸುಹಾಸ

ಆಗ - ಈಗ




ಸಿನಿಮಾದವರು ಎಂದರೆ ತಲೆ ಇಲ್ಲದ ಚಂದದ ಬೊಂಬೆಗಳು ಎಂಬ ಭಾವನೆ ಇದೆ. ಒಂದು ಕಾಲಕ್ಕೆ ಬೇರೇನೂ ಕೆಲಸ ಮಾಡಲಾಗದ ಸೋಮಾರಿಗಳು ಈ ರಂಗಕ್ಕೆ ಬರುತ್ತಾರೆ ಎಂಬ ಭಾವನೆ ಇತ್ತು.

ಇನ್ನೊಂದೆಡೆ ತೀರಾ ಸಾಮಾನ್ಯ ವ್ಯಕ್ತಿಗಳು ಅತಿ ಶ್ರೀಮಂತಿಕೆ, ಜನಪ್ರಿಯತೆ ಪಡೆಯಲು ಸಿನಿಮಾ ಒಂದು ಸಾಧನ ಎಂದು ಭಾವಿಸಲಾಗುತ್ತಿತ್ತು. ದಿಲೀಪ್ ಕುಮಾರ್ (ಯೂಸಫ್‌ಖಾನ್) ಹಣ್ಣು ಮಾರುತ್ತಿದ್ದ. ದೇವಾನಂದ್ ರೈಲ್ವೆಯಲ್ಲಿ ಕ್ಲರ್ಕ್ ಆಗಿದ್ದ, ಮುಖೇಶ್ ಟೈಪ್‌ರೈಟರ್ ಸೇಲ್ಸ್‌ಮನ್. ರಾಜಕಪೂರ್ ತಂದೆಯ ಪೃಥ್ವಿ ಥಿಯೇಟರ್ಸ್ ಕಂಪನಿಯಲ್ಲಿ ಪರದೆ ಎಳೆಯುತ್ತಿದ್ದ.

ಈಗ ಕಾಲ ಬದಲಾಗಿದೆ. ಈಗಿನ ನಾಯಕ ನಾಯಕಿಯರ ಹಿನ್ನೆಲೆಯೂ ವಿಭಿನ್ನ.ಸತ್ಯಾದ ನಾಯಕ ಮನೋಜ್ ಬಾಜ್‌ಪೈ, ಓಂಪುರಿ, ನಾಸಿರುದ್ದೀನ್ ಶಾ ಮುಂತಾದವರೆಲ್ಲ ರಾಷ್ಟ್ರೀಯ ನಾಟಕ ಶಾಲೆಯಿಂದ ಡಿಗ್ರಿ ಪಡೆದು ಬಂದವರು. ಅತಿ ಬೇಡಿಕೆಯ ಶಾರುಖ್‌ಖಾನ್ ಕಮ್ಯುನಿಕೇಷನ್ಸ್‌ನಲ್ಲಿ ಮಾಸ್ಟರ್ ಡಿಗ್ರಿ ಪಡೆದಿದ್ದಾನೆ. ಈಚೆಗೆ ಮದುವೆಯಾದ ಮಾಧುರಿ ದೀಕ್ಷಿತ್ ಮೈಕ್ರೋ ಬಯಾಲಜಿಯಲ್ಲಿ ಎಂ.ಎಸ್ಸಿ ಮಾಡಿದ್ದಾಳೆ. 'ಕಹೋನಾ...' ಚಿತ್ರದಿಂದಾಗಿಯೇ ಖ್ಯಾತಳಾದ ಅಮೀಷಾ ಪಟೇಲ್ ಅಮೇರಿಕಾದಲ್ಲಿ ಎಂ.ಎ. ಎಕನಾಮಿಕ್ಸ್ ಮಾಡಿದವಳು. ಅವರ ಪಟ್ಟಿಯಲ್ಲಿ ಕನ್ನಡದ ನಟಿ ಚಾಂದಿನಿ ಕೂಡ ಈಗ ಸೇರುತ್ತಾಳೆ. ಅವಳಿಗೆ ಮೈಸೂರು ವಿಶ್ವ ವಿದ್ಯಾಲಯದಿಂದ ಡಾಕ್ಟರೇಟ್ ಪದವಿ ದೊರಕಿದೆ.

?

ಈ ಪ್ರಶ್ನೆಯೇ ಈಗ ಅಪ್ರಸ್ತುತ ಎಂದು ಮೇಲುನೋಟಕ್ಕೆ ಕಾಣಬಹುದು. ಆದರೆ ರಾಷ್ಟ್ರೀಯ ರಾಜಕೀಯದಲ್ಲಿ ಈಗಾಗಲೇ ಗುಸುಗುಸು ಆರಂಭವಾಗಿದೆ. ಕುಸಿಯುತ್ತಿರುವ ಪ್ರಧಾನಿ ವಾಜಪೇಯಿ ಆರೋಗ್ಯ ಒಂದು ಕಾರಣವಾದರೆ, ಬಿಜೆಪಿ ಹಾಗೂ ಸಂಘ ಪರಿವಾರ ಅಡ್ವಾಣಿ ಸಮರ್ಥ ನಾಯಕ ಎಂದು ಬಿಂಬಿಸಲು ಯತ್ನಿಸುತ್ತಾ ಇರುವುದು ನೋಡಿದರೆ, ಮುಂದಿನ ಪ್ರಧಾನಿಯ ಪ್ರಶ್ನೆ ಅಷ್ಟು ಸುಲಭವಾಗಿ ತಳ್ಳಿ ಹಾಕುವಂಥದಲ್ಲ ಎನಿಸುತ್ತದೆ.



ಮುಂದಿನ ಪ್ರಧಾನಿ ಯಾರು?

ಪ್ರಧಾನಿ ವಾಜಪೇಯಿ ಹಿಮಾಲಯದ ಪಿಕ್ನಿಕ್ ಮುಗಿಸಿ ಹಿಂದಿರುಗಿದ್ದಾರೆ. ಕೇವಲ ವಿಶ್ರಾಂತಿಗಾಗಿ ತೆರಳಿದ್ದರೇ? ಇಲ್ಲ ಆರೋಗ್ಯ ಸುಧಾರಣೆಗೋ? ಎಂಬುದಿನ್ನೂ ಉತ್ತರ ಸಿಗದ ಪ್ರಶ್ನೆ.

ಡಯಾಬಿಟೀಸ್, ಬಿಪಿ ಎಲ್ಲ ಇದ್ದ ಪಿ.ವಿ. ನರಸಿಂಹರಾವ್ ದುರ್ಬಲ ಸರ್ಕಾರ ಒಂದನ್ನು ಐದು ವರ್ಷ ನಡೆಸಲಿಲ್ಲವೇ? ವಾಜಪೇಯಿ ಆರೋಗ್ಯ ಅಷ್ಟು ಹದಗೆಟ್ಟಿಲ್ಲ ಎಂದು ಬಿಜೆಪಿಯ ಜನ ಹೇಳುತ್ತಾರೆ. ಆದರೆ ಒಳಗೊಳಗೇ ಬೇರೊಂದು ಹುನ್ನಾರ ನಡೆಯುತ್ತಾ ಇರುವುದಂತೂ ಸ್ಪಷ್ಟ.

ಕಳೆದ ಏಪ್ರಿಲ್‌ನಲ್ಲಿ ಇಪ್ಪತ್ತು ವರ್ಷದ ಸಂಭ್ರಮ ಆಚರಿಸಿಕೊಂಡ ಬಿಜೆಪಿ, ಎರಡು ದಶಕಗಳ ನಂತರ ಬೇರೆಯೇ ಆಗಿದೆ. ಹುಟ್ಟಿದಾಗ ಎಂದೂ ಹತ್ತರ ಗಡಿ ದಾಟದ ಪಕ್ಷದ ಸಂಸತ್ ಸದಸ್ಯರ ಸಂಖ್ಯೆ ಇವತ್ತು ಇನ್ನೂರರ ಗಡಿಗೆ ಬಂದು ನಿಂತಿದೆ.

ಇಂಥ ಸಾಧನೆ, ದಾಪುಗಾಲಿಗೆ ಕಾರಣ ಯಾರು? ಎಂದರೆ ಎರಡು ಬಗೆಯ ಉತ್ತರಗಳು ಸಿಗುತ್ತವೆ. ಅಡ್ವಾಣಿ ಬೆಂಬಲಿಗರು ಅಡ್ವಾಣಿಯೇ ಕಾರಣ ಎಂದರೆ, ವಾಜಪೇಯಿ ಬೆಂಬಲಿಗರು ಬೇರೆಯೇ ವ್ಯಾಖ್ಯೆ ನೀಡುತ್ತಾರೆ. ಅಸಲಿಗೆ ಮುಂದಿನ ಪ್ರಧಾನಿ ಯಾರೆಂಬ ವಿವಾದ ಹುಟ್ಟಿದ್ದೇ ಬಿಜೆಪಿಗೆ ಇಪ್ಪತ್ತು ವರ್ಷ ತುಂಬಿದಾಗ. ಪಕ್ಷದ ಮುಖವಾಣಿ 'ಬಿಜೆಪಿ ಟುಡೇ' ಪ್ರಕಟಿಸಿದ ಲೇಖನ ಒಂದರಿಂದ ಬಿಜೆಪಿ ಸಂಸತ್


ಸದಸ್ಯ ಪ್ರಫುಲ್ ಗರೋಡಿಯಾ ಬರೆದಿದ್ದ ಲೇಖನದಲ್ಲಿ 'ಅಡ್ವಾಣಿ ಪಕ್ಷಕ್ಕೆ ವಿಶಾಲ ಕಾರ್ಯಕರ್ತರ ನೆಲೆ ಕಲ್ಪಿಸಿದವರು' ಎಂದು ಹೇಳಿದ್ದಕ್ಕಿಂತ ಹೆಚ್ಚಾಗಿ 'ವಾಜಪೇಯಿ ಪ್ರಧಾನಿ ಆಗಲು ಅವಕಾಶ ಮಾಡಿಕೊಟ್ಟು ಅಡ್ವಾಣಿ ಬಹುದೊಡ್ಡ ತ್ಯಾಗ ಮಾಡಿದರು' ಎಂಬ ಸಾಲು ಬಹಳಷ್ಟು ಜನರನ್ನು ತೀವ್ರವಾಗಿ ಕೆರಳಿಸಿದವು.

ಇಡೀ ಲೇಖನದಲ್ಲಿ ಎಲ್ಲಿಯೂ ವಾಜಪೇಯಿ ಪ್ರಸ್ತಾಪ ಇಲ್ಲದಿದ್ದುದು, ಅಡ್ವಾಣಿಯನ್ನು ಹಾಡಿ ಹೊಗಳಿದ್ದು ಕೇವಲ ಲೇಖಕನೊಬ್ಬನ ಖಯಾಲಿ ಎಂದು ಹೇಳುವಂತಿಲ್ಲ. ಪತ್ರಿಕೆ ಪಕ್ಷದ ಮುಖವಾಣಿ. ಬಿಜೆಪಿಯ ಇಪ್ಪತ್ತು ವರ್ಷದ ಸಂಭ್ರಮಕ್ಕಾಗಿ ತಂದ ವಿಶೇಷ ಸಂಚಿಕೆ. ಇಲ್ಲ ಕೇವಲ ಕಣ್ತಪ್ಪಿನಿಂದ ಇಂಥದ್ದು ಆಗಿದೆ ಎಂದು ಭಾವಿಸುವಂತಿಲ್ಲ.


ಬಿಜೆಪಿಯ ಒಂದು ವರ್ಗ, ಅದರಲ್ಲೂ ಸಂಘ ಪರಿವಾರದ ಕುಮ್ಮಕ್ಕಿನಿಂದಲೇ ವಾಜಪೇಯಿ ಅವರನ್ನು ಸಣ್ಣವರಾಗಿ ಚಿತ್ರಿಸಲು ಹಾಗೂ ಅಡ್ವಾಣಿಯನ್ನು ಮಹಾನ್ ನಾಯಕ ಎಂದು ಬಿಂಬಿಸಲು ಯತ್ನ ನಡೆದಿದ್ದು ಸ್ಪಷ್ಟ.

ಪ್ರಧಾನಿ ಯಾರಾಗಬೇಕೆಂಬುದು ಈಗ ಕೇವಲ ಬಿಜೆಪಿಯ ನಿರ್ಧಾರಕ್ಕೆ ಬಿಟ್ಟ ವಿಷಯವಲ್ಲ. ರಾಷ್ಟ್ರೀಯ ಮೈತ್ರಿಕೂಟದ ಅನುಮೋದನೆಯೂ ದೊರೆಯಬೇಕಾಗುತ್ತದೆ. ಬಹುಪಾಲು ಬಿಜೆಪಿಯ ಮಿತ್ರ ಪಕ್ಷಗಳು ಕೇಂದ್ರದಲ್ಲಿರುವ ಸರ್ಕಾರಕ್ಕೆ ಬೆಂಬಲ ನೀಡಿರುವುದು ವಾಜಪೇಯಿ ಮುಖ ನೋಡಿ. ವಾಜಪೇಯಿ ನಾಯಕತ್ವ ಬಿಟ್ಟು ಕೆಳಗಿಳಿಯುತ್ತಾರೆ ಎಂದಾದಾಗ ಎಷ್ಟು ಪಕ್ಷಗಳು ಮಿತ್ರ ಕೂಟದಲ್ಲಿ ಉಳಿಯುತ್ತವೆ? ಎಂಬುದೂ ಬಹುಮುಖ್ಯ ಪ್ರಶ್ನೆ.


'ಅಡ್ವಾಣಿ' ಘಟನೆಯನ್ನು ಈ ಮಿತ್ರ ಪಕ್ಷಗಳ ನಾಯಕರ ಎದುರು ಪ್ರಸ್ತಾಪಿಸಿದಾಗ, ಅದೆಲ್ಲ ಆ ಪಕ್ಷದ ಆಂತರಿಕ ವಿಚಾರ, ಆ ಬಗ್ಗೆ ತಾವು ಪ್ರತಿಕ್ರಿಯಿಸುವುದು ಸರಿಯಾಗುವುದಿಲ್ಲ ಎಂದು ಜಾರಿಕೊಳ್ಳುತ್ತಾರೆ. ಖಾಸಗಿ ಮಾತುಕತೆಯ ವೇಳೆ 'ಅಡ್ವಾಣಿ ಜೊತೆ ಏಗುವುದು ಕಷ್ಟ. ವೈಯಕ್ತಿಕವಾಗಿ ಅವರು ಸರಿಯೇ ಇರಬಹುದು. ಅವರನ್ನು ಮತ್ತೆ ಕಟ್ಟುತ್ತಿರುವ ಬೆಂಬಲಿಗರ ಗುಂಪು ನೋಡಿದಾಗ, ವಿಚಾರ ಬೇರೆಯೇ ಆಗುತ್ತದೆ' ಎಂದೂ ಹೇಳುತ್ತಾರೆ.



ಅಡ್ವಾಣಿ



ಜಸ್ವಂತ್ ಸಿಂಗ್



ಜಾರ್ಜ್ ಫರ್ನಾಂಡೀಸ್

ಅಡ್ವಾಣಿಗಿಂತ ವಿದೇಶಾಂಗ ಸಚಿವರಾಗಿರುವ ಜಸ್ವಂತ್ ಸಿಂಗ್ ಅವರೇ ವಾಸಿ ಎಂದು ಹಲವು ಮಿತ್ರಪಕ್ಷಗಳ ನಾಯಕರು, ಅಲ್ಲಲ್ಲಿ ಹೇಳಿರುವುದೂ ಉಂಟು. ಆದರೆ ಈ ಕುರಿತು ಯಾವುದೇ ಬಹಿರಂಗ ಹೇಳಿಕೆ ಈವರೆಗೆ ಬಂದಿಲ್ಲ. ಹಾಗೆ ಬರದಿರುವುದಕ್ಕೆ ಕಾರಣ, ಇದು ತಕ್ಕ ಸಂದರ್ಭ ಅಲ್ಲ ಎಂಬುದೇ ಆಗಿದೆ. ಅವರನ್ನು ಬಿಟ್ಟರೆ ಮಿತ್ರ ಪಕ್ಷಗಳು ಒಪ್ಪಬಹುದಾದ್ದು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡೀಸ್ ಅವರನ್ನು. ಹಾಗೆ ನೋಡಿದರೆ ರಾಷ್ಟ್ರೀಯ ಮೈತ್ರಿಕೂಟ ಅಸ್ತಿತ್ವಕ್ಕೆ ಬರಲು ಕಾರಣವಾದದ್ದೇ ಜಾರ್ಜ್ ಫರ್ನಾಂಡೀಸ್. ಹೊಸ ಸರ್ಕಾರ ಸ್ಥಾಪನೆ ಆದಾಗ ಮೂಡಿದ ಸಮಸ್ಯೆಗಳಿಗೆಲ್ಲ ಪರಿಹಾರಕ್ಕಾಗಿ ವಾಜಪೇಯಿ ಪರ ಸಂಧಾನ ನಡೆಸಿದವರು ಅವರೇ. ಆದರೂ ಈಚಿನ ದಿನಗಳಲ್ಲಿ ಅವರು ಅಷ್ಟಾಗಿ ಸುದ್ದಿಯಲ್ಲಿ ಇಲ್ಲ. ವಿಷ್ಣು ಭಾಗವತ್ ಪ್ರಕರಣದ ನಂತರವಂತೂ ಅವರು ತೀರಾ ಕಳೆಗುಂದಿದ ಹಾಗೆ ಕಾಣುತ್ತದೆ. ಇದೆಲ್ಲಕ್ಕಿಂತ ಹೆಚ್ಚಾಗಿ ಅವರನ್ನುಕಂಡರೆ ಸಂಘ ಪರಿವಾರಕ್ಕೆ ಅಷ್ಟಕ್ಕಷ್ಟೇ. ಮಿತ್ರ ಪಕ್ಷಗಳು ಜಾರ್ಜ್ ಅವರನ್ನು ಒಪ್ಪಿದರೂ, ಸಂಘ ಪರಿವಾರ ಅವರನ್ನು ಪ್ರಧಾನಿಯಾಗಿ ಒಪ್ಪುವುದು ಕಷ್ಟ.

ಈ ಹಿಂದೆ 1998ರಲ್ಲಿ ಮಿತ್ರ ಪಕ್ಷಗಳ ಸರ್ಕಾರದ ಕಾರ್ಯ ನಿರ್ವಹಣೆಯಲ್ಲಿ ಸಂಘ ಪರಿವಾರದ ಹಸ್ತಕ್ಷೇಪ ವಿರೋಧಿಸಿ ನಡೆದ ಪ್ರತಿಭಟನಾ ಮೆರವಣಿಗೆಯ ಮುಂಚೂಣಿಯಲ್ಲಿ ಇದ್ದವರು ಜಾರ್ಜ್. ಆಗಿಂದಲೂ ಬಿಜೆಪಿಯೊಳಗಿನ ಕಟ್ಟಾ ಸಂಪ್ರದಾಯಸ್ಥರು ಹಾಗೂ ಸಂಘ ಪರಿವಾರದವರು ಅವರನ್ನು ದ್ವೇಷಿಸುತ್ತಲೇ ಬಂದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಜಾರ್ಜ್ ತಮ್ಮ ಚಾಣಾಕ್ಷ ತಂತ್ರದಿಂದ ಪ್ರಧಾನಿ ಪಟ್ಟಕ್ಕೆ ಸ್ಪರ್ಧಿಗಳಾಗಬಹುದಾಗಿದ್ದ ದೇವೇಗೌಡ ಹಾಗೂ ರಾಮಕೃಷ್ಣ ಹೆಗಡೆ ಇಬ್ಬರನ್ನೂ ಮಟ್ಟ ಹಾಕಿದ್ದಾರೆ. ಆ ಮಟ್ಟಿಗೆ ಅವರಿಗೆ ಪ್ರತಿಸ್ಪರ್ಧಿಗಳು ಕಡಿಮೆ. ಆದರೆ ಇನ್ನೂ ದಾರಿ ಸುಗಮವಲ್ಲ. ತೀರಾ ಅಂಥ ಪರಿಸ್ಥಿತಿ ಬಂದಲ್ಲಿ ಮಿತ್ರ ಪಕ್ಷಗಳಿಗೆ ಸೇರಿದ ಬೇರೆ ಯಾರನ್ನಾದರೂ ಪ್ರಧಾನಿಯನ್ನಾಗಿ ಆರಿಸುವ ಸಾಧ್ಯತೆಯೂ ಇದೆ. ಹಿಂದೊಮ್ಮೆ ಇದ್ದಕ್ಕಿದ್ದ ಹಾಗೆ ದೇವೇಗೌಡ ಪ್ರಧಾನಿ ಆದಂತೆ ಮತ್ಯಾರೋ ಹುಟ್ಟಿಕೊಳ್ಳಬಹುದು. ■

ನೆನಪು ಎಷ್ಟು ವಿಚಿತ್ರ. ಯಾವುದೋ ಘಟನೆ ಎಷ್ಟು ತಲೆ ಕೆರೆದುಕೊಂಡರೂ ಸರಿಯಾಗಿ ನೆನಪಾಗುವುದೇ ಇಲ್ಲ. ಮೈಯೆಲ್ಲ ಪರಚಿಕೊಳ್ಳುವಂತಾಗುತ್ತದೆ. ಅದೇ ಮರೆಯಬೇಕು ಅಂದುಕೊಂಡ ನೆನಪು, ಮನೆಯ ತಾರಸಿ ಕಳಚಿ ಮೇಲೆ ಬಿದ್ದ ಹಾಗೆ ನಮ್ಮ ಮೇಲೆ ಮುಗಿ ಬೀಳುತ್ತದೆ.

- ಪ್ಯಾಟ್ ಮಾರಿಸನ್

★

ನಾವು ತೊಡುವ ಬಟ್ಟೆಗಳೇ ನಮ್ಮ ನಿಜ ಸ್ವರೂಪದ ಸೂಚಕಗಳು. ನಮ್ಮ ಮುಖ, ಮೈ ನಾವಾಗಿ ಆರಿಸಿಕೊಂಡಿದ್ದು ಅಲ್ಲ. ನಾವು ಆಶಿಸಿ ರೂಪಿಸಿಕೊಳ್ಳಬಹುದಾದ್ದು ನಮ್ಮ ವ್ಯಕ್ತಿತ್ವ, ಅದನ್ನು ಸ್ಪಷ್ಟವಾಗಿ ಬಿಂಬಿಸುವುದು ನಾವು ತೊಡುವ ಬಟ್ಟೆಗಳು. ಕೆಲವೊಮ್ಮೆ ಅವು ನಮ್ಮ ವ್ಯಕ್ತಿತ್ವ ಮರೆ ಮಾಚಲು ಮಾಡಿಕೊಂಡ ಮುಖವಾಡ ಆಗಬಹುದು. ಇಲ್ಲವೇ ನಮ್ಮ ವ್ಯಕ್ತಿತ್ವ ಸ್ಪಷ್ಟವಾಗಿ ಸೂಚಿಸುವ ಸಾಧನ ಆಗಬಹುದು.

- ಆಮಿ.ಎಂ.ಸ್ಪಿಂಡ್ಲರ್

★

ಇ - ಮೇಲ್ ಎಂದರೆ ನೀವು ನಿಮ್ಮ ದಿನದ ಕೆಲಸ ಮುಗಿಸಿ ಮನೆಗೆ ಬಂದಾಗ ಅಲ್ಲಿ ನೂರಿಪ್ಪತ್ತು ಜನ ಅತಿಥಿಗಳು, ಗೆಳೆಯರು ತುಂಬಿಕೊಂಡಿದ್ದ ಹಾಗೆ.

- ಜಾವ್ ಓ 'ಡಾನೋಹ್ಯೂ'.

ವಾತ್ಸಲ್ಯಮಯಿ

ಕತೆ



ಪಾರ್ವತಿ ಅಂದು ಬಹಳ ನಿರುತ್ಸಾಹದಿಂದಿದ್ದಳು. 'ತಂಗಿ ನಿರ್ಮಲಾಗೆ ಇದೇ ಭಾನುವಾರ 'ಸೀಮಂತದ' ಶಾಸ್ತ್ರವಿದೆ, ನೀವುಗಳು ತಪ್ಪದೇ ಬರಬೇಕು' ಎಂದು ತಾಯಿಯಿಂದ ಬಂದ ಕಾಗದ ನೋಡಿ ಅವಳು ಖಿನ್ನಳಾಗಿದ್ದಳು. ಮದುವೆಯಾಗಿ ಕೇವಲ ಎರಡು ವರ್ಷಕ್ಕೇ ತಂಗಿ ತಾಯಿಯಾಗಲಿದ್ದಳು. ಆದರೆ ತಾನು ಮದುವೆಯಾಗಿ ಆರು ವರ್ಷವಾದರೂ ಯಾವ ಫಲವೂ ಇಲ್ಲದೆ 'ಬಂಜೆ' ಎನಿಸಿಕೊಂಡಿದ್ದಳು.

ಶ್ರೀನಾಥ್ ಬಂದಾಗ ಪಾರ್ವತಿಯ ಮೌನವನ್ನು ಕಂಡು, 'ಏನಾಯಿತು ಪಾರು.... ಹೀಗಿರುವೆ....? ಎಂದು ಕೇಳಿದನು. ಪಾರ್ವತಿ ಕಾಗದವನ್ನು ಅವನ ಕೈಗೆ ಕೊಟ್ಟು, 'ನೀವು ಓದುತ್ತಿರಿ, ನಾನು ಕಾಫಿ, ತಿಂಡಿ ತರುತ್ತೇನೆ' ಎಂದು ಅಡಿಗೆ ಮನೆಗೆ ಹೋದಳು. ಶ್ರೀನಾಥ್ ಕಾಗದ ಓದಿದನು. ಪಾರುವಿನ ಖಿನ್ನತೆಗೆ ಉತ್ತರ ದೊರೆಯಿತು. ಪಾರು ಅವನ ಕೈಗೆ ಕಾಫಿ ಲೋಟವನ್ನು ಕೊಟ್ಟು,

'ಕಾಗದವನ್ನು ಓದಿದರಲ್ಲ ಈಗ ಏನು ಮಾಡುವುದು....?'

'ಮಾಡುವುದೇನು....? ನೀನು ನಾಳೆಯೇ ಹೊರಟು ಬಿಡು....'

'ಇಲ್ಲ.... ನಾನು ಹೋಗುವುದಿಲ್ಲ....'

'ಹಾಗೆ ಮಾಡುವುದು ಸರಿಯಲ್ಲ.... ನಿರ್ಮಲಾ ನಿನ್ನ ಒಬ್ಬಳೇ ತಂಗಿ ಅವಳ ಮನಸ್ಸಿಗೆ ನೋವುಂಟು ಮಾಡಬಾರದು. ಅವಳು ನಿನ್ನನ್ನು ಎಷ್ಟು ಪ್ರೀತಿಸುತ್ತಾಳೆ ಹೋಗಿದ್ದ ಶಾಸ್ತ್ರವಾಗಿ.... ಬೇಗನೆ ಬಂದು ಬಿಡು' ಎಂದನು.

'ನೀವು ಹೇಳುವುದು ಸರಿ.... ನನಗೆ ಏನೋ ಬೇಸರ ಅಷ್ಟೇ..... ನಾನು ನಾಳೆಯೇ ಹೋಗುತ್ತೇನೆ.... ನೀವು ಬರುವುದಿಲ್ಲವೇ'

'ಇಲ್ಲ ಪಾರು.... ಇಂತಹ ಕಾರ್ಯಗಳಿಗೆ ನಾನು ಬರುವುದು ಸರಿಯಲ್ಲ.... ಅಲ್ಲದೆ ನನಗೆ ರಜವೂ ಇಲ್ಲ....' ಎಂದು ಹೇಳಿ ತಪ್ಪಿಸಿಕೊಂಡನು.

ಮಾರನೆಯ ದಿನ ಪಾರ್ವತಿ ತೌರುಮನೆಗೆ ಹೊರಟಳು. ಎರಡು ದಿನಗಳಿದ್ದು ವಾಪಸ್ಸು ಬಂದು ಬಿಟ್ಟಳು. ತೌರಿನಿಂದ ಬಂದ ಪಾರ್ವತಿ ಗೆಲುವಾಗಿರಲಿಲ್ಲ. ಅವಳು ಮತ್ತಷ್ಟು ಖಿನ್ನಳಾದಳು.

ಶ್ರೀನಾಥ್‌ಗೆ ಅವಳ ನೋವು, ದುಃಖ ಅರ್ಥವಾಗಿತ್ತು. ಇವನ್ನೆಲ್ಲಾ ಮರೆತು ಮೊದಲಿನ ಪಾರುವಾಗಬೇಕಾದರೆ, ಅವಳನ್ನು ಸ್ವಲ್ಪ ದಿನಗಳು ಬೇರೆಯ ಊರಿಗೆ ಕರೆದುಕೊಂಡು ಹೋಗಬೇಕೆಂದು ನಿರ್ಧರಿಸಿದ.

ಶ್ರೀನಾಥ್ ತಡಮಾಡದೆ ಕೂಡಲೇ 'ರೈಲ್ವೆ ಟಿಕೆಟ್' ಬುಕ್ ಮಾಡಿ ಬಂದ. ಒಂದು ತಿಂಗಳ ನಂತರ 'ಪಾರು.... ನಾವಿಬ್ಬರೂ 'ಕಾಶಿ ವಿಶ್ವೇಶ್ವರ' ದರ್ಶನ ಮಾಡಿ ಬರೋಣ, ಹಾಗೆಯೇ ಬರುತ್ತಾ 'ಡೆಲ್ಲಿ, ಆಗ್ರಾ, ಕಾನ್‌ಪುರ್ ಎಲ್ಲವನ್ನೂ ನೋಡಿಕೊಂಡು ಬರೋಣ.... ಏನಂತಿ?' ಪಾರ್ವತಿಗೆ ಸಂತೋಷವಾಯಿತು, ಅವಳು ಹಿಗ್ಗುತ್ತಾ 'ನನಗೂ ತುಂಬಾ ಆಸೆ.... ಆದರೆ ಟಿಕೆಟ್ ಸಿಕ್ಕಬೇಕಲ್ಲ?' 'ಅದೆಲ್ಲಾ.... ನನ್ನ ಭಾರ, ನಾನೇನು ಪೆದ್ದ ಎಂದು ತಿಳಿದೆಯಾ ಆಗಲೇ ಟಿಕೆಟ್ ಬುಕ್ ಆಗಿದೆ.... ಇನ್ನು ಏನಿದ್ದರೂ, ತಿಂಡಿ ತಯಾರಿ, ಹಾಗೆಯೇ ಕೆಲವು

■ ಇಂದಿರಾ ಪ್ರಿಯದರ್ಶಿನಿ

ಪಾರ್ವತಿ ಅಂದು ಬಹಳ ನಿರುತ್ಸಾಹದಿಂದಿದ್ದಳು. 'ತಂಗಿ ನಿರ್ಮಲಾಗೆ ಇದೇ ಭಾನುವಾರ 'ಸೀಮಂತದ' ಶಾಸ್ತ್ರವಿದೆ, ನೀವುಗಳು ತಪ್ಪದೇ ಬರಬೇಕು' ಎಂದು ತಾಯಿಯಿಂದ ಬಂದ ಕಾಗದ ನೋಡಿ ಅವಳು ಖಿನ್ನಳಾಗಿದ್ದಳು. ಮದುವೆಯಾಗಿ ಕೇವಲ ಎರಡು ವರ್ಷಕ್ಕೇ ತಂಗಿ ತಾಯಿಯಾಗಲಿದ್ದಳು. ಆದರೆ ತಾನು ಮದುವೆಯಾಗಿ ಆರು ವರ್ಷವಾದರೂ ಯಾವ ಫಲವೂ ಇಲ್ಲದೆ 'ಬಂಜೆ' ಎನಿಸಿಕೊಂಡಿದ್ದಳು.

ಮಾತ್ರೆಗಳು, ಪ್ಯಾಕಿಂಗ್ ಇವೆಲ್ಲಾ ನೀನು ಮಾಡಬೇಕಾದ ಕೆಲಸ. ಸರಿಯಾಗಿ ಇನ್ನು ನಾಲ್ಕು ದಿನಗಳು ಮಾತ್ರ ಉಳಿದಿದೆ ಅಷ್ಟೆ....' ಎಂದನು.

ಪಾರ್ವತಿ ಸಂತೋಷದಿಂದ ತಿಂಡಿ ತಯಾರಿಸಲು ಅಡಿಗೆ ಮನೆಗೆ ಹೋದಳು.

ಭಾನುವಾರ ಬೆಳಿಗ್ಗೆ ಅವರಿಬ್ಬರೂ ಪಕ್ಕದ ಮನೆಯವರಿಗೆ 'ತಮ್ಮ ಮನೆ ಕಡೆ ಕಣ್ಣಿರಲಿ' ಎಂದು ವಿನಂತಿಸಿಕೊಂಡು ಸ್ಟೇಷನ್ನಿಗೆ ಹೊರಟರು.

ಮೊದಲು ಕಾಶಿಗೆ ಹೊರಟರು. ಪವಿತ್ರವಾದ ಗಂಗೆಯ ಸ್ನಾನ ಮಾಡಿ 'ವಿಶ್ವೇಶ್ವರ ಸ್ವಾಮಿಯ' ದರ್ಶನ ಮಾಡಿದ ನಂತರ ಊರನ್ನೆಲ್ಲಾ ಒಂದು ಸುತ್ತು ಹಾಕಿ, 'ದೆಹಲಿ'ಗೆ ಹೊರಟರು. ಅಲ್ಲಿ ಮೂರು ದಿನಗಳಿದ್ದು, ಅಲ್ಲಿಂದ ಆಗ್ರಾ. ಅಲ್ಲಿದ್ದ ಸುಂದರ 'ತಾಜ್ ಮಹಲ್', 'ಪತ್ತೇಪುರ ಸಿಕ್ರಿ', ಎಲ್ಲವನ್ನೂ ನೋಡಿಕೊಂಡು ಅಲಹಾಬಾದಿಗೆ ಬಂದರು. ಊರನ್ನು

ನೋಡಿದ ನಂತರ ಪುನಃ ಗಂಗೆಯಲ್ಲಿ ಸ್ನಾನ ಮಾಡಿ ಮದರಾಸಿಗೆ ಹೊರಡುವ ರೈಲಿನಲ್ಲಿ ಕುಳಿತರು. ಪಾರ್ವತಿಯ ಮನಸ್ಸು ಉಲ್ಲಸಿತವಾಗಿತ್ತು. ಶ್ರೀನಾಥ್ ಕುಡಿಯಲು ನೀರು ಕೇಳಿದಾಗ, ಪಾರ್ವತಿ ಚಂಬು ಕೈಗೆತ್ತಿದಳು. ಅದು ಖಾಲಿಯಾಗಿತ್ತು.

'ಅಯ್ಯೋ ನನ್ನ ಮರೆವು, ನೀರೇ ತುಂಬಿಸಿಡಲಿಲ್ಲ. ಒಂದು ನಿಮಿಷ ಬಂದೆ ರೈಲು ಹೊರಡಲು ಇನ್ನೂ ಹದಿನೈದು ನಿಮಿಷವಿದೆ' ಪಾರು ಗಾಡಿ ಇಳಿದು 'ಸ್ಟೇಷನ್'ನಲ್ಲಿದ್ದ ನಲ್ಲಿಯ ಹತ್ತಿರ ಬಂದಳು. ತಂಬಿಗೆಯನ್ನು ತೊಳೆದು, ನೀರು ಹಿಡಿದು ಮುಚ್ಚಳ ಮುಚ್ಚಿ, ಹಿಂದಿರುಗಿದಾಗ ಅವಳ ಸೀರೆಯನ್ನು ಹಿಡಿದು 'ಮಮ್ಮಿ' ಎಂದು ಅಳುತ್ತಿದ್ದ ಮಗುವನ್ನು ನೋಡಿದಳು. ಗೊಂಬೆಯಂತೆ ಚೆಲುವಾಗಿದ್ದ ಆ ಮಗುವನ್ನು ನೋಡಿ ಅಲ್ಲೇ ಮೈ ಮರೆತಳು. 'ಚಿಗುರಿ'ನಂತಿದ್ದ ಅದರ ಪುಟ್ಟ ಕೈ ಹಿಡಿದು, ನಿಮ್ಮ 'ಅಮ್ಮಾ ಎಲ್ಲಿ?' ಎಂದು ಕೇಳಿದಳು. ಆ ಮಗುವಿಗೆ ಕನ್ನಡ ಭಾಷೆ ಬರುತ್ತಿರಲಿಲ್ಲ. ಅದು ಪುನಃ 'ಮಮ್ಮೀ ಎಂದು ಅಳುತ್ತಲೇ ಇತ್ತು. 'ಮಮ್ಮಿ ಕಹಾ?' ಎಂದು ಪಾರ್ವತಿ ಕೇಳಿದಳು. ಅದು ರೈಲಿನ ಕಡೆ ಕೈ ತೋರಿತು. ' ಆವೋ ಮೇರಿಸಾಥ್' ಎಂದು ಮಗುವನ್ನು ಕರೆದುಕೊಂಡು ಬಂದು ರೈಲು ಹತ್ತಿದಳು.' ಮಗುವನ್ನು ನೋಡಿದ ಶ್ರೀನಾಥ್ ಅಚ್ಚರಿಯಿಂದ, 'ಯಾರ ಮಗು ಪಾರೂ....' ಎಂದು ಕೇಳಿದನು. ಅವಳು ವಿಷಯ ತಿಳಿಸಿದಳು. ಗಾಡಿ ಚಲಿಸಿತು. ರೈಲಿನಲ್ಲಿಯೇ ಮಗುವಿನ ತಾಯಿಗಾಗಿ ಪಾರು ಹುಡುಕಿದಳು. ಯಾರೂ ಮಗುವಿನ ಬಗ್ಗೆ ಕಾಳಜಿ ತೋರಿಸಲಿಲ್ಲ. ಅವಳು ಹತಾಶಳಾಗಿ 'ಈಗ ಏನು ಮಾಡುವುದು....? ಎಂದು ಕೇಳಿದಳು.

'ಮಾಡುವುದೇನು.... ಊರು ಸೇರುವವರೆಗೆ ಸುಮ್ಮನೆ ಇರುವುದು ನಂತರ ಯೋಚಿಸೋಣ....' ಅಂದನು.

ಪಾರು, ಟವಲಿನಿಂದ ಅಳುತ್ತಿದ್ದ ಮಗುವಿನ ಬಾಯಿ ಕೈ ಎಲ್ಲವನ್ನೂ ಒರೆಸಿ, ಅದಕ್ಕೆ ತಿನ್ನಲು ಬಿಸ್ಕತ್ ಹಾಗೂ ರವೆಯ ಉಂಡೆ ಕೊಟ್ಟಳು. ಅದನ್ನು ತಿನ್ನುತ್ತಾ ಅಳುವನ್ನು ಮರೆತು, ಪಾರುವಿನ ತೊಡೆ ಏರಿ ಕುಳಿತುಕೊಂಡಿತು. ಪಾರು ಅದನ್ನು ತಬ್ಬಿ ಹಿಡಿದು ಮುದ್ದು ಮಾಡುತ್ತ ಅದು ತಿಂಡಿ ತಿಂದ ನಂತರ ಹಾಲು ಕುಡಿಸಿ, ತನ್ನ ತೊಡೆಯ ಮೇಲೆ ಮಲಗಿಸಿಕೊಂಡು, ಸಣ್ಣನೆ ಧ್ವನಿಯಲ್ಲಿ ಜೋಗುಳ ಹಾಡಲು, ಮಗು ಎಲ್ಲವನ್ನು ಮರೆತು ನಿದ್ದೆ ಹೋಯಿತು.

ಅವರು ಬೆಂಗಳೂರು ತಲುಪಿದರೂ ಸಹ, ಆ ಮಗುವನ್ನು ಕೇಳಿಕೊಂಡು ಯಾರೂ ಬರಲಿಲ್ಲ. ಕಡೆಗೆ ಹತಾಶಳಾದ ಪಾರ್ವತಿಯೇ 'ಈಗ ಏನು ಮಾಡುವುದು.... ಯಾರೂ ಬರಲಿಲ್ಲ...'

'ಮಾಡುವುದೇನು....? ಪೋಲಿಸಿಗೆ ಕಂಪ್ಲೆಂಟ್ ಕೊಡೋಣ....

'ಬೇಡ.... ದೇವರೇ ನಮಗೆ ಈ ಮಗುವನ್ನು ಕೊಟ್ಟಿದ್ದಾನೆ.... ಇದನ್ನು ನಾವೇ.... ಇಟ್ಟುಕೊಳ್ಳೋಣ... ಮುಂದೆ ಯಾರಾದರೂ ಅದನ್ನು ಹುಡುಕಿಕೊಂಡು ಬಂದಾಗ ಯೋಚಿಸೋಣ....' ಎಂದು ಗಂಡನನ್ನು ಅಂಗಲಾಚಿದಳು. ಶ್ರೀನಾಥ್‌ನೂ ಅವಳನ್ನು ನೋಯಿಸಲಾಗದೆ 'ಹಾಗೆಯೇ ಮಾಡೋಣ....' ಎಂದನು.

'ಟ್ಯಾಕ್ಸಿಯಲ್ಲಿ ಮನೆಗೆ ಬರುವಾಗ ಒಂದು ಬಟ್ಟೆ ಅಂಗಡಿಯ ಮುಂದೆ ಅದನ್ನು ನಿಲ್ಲಿಸಿ, ಪಾರ್ವತಿ ಕೆಳಕ್ಕೆ ಇಳಿದು ಮಗುವಿಗೆ ಬೇಕಾದ ಕೆಲವು ಲಂಗ, ಚಡ್ಡಿ, ಮುಂತಾದ ಬಟ್ಟೆಗಳನ್ನೂ ಕೆಲವು ಆಟಿಗೆಗಳನ್ನೂ ಖರೀದಿಸಿ ಟ್ಯಾಕ್ಸಿ ಹತ್ತಿದಳು. ಅವರು ಮನೆ ಸೇರಿದಾಗ ಬೆಳಿಗ್ಗೆ ಎಂಟು ಗಂಟೆಯಾಗಿತ್ತು. ಪಾರ್ವತಿ ಮೊದಲು ನೀರು ಕಾಯಿಸಿ ಮಗುವಿನ ಸ್ನಾನ ಮಾಡಿಸಿ, ಹಾಲು ಕುಡಿಸಿದಳು. ನಂತರ ಅವರಿಬ್ಬರೂ ಸ್ನಾನ, ಊಟ ಮಾಡಿದರು. ಒಂದು ರಾತ್ರಿ ವಿಶ್ರಾಂತಿ ತೆಗೆದುಕೊಂಡು ನಂತರ ಅವರೆಲ್ಲರ ಆಯಾಸ ಪರಿಹಾರವಾಗಿತ್ತು.

ಮಾರನೆಯ ದಿನ ಶ್ರೀನಾಥ್‌ಗೆ ಕಾಫಿಕೊಟ್ಟು, ಮಗುವನ್ನು ಎಬ್ಬಿಸಿದಳು. ಅದಕ್ಕೆ 'ಹಾಲು ಕುಡಿಸಿ, ಸ್ನಾನ ಮಾಡಿಸಿ, ಒಳ್ಳೆಯ ಲಂಗ ಹಾಕಿ ತಲೆ ಬಾಚಿ, ಪೌಡರ್ ಹಾಕಿ ಶ್ರೀನಾಥ್‌ನ ಎದುರು ಕರೆದುಕೊಂಡು ಬಂದಳು. ರೀ... ನಮ್ಮ ರಾಜಕುಮಾರಿ ಹೇಗಿದ್ದಾಳೆ ನೋಡಿ....?

ಶ್ರೀನಾಥ್ ಮಗುವನ್ನು ನೋಡಿ ಬೆರಗಾದ.

'ಪಾರೂ.... ನಿಜವಾಗಿಯೂ ಇವಳು ರಾಜಕುಮಾರಿಯೇ ಆಗಿದ್ದರೆ? ನಮಗೆ ಬಹುಮಾನ ಸಿಗುತ್ತೆ.... ಅಲ್ವಾ....?'

'ಬಹುಮಾನವಲ್ಲ.... ಮಗುವನ್ನು ಅಪಹರಿಸಿದ್ದಕ್ಕೆ ಶಿಕ್ಷೆ ಸಿಗುತ್ತೆ ಅಷ್ಟೇ....' ಎಂದು ಪಾರು ತಮಾಷೆ ಮಾಡಿದಳು.

ಪಾರ್ವತಿ ಶ್ರೀನಾಥ್ ದಂಪತಿಗಳು ಮಗುವನ್ನು ಅವರ ಮನೆ ಹತ್ತಿರವಿದ್ದ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ದೇವರಿಗೆ ಅರ್ಚನೆ ಪೂಜೆ ಮಾಡಿಸಿ ಮಗುವಿಗೆ 'ಶೈಲಜಾ' ಎಂದು ಹೆಸರಿಟ್ಟರು.

'ಶೈಲಜಾ' ಪಾರ್ವತಿ ದಂಪತಿಗಳ ಮುದ್ದಿನ ಮಗುವಾಗಿ ಬೆಳೆದು ಹದಿನಾರು ವರ್ಷದ ಬಾಲೆಯಾದಳು. ತಾಯಿ, ಕನ್ನಡ 'ಅಕ್ಷರ'ಗಳನ್ನು ಕಲಿಸಿದರೆ, ಶ್ರೀನಾಥ್ 'ಇಂಗ್ಲಿಷ್' ಪದಗಳನ್ನು ಹೇಳಿಕೊಡುತ್ತಿದ್ದ. ಹೀಗಾಗಿ ಪಾರುವನ್ನು 'ಮಮ್ಮಿ' ಎಂದೂ ಶ್ರೀನಾಥ್‌ನನ್ನು 'ಡ್ಯಾಡಿ' ಎಂದು ಕರೆಯುತ್ತಿದ್ದಳು. ಅವಳಿಗೆ ನೃತ್ಯದಲ್ಲಿ ಆಸೆ ಇದ್ದುದರಿಂದ ನಾಲ್ಕು ವರ್ಷಗಳಿಂದ ಅವಳು ಒಳ್ಳೆಯ 'ನೃತ್ಯ' ಶಾಲೆಗೆ ಹೋಗುತ್ತಿದ್ದಳು. ಎಸ್.ಎಸ್.ಎಲ್‌ಸಿ ಪರೀಕ್ಷೆಯ ಫಲಿತಾಂಶ ಬಂದಾಗ ಶೈಲಳಿಗಿಂತ ಪಾರುವಿಗೆ ಹೆಚ್ಚು ಸಂತೋಷವಾಗಿತ್ತು. ಅವಳು ಫಸ್ಟ್ ಕ್ಲಾಸ್‌ನಲ್ಲಿ ಪಾಸಾದುದನ್ನು ತಾಯಿಗೂ ಬರೆದಳು. ಪಾರುವಿನ ತಾಯಿಗೆ ಶೈಲಳನ್ನು ಕಂಡರೆ ಅಷ್ಟಕ್ಕಷ್ಟೆ. ಆದರೆ ಹಾಗೆಂದು ಅವಳೆಂದೂ ಪಾರುವಿನ ಎದುರು ಆ ಮಾತನಾಡುತ್ತಿರಲಿಲ್ಲ. ಆದರೆ ಪಾರುವಿನ ತಂದೆಗೆ ಶೈಲಳ ಮೇಲೆ ಅಪಾರ ಮಮತೆ, ತಾಯಿ, ತಂದೆಯ ಪ್ರೀತಿಯಿಂದ ವಂಚಿತವಾದ ಮಗು ಎಂಬ ಕಾರಣ, ಶೈಲಳನ್ನು ಮತ್ತೂ ಹೆಚ್ಚು ಪ್ರೀತಿಸುವಂತೆ ಮಾಡಿತ್ತು.

ಅದೊಂದು ದಿನ ಶೈಲಳ ನೃತ್ಯ ಶಾಲೆಯವರು ದೂರ ದರ್ಶನದಲ್ಲಿ ಒಂದು ಕಾರ್ಯಕ್ರಮ ಕೊಡುವುದಿತ್ತು. ಎಲ್ಲರಿಗಿಂತ ಭಾವಪೂರ್ವಕನಾಗಿ ನರ್ತಿಸುತ್ತಿದ್ದ 'ಶೈಲಜಾ'ಳನ್ನು ಆ ನೃತ್ಯಕ್ಕೆ ಆಯ್ಕೆ ಮಾಡಿದರು. ಅದೊಂದು 'ರಾಧಾಕೃಷ್ಣ'ರ ಬಗ್ಗೆ ಒಂದು ರೂಪಕ. ಈ ಸುಂದರ 'ರೂಪಕ'ದಲ್ಲಿ ಶೈಲಾ 'ರಾಧೆ'ಯಾಗಿ ಭಾವ ಪೂರ್ವಕವಾಗಿ ನರ್ತಿಸಿದಳು. ಅವಳ ಹಾವ ಭಾವ, ಭಂಗಿ ಎಲ್ಲವೂ ಹೃದಯಂಗಮವಾಗಿತ್ತು. ಜೊತೆಗೆ ಅವಳ ಸುಂದರ ರೂಪ ಕೂಡ ಈ 'ಕಾರ್ಯಕ್ರಮ'ವು ಯಶಸ್ವಿಯಾಗುವಂತೆ ಮಾಡಿತು. ಪಾರುವನ್ನು ಆ ದಿನ ಹಿಡಿಯುವವರೇ ಇಲ್ಲ. ಮಗಳು ಮನೆಗೆ ಬಂದೊಡನೆ ಪಾರು ಅವಳಿಗೆ ದೃಷ್ಟಿ ನಿವಾಳಿಸಿ ಹಾಕಿದಳು. 'ಎಷ್ಟು ಮುದ್ದಾಗಿ ಕಾಣುತ್ತಿದ್ದೆ ಗೊತ್ತೇ'


'ಮಮ್ಮಿ.... ನೀವು ಸುಮ್ಮನೇ ಹೊಗಳುವುದನ್ನು ಬಿಡಿ.... ನಾನೇನು ಅಷ್ಟು ಚೆನ್ನಾಗಿ ಮಾಡಲೇ ಇಲ್ಲ....' ಎಂದು ತಾಯಿಯನ್ನು ರೇಗಿಸಿದಳು.

'ಮಮ್ಮಿ.... ನಿನ್ನೆ ನೀವಿಬ್ಬರೂ ಹೊರಗೆ ಹೋಗಿದ್ದಾಗ ಡ್ಯಾಡಿಯನ್ನು ಹುಡುಕಿಕೊಂಡು ಯಾರೋ ಬಂದಿದ್ದರು.... ಅವರು ನನ್ನನ್ನೆ ಒಂದು ರೀತಿ ನೋಡುತ್ತಿದ್ದರು. ನಿನ್ನ ಹೆಸರೇನು? ಎಂದು ಕೇಳಿದರು. 'ಅವರು ಯಾರು ಮಮ್ಮಿ....?' ಶೈಲಾ ಮುಗ್ಧವಾಗಿ ಕೇಳಿದಳು.

ಪಾರ್ವತಿಗೆ ಬವಳಿ ಬಂದಂತಾಯಿತು. ಸುಧಾರಿಸಿಕೊಂಡು 'ಶೈಲಾ.... ಅವರು ಯಾರೂಂತ ನನಗೇನು ಗೊತ್ತು....? ನಿಮ್ಮ ತಂದೆಯವರಿಗೆ ಗೊತ್ತಿರಬಹುದು....' ಎಂದು ಸುಮ್ಮನಾದಳು ಶೈಲಾ. ಅವಳ ಸ್ನೇಹಿತೆಯ ಮನೆಗೆ ಹೋದಳು.

ಶ್ರೀನಾಥ್ ಬಂದೊಡನೆ ಪಾರ್ವತಿ ಈ ಅಪರಿಚಿತರ ವಿಷಯ ತಿಳಿಸಿದಳು. ಇವರು ಮಾತನಾಡುತ್ತಿದ್ದಂತೆಯೇ ಬಾಗಿಲು ತಟ್ಟಿದ ಸದ್ದಾಯಿತು. ಶ್ರೀನಾಥ್

ಅನರ್ಹ



ನಂಬಲಾರೆ
ಪ್ರಿಯಾ
ನಿನ್ನ
ಆಶ್ವಾಸನೆ,
ಏಕೆಂದರೆ
ನೀನು
ಬಾಯಿಯಿಂದ
ಉಗುಳುವಾಗ
ಬರೀ
Ash
ವಾಸನೆ!

– ಪ್ರಕಾಶ ಅಂಬರಕರ

ಬಾಗಿಲು ತೆರೆದ. ಅಪರಿಚಿತರೊಬ್ಬರು ಹೊರಗೆ ನಿಂತಿದ್ದರು.

'ಶ್ರೀನಾಥ್.... ಅಲ್ಲವೇ?' 'ಹೌದು ಅವರನ್ನು ಆಹ್ವಾನಿಸಿದ.

ಅವರು ಒಳಗೆ ಬಂದು ಕುಳಿತುಕೊಂಡು 'ನಮಸ್ಕಾರ. ನನ್ನ ಹೆಸರು 'ಸತೀಶ್ ಭಾಟಿಯಾ' ಅಂತ ಬಾಂಬೆಯಿಂದ ಬರುತ್ತಿದ್ದೇನೆ. ನಿಮ್ಮ ಬಳಿ ಒಂದು ಮುಖ್ಯ ವಿಷಯವನ್ನು ಕುರಿತು ಮಾತನಾಡಬೇಕಿತ್ತು' ಎಂದರು.



'ಏನು ಮಾತನಾಡಬೇಕು... ಯಾವ ವಿಷಯ....'

'ನಿಮ್ಮ ಮಗಳ ವಿಷಯ....'

'ನನ್ನ ಮಗಳು ಶೈಲಾ ವಿಷಯವೇ....'

'ಹೌದು.... ಅವಳು ಮನೆಯಲ್ಲಿ ಇಲ್ಲಾತಾನೆ...?

'ಇಲ್ಲಾ.... ಈಗ ತಾನೇ ಹೊರಗೆ ಹೋದಳು....'

'ಹಾಗಾದರೆ ಪರವಾಗಿಲ್ಲ ಮಾತನಾಡಬಹುದು. ಮೊದಲು ಈ ಫೋಟೋ ನೋಡಿ....' ಎಂದು ಒಂದು ಫೋಟೋ ತೆಗೆದು ಶ್ರೀನಾಥ್‌ನ ಕೈಗೆ ಕೊಟ್ಟರು.

'ಶ್ರೀನಾಥ್ ಪಾರು ಇಬ್ಬರೂ ಆ ಫೋಟೋ ನೋಡಿದರು' ತಮ್ಮ ಮಗಳು ಶೈಲಾಳ ಪ್ರತಿಬಿಂಬ. ಕಣ್ಣು, ಮೂಗು ಬಾಯಿ, ಕೂದಲು ಎಲ್ಲವೂ ತಮ್ಮ ಮಗಳಂತೆಯೇ ಇದೆ' ಇಬ್ಬರೂ ಅಚ್ಚರಿಯಿಂದ ಅವರೆಡೆ ನೋಡಿದರು.

'ಇವಳು ನಮ್ಮ 'ಶೈಲಾ' ಹಾಗೆ ಇದ್ದಾಳೆ. ನಮ್ಮ ಮಗುವಿನ ಫೋಟೋ ನಿಮ್ಮ ಬಳಿ ಹೇಗೆ....?'

'ಇವಳು ನಿಮ್ಮ ಮಗಳೂ ಎಂದು ನೀವು ತಿಳಿದಿರುವ 'ಶೈಲಜಾ'ಳ ಪ್ರತಿರೂಪವಾದ 'ಶಿಲ್ಪಾ'ದು. ನನ್ನ ಮಗಳು 'ಶಿಲ್ಪಾ' ಹಾಗೆ ನಿಮ್ಮ ಮಗಳು 'ಶೈಲಜಾ' ಇಬ್ಬರೂ ನನ್ನ ಅವಳಿ ಮಕ್ಕಳು. 'ಶೈಲಜಾ'ಗೆ ನಾವಿಟ್ಟಿದ್ದ ಹೆಸರು 'ಶ್ವೇತಾ' ಈಗ ಅರ್ಥವಾಯಿತೆ?

'ಅಂದರೆ.... ನೀವೀಗ ನಿಮ್ಮ ಮಗಳನ್ನು ಕರೆದೊಯ್ಯಲು ಬಂದಿದ್ದೀರಿ ಅಲ್ಲವೇ....?' ಪಾರು ಉದ್ವೇಗದಿಂದ ಕೇಳಿದಳು.

'ಇಲ್ಲಮ್ಮ.... ಅದಕ್ಕಾಗಿ ಬರಲಿಲ್ಲ. ನಡೆದ ವಿಷಯ ತಿಳಿಸಲು ಬಂದೆ ಅಷ್ಟೇ. ನಾನೊಬ್ಬ ಪ್ರತಿಷ್ಠಿತ ವ್ಯಕ್ತಿ. ನಾನಿರುವುದು ಬಾಂಬೆಯಲ್ಲಿ. ನನ್ನ ಹೆಸರು 'ಸತೀಶ್ ಭಾಟಿಯಾ' ಸುಮಾರು ಹದಿಮೂರು ವರ್ಷಗಳ ಹಿಂದೆ ನಾನು ನನ್ನ ಪತ್ನಿ ಮಕ್ಕಳೊಡನೆ ದೆಹಲಿಗೆ ಹೋಗಿದ್ದೆವು. ಹಿಂದಿರುಗುವಾಗ ಅಚಾತುರ್ಯದಿಂದ ನನ್ನ ಪತ್ನಿ ಅವಳಿ ಮಕ್ಕಳಲ್ಲಿ ಒಬ್ಬಳನ್ನು ಸ್ಟೇಷನ್‌ನಲ್ಲಿ ಮರೆತು, ರೈಲು ಹತ್ತಿದಳು. ರೈಲು ಚಲಿಸಿದ ನಂತರ ಅರಿವಾಯಿತು. ಅವಳಿಗಾಗಿ ಬಹಳ ಹುಡುಕಿದೆವು. ಎಲ್ಲಿಯೂ ಸಿಗಲಿಲ್ಲ. ಕಡೆಗೆ ನಿರಾಶರಾಗಿ ಅವಳ ಆಸೆಯನ್ನೇ ತೊರೆದೆವು. ಆದರೆ....?'

'ಆದರೆ ಈಗ... ಇಲ್ಲಿಗೆ ಬರಲು ಕಾರಣ....?'

'ಅದೇ.... ನೋಡಿ ವಿಚಿತ್ರ. ಮೊನ್ನೆ ಅಕಸ್ಮಾತ್ ಕಾರ್ಯಾಂತರದಿಂದ ಬೆಂಗಳೂರಿಗೆ ಬರಬೇಕಾಯಿತು. ನನ್ನ ಸ್ನೇಹಿತರ ಮನೆಯಲ್ಲಿ ಇಳಿದುಕೊಂಡಿದ್ದ ನಾನು 'ದೂರದರ್ಶನ' ಕಾರ್ಯಕ್ರಮದಲ್ಲಿ ನಿಮ್ಮ ಮಗಳನ್ನು ಕಂಡೆ. ನನಗೆ ಅನುಮಾನ ಬಂದು ಕೂಡಲೇ ದೂರದರ್ಶನ ಕೇಂದ್ರಕ್ಕೆ ಹೋಗಿ ನಿಮ್ಮ ವಿಳಾಸ ಪತ್ತೆ ಮಾಡಿದೆ....'

'ಆದರೆ 'ಶೈಲಾ' ನಿಮ್ಮ ಮಗಳೇ ಎಂದು ಹೇಗೆ ಹೇಳುತ್ತೀರಿ....?'

'ಈ 'ಫೋಟೋ' ನೋಡಿ. ಇಬ್ಬರಿಗೂ ಮೂರು ವರ್ಷವಾದಾಗ ತೆಗೆಸಿದ್ದು....' ಎಂದು ಇನ್ನೊಂದು ಫೋಟೋ ತೋರಿಸಿದರು. ಆ ಚಿತ್ರವನ್ನು ನೋಡಿ ಶ್ರೀನಾಥ್‌ಗೆ ಅಚ್ಚರಿಯಾಯಿತು. 'ಶೈಲಜಾ' ಅವರ ಮಗಳೇ ಎಂಬುದು ಖಾತ್ರಿಯಾಯಿತು.

'ಅಂದರೆ.... ಶೈಲಾ ನಿಮ್ಮ ಮಗಳು. ಇಷ್ಟು ವರ್ಷದಿಂದ ನಮ್ಮ ಮಗು, ಎಂದು ಪ್ರೀತಿ, ವಾತ್ಸಲ್ಯದಿಂದ ಬೆಳೆಸಿದ ನಮ್ಮ ಮಗುವನ್ನು ನಿಮಗೆ ಹೇಗೆ ಒಪ್ಪಿಸಬೇಕು. ಬಾಗಿಲೊರಗಿ ನಿಂತಿದ್ದ ಪಾರ್ವತಿ ಗಂಡನ ಮಾತನ್ನು ಕೇಳಿ ಅಳುತ್ತಾ ಅಡಿಗೆ ಮನೆಗೆ ಹೋದಳು. ಭಾಟಿಯಾ ಕಣ್ಣಲ್ಲೂ ನೀರು ಬಂತು. ಅವರು ಸಾವರಿಸಿಕೊಂಡು 'ಹಾಗಲ್ಲ.... ನಾನು ಬಂದದ್ದು ನನ್ನ ಮಗಳನ್ನು ನೋಡಲು ಮಾತ್ರ. ಅವಳನ್ನು ಕರೆದೊಯ್ಯಲು ಬರಲಿಲ್ಲ. ನನ್ನ ಮಗಳು ನಿಮ್ಮ ಮಮತೆ, ವಾತ್ಸಲ್ಯಗಳಿಂದ ಸುರಕ್ಷಿತವಾಗಿದ್ದಾಳೆಂದು ನನಗೆ ಸಂತೋಷವಾಗಿದೆ. ಅವಳಿಗೆ ನಿಮ್ಮಿಬ್ಬರ ಪ್ರೀತಿಯ ರಕ್ಷೆ ಇದೆ. ಅಲ್ಲದೆ ಅವಳಿಗೆ ಒಳ್ಳೆಯ ಶಿಕ್ಷಣ ಕೊಟ್ಟಿದ್ದೀರಿ, ನೃತ್ಯ ಕಲಿಸಿದ್ದೀರಿ, ಇಂತಹ ತಂದೆ ತಾಯಿಗಳನ್ನು ಪಡೆಯಲು ಅವಳು ಪುಣ್ಯ ಮಾಡಿದ್ದಳು' ಎಂದರು.

ಅವರ ಮಾತುಗಳನ್ನು ಕೇಳಿ ಸಂತೋಷವಾಯಿತು.

'ಆದರೆ.... ಅವಳಿಗೆ 'ನಾನು ಅವಳ ತಂದೆ' ಎಂಬುದನ್ನು ಮಾತ್ರ ತಿಳಿಸಬೇಡಿ.... ನಾನು ನಮ್ಮ ಒಳ್ಳೆಯ ಸ್ನೇಹಿತ ಎಂದು ಹೇಳಿ ಎಂದರು.

'ಹಾಗೆಯೇ ಆಗಲಿ....' ಎಂದು ಇಬ್ಬರೂ ಮಾತುಕೊಟ್ಟರು. 'ಪಾರೂ.... ಭಾಟಿಯಾರವರಿಗೆ ತಿಂಡಿ, ಕಾಫಿ ಕೊಡು' ಎಂದರು. ಪಾರು ಅಡಿಗೆ ಮನೆಗೆ ಹೋಗಿ ಶೈಲಾ ಕೈಲಿ ತಿಂಡಿ ತಟ್ಟೆಯನ್ನು ಕಳಿಸಿ, ಕಾಫಿಯನ್ನು ತಾನೇ ತೆಗೆದುಕೊಂಡು ಬಂದಳು.

ಅವರು ತಿಂಡಿ ತಿಂದು ಕಾಫಿ ಮುಗಿಸಿ, 'ಇನ್ನು ಬರುತ್ತೇನೆ ಹೊತ್ತಾಯಿತು' ಎಂದರು.

ಅಲ್ಲಿಯೇ ನಿಂತಿದ್ದ ಪಾರು 'ಶೈಲಾ... ಅವರ ಕಾಲ್ಮುಟ್ಟಿ ನಮಸ್ಕಾರ ಮಾಡು' ಎಂದಳು. ಶೈಲಾ ಭಾಟಿಯಾ ಕಾಲು ಮುಟ್ಟಿ ನಮಸ್ಕರಿಸಿದಳು. ಅವರು ಅವಳನ್ನು ಆಲಂಗಿಸಿ ಅವಳ ಹಣೆಗೆ ಹೂ ಮುತ್ತನಿಟ್ಟು 'ಈ ಸರ ನನ್ನ ನೆನಪಿಗಾಗಿ' ಎಂದು ಅವಳ ಕೊರಳಿಗೆ ಒಂದು ಚಿನ್ನದ ಸರ ಹಾಕಿ ಶ್ರೀನಾಥ್‌ನ ಕೈಗೆ ಒಂದು ಕವರನ್ನು ಕೊಟ್ಟು ಹೊರಟು ಹೋದರು. ಆ ಕವರಿನಲ್ಲಿ ಶೈಲಳ ಹೆಸರಿಗೆ ಹತ್ತು ಲಕ್ಷ ರೂ.ಗಳ ಚೆಕ್ಕು ಇಟ್ಟಿದ್ದರು.


■



ವಿಜ್ಞಾನಿಗಳ ಜ್ಞಾನ!

ವಿಜ್ಞಾನಿಗಳು ಸಾಮಾನ್ಯ ವಿಷಯದಲ್ಲಿ ವ್ಯವಹಾರಿಕವಾಗಿ ಇರುತ್ತಿರಲಿಲ್ಲ. ಉದಾಹರಣೆಗೆ, ನ್ಯೂಟನ್ನನ ಕೊಠಡಿಯ ಬಾಗಿಲೊಂದಕ್ಕೆ ಒಂದು ಸಣ್ಣ ಕಿಂಡಿ, ಮತ್ತೊಂದು ದೊಡ್ಡದು 'ಇದೇಕೆ?' ಎಂದು ಯಾರೋ ಕೇಳಿದರು. ನ್ಯೂಟನ್ ಹೇಳಿದ. 'ನನ್ನಲ್ಲಿ ಒಂದು ಚಿಕ್ಕ ಬೆಕ್ಕು, ಮತ್ತೊಂದು ದೊಡ್ಡದು ಇದೆ ಅವುಗಳ ಓಡಾಟಕ್ಕೆ, ಒಂದಕ್ಕೆ ಚಿಕ್ಕದು ಮತ್ತೊಂದಕ್ಕೆ ದೊಡ್ಡದು 'ಅಂ! ದೊಡ್ಡ ಕಿಂಡಿಯೊಂದೇ ಇದ್ದರೆ ಅದರಲ್ಲಿ ಚಿಕ್ಕದೂ ಓಡಾಡಬಹುದಲ್ಲಾ?' ಎಂದಾಗ ನ್ಯೂಟನ್ 'ಓಹ್! ಹೌದಲ್ಲವೆ? ಎಂದನಂತೆ.

-ಸಂಗ್ರಹ: ನಾಗರಾಜ ಭಟ್ಟ



ಬೆಳೆದ ಮಗ ಮತ್ತು ರಜೆ

ಪ್ರಫುಲ್ಲನಿಗೀಗ ಹದಿನೆಂಟು ವರ್ಷ. ಮುದ್ದಿಗೆ 'ಬಂಟಿ' ಎನ್ನುತ್ತಿದ್ದೆವು. ಅವನ ಮುಖದಲ್ಲೀಗ ತರಕಲು ಗಡ್ಡ. ಮುದ್ದು ಅನ್ನುವುದಕ್ಕೆ ಅರ್ಥವೇ ಇಲ್ಲವಾಗಿದೆ.

ಕೇರ್ ಮಾಡದವನಂತೆ ಕೆದರಿಕೊಂಡ ಕ್ರಾಪ್. ಸಾರಿಸುವ ಬಟ್ಟೆಯಂತಿರುವ ಟಿ ಶರ್ಟ್, ಎಷ್ಟು ವರ್ಷವಾಯಿತೋ ಒಗೆದು! ಎನ್ನುವಂತಿರುವ ಜೀನ್ಸ್ ಪ್ಯಾಂಟ್.

ದಿವಾನ್‌ಕಾಟ್‌ಗೆ ಒರಗಿ, ನೆಲದಲ್ಲಿ ಕಾಲು ಚಾಚಿಕೊಂಡು ಫೋನಲ್ಲಿ ಮಾತಾಡುತ್ತಾ ಇದ್ದಾನೆ. 'ಯಾ.... ಯೀ....' 'ಓಹ್ಹೋ... ಶ್ಯೂರ್....' ಎಂದೆಲ್ಲ ಅವನು ಉದ್ವಿಗ್ನತೆಯಿಂದ ಕಿರುಚುವ ಪರಿ ನೋಡಿದರೆ, ಇವತ್ತು ಅವನು ಗೆಳೆಯರ ಹಿಂಡಿನ ಜೊತೆಗೇ ಎಲ್ಲೋ ಲಗ್ಗೆ ಹಾಕಲು ಹೊರಡುತ್ತಾನೆ ಎಂಬುದು ಖಾತರಿ.

ಇವನದೇ ಮಾದರಿಯಂತಿರುವ ತರಲೆಗಳ ಹಿಂಡು. ಬಂದರೆ, ಗೇಟಿನೊಳಗೂ ಬಾರದೇ ಬೈಕ್‌ನಲ್ಲೇ ಕುಳಿತು 'ರೊಂಯ್.....ರೊಂಯ್....' ಎಂದು ಸದ್ದು ಹೊರಡಿಸುತ್ತಾ 'ಏ ಪ್ರಫುಲ್ ಕಮಾನ್ ಮ್ಯಾನ್' ಎಂದು ಕೇಕೆ ಹಾಕುವ ಹಿಂಡು.

'ಮಾಮ್....' ಎಂದು ಅರಚುತ್ತಾ ಅಡುಗೆ ಮನೆಗೆ ಬರುವ ಇವನು ಬೆಳಿಗ್ಗೆಯೇ ಉಪ್ಪಿಟ್ಟು ಮಾಡಬಾರದೆಂದು ತಕರಾರು ಮಾಡಿದ್ದ. ಅವನಿಗಾಗಿ ನೂಡಲ್ಸ್ ಸಿದ್ಧವಾಗುತ್ತಿರುವ ಆ ಶ್ರಪಟ ತಿಂಡಿ ನೋಡಿಯೇ ಅಮೃತ ಕಂಡವನ ಹಾಗೆ,

'ಯು ಆರ್ ಎ ನೈಸ್ ಮಾಮ್' ಎನ್ನುತ್ತಾ ಸ್ಟ್ಯಾಂಡಿನ ತಟ್ಟೆ, ಫೋರ್ಕು ಎಲ್ಲ ಭಾರೀ ಗದ್ದಲದೊಡನೆ ಎತ್ತಿಕೊಳ್ಳುತ್ತಾ, ಎರಡನ್ನೂ ಸೇರಿಸಿ ತಾಳ ಹಾಕುತ್ತಾ, ಬೇಯಲೂ ಬಿಡದೆ ಹಾಗೆ ಅವಸರಿಸುವ ಅವನ ರೀತಿ ನೋಡಿದರೇ ತಿರುವುತ್ತಿರುವ ಮಗುಚುವ ಕೈಯಿಂದಲೇ ನಾಲ್ಕು ಬಾರಿಸುವ ಮನಸ್ಸಾಗುತ್ತದೆ. ಆದರೆ ಏನು ಮಾಡೋದು! ಹೆತ್ತ ಮಗನಲ್ಲವೇ!

'ಪೋಲಿ ತಿರುಗೋಕ್ಕೆ ಹೋಗಬೇಕೇನೋ!' ಎಂದು ಗೊಣಗುತ್ತಾ ಉದ್ದದ ಹುಳಗಳಂತೆ ಮಿಜಗುಡುವ ನೂಡಲ್ಸ್ ಎತ್ತಿ ತಟ್ಟೆಗೆ ಹಾಕಿದೊಡನೆ, ಬಿಸಿಯನ್ನು ಲೆಕ್ಕಸದೇ ಬಾಯಿಗೆ ತುರುಕಿಕೊಂಡು 'ಹಾಂ...ಹಾ' ಎಂದು ಚೀರಾಡುತ್ತಾ,

'ಇಟ್ ಈಸ್ ಗೆಟಿಂಗ್ ಲೇಟ್ ಮಾಮ್....' ಎನ್ನುತ್ತಾನೆ.

ಈ ಪಡ್ಡೆ ಹುಡುಗರ ಹಿಂಡು. ಅದ್ಯಾವ ಪರಿ ಬೈಕ್ ಓಡಿಸುತ್ತಾರೆಂದರೆ, ಇವನು ವಾಪಸು ಮನೆಗೆ ಬರುವವರೆಗೆ ಜೀವದಲ್ಲಿ ಜೀವ ನಿಲ್ಲುವುದಿಲ್ಲ.

ಚಿಕ್ಕವನಿದ್ದಾಗ ಕೈಹಿಡಿದು ರಸ್ತೆ ದಾಟಿಸಿ ಶಾಲೆ ತಲುಪಿಸಿ ಬರುತ್ತಾ ಇದ್ದುದು ನೆನಪಾಗುತ್ತದೆ. ಈಗ ಅವನು ಬೆಳೆದಿದ್ದಾನೆ, ಕಾರು, ಬಸ್ಸು, ಸ್ಕೂಟರ್, ಬೈಕ್ ಯಾವುದೂ ಲೆಕ್ಕಕ್ಕೇ ಇಲ್ಲದವನಂತೆ ಓಡಿ ಬಸ್ ಹಿಡಿದು, ಕಂಬಿಗೆ ಜೋತಾಡಿಕೊಂಡು ಹೋಗುವ ದೃಶ್ಯ ನೆನಪಾಗಿ ಬೈದು ಬುದ್ಧಿ ಹೇಳಲು ಹೋದರೆ 'ಮಮ್ಮಿ, ನೀನು ತೀರಾ ಓಲ್ಡ್ ಫ್ಯಾಷನ್ಡ್. ಥ್ರಿಲ್ ಇರಬೇಕು....' ಎಂದು ಉಡಾಫೆಯಿಂದ ಹೇಳುತ್ತಾನೆ.

ಕಳೆದ ವಾರ ಇವನ ಪಂಜಾಬಿ ಗೆಳೆಯ ಬೈಕ್‌ನಲ್ಲಿ ಬರುವಾಗ ರೋಡ್ ಡಿವೈಡರ್‌ಗೆ ಡಿಕ್ಕಿ ಹೊಡೆದು ಆಸ್ಪತ್ರೆ ಸೇರಿದ್ದು, ಹಾಸ್ಟೆಲಲ್ಲಿ ಇರುವ ಆಂಧ್ರದ ಚಿಂಟು ಅದೇ ಮೊದಲ ಬಾರಿ ಕಂಠ ಪೂರ್ತಿ ಕುಡಿದು ಚಿತ್ತಾಗಿ ಆಸ್ಪತ್ರೆ ಸೇರಿದ್ದು ಎಲ್ಲ ಅದ್ಭುತ ಸಂಗತಿಗಳೆಂಬಂತೆ ವಿವರಿಸುತ್ತಾನೆ.

ಹಾಲ್‌ಗೆ ಬಂದರೆ ಅವನು ಹರಡಿರುವ ಕಾಮಿಕ್ಸ್‌ಗಳು.

'ಹೀಗೇ ನೀನು ಈ ಕಾಮಿಕ್ಸ್ ಹರಡಿದ್ದರೆ, ಎಲ್ಲಾ ತಗೊಂಡೋಗಿ ಕಸದ ತೊಟ್ಟಿಗೆ ಹಾಕಿಬಿಡ್ತೀನಿ' ಎಂದು ಸಿಡುಕಿದರೆ,

'ಓ ಮಾಮ್.... ಜಸ್ಟ್ ಎ ಮಿನಿಟ್... ಎಲ್ಲಾ ಎತ್ತಿಟ್ಟು ಹೋದರೆ ಸರಿ ಆಯ್ತು ಅಲ್ಲವಾ?' ಎಂದು ನಾನು ರೇಗಿದ್ದೇ ಅರ್ಥವಿಲ್ಲದ್ದು ಎಂಬಂತೆ ಮುಖ ಮಾಡುತ್ತಾನೆ.

> **ಕಳೆದ ವಾರ ಇವನ ಪಂಜಾಬಿ ಗೆಳೆಯ ಬೈಕ್‌ನಲ್ಲಿ ಬರುವಾಗ ರೋಡ್ ಡಿವೈಡರ್‌ಗೆ ಡಿಕ್ಕಿ ಹೊಡೆದು ಆಸ್ಪತ್ರೆ ಸೇರಿದ್ದು, ಹಾಸ್ಟೆಲಲ್ಲಿ ಇರುವ ಆಂಧ್ರದ ಚಿಂಟು ಅದೇ ಮೊದಲ ಬಾರಿ ಕಂಠ ಪೂರ್ತಿ ಕುಡಿದು ಚಿತ್ತಾಗಿ ಆಸ್ಪತ್ರೆ ಸೇರಿದ್ದು ಎಲ್ಲ ಅದ್ಭುತ ಸಂಗತಿಗಳೆಂಬಂತೆ ವಿವರಿಸುತ್ತಾನೆ.**

'ನಿನ್ನ ಅಂದು ಏನು ಪ್ರಯೋಜನ! ನೀನು ಕೇಳಿ ಕೇಳಿದ್ದೆಲ್ಲ ತಂದು ರಾಶಿ ಹಾಕ್ತಾರಲ್ಲಾ ನಿಮ್ಮಪ್ಪ, ಮೊದಲು ಅವರನ್ನ ಬೈಬೇಕು....' ಎಂದು ಗೊಣಗುತ್ತಾ ಸ್ನಾನದ ಮನೆಗೆ ಹೋದರೆ, ಅಲ್ಲಿ ಎಲ್ಲ ದೆವ್ವ ಕೆದರಿದ ಹಾಗೆ.

ಕ್ಯಾಪ್ ತೆಗೆದ ಶ್ಯಾಂಪೂ ಬಾಟಲಿ, ನೀರು ತುಂಬಿಕೊಂಡ ಸೋಪ್ ಬಾಕ್ಸ್, ಆಗ ತಾನೇ ಸ್ನಾನ ಮಾಡಿ, ಒದ್ದೆ ಮಾಡಿ ಅಲ್ಲೇ ಎಸೆದ ಚಡ್ಡಿ, ಬಾಗಿಲಿಗೆ ನೇತು ಬಿದ್ದ ಒದ್ದೆ ಟವೆಲು....

'ಮಮ್ಮಿ ಇವತ್ತು ಶೂರ್ ಆಗಿ ಬಚ್ಚಲ ಮನೆ ಎಲ್ಲ ಕ್ಲೀನ್ ಮಾಡಿ ಬಿಡ್ತೀನಿ' ಎಂದು ಪ್ರಾಮಿಸ್ ಮಾಡಿದ್ದವನ ನೆನಪಾಗುತ್ತದೆ. ಸ್ನಾನದ ಮನೆಯ ಅವ್ಯವಸ್ಥೆ ನೋಡಿ ರೇಗಬೇಕು ಅನ್ನಿಸುತ್ತಾ ಇರುವಾಗಲೇ, ಹೊರಗೆ ಬೈಕ್‌ಗಳ ಸದ್ದು. ಬಾಲ್ಕನಿಯಲ್ಲಿ ನಿಂತು ನೂಡಲ್ಸ್ ಅವಸರವಸರದಿಂದಲೇ ಬಾಯಿಗೆ ತುರುಕಿಕೊಳ್ಳುತ್ತಲೇ ಇವನು ಏನೋ ಚೀರಿ ಚೀರಿ ಹೇಳುತ್ತಾ ಇದ್ದಾನೆ.

ಆಫೀಸಿಗೆ ಹೊರಡಬೇಕು. ಮನೇಲಿ ನೋಡಿದರೆ ಈ ಅವಾಂತರ. ಸೀರೆ ಎತ್ತಿಕೊಳ್ಳಲು ರೂಮಿಗೆ ಹೋದರೆ, ವಾರ್ಡ್‌ರೋಬ್ ಕೆದರಿದೆ, ಕೆಲವು ಸಣ್ಣ ಬಟ್ಟೆಗಳು ನೆಲದಲ್ಲಿ ಬಿದ್ದಿವೆ ಸಿಟ್ಟು ಕೆರಳುತ್ತದೆ.

'ಮಮ್ಮಿ ಐ ಆಮ್ ಗೋಯಿಂಗ್, ಬೈ..... ಸೀಯೂ.....' ಎಂದಿವನ ತಾರಕ. ಹೊರಗೆ ಬಂದರೆ ಇವನಾಗಲೇ ಬ್ಯಾಗು ಬೆನ್ನಿಗೇರಿಸಿಕೊಳ್ಳುತ್ತಾ, ಯಾವನೋ ಒಬ್ಬನ ಹಿಂದೆ ಮೋಟಾರ್ ಬೈಕಲ್ಲಿ ಕುಳಿತಿರುತ್ತಾನೆ.

'ಹುಷಾರು ಕಣೋ... ನೋಡ್ಕೊಂಡು ಹೋಗಿ' ಚೀರಿ ಹೇಳುತ್ತೇನೆ. ಅದ್ಯಾವುದಕ್ಕೂ ಕೇರ್ ಇಲ್ಲದಂತೆ ಕೈ ಬೀಸುತ್ತಾನೆ.

ಅದೇ ಸಾರಿಸುವ ಬಟ್ಟೆಯಂಥ ಟಿ - ಶರ್ಟ್ ಬೇರೇದಾದರೂ ಹಾಕ್ಕೊಂಡು ಹೋಗಬಾರದಿತ್ತೇ! ಎಂದು ಮನಸ್ಸು ಕೊರಗುತ್ತದೆ.

ಬೆಳೆದ ಮಗ. ಹೇಳಿದರೆ,

'ಇದೇನಾಗಿದೆ.... ಫೈನ್....' ಎಂದು ಕೊಡವಿಕೊಳ್ಳುತ್ತಾನೆ.

ಸ್ನಾನಕ್ಕೆ ಬಂದರೆ, ಆ ನರಕ ಕಂಡು 'ಲೋ ಬಂಟಿ. ಬಚ್ಚಲು ಮನೆ ಇವತ್ತು ಕ್ಲೀನ್ ಮಾಡ್ತೀನಿ ಅಂತ ಹೇಳಿದ್ಯಲ್ಲೋ' ಅಂತ ದಬಾಯಿಸಬೇಕಿತ್ತು ಎನ್ನುವುದು ನೆನಪಾಗುತ್ತದೆ.

■ ಅನಿತಾ ಆರ್.ಎಸ್

ನಿಲ್ಲುವುದೆಂದಿಗೆ ಈ ನಿತ್ಯ ಸಾವಿನ ಮೆರವಣಿಗೆ !

ಹೊರಗಿನ ಕತ್ತಲಿಗೆ ನಾನು ಹೆದರುವುದಿಲ್ಲ
ಮನೆಯೊಳಗಿನ ಕತ್ತಲೇ ನನಗಿಷ್ಟವಾಗುವುದಿಲ್ಲ.
-ಶಿಲಾ ಹಿಲ್ಯಾನಿ



ದಿನಕ್ಕೆ ಕನಿಷ್ಠ ಮೂರು ಹೆಣ್ಣು ಮಕ್ಕಳು ಬೆಂಗಳೂರು ನಗರ ಒಂದರಲ್ಲೇ ಸಾವಿಗೀಡಾಗುತ್ತಾರೆ. ಇವರದು ಸಹಜ ಸಾವಲ್ಲ. ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ. ಇಲ್ಲವೇ ಕೊಲ್ಲಲಾಗಿರುತ್ತದೆ. ತಿಂಗಳಿಗೆ ಎಪ್ಪತ್ತಕ್ಕೂ ಹೆಚ್ಚು ಸ್ಟವ್ ಸಿಡಿತದ ಪ್ರಕರಣಗಳು ವರದಿಯಾಗುತ್ತವೆ. (ವರದಿಯಾಗದ ಘಟನೆಗಳು ಇನ್ನೆಷ್ಟೋ!) ಈ ಎಲ್ಲ ಪ್ರಕರಣಗಳೂ ಸತ್ತ ಮಹಿಳೆಯ ಅತ್ತೆಯ ಮನೆಯಲ್ಲಿಯೇ ನಡೆಯುತ್ತವೆ. ಆ ಮನೆಯಲ್ಲಿರುವ ಬೇರ್‍ಯಾವ ವ್ಯಕ್ತಿಗೂ ತಗುಲದ ಬೆಂಕಿ ಮನೆಯ ಸೊಸೆಯನ್ನು ಮಾತ್ರ ಆಹುತಿ ತೆಗೆದುಕೊಂಡಿರುತ್ತದೆ. ಇದು ಬೆಂಗಳೂರು ನಗರ ಒಂದರ ಕತೆ.

ಬೇರೆ ಊರುಗಳಲ್ಲೂ ಇದಕ್ಕಿಂತ ಭಿನ್ನವಾದ ಸ್ಥಿತಿ ಏನಿಲ್ಲ. ಹುಬ್ಬಳ್ಳಿ, ಧಾರವಾಡದಂಥ ನಗರಗಳಲ್ಲಿ ಸರಿ ಸುಮಾರು ಇದೇ ಸರಾಸರಿ ಎಂದು ಪೊಲೀಸು ದಾಖಲೆಗಳು ಹೇಳುತ್ತವೆ.

ಅಂದರೆ ಇಡೀ ರಾಜ್ಯದ ಪ್ರಮುಖ ನಗರಗಳಲ್ಲಿ ವರ್ಷಂಪ್ರತಿ ರಾಜಾರೋಷವಾಗಿ ಮೂವತ್ತರಿಂದ ಮೂವತ್ತೈದು ಸಾವಿರ ವಿವಾಹಿತ ಹೆಣ್ಣು ಮಕ್ಕಳ ಬರ್ಬರ ಹತ್ಯೆಯೇ ನಡೆಯುತ್ತಿದೆ. ಇನ್ನು ಗ್ರಾಮೀಣ ಪ್ರದೇಶಗಳು, ಸಣ್ಣ ಪುಟ್ಟ ನಗರಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ..!

ಹೆಣ್ಣನ್ನು ನೋಡುವ ಸಮಾಜದ ದೃಷ್ಟಿ ಬದಲಾಗದ ಹೊರತು, ಇವತ್ತು ಹೆಣ್ಣು ಅನುಭವಿಸುತ್ತಿರುವ ಮಾನಸಿಕ ಯಾತನೆ, ದೈಹಿಕ ಹಿಂಸೆ, ಸಾವುಗಳ ಸರಮಾಲೆ ಕೊನೆಯಾಗುವುದಿಲ್ಲ.
ಈ ನಿಟ್ಟಿನಲ್ಲಿ ಕೆಲವು ಪ್ರಯತ್ನಗಳಾಗಿವೆ. ಆಗಬೇಕಾದ್ದು ಬಹಳವಿದೆ.

ಇದು ರಾಜ್ಯವಲ್ಲ... ಹೆಣ್ಣು ಮಕ್ಕಳನ್ನು ಕೊಲ್ಲುವ ಕಸಾಯಿಖಾನೆ! ಬಹುಪಾಲು ಬದುಕುಳಿದ ಹೆಣ್ಣು ಮಕ್ಕಳ ಪಾಲಿಗೆ ಮನೆಯೆಂಬುದೇ ಶಾಶ್ವತ ಜೈಲು. ಬದುಕೆಂದರೆ ನರಕ.

ಇದಿರಲಿ. ನಮ್ಮ ಅತ್ಯಾಧುನಿಕ ಕ್ಲಿನಿಕ್, ನರ್ಸಿಂಗ್ ಹೋಂಗಳ ಒಳಗೊಮ್ಮೆ ಇಣುಕಿ ನೋಡಿ. ಕಾನೂನು ಬಾಹಿರವಾದರೂ ಭ್ರೂಣದ ಲಿಂಗ ಪತ್ತೆ ನಡೆಯುತ್ತಲೇ ಇದೆ. ಹೆಣ್ಣೆಂದು ತಿಳಿದ ಮರುಕ್ಷಣ ಭ್ರೂಣ ನಾಶ. ಅದೊಂದು ದೊಡ್ಡ ಲಾಭದಾಯಕ ದಂಧೆ. ಅತ್ಯಾಧುನಿಕತೆ ತಂದ ಶಾಪ.

ಇದು ಈ ನಗರ, ರಾಜ್ಯ ಒಂದರ ಕತೆಯಲ್ಲ. ಇಡೀ ದೇಶದ ಕತೆ. ಮಧುರೈ ಜಿಲ್ಲೆಯಲ್ಲಿ ಉಸಲಂ ಪಟ್ಟಿ ಎಂಬ ಊರಿದೆ. ಅಲ್ಲಿ ಹೆಣ್ಣು ಮಕ್ಕಳೇ ಇಲ್ಲವಾಗುವ ಸ್ಥಿತಿ. ಇವರೆಲ್ಲ ಆಸ್ಪತ್ರೆಗೆ ಹೋಗುವಷ್ಟು ಸ್ಥಿತಿವಂತರಲ್ಲ. ಬಸಿರು, ಹೆರಿಗೆ ಬೇನೆ ಎಲ್ಲ ಸಹಿಸಿ ಹೆತ್ತ ಮಗು ಹೆಣ್ಣು ಎಂದು ತಿಳಿಯುತ್ತಿದ್ದಂತೆ ತಾಯಿಯೇ ಮಾರಿಯಾಗುತ್ತಾಳೆ. ಆಗಷ್ಟೇ ಹುಟ್ಟಿದ ಮಗುವಿಗೆ ಕಳ್ಳಿ ಹಾಲು ಕುಡಿಸುತ್ತಾರೆ. ಹಾಲಲ್ಲಿ ಬತ್ತ ಬೆರೆಸಿ ನುಂಗಿಸಿ ಗಂಟಲು ಕಟ್ಟುವಂತೆ ಮಾಡುತ್ತಾರೆ. ಎಳೆಯ ಕಂದಗಳನ್ನು ಸಾಯಿಸಲಾಗದ ದುರ್ದೈವಿಗಳು, ಅದು ಸ್ವಲ್ಪ ದೊಡ್ಡದಾಗುತ್ತಿದ್ದಂತೆ ಹೊಳೆ ಪಾಲು ಮಾಡುತ್ತಾರೆ. ಕಂದಕಕ್ಕೆ ಕೆಡವಿ ಕೊಲ್ಲುತ್ತಾರೆ. 'ಕೈ ಜಾರಿತು' ಎಂಬ ಸಣ್ಣ ಉತ್ತರ. ಆಮೇಲೆ ಯಾರೂ ಏನನ್ನೂ ಪ್ರಶ್ನಿಸುವುದಿಲ್ಲ. ಅಲ್ಲಿ ಎಲ್ಲರಿಗೂ ಗೊತ್ತು....

ಇದೇ ಸ್ಥಿತಿ ಮುಂದುವರೆದರೆ ಹತ್ತು ವರ್ಷಗಳ ನಂತರ ಏನಾಗಬಹುದು? ಪ್ರಶ್ನೆ ಮುಂದಿಡುತ್ತಿದ್ದಂತೆ ಆ ಸಮಾಜ ಸೇವಾಕರ್ತೆ ಒಮ್ಮೆ ನಡುಗಿದಳು. ಆಕೆ ಎಂದೂ ಹಾಗೆಲ್ಲ ಯೋಚಿಸಿರಲಿಲ್ಲ ಎಂದು ಕಾಣುತ್ತದೆ. ಕ್ಷಣ ಬಿಟ್ಟು ವಿಷಾದದಿಂದ ಹೇಳಿದಳು 'ಅದನ್ನು ಕಲ್ಪಿಸಿಕೊಳ್ಳುವುದೂ ಕಷ್ಟ'.

ನೀವು ಬೆಳಗಿನ ಪತ್ರಿಕೆ ತೆಗೆದು ಕ್ರೈಮ್ ಪುಟಕ್ಕೆ ಬರುತ್ತಿದ್ದ ಹಾಗೆ ಒಂದಲ್ಲ ಒಂದು ಹೆಣ್ಣಿನ ಅಸಹಜ ಸಾವಿನ, ಕೊಲೆಯ, ಭೀಕರ ಹತ್ಯೆಯ ಸಣ್ಣದೊಂದು ನೀರಸ ವರದಿ ಇರುತ್ತದೆ.

ಬೆಂಕಿ, ನೇಣು, ವಿಷ...

ಎಷ್ಟೊಂದು ಸುಲಭ!

ಸಾವು ಇಲ್ಲಿ ತೀರಾ ಅಗ್ಗವಾಗಿದೆ.

ಆದರೆ ಇದರಿಂದ ಲಾಭ ಮಾಡಿಕೊಳ್ಳುವ ಜನರೂ ಇದ್ದಾರೆ.



ವರದಕ್ಷಿಣೆ ಕೊಟ್ಟು ಜೀವ ಹಿಡಿದಿರುವ ಮಹಿಳೆ.....

ಬೆಂಕಿಯಲ್ಲಿ ದೇಹವಿಡೀ ಬೆಂದು ಸಾವು, ಬದುಕಿನ ನಡುವೆ ತೂಗುತ್ತಿರುವ ಹುಡುಗಿಯ ಎಡಗೈ ಹೆಬ್ಬೆರಳನ್ನು ಶಾಯಿಯಲ್ಲಿ ಅದ್ದಿ ಅಲ್ಲಿರುವ ಪೊಲೀಸ್‌ನವನೊಬ್ಬ ಎರಡು ಖಾಲಿ ಹಾಳೆಗಳ ಮೇಲೆ ಒತ್ತಿಕೊಳ್ಳುತ್ತಾನೆ. ಒಂದರಲ್ಲಿ ಗಂಡ ಮತ್ತು ಮಾವನ ಮನೆಯವರನ್ನು ಕೊಲೆ ಆರೋಪದಿಂದ ಮುಕ್ತಿಗೊಳಿಸುವ ಹೇಳಿಕೆ ಅವನೇ ಬರೆದುಕೊಳ್ಳುತ್ತಾನೆ. ಇನ್ನೊಂದರಲ್ಲಿ ಅವರನ್ನು ಪೇಚಿಗೆ ಸಿಕ್ಕಿಸಬಹುದಾದ ಹೇಳಿಕೆಯನ್ನು ಅವನೇ ಬರೆಯುತ್ತಾನೆ. ಗಂಡನ ಮನೆಯವರು ನೀಡಬಹುದಾದ ಲಂಚದ ಮೊತ್ತ, ಯಾವ ಹೇಳಿಕೆ ದಾಖಲೆಗೆ ಸೇರುತ್ತದೆ ಎಂಬುದನ್ನು ನಿರ್ಧರಿಸುತ್ತದೆ.

ಅಕಸ್ಮಾತ್ ನ್ಯಾಯಾಲಯದಲ್ಲಿ ಕೇಸು ದಾಖಲಾದರೆ ಅದನ್ನು ಎಷ್ಟರಮಟ್ಟಿಗೆ ಹಳ್ಳ ಹಿಡಿಸಬಹುದೋ ಅಷ್ಟೆಲ್ಲ ಕೆಲಸ ಸಂಬಂಧಿಸಿದ ಎಲ್ಲರೂ ಮಾಡುತ್ತಾರೆ. ಹಣ ಕೈ ಬದಲಾಯಿಸುತ್ತದೆ. ಕೊಲೆಗಾರ ಖುಲಾಸೆಯಾಗಿ ಇನ್ನೊಂದು ಮದುವೆ ವಿಜೃಂಭಣೆಯಿಂದ ಮಾಡಿ ಕೊಳ್ಳುತ್ತಾನೆ. ಸಾಕಷ್ಟು ವರದಕ್ಷಿಣೆ ಕೂಡ ಗಳಿಸುತ್ತಾನೆ.

ಈಗ ಹೇಳಿ ಇದೊಂದು ಲಾಭದಾಯಕ ದಂಧೆ ಅಲ್ಲವೇ?

ಸತ್ತ ಹೆಣ್ಣಿನ ತಂದೆ ತಾಯಿಯನ್ನು ಕೇಳಿ.

'ಏನು ಮಾಡಿದರೇನು? ಸತ್ತ ಮಗಳು ಮತ್ತೆ ಬರುತ್ತಾಳಾ?' ಎಂದು ವಿಷಾದದಿಂದ ಹೇಳುತ್ತಾರೆ. ಎಷ್ಟೋ ಪ್ರಕರಣಗಳಲ್ಲಿ 'ಮಗಳಿಗೆ ಮದುವೆ ಸಮಯದಲ್ಲಿ ಕೊಟ್ಟಿದ್ದ ಒಡವೆ ಹಿಂದಿರುಗಿಸಿದರೆ ಸಾಕು. ಕೇಸು ಹಾಕೋದ್ಯಾಕೆ?' ಎಂದು ತಂದೆ ತಾಯಿಯೇ ಹೇಳುವುದನ್ನು ಪೊಲೀಸು ಅಧಿಕಾರಿ ಒಬ್ಬರು ನನ್ನ ಮುಂದೆ ಹೇಳಿದ್ದಾರೆ.

ಎಲ್ಲರೂ ಹಾಗಿರುತ್ತಾರೆ ಎಂದಲ್ಲ.

ದೇವರ ಜೀವನ ಹಳ್ಳಿಯ ಶಮೀಮ್ ಉನ್ನಿಸಾಗೆ ಹತ್ತೊಂಬತ್ತು ವರ್ಷ. ಮದುವೆಯಾಗಿ ಒಂದೂವರೆ ವರ್ಷ ಆಗಿತ್ತು. ಎರಡು ಬೀದಿಯಾಚೆ ಗಂಡನ ಮನೆ. ಗಂಡ ಸರ್ದಾರ್ ಅವನಿಗೊಂದು ಆಟೋ ಇತ್ತು. ಹೆಂಡತಿಯ ಮನೆಯವರೇ ಮನೆ ಕೊಡಿಸಿದ್ದರು. ಇನ್ನೊಂದು ಆಟೋ ಬೇಕೆಂದು ಅವನ ಬೇಡಿಕೆ. ಇದಕ್ಕೆ ಹೆಂಡತಿ ಮನೆಯವರು ಕಿವಿಗೊಡುವಂತೆ ಕಾಣಲಿಲ್ಲ. ಒಂದು ದಿನ ಆಕೆಯ ಕೈಗಳನ್ನು ಬೆನ್ನು ಹಿಂದೆ ದುಪಟ್ಟಾದಿಂದ ಕಟ್ಟಿದ. ಕುತ್ತಿಗೆಯನ್ನು ಚಾಕುವಿನಿಂದ ಇರಿದ. ಆಕೆಯನ್ನು ಮಂಚದ ಮೇಲಿಟ್ಟು, ಅವಳ ಎಲ್ಲ ಬಟ್ಟೆಗಳನ್ನು ಬಿಚ್ಚಿ ಬೆಂಕಿ ಹಚ್ಚಿ ಹೊರಟು ಹೋದ.

ಹೊಗೆ ಕಂಡ ನೆರೆಯವರು. ಶಮೀಮ್ ಉನ್ನಿಸಾಳ ತಂದೆಗೆ ಸುದ್ದಿ ಮುಟ್ಟಿಸಿದರು. ಮಗಳು ಸತ್ತಿದ್ದಳು. ಅಳಿಯ ಕೊಲೆ ಮಾಡಿ ಮುಂಬಯಿಗೆ ಹೋಗಿ ತಲೆ ಮರೆಸಿಕೊಂಡಿದ್ದ.

ಅವನ ವಿರುದ್ಧ ಕೇಸು ಹಾಕಿದರು. ಸಾಕ್ಷಿ ಪುರಾವೆ ಒದಗಿಸಿದರು. ಎರಡು ವರ್ಷದ ಸತತ ಹೋರಾಟದ ನಂತರ ವಿಜಯ ಕಂಡರು. ಕಳೆದ ವರ್ಷ ಸರ್ದಾರ್‌ಗೆ ಕೊಲೆ, ಹೆಂಡತಿಯನ್ನು ಪೀಡಿಸಿದ ಆರೋಪದ ಮೇಲೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿತು.

ಇಷ್ಟೆಲ್ಲ ಸಾಧಿಸಲು ಶಮೀಮ್‌ಳ ತಂದೆ ಅಪಾರ ಹಣ, ಶ್ರಮ ಎಲ್ಲ ವ್ಯಯಿಸಿದ್ದಾರೆ. ಇಂಥವರು ಅಪರೂಪ.

ಇನ್ನೊಂದು ಪ್ರಕರಣ ನೋಡಿ. ಆಕೆ ಸಾಮಾನ್ಯ ಕುಟುಂಬದ ಹೆಣ್ಣು. ಅದು ಹೇಗೋ ಎರಡು ಬೀದಿಯಾಚೆಯ ಹುಡುಗನೊಡನೆ ಪ್ರೀತಿ ಚಿಗುರಿತು. ಇದನ್ನು ತಿಳಿಯುತ್ತಿದ್ದ ಹಾಗೆ ಮನೆಯವರು ಅವಳನ್ನು ಕೂಡಿ ಹಾಕಿದರು. ಒಂದು ದಿನ ಈ ಬಂಧನದಿಂದ ತಪ್ಪಿಸಿಕೊಂಡು ತಾನು ಮೆಚ್ಚಿದವನ ಜೊತೆ ಹೋದಳು, ಮದುವೆ ಆದಳು. ತಂದೆ, ತಾಯಿ ಮಗಳು ತಮ್ಮ ಪಾಲಿಗೆ ಸತ್ತಳು ಅಂದುಕೊಂಡರು. ಏಕೆಂದರೆ ಆ ಗಂಡು ಬೇರೆ ಜಾತಿಯವನಾಗಿದ್ದ.

ಎರಡು ತಿಂಗಳು ಕಳೆಯಿತು. ಗಂಡ ಹೊಡೆದು, ಬಡಿಯಲಾರಂಭಿಸಿದ.

ಅಂಗಳ : ಸಮಸ್ಯೆಗೊಂದು ಸಮಾಧಾನ

ಎಚ್.ಎ.ಎಲ್. ಎರಡನೇ ಘಟ್ಟದಲ್ಲಿ 'ಅಂಗಳ' ಇದೆ.

ವಿಮೋಚನಾ ಕಚೇರಿಯ ಎರಡನೇ ಮಹಡಿಯಲ್ಲಿ ಹೆಂಚು ಹೊದಿಸಿದ ಸಣ್ಣ ಅಂಗಳ ಇದು. ಸೋಮವಾರಗಳಂದು ಅಲ್ಲಿ ಸಂತೆ ನೆರೆದ ಹಾಗೆ ಗಂಡ, ಅತ್ತೆಯಿಂದ, ಮೈದುನ, ನಾದಿನಿ, ಮಾವ ಹೀಗೆ ನಾನಾ ಜನರಿಂದ ತೊಂದರೆಗೀಡಾದ ದಂಡು ಅಲ್ಲಿರುತ್ತದೆ. ಅಂಗಳದ ಕಾರ್ಯಕರ್ತರ ಸಮ್ಮುಖದಲ್ಲಿ ಸಮಸ್ಯೆಗಳನ್ನು ಹರಡುತ್ತಾರೆ.


ಆ ಸಮಸ್ಯೆಯ ಮಗ್ಗುಲುಗಳನ್ನು ತಿರುವಿ ಹಾಕಿ ಸಂಸ್ಥೆಯ ಕಾರ್ಯಕರ್ತೆಯರು ಪರಿಹಾರ ಕಂಡು ಹಿಡಿಯುತ್ತಾರೆ.

ಮಾತುಕತೆ, ಮುಖಾಮುಖಿಗಳ ನಂತರ ಎಲ್ಲಿಯೋ ಅದೊಂದು ಸಮಾಧಾನಕರ ಘಟ್ಟ ಮುಟ್ಟುತ್ತದೆ.

ಆರು ಜನ ಕಾರ್ಯಕರ್ತೆಯರು ಸದಾ ಮಹಿಳೆಯರ ಅಹವಾಲುಗಳಿಗೆ ಮನಸ್ಸು ತೆರೆದು ಕೂರುತ್ತಾರೆ. ಅಗತ್ಯ ಬಿದ್ದಾಗ ಇನ್ನೂ ಹತ್ತು ಜನ ಕಾರ್ಯಕರ್ತೆಯರು ಸೇರುತ್ತಾರೆ. ಒಡೆದ ಮನಸ್ಸು, ಮನೆಗಳನ್ನು ಒಂದು ಗೂಡಿಸುವ ಕಾರ್ಯಕ್ಕೆ, ಅನ್ಯಾಯ, ದೌರ್ಜನ್ಯಕ್ಕೆ ಒಳಗಾದವರಿಗೆ ಸಾಂತ್ವನ ಪರಿಹಾರಕ್ಕೆ 'ಅಂಗಳ' ಮೀಸಲು. 'ಅಂಗಳ'ದ ವಿಳಾಸ : ಅಂಗಳ, 26, 17ನೇ ಮುಖ್ಯರಸ್ತೆ, ಎಚ್.ಎ.ಎಲ್. ಎರಡನೇ ಹಂತ, ಬೆಂಗಳೂರು - 560 008.

ತಂದೆ ತಾಯಿಗೆ ವಿಚಾರ ತಿಳಿಯಿತು. ಆದರೂ ಅವರೇನೂ ಮಗಳಿಗಾಗಿ ಮರುಗಲಿಲ್ಲ. ಒಂದು ಸಹಾಯ ಹಸ್ತ ಚಾಚಲಿಲ್ಲ. ಬಡಕಲಾಗಿ, ಈಗಲೋ ಆಗಲೋ ಸಾಯುವವಳಂತಿದ್ದ ಅವಳನ್ನು ಕಂಡರೂ 'ತಾನೇ ಮಾಡಿಕೊಂಡಿದ್ದು, ಅನುಭವಿಸಲಿ' ಎಂದು ಸುಮ್ಮನಾದರು. ಒಂದು ದಿನ ಮಗಳ ಸಾವಿನ ಸುದ್ದಿ ತಿಳಿಯಿತು. ಕೊಲೆಯೋ! ಆತ್ಮಹತ್ಯೆಯೋ! ಒಂದೂ ತಿಳಿಯಲಿಲ್ಲ. ತಂದೆ ತಾಯಿ ಒಂದು ಸಣ್ಣ ದೂರೂ ನೀಡಲಿಲ್ಲ. ಅಷ್ಟೇ ಅಲ್ಲ ಆಕೆಯ ಎಳೆಯ ಮಗುವನ್ನು ಮನೆಗೆ ಕರೆದು ತರಲೂ ಒಪ್ಪಲಿಲ್ಲ.

ಹೀಗೇ ಮಗಳನ್ನು ಕಳೆದುಕೊಂಡವರು ವನಜಮ್ಮ. ಸ್ವಂತ ತಮ್ಮನಿಗೇ ಮದುವೆ ಮಾಡಿ ಕೊಡಲಾಗಿತ್ತು. ಅವರನ್ನು ಕೇಳಿದರೆ 'ಏನು ಮಾಡೋಕ್ಕಾಗುತ್ತೆ? ಇವಳು ಹೊಟ್ಟೇಲಿ ಹುಟ್ಟಿದ ಮಗಳಾದರೆ, ಅವನು ಒಡಹುಟ್ಟಿದ ತಮ್ಮ!' ಎಂದು ಅಸಹಾಯಕತೆಯಿಂದ ಕಣ್ಣೀರು ಒರೆಸಿಕೊಳ್ಳುತ್ತಾರೆ.


ವರದಕ್ಷಿಣೆ ತೆರಲಾರದೆ ದೌರ್ಜನ್ಯಕ್ಕೊಳಗಾದ ಮಹಿಳೆ.....

ಬೆಂಕಿಗಾಹುತಿಯಾಗುವ ಇಂಥ ನವ ವಿವಾಹಿತ ಹೆಣ್ಣುಗಳ ವಯಸ್ಸು 19 ರಿಂದ 25 ರೊಳಗೆ ಇರುತ್ತದೆ. ಜೀವ ತೆರಬೇಕಾದ ಈ ಹೆಣ್ಣುಗಳು ಮಾಡಿದ ಒಂದೇ ತಪ್ಪೆಂದರೆ ಮದುವೆ ಆದದ್ದು ಹಾಗೂ ಗಂಡನ ಮನೆಯವರ ಬೇಡಿಕೆ ಪೂರೈಸಲು ವಿಫಲವಾದದ್ದು.

ಕೇವಲ ಹೆಚ್ಚಿನ ಹಣ, ಒಡವೆ ಅಥವಾ ಸಾಮಗ್ರಿಗಾಗಿ ಇಂಥ ಹತ್ಯೆ ನಡೆಯುತ್ತವೆ ಎಂದಲ್ಲ. ಹೆಣ್ಣನ್ನು ಸಂಶಯಿಸಿ ಪೀಡಿಸುವ, ಆಕೆಯನ್ನು ಕೊಲ್ಲುವ ಪ್ರಕರಣಗಳು ಎಲ್ಲ ವರ್ಗಗಳಲ್ಲೂ ನಿತ್ಯ ನಡೆಯುತ್ತಿದೆ. ಇಂಥ ಹೆಣ್ಣುಗಳು ಸಾಮಾನ್ಯವಾಗಿ ಗರ್ಭಿಣಿಯರಾಗಿರುವಾಗಲೇ ಅನಿರೀಕ್ಷಿತ ಸಾವು ಬಂದು ಎರಗುತ್ತದೆ. ಇದೊಂದು ರೀತಿಯ ಡಬಲ್ ಮರ್ಡರ್.

ಪೊಲೀಸ್ ದಾಖಲೆಗಳನ್ನು ತೆಗೆದು ನೋಡಿದರೆ ಹೀಗೆ ಅಸಹಜ ರೀತಿಯಲ್ಲಿ ಸತ್ತ ಹೆಣ್ಣುಗಳ ಸಂಖ್ಯೆ 1997ರಲ್ಲಿ 914, 1998ರಲ್ಲಿ 930 ಹಾಗೂ 1999ರಲ್ಲಿ 800 ಎಂದು ಹೇಳುತ್ತವೆ. ಪೊಲೀಸ್ ದಾಖಲೆಗಳಿಗೆ ಬರದೇ ಇರುವಂಥ ಪ್ರಕರಣಗಳು ಇನ್ನೂ ನೂರಾರು ಎಂದು ಮಹಿಳಾ ಸಂಘಟನೆಗಳು ಹೇಳುತ್ತವೆ.

ಹೆಣ್ಣನ್ನು ಸುಟ್ಟು ಕೊಲ್ಲುವ ಪ್ರಕರಣ ಕೆಳ ಮಧ್ಯಮ ವರ್ಗದಲ್ಲೇ ಹೆಚ್ಚು. ಸ್ಟವ್ ಸಿಡಿಯಿತು. ರಾತ್ರಿ ಮಗು ಎದ್ದು ಅಳುತ್ತಿತ್ತು. ನಿದ್ದೆಗಣ್ಣಲ್ಲಿ ಹಾಲು ಕಾಯಿಸಲು ಹೋದಾಗ ಸೆರಗಿಗೆ ಬೆಂಕಿ ತಾಗಿತು ಎಂಬ ಹೇಳಿಕೆಗಳೇ ಸಾಮಾನ್ಯ. ಬಹಳಷ್ಟು ಪ್ರಕರಣಗಳ ಒಳಹೊಕ್ಕು ನೋಡಿದರೆ 'ಸ್ಟವ್ ಸಿಡಿತ' ನಡೆದ ಮನೆಗಳಲ್ಲಿ ಅಸಲಿಗೆ ಸ್ಟವ್ ಇರುವುದೇ ಇಲ್ಲ. ಅಲ್ಲೆಲ್ಲ ಗ್ಯಾಸ್ ಬಳಸುತ್ತಾ ಇರುತ್ತಾರೆ.

ಮೇಲ್ಮಧ್ಯಮ ವರ್ಗಗಳ ಜನ ನೇಣು ಅಥವಾ ವಿಷದ ಮೊರೆ ಹೋಗುವುದು ಹೆಚ್ಚು. ಹಳ್ಳಿಗಾಡಲ್ಲಿ ನೀರಲ್ಲಿ ಮುಳುಗಿ ಸತ್ತ ಪ್ರಕರಣಗಳೇ ಹೆಚ್ಚು. 'ಹೊಟ್ಟೆ ನೋವಿತ್ತು. ಅದು ತಾಳಲಾರದೇ ಸೊಸೆ ವಿಷ ಕುಡಿದಳು' ಎಂಬ ಮಾಮೂಲಿ ಹೇಳಿಕೆ ಇರುತ್ತದೆ. ಮನೆಗೆ ಹೋಗಿ ನೋಡಿದರೆ ಆಕೆ ಯಾವತ್ತೂ ಹೊಟ್ಟೆ ನೋವಿಗಾಗಿ ಔಷಧ ತೆಗೆದುಕೊಂಡ ಸಣ್ಣ ಪುರಾವೆ, ಒಂದು ವೈದ್ಯರ ಪ್ರಿಸ್ಕ್ರಿಪ್ಷನ್ ಕೂಡ ಇರುವುದಿಲ್ಲ. ನೇಣಿನ ಪ್ರಕರಣಗಳು ಇನ್ನೂ ಸಲೀಸು. ಆಕೆ ಹುಚ್ಚಿಯಾಗಿದ್ದಳು ಎಂದು ಬಿಡುತ್ತಾರೆ. ಇಲ್ಲವಾದಲ್ಲಿ ದೆವ್ವ ಮೆಟ್ಟಿಕೊಂಡಿತ್ತು ಎಂದು ಕತೆ ಕಟ್ಟಿಬಿಡುತ್ತಾರೆ.

ಇಂಥ ಪ್ರಕರಣಗಳಲ್ಲಿ ಅಕಸ್ಮಾತ್ ಹೆಣ್ಣು ಬದುಕುಳಿದರೆ, ಆಕೆಯದು ಜೀವಂತ ನರಕ. ಆತ್ಮಹತ್ಯೆ ಯತ್ನದ ಪ್ರಕರಣ ಎದುರಿಸಬೇಕಾಗುತ್ತದೆ. ಅತ್ತೆ ಮನೆಯವರೇ ವಿಷ ಕೊಟ್ಟಿದ್ದರೂ, ತಾನು ಗೊತ್ತಿಲ್ಲದೇ ಔಷಧಿ ಎಂದು ಕುಡಿದಿದ್ದಾಗಿ ಆಕೆಯಿಂದ ಬಲವಂತದ ಹೇಳಿಕೆ ನೀಡಿಸಲಾಗುತ್ತದೆ.

ಸಾಯುವ ಮುಂಚಿನ ಹೇಳಿಕೆ : ಬೆಂಕಿ, ವಿಷ, ನೇಣು ಪ್ರಕರಣಗಳಲ್ಲಿ ಹೆಣ್ಣನ್ನು ಆಸ್ಪತ್ರೆಗೆ ತಂದು ಸೇರಿಸುವವರು ಸಾಮಾನ್ಯವಾಗಿ ಅತ್ತೆ ಮನೆಯವರೇ. ಕುಟುಕು ಜೀವ ಇರುವಾಗ, ಅತ್ತೆ ಮನೆಯವರ ಎದುರೇ ಆಕೆಯ ಹೇಳಿಕೆ ಪಡೆಯಲಾಗುತ್ತದೆ. ಕೆಲವೊಮ್ಮೆ ಕೊಂಚ ಚೇತರಿಸಿಕೊಂಡು ಎರಡನೇ ಹೇಳಿಕೆ ನೀಡಿದರೂ ನ್ಯಾಯಾಲಯ ಅದನ್ನು ಪರಿಗಣಿಸುವುದಿಲ್ಲ. ಕೆಲವೊಮ್ಮೆ ಸಾವಿನ ದವಡೆಯಲ್ಲಿ ಸಿಕ್ಕಿ ಹೆಣ್ಣು ಹೇಳಿಕೆ ನೀಡುವ ಮುನ್ನ ಚೆನ್ನಾಗಿ ಬೆದರಿಸಿರುತ್ತಾರೆ. ಅಕಸ್ಮಾತ್ ಬದುಕುಳಿದರೂ ಇವರ ಹಂಗಿನಲ್ಲೇ ಇರಬೇಕಲ್ಲ! ಎಂಬ ಕಟು ವಾಸ್ತವದ ಹಿನ್ನೆಲೆಯಲ್ಲಿಯೂ ಆಕೆ ಅತ್ತೆ ಮನೆಯವರಿಗೆ ಹಾನಿಯಾಗದಂಥ ಹೇಳಿಕೆ ನೀಡಬಹುದು.

ಇನ್ನು ಪ್ರಕರಣ ನ್ಯಾಯಾಲಯದ ಮೆಟ್ಟಿಲೇರುವುದು ತೀರಾ ಅಪರೂಪ. ಅದಕ್ಕೆ ಮುಂಚೆಯೇ ರಾಜಿ, ಪಂಚಾಯ್ತಿಯಿಂದ ಎಲ್ಲ ಮುಗಿಸಲು ಯತ್ನಿಸಲಾಗುತ್ತದೆ. ಹಾಗೂ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದರೆ ವರ್ಷಾನುಗಟ್ಟಲೇ ಓಡಾಟ. ಸಾಕ್ಷಿಗಳ ಗೈರು ಹಾಜರಿ, ತಿರುವು ಮುರುವಾದ ದಾಖಲೆಗಳು ಹೀಗೆ ನೂರೆಂಟು.....

ಹೀಗಿರುವಾಗ ತಪ್ಪು ಮಾಡಿದವರಿಗೆ ಶಿಕ್ಷೆ ಆಗುವುದು ಅಪರೂಪ. ಈ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿಯೇ ಹಲವು ಬಗೆಯ ಟೀಕೆಗಳು ಈಗಾಗಲೇ ಕೇಳಿ ಬಂದಿವೆ.

ಪಾರಿವಾಳ !



ನಲ್ಲೆ...
ಮನೆಯಂಗಳಕೆ
ಎಲ್ಲಿಂದಲೋ
ಹಾರಿ ಬಂದು ಇದು
ಇಳಿದು ಕೂರುವಾಗಲೆಲ್ಲ...
ನಿನ್ನ ಪ್ರೇಮ
ಸಂದೇಶಕ್ಕಾಗಿ...
ನನ್ನ ಮನವು
ತವಕಿಸುವುದು !

-ಕ.ಬ. ವೀರಣ್ಣ ಕಣ್ಣಾಗಲ

ಆದರೂ ಪ್ರತಿ ಮನೆಯಲ್ಲಿಯೂ ಇಂದು ವಿವಾಹಿತ ಹೆಣ್ಣು ನಿತ್ಯ ಎಂಬಂತೆ ಅಗ್ನಿ ಪರೀಕ್ಷೆಗೆ ದೂಡಲ್ಪಡುತ್ತಿದ್ದಾಳೆ. ಇದೆಲ್ಲ ಒಂದು ರೀತಿಯಲ್ಲಿ ಸತ್ತವರ ಕಡೆ. ಇನ್ನು ಬದುಕಿರುವವರು.....! ಅವರದೇ ಇನ್ನೊಂದು ವ್ಯಥೆ.

ಶ್ರೀರಶ್ಮಿಗೆ ಈಗ ನಲವತ್ತು ವರ್ಷ. ಇಪ್ಪತ್ತು ವರ್ಷದ ಹಿಂದೆ ಸಾಕಷ್ಟು ಹಣ ಖರ್ಚು ಮಾಡಿ ತಂದೆ ತಾಯಿ ಮದುವೆ ಮಾಡಿದ್ದರು. ಆತ ಎಂಜಿನಿಯರ್. ರಾಜ್ಯ ಸರ್ಕಾರದ ಉದ್ಯೋಗಿ. ಹತ್ತು, ಹನ್ನೆರಡು ವರ್ಷ ಅಂಥ ತೊಂದರೆ ಏನೂ ಇರಲಿಲ್ಲ. ಗಂಡ ಆಗಾಗ ಕುಡಿದು ಬರುತ್ತಿದ್ದ.




ಸತ್ಯದ ಆಯೋಗ ಕಾರ್ಯಕ್ರಮದಂದು ಪ್ರದರ್ಶಿಸಿದ ನಾಟಕದ ದೃಶ್ಯ

ಏಳೆಂಟು ವರ್ಷದ ಹಿಂದೆ ತಂದೆ, ತಾಯಿ ಇಲ್ಲವಾದರು. ಅಣ್ಣ, ತಮ್ಮಂದಿರು ಬೇರೆ ಬೇರೆ ಊರಲ್ಲಿ ಉದ್ಯೋಗದಲ್ಲಿದ್ದಾರೆ. ಐದು ವರ್ಷದ ಹಿಂದೆ ರಶ್ಮಿಯ ಗಂಡನಿಗೆ ಅದ್ಯಾರೋ ಗಂಟು ಬಿದ್ದಳು. ಕಟ್ಟಿಕೊಂಡ ಹೆಂಡತಿಯನ್ನು ಬರಿಗೈಯಾಗಿ ಗಂಡ ಹೊರ ಹಾಕಿದ. ಯಾರೋ ನೆಂಟರ ಆಶ್ರಯ. ಸಣ್ಣದೊಂದು ನೌಕರಿ. ಮೊನ್ನೆ ಆ ಗಂಡನೂ ಹಾರ್ಟ್ ಅಟ್ಯಾಕ್‌ನಿಂದ ಸತ್ತ. ಇದ್ದ ಆಸ್ತಿ, ಹಣ ಎಲ್ಲ ಎರಡನೆಯವಳ ಹೆಸರಿಗೆ ಮಾಡಿಟ್ಟಿದ್ದಾನೆ. ಆದರೂ ಆಕೆ ಒಂದು ಮಾತಾಡುವುದಿಲ್ಲ. ಇದು ತನ್ನ ಪಾಲಿಗೆ ಬಂದ ಪಂಚಾಮೃತ ಎಂದುಕೊಂಡೇ ಕಣ್ಣೀರು ಸುರಿಸುತ್ತಾ ಬದುಕುತ್ತಾಳೆ.

ಜಲಜಾಕ್ಷಿಗೆ ಈಗ ಮೂವತ್ತು ವರ್ಷ. ಮದುವೆಯಾಗಿ ಎಂಟು ವರ್ಷ ಆಗಿದೆ. ಒಂದು ಹೆಣ್ಣು ಮಗುವಿದೆ. ಒಬ್ಬ ಇಂಜಿನಿಯರ್‌ನ ಪ್ರೀತಿಸಿ ಆಕೆ ಮದುವೆ ಆದಳು. ಆತ ಮನೆಯಲ್ಲಿ ಆಸ್ತಿ ಪಾಲು ಮಾಡಿಸಿ, ತನ್ನ ಹಣ ತಂದು ಅದೇನೋ ಬಿಸಿನೆಸ್ ಮಾಡುವುದಾಗಿ ಆಫೀಸು ತೆಗೆದ. ವೈಭವದ ಜೀವನ, ಕಾರು, ಫೋನು ಎಲ್ಲ ಎಂದು ಮೆರೆದಾಡಿದ. ಆಫೀಸಲ್ಲಿ ಇದ್ದ ಒಬ್ಬ ಹುಡುಗಿಯೊಡನೆ ರಾಜಾರೋಷವಾಗಿ ಓಡಾಡಿದ. ಒಂದು ದಿನ ಆಕೆಗೆ ಬೇರೆ ಮನೆ ಮಾಡಿಕೊಟ್ಟ. ಆಕೆಯೋ ಮದುವೆ ಆದವಳು. ಈಗ ಗಂಡ ಜಲಜಾಕ್ಷಿಯ ಮನೆಗೆ ಬರುವುದೇ ನಿಲ್ಲಿಸಿದ. ಆಕೆ ದಿಟ್ಟ ಹೆಂಗಸು. ಪೊಲೀಸಿಗೆ ದೂರು ಕೊಟ್ಟಳು. ವನಿತಾ ಸಹಾಯ ವಾಣಿಯ ನೆರವು ಕೋರಿದಳು. 'ಈಕೆಗೆ ಕಾಮಾಸಕ್ತಿಯೇ ಇಲ್ಲ. ಹಾಸಿಗೆ ಸುಖವೇ ಇಲ್ಲದೆ ಹೇಗೆ ಸಂಸಾರ ಮಾಡುವುದು?' ಎಂದು ಬಿಟ್ಟ. ಅದು ಸುಳ್ಳು ಎಂದು ಹೇಳಲೂ ಆಕೆಗೆ ನಾಚಿಕೆ ಅಡ್ಡಿ. ಈಗ ಜಲಜಾಕ್ಷಿ ಒಂಟಿ. ಆಕೆಯ ನೆರವಿಗೆ ಯಾರೂ ಇಲ್ಲ. ಕೆಲಸವಿಲ್ಲ, ಸಣ್ಣ ಮಗು ಕಟ್ಟಿಕೊಂಡು ಆಕೆ ಬದುಕು ನಡೆಸಬೇಕಾಗಿದೆ.

ಎಂದಾದರೂ ಬೆಂಗಳೂರಿನ ಪೊಲೀಸ್ ಕಮೀಷನರ್ ಕಚೇರಿಗೆ ಹೋದಾಗ ನೋಡಿ. ಅಲ್ಲಿ 'ವನಿತಾ ಸಹಾಯವಾಣಿ' ಎಂಬ ವಿಭಾಗವಿದೆ. ಅಲ್ಲಿ ನಿತ್ಯ ನೂರಾರು ಹೆಂಗಸರು ಬರುತ್ತಾರೆ. ಒಬ್ಬೊಬ್ಬರದೂ ಒಂದೊಂದು ಕತೆ. ಕುಡಿದು ಗಲಾಟೆ ಮಾಡುವ ಗಂಡ, ನಿತ್ಯ ಬೀಳುವ ಪೆಟ್ಟು, ದುಡಿದದ್ದೆಲ್ಲ ಹೆಂಡ, ಜೂಜಿಗೆ ಸುರಿಯುವ ಗಂಡ, ನಾನಾ ರೀತಿಯ ಬರ್ಬರ ಲೈಂಗಿಕ ಕಿರುಕುಳಗಳು.....



ನಮ್ಮಿಬ್ಬರ ಕಂಪ್ಯೂಟರ್‌ಗೂ 'ಐ ಲವ್ ಯೂ' ವೈರಸ್‌ನಿಂದ ಹಾನಿಯಾಗಬಹುದು ಸಾರ್ !

ಇದೆಲ್ಲ ಕೇಳಿಸಿಕೊಂಡರೆ ನಾವು ಮನುಷ್ಯರ ನಡುವೆಯೇ ವಾಸಿಸುತ್ತಿದ್ದೇವಾ? ಎಂಬ ಅನುಮಾನ ಕಾಡಲಾರಂಭಿಸುತ್ತದೆ.

ಈ ಎಲ್ಲ ವಿಚಾರಗಳ ಬಗ್ಗೆ ಪ್ರತಿಕ್ರಿಯಿಸಿದ ವಿಮೋಚನಾ ಸಂಘಟನೆಯ ಸಂಚಾಲಕಿ ಡೋನಾ ಫರ್ನಾಂಡೀಸ್ ಹೇಳುತ್ತಾರೆ: ಹೆಣ್ಣಿನ ಕಲ್ಪನೆ ಬದಲಾಗಿದೆ. ಒಂದು ಹೊಸ ಮೌಲ್ಯವೇ ಹುಟ್ಟಿಕೊಂಡಿದೆ. ಇದು ನಿಜಕ್ಕೂ ಮೌಲ್ಯವಲ್ಲ, ಅಪಮೌಲ್ಯ. ಹೆಣ್ಣು ಕೀಳು. ಗಂಡಿಗೆ ಯಾವ ರೀತಿಯಲ್ಲೂ ಆಕೆ ಸಮಾನಳಲ್ಲ. ಅದನ್ನು ತುಂಬಿಕೊಡಲು ಆಕೆಯೊಂದಿಗೆ ಹಣ, ವಸ್ತು, ಒಡವೆ ಎಲ್ಲ ಬೇಕು. ಕೇವಲ ಮದುವೆ ಸಮಯದಲ್ಲಿ ಅಲ್ಲ. ಆ ನಂತರವೂ ನಿರಂತರವಾಗಿ 'ಬೇಕು... ಬೇಕು... ಬೇಕು.......'

ನಮ್ಮಲ್ಲಿ ಬೆಳೆಯುತ್ತಿರುವ ಗ್ರಾಹಕ ಸಂಸ್ಕೃತಿ ಇದಕ್ಕೆ ಒಂದು ಕಾರಣವಾದರೆ, ಅಪಾರ ಕಪ್ಪು ಹಣ ಉಳ್ಳ ಶ್ರೀಮಂತರನ್ನು ಅನುಕರಿಸುವ ಮಧ್ಯಮ ವರ್ಗದವರ ವಿಚಿತ್ರ ಪ್ರವೃತ್ತಿ ಇನ್ನೊಂದು ಕಾರಣ.

ಮಹಿಳೆಯ ಬಗ್ಗೆ ದನಿ ಎತ್ತಿದ ಕೂಡಲೇ 'ಇವರು ಸ್ತ್ರೀವಾದಿಗಳು' ಪಾಶ್ಚಿಮಾತ್ಯರ ಅಂಥ ಅನುಕರಣೆ ಮಾಡುತ್ತಾ ಇರುವವರು ಎಂಬ ಕಲುಷಿತ ದೃಷ್ಟಿಯಿಂದಲೇ ನೋಡುತ್ತಾರೆ.

ನಾವು ಕೇಳ್ತಾ ಇರೋದು, ಎಲ್ಲರ ಹಾಗೆ ಮಹಿಳೆಗೂ ಬದುಕುವ ಹಕ್ಕಿದೆ, ಅದನ್ನು ಕೊಡಿ ಅಂತ. ರಸ್ತೆಯಲ್ಲಿ ಸಣ್ಣ ಆಕ್ಸಿಡೆಂಟ್ ಆದರೆ ಕಾಳಜಿ ವಹಿಸುವ ಪೊಲೀಸ್ ವ್ಯವಸ್ಥೆ, ಅಸಹಜವಾಗಿ ಹೆಣ್ಣಿನ ಸಾವು ನಡೆದಾಗ ಯಾಕೆ ಕುರುಡಾಗಿ ಬಿಡುತ್ತೆ? ಎಂಬುದೇ ನಮ್ಮ ಪ್ರಶ್ನೆ.

ಶಾಸಕ ವಸಂತ ಅಸ್ನೋಟಿಕರ್ ಕೊಲೆ ಪ್ರಕರಣದ ಆರೋಪಿ ಪತ್ತೆಗೆ ನಮ್ಮ ಪೊಲೀಸರು ದುಬೈವರೆಗೆ ಹೋಗಿ ಬರ್ತಾರೆ. ಹೆಂಗಸು ಸುಟ್ಟ ಗಾಯಗಳಿಂದ, ವಿಷ, ನೇಣಿಂದ ಸತ್ತಾಗ ತಕ್ಷಣ ಕನಿಷ್ಠ ಆ ಘಟನೆ ನಡೆದ ಮನೆವರೆಗೆ ಯಾಕೆ ಹೋಗಲ್ಲ! ಇದು ನಮ್ಮ ಕಳಕಳಿ.

ನಮ್ಮ ಇಡೀ ಸಾಮಾಜಿಕ ವ್ಯವಸ್ಥೇನೂ ಇದಕ್ಕೆ ಪೂರಕವಾಗಿಯೇ ಇದೆ. ಹೆಣ್ಣು ಅಡ್ಜಸ್ಟ್ ಮಾಡಿಕೊಂಡೇ ಬದುಕಬೇಕು. ಅಡ್ಜಸ್ಟ್.... ಅಡ್ಜಸ್ಟ್ ಇದರಿಂದಾಗಿ ಚಿರಂತನ ಗುಲಾಮರಾಗಿ ಬಾಳೋ ಮನಸ್ಥಿತೀನ ನಾವು ಹೆಣ್ಣುಗಳಿಗೆ ಅರೆದು ಕುಡಿಸಿಬಿಟ್ಟಿದೀವಿ.

ಈ ಭಾವನೆ ಮನೆ, ನಾವು ಓದೋ ಪತ್ರ, ನಮ್ಮ ಧರ್ಮ ಗ್ರಂಥ ಎಲ್ಲ ಪೋಷಿಸ್ತಾ ಹೋಗುತ್ತವೆ. ಹೆಣ್ಣಿಗೆ ಪ್ರತ್ಯೇಕ ಅಸ್ತಿತ್ವ ಅನ್ನೋದೇ ಇಲ್ಲ.

ಇದಕ್ಕೆ ತಕ್ಕ ಹಾಗೆ ಇವತ್ತು ನಮ್ಮ ಮಾಧ್ಯಮಗಳು, ಜಾಹೀರಾತು ಎಲ್ಲ ಕೂಗಿ ಕೂಗಿ ಕೇಳ್ತಾ ಇರೋದು ಒಂದೇ ದುರಾಸೇನ. ಪುರುಷ ಪ್ರಭುತ್ವದ ಈ ದುರಾಸೆಗೆ ಸುಲಭವಾಗಿ ಬಲಿ ಆಗ್ತಾ ಇರೋದು ಹೆಣ್ಣು.

ಹೆಣ್ಣೇ ಯಾಕೆ ಯಾವಾಗಲೂ ಸಾವರಿಸಿಕೊಂಡು ಹೋಗಬೇಕು? ಗಂಡಸು ಯಾಕೆ ಹೆಣ್ಣನ್ನ ಅರ್ಥಮಾಡಿಕೊಳ್ಳೋ ಪ್ರಯತ್ನ ಮಾಡಬಾರದು.... ನಾವು ಪ್ರಶ್ನಿಸಬೇಕಾದ್ದು

ಇಂಥ ಪ್ರವೃತ್ತೀನ. ಆಗಲೇ ಏನಾದರೂ ಬದಲಾವಣೆ ಸಾಧ್ಯ.

ಹೆಂಡತಿಯನ್ನು ಗಂಡಸು ನೋಡುವ ಪ್ರವೃತ್ತಿ, ಅದರ ವಿಕೃತ ಮುಖಗಳು, ಸಮಸ್ಯೆಗೆ ಪರಿಹಾರ ಕುರಿತು 'ವಿಮೋಚನಾ' ಸಂಘಟನೆಯಲ್ಲಿ ಹಲವಾರು ವರ್ಷದಿಂದ ದುಡಿಯುತ್ತಿರುವ ಮಧು ಪ್ರತಿಕ್ರಿಯಿಸಿದ್ದು ಹೀಗೆ:

ಹೆಂಡತಿಯನ್ನು ಹೊಡೆಯೋದು, ಕಿರುಕುಳ ಕೊಡೋದು, ಸಾಯಿಸೋದು ಇವತ್ತು ಆಯಾ ವ್ಯಕ್ತಿ, ಕುಟುಂಬದ ಖಾಸಗಿ ವಿಷಯಗಳಾಗಿ ಉಳಿದಿಲ್ಲ. ಅದೊಂದು ಅಪರಾಧ ಎಂದು ಒಪ್ಪುವುದು. ಇಂಥ ಪ್ರಕರಣಗಳು ಸಾರ್ವಜನಿಕ ಚರ್ಚೆ ಮತ್ತು ವಿಮರ್ಶೆಗೆ ಗುರಿ ಆಗಬೇಕು ಎನ್ನುವ ವಿಚಾರ ಪ್ರಬಲವಾಗ್ತಾ ಇದೆ. ಇದಕ್ಕೆ ಕಾರಣ ಮಹಿಳೆಯರಲ್ಲಿ ಮೂಡಿದ ಜಾಗೃತಿ ಹಾಗೂ ತಮ್ಮ ಹಕ್ಕುಗಳ ಅರಿವು.

ಒಂದು ಕಾಲಕ್ಕೆ ಹೊಡೆದರೆ ಸಹಿಸಿಕೊಂಡು ಸುಮ್ಮನೇ ಇರ್ತಾ ಇದ್ದ ಮಹಿಳೆ ಈಗ ಅದರ ಬಗ್ಗೆ ಮಾತಾಡುವಷ್ಟು, ದೂರು ನೀಡುವಷ್ಟಾದರೂ ಧೈರ್ಯ ತೋರಿಸ್ತಾ ಇದ್ದಾಳೆ. ಇದಕ್ಕೆ ಮಹಿಳೆ ವಿದ್ಯಾವಂತಳಾಗ್ತಾ ಇರೋದೂ ಕಾರಣ ಇರಬಹುದು. ವಿಚಿತ್ರ ಅಂದರೆ ವಿದ್ಯಾವಂತರ ಸಂಖ್ಯೆ ಜಾಸ್ತಿ ಆದಷ್ಟೂ ಮಹಿಳೆಯರ ಮೇಲಿನ ದೌರ್ಜನ್ಯವೂ ಜಾಸ್ತಿ ಆಗ್ತಾ ಇದೆ.

ಈ ಆಧುನೀಕರಣದ ಪ್ರಕ್ರಿಯೆಯಲ್ಲಿ ಒಂದು ದೊಡ್ಡ ಸ್ಥಿತ್ಯಂತರ ಆಗುತ್ತಾ ಇದೆ. ಆಧುನಿಕತೆ, ಅಭಿವೃದ್ಧಿಯಿಂದ ಸಮಾಜದ ದುರ್ಬಲರು, ದಲಿತರು, ಬಡವರು ನಾಶವಾಗ್ತಾ ಹೋಗ್ತಾರೆ. ಮಹಿಳೆ ದುರ್ಬಲಳು ಅಂತಾದ ಮೇಲೆ ಆಕೆಯ ಮೇಲೆ ದುಷ್ಪರಿಣಾಮ ಆಗೋದು ಸಹಜ.

ಬಹು ಸಂಖ್ಯಾತ ದುರ್ಬಲರನ್ನು ಬಲಿಕೊಟ್ಟು, ಹಿಡಿಯಷ್ಟು ಸಾಮಾಜಿಕವಾಗಿ ಶ್ರೀಮಂತರಾದವರು, ರಾಜಕೀಯವಾಗಿ ಶಕ್ತರಾದವರನ್ನೇ ಎಲ್ಲ ಬಗೆಯ ಸೌಕರ್ಯ ನೀಡುವುದೇ ಸರ್ಕಾರದ ನೀತಿ ಆದಂತಿದೆ. ಇದರಿಂದಾಗಿ ಇವತ್ತು ಒಂದೊಂದಾಗಿ ಬಡ ಕುಟುಂಬಗಳು, ಬುಡಕಟ್ಟು ಜನಾಂಗಗಳು ಹಾಗೂ ಹೆಣ್ಣು ಸದ್ದಿಲ್ಲದೇ ನಾಶವಾಗ್ತಾ ಇದ್ದಾರೆ.

ಆಧುನಿಕತೆಯ ಇನ್ನೊಂದು ದುಷ್ಪರಿಣಾಮ ಎಂದರೆ ಕುಟುಂಬ, ಸಮುದಾಯದ ವ್ಯವಸ್ಥೆ ಹಾಳಾಗಿ ವೈಯಕ್ತಿಕತೆ ಹಾಗೂ ಅಪಾರ ಸಂಗ್ರಹ ಸಂಸ್ಕೃತಿಯ ದುರಾಸೆಯ ಗೀಳು ಈ ಸಮಾಜಕ್ಕೆ ಹಿಡಿದುಕೊಂಡಿದೆ.

ಒಂದು ಹಳ್ಳಿಯಲ್ಲಾದರೂ ಹೆಣ್ಣು ದೌರ್ಜನ್ಯಕ್ಕೆ ಈಡಾದರೆ, ಅನ್ಯಾಯಕ್ಕೆ ಒಳಗಾದರೆ ಹಿರಿಯರು, ಪಂಚಾಯ್ತಿ, ಸ್ವಲ್ಪವಾದರೂ ಹೆಣ್ಣಿನ ಬೆಂಬಲಕ್ಕೆ ನಿಲ್ಲುತ್ತೆ. ಗಂಡಸು ತಪ್ಪು ಮಾಡಿದರೆ ಬೆರಳು ಮಾಡಿ ತೋರಿಸಿ ತಿದ್ದುತ್ತೆ. ಪಟ್ಟಣಗಳಲ್ಲಿ ಕುಟುಂಬ, ಸಮುದಾಯದ ವ್ಯವಸ್ಥೆಯೂ ಇಲ್ಲ. ಗಂಡಿಗೆ ಅವಮಾನವಾಗುವ ಪ್ರಸಂಗವೂ ವಿರಳ.

ಇದರ ಜೊತೆಗೇ ಹೇಗಾದರೂ ಹಣ, ಸೌಕರ್ಯಗಳನ್ನು ಪಡೆದುಬಿಡಬೇಕು ಎನ್ನುವ ಧಾವಂತ. ಭ್ರಷ್ಟಾಚಾರ, ಕಳ್ಳತನ, ಮೋಸ ಯಾವುದೇ ಮಾರ್ಗವಾದರೂ ಸರಿ, ಗಳಿಸಬೇಕು ಅನ್ನೋದೇ ಧ್ಯೇಯ ಆಗಿಬಿಟ್ಟಿದೆ. ಈ ವ್ಯವಸ್ಥೆಯಲ್ಲಿ ಸಿಕ್ಕಿ ಹೆಣ್ಣು ನಲುಗುತ್ತಾಳೆ. ಇಲ್ಲಿ ಹೆಣ್ಣು ಕೂಡ ಗಂಡಿನ ಗಳಿಕೆಯ ಒಂದು ಸಾಧನ ಮಾತ್ರ.

ಇವತ್ತು ಮದುವೆ ಕೂಡ ಒಂದು ವ್ಯಾಪಾರ ಅಥವಾ ವ್ಯವಹಾರ. ಈ ವ್ಯವಹಾರದಲ್ಲಿ ಹೆಣ್ಣು ಒಂದು ವಸ್ತು. ಆ ವಸ್ತುವಿನ ಮೌಲ್ಯ ಸರಿದೂಗೋದು ಆಕೆ ತರೋ ಹಣ, ಒಡವೆ, ಸಾಮಗ್ರಿಗಳಿಂದ ಈ ವ್ಯವಹಾರದಲ್ಲಿ ಏನೇ ಏರುಪೇರು ಆದರೂ ಮೊದಲ ಬಲಿ ಆಗೋದು, ಪೆಟ್ಟು ಬೀಳೋದು ಹೆಣ್ಣಿಗೇ. ಆಕೆ ಕಿರುಕುಳ ತಾಳಲಾರದೇ ಗಂಡನ್ನ ಬಿಟ್ಟುಬಂದರೆ 'ಗಂಡ ಬಿಟ್ಟವಳು' ಅನ್ನುವ ಕಳಂಕ. ಸಮಾಜದ ನೋಡುವ ದೃಷ್ಟಿಯೇ ಹಾಗಿದೆ.

ಈ ಸಮಾಜ, ಸರ್ಕಾರ, ವ್ಯವಸ್ಥೆ ಎಲ್ಲ ಆಕ್ರಮಕತೆ, ಸ್ಪರ್ಧೆ, ಎಲ್ಲ ಬೆಳೆಸ್ತಾ ಇಡೀ ಸಮಾಜ ಒಡೆದು ಚಿಂದಿಯಾಗಿದೆ. ಇಂಥ ವ್ಯವಸ್ಥೆಯಲ್ಲಿ ಒಳ್ಳೆಯದೂ, ಮಾನವೀಯತೆ ಇದೆಲ್ಲ ಅಪೇಕ್ಷಿಸೋದಾದರೂ ಹ್ಯಾಗೆ?

ಇವತ್ತಿನ ಶಿಕ್ಷಣ ಕೂಡ ಹೇಗಾಗಿದೆ ನೋಡಿ! ಬರೀ ಸ್ಪರ್ಧೆ. ಮನುಷ್ಯನ ಸಹಜ ಬುದ್ಧಿವಂತಿಕೆಯೇ ಇಲ್ಲವಾಗುತ್ತೆ. ಆತ ಇನ್ನಷ್ಟು ಹೃದಯಹೀನನಾಗ್ತಾ ಹೋಗ್ತಾನೆ.

ಇದರಲ್ಲಿ ನಾನಾ ಮುಖಗಳಿವೆ. ಅದನ್ನ ಅರ್ಥಮಾಡಿಕೊಳ್ಳದೇ ಸಮಸ್ಯೆ ನಿವಾರಿಸ್ತೀವಿ ಅನ್ನೋದು ಸುಳ್ಳು. ಈಗ ನೋಡಿ. ಸರ್ಕಾರ ಒಂದು ಕಡೆ ಸಮಸ್ಯೆ ಹುಟ್ಟು ಹಾಕ್ತಾ ಇದೆ. ಇನ್ನೊಂದು ಕಡೆ ಇಂಥ ಸಮಸ್ಯೆ ಪರಿಹಾರಕ್ಕೆ ಕಾನೂನು ಮಾಡುತ್ತೆ.

ಈ ದ್ವಂದ್ವಗಳನ್ನು ಅರ್ಥ ಮಾಡಿಕೊಂಡಾಗ ಮಾತ್ರ ನಾವು ಏನಾದರೂ ಮಾಡಬಹುದು. ಒಂದು ಕಡೆ ನಾವು ಸರ್ಕಾರದ ಪೂರ್ಣ ನೆಚ್ಚಿಕೊಳ್ಳೋ ಸಾಧ್ಯವಿಲ್ಲ. ಹಾಗೇ ಸರ್ಕಾರವೇ ಬೇಡ ನಾವೇ ಇದಕ್ಕೆ ಪರಿಹಾರ ಹುಡುಕ್ತೀವಿ ಅನ್ನೋದೂ ಹುಂಬತನ ಆಗಿಬಿಡುತ್ತೆ.

ಈ ಎಲ್ಲ ಹಿನ್ನೆಲೆಯಲ್ಲಿಯೇ ಇಂದಿನ ಹೆಣ್ಣಿನ ಸ್ಥಿತಿಯನ್ನ ನೋಡಿ, ಪರಿಹಾರ ಕಂಡುಕೊಳ್ಳಬೇಕಾಗುತ್ತೆ.

■ ಎಂ.ಎಲ್.ದೇಶಿಕರ್

ವಿಮೋಚನಾ

ಮಹಿಳೆಯರ ಈ ಸಂಘಟನೆ ಹುಟ್ಟಿ ಇಪ್ಪತ್ತು ವರ್ಷಗಳಾಗಿವೆ. ಮಹಿಳೆಯರ ಹಕ್ಕಿನ ಅರಿವು ಮೂಡಿಸಲು ಆರಂಭವಾದ ಈ ಸಂಘಟನೆ ಇಂದು ಅವರ ಬದುಕುವ ಹಕ್ಕಿಗಾಗಿ ತೀವ್ರ ಹೋರಾಟ ನಡೆಸುತ್ತಿದೆ.

ಮೂರು ವರ್ಷಗಳಿಂದ ಮಹಿಳೆಯರ ಅಸಹಜ ಸಾವಿನ ಪ್ರಕರಣಗಳ ಅಧ್ಯಯನ, ನೊಂದವರಿಗೆ ನೆರವು, ಸಮಾಜದಲ್ಲಿ ಹಿಂಸೆ, ದೌರ್ಜನ್ಯಕ್ಕೊಳಗಾದ ಹೆಂಗಸರ ಬಗ್ಗೆ ಅರಿವು ಹಾಗೂ ಬೆಂಬಲ ಮೂಡಿಸಲು ಈ ಸಂಘಟನೆ ತೊಡಗಿದೆ.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟಗಾಯಗಳ ವಾರ್ಡ್‌ನ ಪರಿಸ್ಥಿತಿ ಸುಧಾರಣೆಗೆ ಹೋರಾಟ ನಡೆಸಿ ಯಶಸ್ವಿ ಆಗಿದ್ದು, ಅದೇ ವಾರ್ಡಿನಲ್ಲಿ ಸಂಘಟನೆಯ ಇಬ್ಬರು ಕಾರ್ಯಕರ್ತರು ಸದಾ ಇದ್ದು ನೊಂದವರಿಗೆ ನೆರವಾಗುತ್ತಾರೆ. ಬೆಂಗಳೂರಿನ ಆಚೆಗೂ ಕಾರ್ಯ ವ್ಯಾಪ್ತಿ ವಿಸ್ತರಿಸಿಕೊಂಡಿರುವ ಸಂಘಟನೆ ಗುಲ್ಬರ್ಗಾ, ಧಾರವಾಡ, ಮಂಗಳೂರು, ಬಿಜಾಪುರ ಹಾಗೂ ಬಳ್ಳಾರಿಯಲ್ಲಿಯೂ ನೊಂದ, ದೌರ್ಜನ್ಯಕ್ಕೊಳಗಾದವರ ಸಾರ್ವಜನಿಕ ಬೈಠಕ್ ನಡೆಸಿದೆ. ಜಿಲ್ಲಾ ಕೇಂದ್ರಗಳಿಗೂ ಕಾರ್ಯ ವಿಸ್ತರಿಸುವ ಉದ್ದೇಶವಿದೆ.

ಮಹಿಳೆಯರಿಗಾಗಿ ಸತ್ಯದ ಆಯೋಗ ಎಂಬ ಕಾರ್ಯಕ್ರಮ ನಡೆಸಿ, ಅಲ್ಲಿ ಅನ್ಯಾಯಕ್ಕೀಡಾಗಿದ್ದವರಿಂದಲೇ ಸತ್ಯಾಂಶ ಪ್ರಕಟವಾಗುವಂತೆ ಮಾಡಿ, ಹಲವಾರು ಮುಚ್ಚಿ ಹೋಗಿದ್ದ ಅಸಹಜ ಸಾವಿನ ಪ್ರಕರಣಗಳು ಮತ್ತೆ ಮರುಪರಿಶೀಲನೆಗೆ ಒಳಗಾಗುವಂತೆ ಮಾಡಿದೆ.

ಹೆಣ್ಣುಗಳ ಅಸಹಜ ಸಾವಿನ ಪ್ರಕರಣ ನಡೆದಾಗ, ಅಧ್ಯಯನ ನಡೆಸಿ ಸತ್ಯ ಬಯಲಿಗಿಡುವುದು, ಘಟನೆ ನಡೆದ ಪ್ರದೇಶದಲ್ಲಿ ಮೌನ ಪ್ರತಿಭಟನೆ ಮೂಲಕ ಜನರಲ್ಲಿ ಅನ್ಯಾಯದ ಅರಿವು ಮೂಡಿಸುವುದೂ ಈ ಸಂಘಟನೆ ಮಾಡುತ್ತಾ ಬಂದಿದೆ. ಹಲವು ಸಂದರ್ಭಗಳಲ್ಲಿ ಪೊಲೀಸ್ ವ್ಯವಸ್ಥೆ ಅನ್ಯಾಯ ಮಾಡಿದವರ ಜೊತೆ ಶಾಮೀಲಾಗಿದ್ದಲ್ಲಿ ಪೊಲೀಸ್ ಠಾಣೆಯ ಎದುರೇ ಸತ್ಯಾಗ್ರಹ ನಡೆಸಿದ್ದೂ ಇದೆ.

ತಪ್ಪು ಮಾಡಿದ ಪುರುಷನ ಮನೆಯ ಬಳಿ ಅಲ್ಲದೇ, ಆತ ದುಡಿಯುವ ಸ್ಥಳಕ್ಕೂ ಹೋಗಿ, ಆತ ಮಾಡಿದ ಅನ್ಯಾಯ ಜನರ ಗಮನಕ್ಕೆ ತರುವ ಕೆಲಸ ಕೂಡ ಮಾಡುತ್ತಿದೆ. ಇದೊಂದು ಸಾಮಾಜಿಕ ಸೇವೆಯಾದರೂ, ಸಂಘಟನೆಯ ಕಾರ್ಯಕರ್ತರು ತೀವ್ರ ಪ್ರತಿರೋಧದ ನಡುವೆಯೇ ಕೆಲಸ ಮಾಡಬೇಕಾಗುತ್ತದೆ. ಮಗಳು ಕಳೆದುಕೊಂಡ ತಂದೆ ತಾಯಿಯರೇ ಸಹಕರಿಸುವುದಿಲ್ಲ. ಅನ್ಯಾಯ ಮಾಡಿದ ಮನೆಯವರು 'ಇದೆಲ್ಲ ನಮ್ಮ ನಮ್ಮ ವಿಷಯ. ನೀವ್ಯಾರೀ ಮಧ್ಯೆ ಬರೋಕ್ಕೆ!' ಎಂದು ಬೆದರಿಕೆ ಹಾಕುವುದೂ ಉಂಟು.

ಸಂಘಟನೆಯ ಕಾರ್ಯಕರ್ತರು ಕಂಡ ಕೂಡಲೇ ಬಾಗಿಲು ಮುಚ್ಚಿಕೊಳ್ಳುವವರು, ನಾಯಿಗಳನ್ನು 'ಛೂ' ಬಿಡುವವರೂ ಇದ್ದಾರೆ.

ವಿಮೋಚನಾದಲ್ಲಿ ದುಡಿಯುತ್ತಿರುವ ಮಹಿಳೆಯರ ಸಂಖ್ಯೆ ಹಿಡಿಯಷ್ಟು, ಆದರೆ ಇಂಥ ಸಂಘಟನೆಗಳು ಈಗಾಗಲೇ ಮಾಡಿರುವ ಸಾಧನೆ ಗಮನಿಸಿದರೆ, ಇದು ತೀರಾ ದೊಡ್ಡದೇ ಎನಿಸುತ್ತದೆ.

ಬರದ ನಡುವೆಯೂ ಸುಗ್ಗಿ



'ಬರ'ದ ಬಗ್ಗೆ ನಿತ್ಯ ಸುದ್ದಿ. ಇತ್ತೀಚಿನದು ನೊಂದವರದ್ದಲ್ಲ. ಅಲ್ಲಿ ಲೂಟಿ ಹೊಡೆಯುತ್ತಾ ಇರುವವರದು. ನಗರಗಳ ಕಚೇರಿಗಳಲ್ಲಿ ಆರಾಮಾಗಿ ಕುಳಿತ ನೀಚ ಅಧಿಕಾರಿಗಳು ಜನರ ಕಷ್ಟ ಬಂದಾಗೆಲ್ಲ ಅವರನ್ನು ಕಾಪಾಡಲು ಬಂದ ದೇವರೇ ತಾನೆಂಬಂತೆ ನಟಿಸುತ್ತಾ ಹದ್ದುಗಳಂತೆ ಎರಗುವ ರಾಜಕಾರಣಿಗಳದ್ದೇ ದರ್ಬಾರು. ನಿತ್ಯ ಕೋಟಿ ಕೋಟಿ ಲೂಟಿ.

'ಬರ ಬೀಳಲಿ ದೇವರೇ' ಎಂದು ಹಾರೈಸುವ ಜನಕ್ಕೆ ಈಗ ಕೊರತೆಯೇ ಇಲ್ಲ. ಅಂಥವರಲ್ಲಿ ಕಟುಕ ಕಾನಾಭಾಯಿ ಪರ್ಮಾರ್ ತೀರಾ ಸಭ್ಯ ಎಂದೇ ಹೇಳಬೇಕು. ಸತ್ತ ದನಗಳ ಚರ್ಮ ಸುಲಿದು ಮಾರುವ ಈತ, ಬರ ಬಂದರೆ ಹೆಚ್ಚು ದನ, ಎಮ್ಮೆ ಸಾಯುತ್ತವೆ, ತನಗೆ ಒಂದಿಷ್ಟು ಕಾಸಾಗುತ್ತದೆ ಎಂದು ಯೋಚಿಸಿದ್ದು ತಪ್ಪೇನೂ ಅಲ್ಲ ಅನಿಸುತ್ತದೆ. ಕಛ್ ಜಿಲ್ಲೆಯ ರಾಪಾರ್‌ನವನಾದ ಪರ್ಮಾರ್ ಸ್ಥಳೀಯ ಗೋಶಾಲೆಯ ಸತ್ತ ದನಗಳನ್ನು ಹೊತ್ತೊಯ್ದು ಅವುಗಳ ಚರ್ಮ, ಮೂಳೆ ಮಾರಲು 5.85 ಲಕ್ಷ ರೂಪಾಯಿಗೆ ಗುತ್ತಿಗೆ ಪಡೆದ. ಆತನ ಜೊತೆ ಇನ್ನೂ ಹಲವರು ಪಾಲುದಾರರು. ಕಳೆದ ವರ್ಷ ಇದೇ ಗುತ್ತಿಗೆಗೆ 4.75 ಲಕ್ಷ ರೂಪಾಯಿ ನೀಡಲಾಗಿತ್ತು.

ಒಂದು ದನದ ಚರ್ಮ, ಮೂಳೆಗೆ ಸಾಮಾನ್ಯವಾಗಿ 300 ರೂಪಾಯಿ ಬರುತ್ತದೆ. ಈ ಸಲ ನಾಲ್ಕು ಸಾವಿರ ದನ ಸಾಯಬಹುದೆಂದು ಗುತ್ತಿಗೆ ಪಡೆದವರ ನಿರೀಕ್ಷೆ. ಇದರಿಂದ ಗುತ್ತಿಗೆಯ ಪಾಲುದಾರರಿಗೆ ಈ ವರ್ಷ ತಲಾ ಒಂದು ಲಕ್ಷ ರೂಪಾಯಿ ಲಾಭ ಬರಬಹುದೆಂಬ ನಿರೀಕ್ಷೆ ಇದೆ.

ಇದು ಒಂದು ರೀತಿಯ ಕೆಟ್ಟ ಯೋಚನೆ ಎಂದು ನಮಗೆ ಅನ್ನಿಸಬಹುದು. ಆದರೆ ಗುಜರಾತ್‌ನಲ್ಲಿ ನಡೆಯುತ್ತಾ ಇರುವ ಅಧಿಕಾರಿಗಳು, ರಾಜಕಾರಣಿಗಳ ಲೂಟಿ ನೋಡಿದರೆ ಇದು ತೀರಾ ಗೌಣ ಅನ್ನಿಸಿಬಿಡುತ್ತದೆ.


ಗುಜರಾತ್‌ನ ಕಛ್ ಜಿಲ್ಲೆಯ ಬರ ಪರಿಹಾರ ಕಾರ್ಯಗಳ ಕಾರ್ಯದರ್ಶಿ ಪಿ.ಕೆ. ರಾಯ್ ಚೌಧುರಿ. ಮೇ ತಿಂಗಳ ಎರಡನೇ ವಾರದಲ್ಲಿ ಆತ ವಿಶೇಷ ಬರ ಪರಿಹಾರ ಶಿಬಿರಕ್ಕೆ ಹಠಾತ್ತನೆ ಭೇಟಿ ಇತ್ತರು. ಅಲ್ಲಿ ಮುನ್ನೂರು ಜನ ಕೆರೆ ತೋಡುತ್ತಾ ಇರಬೇಕಿತ್ತು. ಆದರೆ ಸ್ಥಳಕ್ಕೆ ಹೋದರೆ ಒಂದೇ ಒಂದು ನರ ಪಿಳ್ಳೆ ಇರಲಿಲ್ಲ. ದಾಖಲೆಗಳಲ್ಲಿ ಮಾತ್ರ ಕೆಲಸ ನಡೆಯುತ್ತಿದೆ ಎಂದು ನಮೂದಿಸಿ ದಿನಕ್ಕೆ ಹೆಣ್ಣಾಳಿಗೆ ಮೂವತ್ತು ರೂಪಾಯಿ, ಗಂಡಾಳಿಗೆ ನಲವತ್ತು ರೂಪಾಯಿಯಂತೆ ಬಿಲ್ ಮಾಡಿ ಹಣ ಲಪಟಾಯಿಸುತ್ತಲೇ ಇದ್ದುದು ಬಯಲಾಯಿತು. ದಿನಕ್ಕೆ ಹತ್ತು ಸಾವಿರ ರೂಪಾಯಿಯವರೆಗೆ ಸದ್ದಿಲ್ಲದೆ ಲೂಟಿ ನಡೆದಿತ್ತು.

'ಇಂಡಿಯಾ ಟುಡೆ' ಪತ್ರಿಕೆ ನಡೆಸಿದ ತನಿಖೆಯಿಂದ ಹಲವು ಭಯಾನಕ ಸತ್ಯಗಳು ಹೊರ ಬಿದ್ದಿವೆ. ದಿನಾ 51 ಸಾವಿರ ಕೂಲಿಕಾರರಿಗೆಂದು ಸುಮಾರು 32 ಲಕ್ಷ ರೂಪಾಯಿ ಖರ್ಚಾಗುತ್ತಿದೆ. ಸುಮಾರು 305 ಬರ ಪರಿಹಾರ ಶಿಬಿರಗಳೇ ತಲೆ ಎತ್ತಿವೆ.

ಕಛ್ ಜಿಲ್ಲೆ ಒಂದರಲ್ಲೇ 250 ಗೋಶಾಲೆಗಳನ್ನು ರಚಿಸಲಾಗಿದೆ. ಇಲ್ಲಿ ಸುಮಾರು ಒಂದೂವರೆ ಲಕ್ಷ ಜಾನುವಾರುಗಳಿಗೆ ಆಶ್ರಯ ಕಲ್ಪಿಸುವುದು ಉದ್ದೇಶ.

ಆದರೆ ಇವೆಲ್ಲ ಕೇವಲ ದಾಖಲೆ ಮೇಲೆ ನಡೆಯುವ ಪರಿಹಾರ ಕಾರ್ಯ. ಗೋಶಾಲೆಗಳಿಗೆ ಅಧಿಕಾರಿಗಳು ಭೇಟಿ ನೀಡಿದರೆ ಅಲ್ಲಿ ಒಂದೇ ಒಂದು ಹಸು, ಎತ್ತು, ಎಮ್ಮೆ ಕಾಣುವುದಿಲ್ಲ. ಅಲ್ಲಿಯೇ ಶತ ಸೋಮಾರಿಯಂತೆ ಬಿದ್ದುಕೊಂಡಿರುವ ಯಾವನೋ ಒಬ್ಬ 'ಎಲ್ಲಾ ನೀರು ಹುಡುಕಿಕೊಂಡು ಹೋಗಿವೆ' ಎಂದು ಸುಳ್ಳು ಬೊಗಳುತ್ತಾನೆ.

ಪರಿಹಾರ ಶಿಬಿರಗಳಿಗೆ ಹೋದರೆ ಜನ ಇರುವುದಿಲ್ಲ. ಕೇಳಿದರೆ 'ಇದುವರೆಗೂ ಕೆಲಸ ಮಾಡ್ತಾ ಇದ್ದರು. ಹಳ್ಳೀಲಿ ಯಾರೊ ಸತ್ತಿದ್ದಾರೆ. ಅವರ ಮನೆಗೆ ಈಗ ತಾನೇ ಹೋಗಿದ್ದಾರೆ' ಎನ್ನುವ ಬೂಸಿಯನ್ನೂ ಹೊಡೆಯುತ್ತಾರೆ.



ಬರ ಆದರೇನು? ಪ್ರವಾಹ ಬಂದರೇನು? ನಮ್ಮ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಎಲ್ಲವೂ ಸುಗ್ಗಿ ಕಾಲವೇ. ಹನಿ ನೀರಿಗಾಗಿ ಜನ ಪರಿತಪಿಸುತ್ತಾ ಇರುವಾಗ ಈ ನೀಚ ಅಧಿಕಾರಿಗಳು, ಪಿಶಾಚಿ ರಾಜಕಾರಣಿಗಳು ಲೂಟಿ ಹೊಡೆಯುತ್ತಿದ್ದಾರೆ.

ಇನ್ನೊಂದು ಶಿಬಿರದಲ್ಲಿ 'ಎಲ್ಲಾ ಮದುವೆಗೆ ಈಗ ತಾನೆ ಹೋದರು' ಎಂಬ ಸಬೂಬು ಬಂತು.

● ಇಂಥ ಶಿಬಿರಗಳಿಂದ ಸುಗ್ಗಿ ಆಗಿರುವುದು ಸ್ಥಳೀಯ ಪುಢಾರಿಗಳಿಗೆ. ಅಸ್ತಿತ್ವದಲ್ಲೇ ಇಲ್ಲದವರ ಹೆಸರಿನ ಪಟ್ಟಿ ಒಂದನ್ನು ಅವರು ಸೃಷ್ಟಿಸುತ್ತಾರೆ. ಪರಿಹಾರ ಕಾರ್ಯ ನಡೆಯುತ್ತಿದೆ ಎಂಬ ದಾಖಲೆಯನ್ನು ಅಧಿಕಾರಿಗಳು ಸೃಷ್ಟಿಸುತ್ತಾರೆ. ಇದಕ್ಕಾಗಿ ಶಿಬಿರದ ಹಾಜರಿ ಬರೆಯುವ ಕ್ಲರ್ಕ್, ಸೂಪರ್‌ವೈಸರ್‌ನಿಂದ ಹಿಡಿದು ಬಿಲ್ ಮಂಜೂರು ಮಾಡುವ ಹಿರಿಯ ಅಧಿಕಾರಿವರೆಗೆ ಎಲ್ಲರೂ ಪರ್ಸೆಂಟೇಜ್ ಪಡೆಯುತ್ತಾರೆ. ಪುಢಾರಿಯೊಬ್ಬನ ಪ್ರತಿ ದಿನದ ಆದಾಯವೇ 250 ರೂಪಾಯಿವರೆಗೆ ಇರುತ್ತದೆ.



ಅಕ್ರಮಗಳು ನಡೆಯುವುದು ನಿಜ. ಆದರೆ ಗುಜರಾತ್‌ನಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ನೋಡಿದರೆ ಎದೆ ಹಾರುತ್ತದೆ. ಎಂದು ರಾಯ್ ಚೌಧುರಿ ಹೇಳುತ್ತಾರೆ.

ಅದಕ್ಕಾಗಿ ಈಗ ನಿತ್ಯ ಎಂಬಂತೆ ಹಠಾತ್ ದಾಳಿ ನಡೆಯುತ್ತಿದೆ. ಹಲವರನ್ನು ಮನೆಗೆ ಕಳುಹಿಸಲಾಗಿದೆ.

ಗೋಶಾಲೆಗಳ ಗೋಳಂತೂ ಹೇಳುವುದು ಬೇಡ. ಪ್ರತಿ ನಿತ್ಯ ಜಾನುವಾರು ಒಂದಕ್ಕೆ ಮೇವು, ನೀರಿಗಾಗಿ ಸರ್ಕಾರ ಹತ್ತು ರೂಪಾಯಿ ಒದಗಿಸುತ್ತದೆ. ಲೆಕ್ಕಕ್ಕೆ ಮಾತ್ರ ಜಾನುವಾರುಗಳು ಇರುತ್ತವೆ. ಗೋಶಾಲೆಯಲ್ಲಿ ಅವು ಕಾಣುವುದೇ ಇಲ್ಲ. ಹಣವೆಲ್ಲ ಅದನ್ನು ನಿರ್ವಹಿಸುವವರ ಪಾಲಾಗುತ್ತಿದೆ.

ಬರದಿಂದಾಗಿ ಉಂಟಾಗಿರುವ ನೀರಿನ ಬರದಿಂದ ಹಲವರು ಸುಗ್ಗಿ ಮಾಡಿಕೊಳ್ಳುತ್ತಿದ್ದಾರೆ. ಈಗೀಗ ಸುರೇಂದ್ರ ನಗರ, ರಾಜಕೋಟ್‌ಗಳಲ್ಲಿ ರಿಕ್ಷಾದವರು ಜನರನ್ನು ಸಾಗಿಸುವುದೇ ಇಲ್ಲ. ಅದಕ್ಕೊಂದು ಇನ್ನೂರು, ಮುನ್ನೂರು ಲೀಟರ್‌ನ ಟ್ಯಾಂಕರ್ ಕಟ್ಟಿಕೊಂಡು ನೀರು ಮಾರುವುದೇ ಅವರಿಗೆ ಹೆಚ್ಚು ಲಾಭದಾಯಕ.

ಬರ ಬಂದು ಫಸಲು ಒಣಗಿ ನಷ್ಟವಾದ ರೈತರು ತಮ್ಮ ಟ್ರಾಕ್ಟರ್‌ಗಳಿಗೆ ಟ್ಯಾಂಕರ್ ಜೋಡಿಸಿಕೊಂಡು ನೀರು ಮಾರಿ ದಿನಕ್ಕೆ 300 ರೂಪಾಯಿವರೆಗೆ ದುಡಿಯುತ್ತಾರೆ. ಬೋರ್‌ವೆಲ್ ಇಟ್ಟುಕೊಂಡು ಇಂಥವರಿಗೆ ನೀರು ಮಾರುವ ಜನ ದಿನಕ್ಕೆ ಏನಿಲ್ಲ ಎಂದರೂ ಎರಡು ಸಾವಿರ ರೂಪಾಯಿ ಸಂಪಾದಿಸುತ್ತಿದ್ದಾರೆ.

ಬರದ ನಡುವೆಯೂ ಮನುಷ್ಯ ಕಂಡುಕೊಂಡ ಸುಗ್ಗಿ ಇದು. ■



ಪಲ್ಲವಿ ಮೆಚ್ಚಿದ ಐವರು

ಪಲ್ಲವಿ ಜೋಶಿ ಖ್ಯಾತ ತಾರೆ. ಟಿ.ವಿ. ಸರಣಿಗಳಲ್ಲಿ ತೀರಾ ಜನಪ್ರಿಯ ನಟಿ. ಕನ್ನಡದ 'ಭುಜಂಗಯ್ಯನ ದಶಾವತಾರ' ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದ್ದವಳು. ಆಕೆಯ 'ಕ್ರಿಕೆಟ್ ಟಾಕ್' ಪತ್ರಿಕೆಗಾಗಿ ಐವರು ಶ್ರೇಷ್ಠ ಕ್ರಿಕೆಟ್ ಪಟುಗಳನ್ನು ಇತ್ತೀಚೆಗೆ ಆಯ್ಕೆ ಮಾಡಿದ್ದಾಳೆ. ಅದಕ್ಕೆ ಕಾರಣಗಳನ್ನು ತಿಳಿಸಿದ್ದು, ಇಲ್ಲಿದೆ.


ಸಚಿನ್ ತೆಂಡೂಲ್ಕರ್ : ಆತನಲ್ಲಿ ಅಪಾರ ಪ್ರತಿಭೆ ಇದೆ. ಆತನ ಸಾಧನೆಯ ಮೇಲೆ ಇಡೀ ತಂಡ ಭರವಸೆ ಇಟ್ಟಿರುತ್ತದೆ. ಆತ ವಿಶ್ವ ಮಟ್ಟದಲ್ಲಿಯೇ ಎಲ್ಲರ ಮೆಚ್ಚಿನ ಕ್ರಿಕೆಟ್ ಪಟು.

ಸುನೀಲ್ ಗವಾಸ್ಕರ್ : ಆತ ಕೂಡ ಪ್ರತಿಭಾವಂತನಾಗಿದ್ದ. ಭಾರತದ ಪರ ಆತ ಇನಿಂಗ್ಸ್ ಆರಂಭಿಸಲು ಹೊರಟದ್ದು ಕಂಡರೆ ನನ್ನೊಳಗೆ ಸುರಕ್ಷತೆ ಹಾಗೂ ಸಮಾಧಾನದ ಭಾವ ಮೂಡುತ್ತಿತ್ತು.

ಕಪಿಲ್ ದೇವ್ : ನಮ್ಮಲ್ಲಿನ ಅತ್ಯಂತ ಪ್ರತಿಭಾನ್ವಿತ ವೇಗದ ಬೌಲರ್. ಆತ ಮಾಡಿದ ದಾಖಲೆಗಳಿಂದಲೇ ನನಗೆ ಹೆಮ್ಮೆ ಅನಿಸುತ್ತಿತ್ತು. 1983ರ ವಿಶ್ವಕಪ್‌ನಲ್ಲಿ ಜಿಂಬಾಬ್ವೆ ವಿರುದ್ಧ ಆತ ಗಳಿಸಿದ ಅಜೇಯ 175 ರನ್ ಸಾಧನೆಯಂತೂ ಮರೆಯಲಾಗದ್ದು.

ವಿವಿಯನ್ ರಿಚರ್ಡ್ಸ್ : ಆತ ವಿಸ್ಮಯಪಾರಿ ಬ್ಯಾಟುಗಾರ. ಅಷ್ಟೇ ಬೆರಗುಗೊಳಿಸುವ ವ್ಯಕ್ತಿತ್ವ ಆತನದು.


ಡೆನಿಸ್ ಲಿಲ್ಲೀ : ಅದ್ಭುತ ಬೌಲರ್ : ಆತ ನಮ್ಮ ತಂಡದ ವಿರುದ್ಧ ಬೌಲ್ ಮಾಡಲು ನಿಂತಾಗೆಲ್ಲ ನಾನು ತೀರಾ ಆತಂಕಗೊಳ್ಳುತ್ತಿದ್ದೆ.




ಸಚಿನ್ ತೆಂಡೂಲ್ಕರ್



ಕಪಿಲ್ ದೇವ್



ಡೆನಿಸ್ ಲಿಲ್ಲೀ :




ಜಾರ್ಜ್ ಸ್ಪೇಯ್ಟ್

ಶಾಂತ ಫಿಜಿ ಈಗ ಜ್ವಾಲಾಮುಖಿ

ಜನಾಂಗೀಯ ಸಂಘರ್ಷ ಈಗ ಪ್ರಬಲಗೊಳ್ಳುತ್ತಿದೆ. ಶ್ರೀಲಂಕಾದಲ್ಲಿ ನಡೆಯುತ್ತಿರುವ ನರಮೇಧ ಎದೆ ನಡುಗಿಸುತ್ತದೆ. ಒಂದು ನಾಡು ತಾನು ರಚಿಸಿಕೊಂಡ ಸಂವಿಧಾನದ ಚೌಕಟ್ಟು ಮೀರಿ ನಡೆಯಬೇಕೆಂದು ಒತ್ತಾಯಿಸುವುದು, ಅದಕ್ಕಾಗಿ ಹಿಂಸೆಯನ್ನು ಬಳಸುವುದು ಏಷಿಯಾದಲ್ಲಿ ಜಾಸ್ತಿ ಆಗುತ್ತಿದೆ. ಇಂಥ ಸ್ಥಿತಿಗೆ ಶಾಂತ ದ್ವೀಪ ಸಮೂಹ ಫಿಜಿ ಕೂಡ ಬಲಿ ಆಗಿರುವುದು ಕಳವಳಕಾರಿ.

ಫಿಜಿ ಶಾಂತ ಸಾಗರದ ದ್ವೀಪ ಸಮೂಹ. ಅಲ್ಲಿ ಆರು ನೂರಕ್ಕೂ ಹೆಚ್ಚು ನಡುಗಡ್ಡೆಗಳಿವೆ. ಎಲ್ಲ ಕಡೆ ಜನ ವಸತಿ ಇದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗಳಿಗೆ ಹತ್ತಿರವಿರುವ ಇಲ್ಲಿಯೂ ಆದಿವಾಸಿಗಳೇ ನಿರ್ಲಕ್ಷಿತರು. ಹೊರಗಿಂದ ಬಂದು ನೆಲೆಸಿದವರದ್ದೇ ಇಲ್ಲಿ ಕಾರುಬಾರು. ವ್ಯವಹಾರ, ಅಧಿಕಾರ ಎಲ್ಲ ಅವರ ಕೈಯಲ್ಲಿಯೇ.

ಭಾರತಕ್ಕೆ ಸಮುದ್ರ ಮಾರ್ಗ ಕಂಡು ಹಿಡಿಯುವುದೇ ಬಹುದೊಡ್ಡ ಸಾಹಸ ಆಗಿದ್ದ ಕಾಲದಲ್ಲಿ ಪ್ರಪಂಚದ ಹಲವಾರು ದೇಶ, ಖಂಡಗಳು ಯೂರೋಪಿಯನ್ನರ ಕಣ್ಣಿಗೆ ಬಿದ್ದವು. ಅಲ್ಲೆಲ್ಲ ಅವರ ವಲಸೆ ಆರಂಭವಾಯಿತು. ಅಮೇರಿಕಾ, ಆಸ್ಟ್ರೇಲಿಯಾ ಮುಂತಾದೆಡೆ ಪೋರ್ಚುಗೀಸರು, ಫ್ರೆಂಚರು, ಆನಂತರ ಬ್ರಿಟಿಷರು ಪ್ರಭುತ್ವ ಸ್ಥಾಪಿಸುತ್ತಾ ಹೋದರು. ಹಾಗೆ ಸುಮಾರು ಇನ್ನೂರು ವರ್ಷಗಳ ಹಿಂದೆ ಬ್ರಿಟಿಷರ ತೆಕ್ಕೆಗೆ ಸೇರಿದ್ದು ಫಿಜಿ ದ್ವೀಪ ಸಮೂಹ. ಅಲ್ಲಿ ಬೆಳೆಯುತ್ತಿದ್ದ ಕಬ್ಬು ಉತ್ತಮ ಮಟ್ಟದ್ದು. ಆ ಕಬ್ಬಿನ ಗದ್ದೆಗಳಲ್ಲಿ ದುಡಿಯಲು ಭಾರತದ ಕೂಲಿಕಾರರನ್ನು ಬ್ರಿಟಿಷರು ಕರೆದುಕೊಂಡು ಹೋದರು.



ಪ್ರಧಾನಿ ಮಹೇಂದ್ರ ಚೌಧರಿ

ಹೀಗೆ ನಾಲ್ಕು ತಲೆಮಾರುಗಳ ಹಿಂದೆ ವಲಸೆ ಹೋದ ಭಾರತೀಯರು ಅಲ್ಲಿಯೇ ನೆಲೆಸಿದರು. ಎಂಟು ಲಕ್ಷ ಜನಸಂಖ್ಯೆಯ ಫಿಜಿಯಲ್ಲಿ ಭಾರತೀಯರೇ ಶೇಕಡಾ 44ರಷ್ಟು ಇದ್ದಾರೆ. ಒಂದು ಕಾಲಕ್ಕೆ ಕೂಲಿಗಳಾಗಿ ಬಂದವರು ಇಂದು ವಾಣಿಜ್ಯ, ವ್ಯವಹಾರದ ಮೇಲೆ ಹಿಡಿತ ಸಾಧಿಸಿದ್ದಾರೆ. ಮೇ 19ರಂದು ನಡೆದ ಕ್ಷಿಪ್ರಕ್ರಾಂತಿಯಲ್ಲಿ ಭಾರತೀಯ ಮೂಲದ ಪ್ರಧಾನಿ ಮಹೇಂದ್ರ ಚೌಧುರಿ ಹಾಗೂ ಅವರ ಸಂಪುಟದ ಸದಸ್ಯರನ್ನು ಪದಚ್ಯುತಗೊಳಿಸಿದ ಜಾರ್ಜ್ ಸ್ಪೇಯ್ಟ್ ಈಗ ಪಾರ್ಲಿಮೆಂಟ್ ಕಟ್ಟಡದಲ್ಲಿ ಅವರನ್ನೆಲ್ಲ ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದಾನೆ. ಯಾವುದೇ ಕ್ಷಣಕ್ಕಾದರೂ ಅಲ್ಲಿರುವ ಮಹೇಂದ್ರ ಚೌಧುರಿ ಮತ್ತು ಆತನ 30 ಜನ ಸಹಚರರು ಸ್ಪೇಯ್ಟ್ ಬೆಂಬಲಿಗರ ಬಂದೂಕಗಳ ನೆರಳಲ್ಲಿ ಚಡಪಡಿಸುವಾಗ, ಹೊರಗೆ ಭಾರತೀಯ ಮೂಲದವರ ಇನ್ನೂರು ಅಂಗಡಿಗಳು ಲೂಟಿಯಾದವು. ಇಪ್ಪತ್ತು ಅಂಗಡಿಗಳು ಬೆಂಕಿಗೆ ಆಹುತಿಯಾದವು.

ಈಗ ಅಲ್ಲಿನ ಜನ, ಮುಖ್ಯವಾಗಿ ಭಾರತೀಯರು ಎದುರು ನೋಡುತ್ತಾ ಇರುವುದು ಭಾರತ ಮತ್ತು ಆಸ್ಟ್ರೇಲಿಯಾದ ನೆರವನ್ನು. ಫಿಜಿಯಲ್ಲಿ ಹೆಚ್ಚು ಕಡಿಮೆ ಆಗಿ ಅವರೆಲ್ಲ ಹೊರಬೀಳಬೇಕಾಗಿ ಬಂದರೆ ಆಸ್ಟ್ರೇಲಿಯಾ ಮಾತ್ರ ಅವರಿಗೆ ನೆಲೆ ನೀಡಬಲ್ಲದು. ಅಂಥ ಸ್ಥಿತಿ ಮೂಡದಂತೆ ತಡೆಯುವುದು ಭಾರತದಿಂದ ಸಾಧ್ಯ ಎಂಬ ನಂಬಿಕೆ ಅವರಲ್ಲಿದೆ. ಆಸ್ಟ್ರೇಲಿಯಾದ ಕಲೋನಿಯಲ್ ಶುಗರ್ ರಿಫೈನಿಂಗ್ ಕಂಪೆನಿ ಹಿಡಿತದಲ್ಲಿಯೇ ಅಲ್ಲಿನ ಕಬ್ಬು ಬೆಳೆ ಹಾಗೂ ಸಕ್ಕರೆ ತಯಾರಿಕೆ 1971ರವರೆಗೂ ಇತ್ತು. ಹೀಗಾಗಿ ಆಸ್ಟ್ರೇಲಿಯಾದ ನಂಟು ಹೆಚ್ಚು ಗಾಢ.

ಫಿಜಿಯ ಕ್ಷಿಪ್ರಕ್ರಾಂತಿ ಅಲ್ಲಿನ ಭಾರತೀಯರ ಜನಜೀವನವನ್ನು ತಲ್ಲಣಗೊಳಿಸಿರುವುದು ಸಹಜ. ಬಹಳಷ್ಟು ಭಾರತೀಯರು ಅಲ್ಲಿನ ಕಬ್ಬಿನ ಗದ್ದೆಗಳ ಗೇಣಿಕಾರರು. ಇನ್ನು ಕೆಲವೇ ದಿನಗಳಲ್ಲಿ ಅವರ ಗೇಣಿ ಅವಧಿ ಮುಗಿಯಲಿದೆ. ಮುಂದೇನು? ಎಂಬ ಕಳವಳ ಸಹಜ.

ಹಿಂದಿನ ಸರ್ಕಾರಗಳಲ್ಲಿ ಭ್ರಷ್ಟಾಚಾರ ನಡೆಸಿ ವಿಚಾರಣೆಗೆ

ಗುರಿಯಾಗಿರುವ, ವಿಫಲ ಉದ್ಯಮ ಜಾರ್ಜ್ ಸ್ಪೇಯ್ಟ್ ಬಂಡಾಯದ ನಾಯಕ. ಅವನೊಬ್ಬ ವಂಚಕ, ಗೂಂಡಾ ಹಾಗೂ ಕ್ರಿಮಿನಲ್ ಎಂಬುದು ಫಿಜಿಯಲ್ಲಿ ಎಲ್ಲರಿಗೂ ಗೊತ್ತು.

ಆದರೆ ಸೈನ್ಯ, ಸರ್ಕಾರದ ಮುಖ್ಯ ಸ್ಥಾನಗಳಲ್ಲಿ ಇರುವವರ ಬೆಂಬಲ ಆತನಿಗಿದೆ. ಹದಿಮೂರು ವರ್ಷದ ಹಿಂದೆ ಮೂಲ ನಿವಾಸಿಗಳಿಗೇ ಆದ್ಯತೆ ದೊರೆಯಬೇಕು ಎಂದು ಬಂಡಾಯವೆದ್ದು, ಕ್ಷಿಪ್ರಕ್ರಾಂತಿಯಿಂದ ಗದ್ದುಗೆ ಏರಿದ್ದ ಸ್ಟಿವೇನಿ ರಬೂಕಾನ ಹಾಗೇ ಸ್ಪೇಯ್ಟ್ ಮೂಲನಿವಾಸಿಗಳಿಗೇ ಅಧಿಕಾರ ಎಂಬ ಘೋಷಣೆಯೊಡನೆ ಬಂಡಾಯ ಎದ್ದಿದ್ದಾನೆ. ರಬೂಕಾನ ಹದಿಮೂರು ವರ್ಷಗಳ ಆಳ್ವಿಕೆ ನಂತರ ಕಳೆದ ವರ್ಷ ನಡೆದ ಚುನಾವಣೆಯಲ್ಲಿ ರಬೂಕಾ ಸೋತರೂ, ಇಂದಿಗೂ ಆತ ಪ್ರಬಲ ರಾಜಕೀಯ ಶಕ್ತಿಯ ಕೇಂದ್ರ.

ಫಿಜಿಯಲ್ಲಿ ಚುನಾಯಿತ ಸರ್ಕಾರ ಇದ್ದಾಗಲೂ ಬುಡಕಟ್ಟು ನಾಯಕರ ಮಂಡಳಿಯದೇ ಕಾರುಬಾರು. ಅವರದ್ದೇ ಅಲ್ಲಿ ಸಮಾಂತರ ಸರ್ಕಾರ.

ಈಗ ಅಧಿಕಾರ ಕಳೆದುಕೊಂಡಿರುವ ರಬೂಕ್ ಬಂಡುಕೋರರ ನಾಯಕ ಸ್ಪೇಯ್ಟ್ ಜೊತೆ ಮಾತುಕತೆಗೆ ಮುಂದಾಗಿದ್ದಾನೆ. ಅಲ್ಲಿನ ಬುಡಕಟ್ಟು ಜನಾಂಗಕ್ಕೆ, ಎಲ್ಲರೂ ಸಮಾನರು ಎಂಬ ತತ್ವದಲ್ಲಿ ಒಪ್ಪಿಗೆ ಇಲ್ಲ. ಬುಡುಕಟ್ಟುಗಳ ಅಸ್ತಿತ್ವದ ಗಡಿಗಳನ್ನು ಅಳಿಸಿ ಹಾಕುವ ಯಾವುದೇ ಯತ್ನಕ್ಕೂ ಅವರ ವಿರೋಧವಿದೆ.


ಭಾರತೀಯರು ಬೇರೆಯೇ. ಅವರ ಆಚಾರ, ವಿಚಾರಗಳು, ಉಡುಗೆ ತೊಡುಗೆ, ಧರ್ಮ ಎಲ್ಲವೂ ಬೇರೆ. ಅವರು ಈ ನಾಡಿನವರಾಗಲು ಸಾಧ್ಯವೇ ಇಲ್ಲ. ಅವರ್‍ಯಾರಿಗೂ ಮತದಾನದ ಹಕ್ಕು ಇರಬಾರದು ಎಂಬುದು ಸ್ಪೇಯ್ಟ್ ವಾದ.

ಟಿವಿಗಳಲ್ಲಿ ನೋಡಿದವರಿಗೆ ಜಾರ್ಜ್ ಸ್ಪೇಯ್ಟ್‌ನ ಉಡುಗೆ ನಗೆ ತರಿಸಬಹುದು. ಸ್ಕರ್ಟನಂತಹ ಉಡುಪಿನ ಮೇಲೆ ಅಂಗಿ ತೊಟ್ಟು, ಟೈ ಧರಿಸಿದ ಆತನಂತೆಯೇ ಬುಡಕಟ್ಟು ಜನಾಂಗದವರೂ ಉಡುಪು ಧರಿಸುತ್ತಾರೆ. ಅವರ ನಡುವೆ ಪ್ಯಾಂಟ್, ಜೀನ್ಸ್ ಹಾಗೂ ಅಂಗಿ ಅಥವಾ ಸೂಟ್ ತೊಟ್ಟ ಭಾರತೀಯರು ವಿಭಿನ್ನವಾಗಿ ಕಾಣುತ್ತಾರೆ.



ಸಮವಸ್ತ್ರರಹಿತ ಪೊಲೀಸನ ಮೇಲೆ ಬಂಡುಕೋರರ ಹಲ್ಲೆ

ಅಲ್ಲಿನ ಸಂವಿಧಾನ ಬುಡಕಟ್ಟು ಜನಾಂಗದವರು, ಭಾರತೀಯರೂ ಒಂದೇ ಎಂದು ಮಾನ್ಯ ಮಾಡುತ್ತದೆ. ನಗರಗಳಲ್ಲಿ ವಾಸಿಸುವ ಭಾರತೀಯರ ಜೀವನವೇನೋ ಪರವಾಗಿಲ್ಲ. ವ್ಯಾಪಾರ, ವಹಿವಾಟು ಮಾಡುತ್ತಾ, ಮಕ್ಕಳನ್ನು ಶಾಲೆಗೆ ಕಳಿಸುವ, ಎಲ್ಲರೊಡನೆ ಬೆರೆತು ಸ್ಥಳೀಯ ಪೇಯ 'ಕಾವಾ' ಕುಡಿಯಬಹುದು. ಆದರೆ ರಾಜಧಾನಿ ಸೂವಾ ಬಿಟ್ಟು ಹೊರಗಡೆ ಹೋದರೆ ಪರಿಸ್ಥಿತಿ ಭಿನ್ನ. ಅಲ್ಲಿ ಒಂದು ರೀತಿಯಲ್ಲಿ ಭಾರತೀಯರು ಅನ್ಯರು. ಸದಾ ಭಯದ ನೆರಳಲ್ಲಿಯೇ ಬದುಕಬೇಕಾದ ಸ್ಥಿತಿ.




ಲೂಟಿ ಆಗಿರುವ ಒಂದು ಭಾರತೀಯ ಅಂಗಡಿ

ಈಗ ಭಾರತೀಯ ಮೂಲದ ಪ್ರಧಾನಿ ಮಹೇಂದ್ರ ಚೌಧುರಿಯನ್ನೇ ಬಂಡುಕೋರರು ಪದಚ್ಯುತಗೊಳಿಸಿದ್ದರೂ ಫಿಜಿಯ ಭಾರತೀಯ ಮೂಲದ ಜನ ಹೆಚ್ಚಿನ ಪ್ರತಿಭಟನೆ ತೋರುವಂತಿಲ್ಲ. ಹಾಗೇನಾದರೂ ಮಾಡಿದರೆ, ಇನ್ನಷ್ಟು ಸ್ಥಳೀಯರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ.

ಈ ಸ್ಥಿತಿಯಲ್ಲಿ ಅವರು ಅಸಹಾಯಕವಾಗಿ ಚಡಪಡಿಸುತ್ತಾ ಇದ್ದಾರೆ. ಶಾಂತ ಸಾಗರದ ಈ ದ್ವೀಪ ಸಮೂಹದಲ್ಲಿ ಎದ್ದಿರುವ ಜನಾಂಗೀಯ ದ್ವೇಷದ ಜ್ವಾಲಾಮುಖಿ ತಣ್ಣಗಾಗುವುದೋ ಇಲ್ಲ ಭುಗಿಲೆದ್ದು ಎಲ್ಲವನ್ನೂ ಬಲಿ ತೆಗೆದುಕೊಳ್ಳುವುದೋ ನೋಡಬೇಕು. ■

ಮಲಪ್ಪುರಂನಲ್ಲಿ ಮದುವೆ ಮತ್ತು ವಿಚ್ಛೇದನಗಳು



ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ ಇನ್ನೂ ಹಳೆಯ ಕಾಲದ ಸಂಪ್ರದಾಯ. ಹೆಣ್ಣು ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಮದುವೆ ಆಗುತ್ತದೆ. ಮನೆಯ ಹಿರಿಯರ ಸಮ್ಮುಖದಲ್ಲೇ ನಡೆಯುವ ಇಂಥ ಮದುವೆಗಳಲ್ಲಿ ಹೆಣ್ಣಿನ ಯಾವುದೇ ಭಾವನೆಗೆ ಬೆಲೆಯಿಲ್ಲ. ಅಷ್ಟಕ್ಕೂ ಆಕೆ ತನ್ನ ಬದುಕಿನ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳುವಷ್ಟು ಬೆಳೆದಿರುವುದೂ ಇಲ್ಲ. ಮುಂದೆ ಆಕೆ ಹಿರಿಯರ ಆದೇಶದಂತೆಯೇ ವಿಚ್ಛೇದನ, ಮರು ಮದುವೆ ಎಂದೆಲ್ಲಾ ಹೆಣಗಾಡುತ್ತಾ ಇರಬೇಕಾಗುತ್ತದೆ.

ಮುರಿದ ಮನ, ಮನೆಗಳು, ದಿಕ್ಕುಗೇಡಾಗುವ ಮಕ್ಕಳು ಇಲ್ಲಿನ ದೊಡ್ಡ ಸಮಸ್ಯೆ. ವಿಶ್ವಸಂಸ್ಥೆಯ ಕುಟುಂಬ ಯೋಜನೆ ಅಧಿಕಾರಿಗಳು ನಡೆಸಿದ ಅಧ್ಯಯನದಿಂದ, ಇಲ್ಲಿ ನಡೆಯುವ ವಿವಾಹ ವಿಚ್ಛೇದನಗಳಲ್ಲಿ ಶೇ.75ಕ್ಕೂ ಹೆಚ್ಚು ಹೆಂಗಸು ಇಪ್ಪತ್ತೈದಕ್ಕಿಂತ ಕಡಿಮೆ ವಯಸ್ಸಿನವಳಿರುವಾಗ ನಡೆಯುತ್ತವೆ ಎಂದು ತಿಳಿಸಿದೆ.

ತನಗೆ ಬೇಕಿಲ್ಲದ, ಮನೆ ಮಂದಿಯ ತಾಳಕ್ಕೆ ಕುಣಿಯಲೇಬೇಕಾದ ಪಾತುಮ್ಮ ಈವರೆಗೆ ನಾಲ್ಕುಬಾರಿ ವಿವಾಹ ವಿಚ್ಛೇದನ ಪಡೆದುಕೊಂಡಿದ್ದಾಳೆ. (ಪಾತುಮ್ಮ ಎಂಬುದು ಆಕೆಯ ನಿಜವಾದ ಹೆಸರಲ್ಲ). ಆಕೆಗೀಗ 36 ವರ್ಷ. ಮೊದಲ ಮದುವೆ ಆದಾಗ ಆಕೆಗಿನ್ನೂ 14 ವರ್ಷ.

ಮದುವೆಯಾದ ಒಂದು ತಿಂಗಳಲ್ಲೇ, ಮನೆಯ ಹಿರಿಯರ ಸೂಚನೆಯಂತೆ ಆಕೆ ವಿಚ್ಛೇದನ ಪಡೆಯಬೇಕಾಯಿತು.

ಪಾತುಮ್ಮ ಆಧುನಿಕ ಧೋರಣೆಯ ಸ್ತ್ರೀ ವಿಮೋಚನಾವಾದಿ ಏನಲ್ಲ. ಆಕೆಗೆ ಮತ್ತೆ ಮತ್ತೆ ಮದುವೆ ಆಗಬೇಕೆಂಬ ಇರಾದೆ ಏನೂ ಇರಲಿಲ್ಲ. ಒಬ್ಬನನ್ನು ಮದುವೆಯಾಗಿ ಜೀವನವಿಡೀ ನೆಮ್ಮದಿಯಿಂದ ಬಾಳಬೇಕೆಂಬ ಕನಸು ಇತ್ತು. ತನ್ನನ್ನು ಪ್ರೀತಿಯಿಂದ ನೋಡಿಕೊಳ್ಳುವ ಗಂಡನಿಗಾಗಿ ಆಕೆ ಹಂಬಲಿಸಿದ್ದಳು. ನಾಲ್ಕು ಮದುವೆ ಆದರೂ, ಇದಿನ್ನೂ ಅವಳ ಪಾಲಿಗೆ ಕನಸಾಗಿಯೇ ಇದೆ.

ಮೊದಲ ಮದುವೆ ಆಕೆ ಋತುಮತಿಯಾಗುವ ಮುಂಚೆಯೇ ನಡೆದರೆ, ನಾಲ್ಕನೇ ಮದುವೆ ನಡೆದಾಗ ಇನ್ನೂ ಇಪ್ಪತ್ತೊಂದು ತುಂಬಿರಲಿಲ್ಲ. ಆ ಮದುವೆಯಿಂದಲೂ ಇತ್ತೀಚೆಗೆ ಆಕೆ ಹೊರ ನಡೆದು ಬಂದಿದ್ದಾಳೆ.

ಪಾತುಮ್ಮನ ಮದುವೆ, ವಿಚ್ಛೇದನಗಳ ವಿಚಿತ್ರ ಗಮನಿಸಿದರೆ, ಮಲಪ್ಪುರಂ ಹಾಗೂ ನೆರೆಯ ಮಲಬಾರ್ ಜಿಲ್ಲೆಯ ಮುಸ್ಲಿಂ ಸಮುದಾಯದ ಬಡ ಹಾಗೂ ಕೆಳ ಮಧ್ಯಮ ವರ್ಗಗಳ ಹೆಣ್ಣುಗಳ ಬದುಕಿನ ಪರಿಚಯ ಆದಂತಾಗುತ್ತದೆ.

ಪಾತುಮ್ಮನ ಮೊದಲ ಮದುವೆ ಆದದ್ದು ಆಕೆಗಿಂತ ಹತ್ತು ವರ್ಷ ದೊಡ್ಡವನಾಗಿದ್ದ ಗಂಡಿನೊಂದಿಗೆ. ಆತ ಒಳ್ಳೆಯವನೇ, ಆದರೆ ಆಗೊಮ್ಮೆ, ಈಗೊಮ್ಮೆ ಕುಡಿಯುತ್ತಿದ್ದ. ಸಂಪ್ರದಾಯಸ್ಥ ಮುಸ್ಲಿಂ ಹಿನ್ನೆಲೆಯ ಪಾತುಮ್ಮನ ಮನೆಯವರಿಗೆ ಇದು ಸೇರಿಕೆಯಾಗಲಿಲ್ಲ. ಸೋದರ ಮಾವನ ಸೂಚನೆಯಂತೆ ವಿಚ್ಛೇದನ ಪಡೆದಳು. ಕೆಲವು ದಿನ ಅರೇಬಿಕ್ ಕಾಲೇಜಿಗೆ ಹೋದಳು. ಅಷ್ಟರಲ್ಲೇ ಎರಡನೇ ಮದುವೆ ಆಯಿತು. ಕೆಲವೇ ತಿಂಗಳಲ್ಲಿ ಆತ ಕೊಲ್ಲಿ ರಾಷ್ಟ್ರಗಳಿಗೆ ಹೋದ. ಗಂಡನ ಅಣ್ಣ, ಅತ್ತಿಗೆಯ ಜೊತೆ ಈಕೆ ಇರಬೇಕಾಯಿತು. ಗಂಡನ ಅಣ್ಣ ಈಕೆಯ ಮೇಲೆ ಕಣ್ಣು ಹಾಕಿದ. ತವರಿಗೆ ವಾಪಸಾದ ಪಾತುಮ್ಮ ಎರಡನೇ ಬಾರಿ ವಿಚ್ಛೇದನ ಪಡೆದುಕೊಂಡಳು. ಪಾತುಮ್ಮನ ಮೂರನೇ ಮದುವೆ ಸಮಯಕ್ಕೆ ಅವಳಿಗಿನ್ನೂ ಹತ್ತೊಂಬತ್ತು ವರ್ಷ. ಗಂಡನಿಗೆ 23 ವರ್ಷ. ಅವನಾಗಲೇ ಒಮ್ಮೆ ಮದುವೆಯಾಗಿ ವಿಚ್ಛೇದನ ಪಡೆದಿದ್ದ. ಗಂಡ ಪರವಾಗಿಲ್ಲ. ಆದರೆ ಅತ್ತೆ ಮನೆಯಲ್ಲಿ ಮೈಮುರಿಯುವಷ್ಟು ಕೆಲಸ. ರಾತ್ರಿ ಎಷ್ಟು ಹೊತ್ತಾದರೂ ಕೆಲಸವೇ ಮುಗಿಯುತ್ತಾ ಇರಲಿಲ್ಲ. ಎರಡು ವರ್ಷದ ನಂತರ ಈ ಮದುವೆಯೂ ಮುರಿದು ಬಿತ್ತು.

ನಾಲ್ಕನೇ ಬಾರಿ ಮದುವೆಯಾದ ಪಾತುಮ್ಮನಿಗೆ ಸಿಕ್ಕಿದ್ದು ಓದು ಬರಹ ಬಾರದ, ಒಮ್ಮೆ ಮದುವೆಯಾಗಿ ವಿಚ್ಛೇದನ ಪಡೆದಿದ್ದ ಗಂಡ. ಈಕೆ ಒಂಬತ್ತನೇ ತರಗತಿವರೆಗೆ ಓದಿದವಳು. ಇಷ್ಟೆಲ್ಲ ಮದುವೆ, ವಿಚ್ಛೇದನಗಳು ನಡೆದಿದ್ದು ಆಕೆ 14ರಿಂದ 21 ವರ್ಷದವಳಿರುವಾಗ. ಎಲ್ಲ ಪ್ರಕರಣಗಳಲ್ಲೂ ಮನೆಯ ಹಿರಿಯರದೇ ಕೈವಾಡ. ಈಕೆ ಏನೊಂದೂ ನಿರ್ಧಾರ ಕೈಗೊಳ್ಳುವಂತೆ ಇರಲಿಲ್ಲ.

ಈ ನಾಲ್ಕನೆಯ ಗಂಡನದೂ ಇನ್ನೊಂದು ಕತೆ. ಮದುವೆಯಾದ ಕೆಲವೇ ದಿನಕ್ಕೆ ಇನ್ನೊಂದು ಹೆಂಗಸಿನೊಡನೆ ಸಂಬಂಧ ಬೆಳೆಸಿದ. ಅವನು ಸಲಿಂಗಕಾಮಿ ಬೇರೆ. ತನ್ನ ಈ ಮೋಜಿಗಾಗಿ ಸಾಕಷ್ಟು ಹಣ ವ್ಯಯಿಸುತ್ತಿದ್ದ. ಕಾಮ ಪಿಶಾಚಿಯ ಹಾಗೆ ಆಡುತ್ತಿದ್ದ ಅವನನ್ನು ಮಾನಸಿಕ ತಜ್ಞರ ಬಳಿ ಕರೆದೊಯ್ಯುವ ಪಾತುಮ್ಮನ ಯತ್ನವೂ ವಿಫಲವಾಯಿತು.

ಅಷ್ಟಾದರೂ ಈ ಗಂಡನೊಡನೆ ಪಾತುಮ್ಮ ಹದಿನೈದು ವರ್ಷ ಬಾಳಿದಳು. ಒಬ್ಬ ಮಗ ಹುಟ್ಟಿದ್ದು ಇದಕ್ಕೆ ಮುಖ್ಯ ಕಾರಣ. ಆದರೆ ಅವಳ ಸೈರಣೆಗೂ ಒಂದು ಮಿತಿ ಇದೆ. ಕೊನೆಗೆ ಗಂಡನ ವಿಕೃತಿ ತಡೆಯಲಾರದೇ ನಾಲ್ಕನೇ ಗಂಡನಿಂದಲೂ ವಿಚ್ಛೇದನ ಪಡೆದಳು. ಇದಕ್ಕೇ ಕಾಯುತ್ತ ಇದ್ದವನ ಹಾಗೆ ಆತ ಇನ್ನೊಂದು ಮದುವೆ ಆದ.

ಈಗ ಪಾತುಮ್ಮನಿಗೆ 36 ವರ್ಷ. ಈಗಲೂ ಆಕೆಯ ಕೈ ಹಿಡಿಯಲು ಮೂರು ಮಕ್ಕಳ ತಂದೆ, ಗಲ್ಫ್‌ನಿಂದ ಹಿಂದಿರುಗಿದ ಹತ್ತಿರ ಸಂಬಂಧಿ ಒಬ್ಬ ತಯಾರಿದ್ದಾನೆ. ಆದರೆ ಈಕೆಯೇ ಇನ್ನೂ ಒಪ್ಪಿಗೆ ನೀಡಿಲ್ಲ.

ಪಾತುಮ್ಮನಿಗೆ ಈಗಲೂ ತಾನು ಮೊದಲ ಗಂಡನ ಜೊತೆಯೇ ಚೆನ್ನಾಗಿ ಬಾಳಬಹುದಿತ್ತು ಎನ್ನಿಸುತ್ತದೆ. ಈಗ ಆಕೆಗೆ ಬುದ್ಧಿ ಬಲಿತಿದೆ. ಸಣ್ಣ ವಯಸ್ಸಿಗೇ ಹೆಣ್ಣುಗಳಿಗೆ ಮದುವೆ ಮಾಡಿ ಅವರ ಭಾವನೆ, ನಿರ್ಧಾರಗಳಿಗೇ ಬೆಲೆ ಇಲ್ಲದಂತೆ ಮಾಡಿ ಬಿಡುವ ಸಂಪ್ರದಾಯದಿಂದ ನಲುಗಿದವಳು ಆಕೆ. ತಾರುಣ್ಯಕ್ಕೆ ಮುಂಚೆಯೇ ಹೆಣ್ಣುಗಳಿಗೆ ಮದುವೆ ಮಾಡಿಬಿಡುವ ಹಿರಿಯರು, ಆಕೆಯ ಓದನ್ನೂ ಮೊಟುಕು ಮಾಡಿಬಿಡುತ್ತಾರೆ. ಆಕೆ ಹಿರಿಯರನ್ನು ವಿರೋಧಿಸುವ ಸ್ಥಿತಿಯಲ್ಲೂ ಇರುವುದಿಲ್ಲ. ಇವರೆಲ್ಲ ತನ್ನ ಹಿತಕ್ಕೆ ತಾನೇ ಮಾಡುವುದು ಎಂದೇ ಪೂರ್ಣ ನಂಬಿಕೆಯಿಂದ ಒಪ್ಪಿಬಿಡುತ್ತಾಳೆ.

ಇದರ ಪರಿಣಾಮ ಎಂದರೆ 18 ರಿಂದ 21ರ ನಡುವೆಯೇ ಮದುವೆಯಾಗಿ ವಿಚ್ಛೇದನ ಪಡೆಯುತ್ತಾ ಹೋಗುವ ಹೆಂಗಸರ ಸಂಖ್ಯೆ ಮಲಪ್ಪುರಂ ಮತ್ತು ಮಲಬಾರ್ ಜಿಲ್ಲೆಗಳಲ್ಲಿ ಹೆಚ್ಚಾಗಿದೆ. ಕನಿಷ್ಠ 21 ದಾಟಿದ ನಂತರವಾದರೂ ಮದುವೆ ಮಾಡಿದರೆ, ಹೆಣ್ಣುಮಕ್ಕಳು ತಮ್ಮ ಬದುಕಿನ ಬಗ್ಗೆ ತಾವೇ ನಿರ್ಧಾರ ಕೈಗೊಳ್ಳುವ ಅವಕಾಶವಾದರೂ ಇರುತ್ತದೆ. ಹಿರಿಯರ ಧೋರಣೆ ಸರಿ ಇಲ್ಲ ಎನಿಸಿದರೆ, ಅದನ್ನು ವಿರೋಧಿಸುವ ಶಕ್ತಿಯಾದರೂ ಇರುತ್ತದೆ.

■ 'ಗ್ರಾಸ್‌ರೂಟ್ಸ್'ನಿಂದ

‘ಸೆಕ್ಸ್’ ಇಲ್ಲದೆಯೂ ಸಂತಾನ !



ಗಂಡು-ಹೆಣ್ಣು ಲೈಂಗಿಕ ಸಂಪರ್ಕ ಇಲ್ಲದೇ ಸಂತಾನ ಪಡೆಯಬಹುದೇ? ಇದಕ್ಕೆ ಉತ್ತರ ಮೂರು ದಶಕಗಳ ಹಿಂದೆ ವಿಜ್ಞಾನಿಗಳು ನೀಡಿದ್ದಾರೆ. ವೈಜ್ಞಾನಿಕ ಶೋಧಗಳಿಂದಾಗಿ ಲೈಂಗಿಕ ಸಂಪರ್ಕ ಇಲ್ಲದೆಯೂ ಸಂತಾನ ಪಡೆಯುವುದು ಸಾಧ್ಯ ಆಗಿದೆ.

ಎಲ್ಲ ಜೀವಿಗಳ ಮುಂದುವರಿಕೆಗೆ ಸಂತಾನ ಅಗತ್ಯ. ಇದು ಸಾಧ್ಯವಾಗಿಸುವ ಸಂತಾನೋತ್ಪತ್ತಿಯ ವ್ಯವಸ್ಥೆ ಪ್ರತಿ ಜೀವಿಯಲ್ಲೂ ಇರುತ್ತದೆ. ಇದೊಂದು ಪ್ರಕೃತಿಯ ಅದ್ಭುತ ಕೊಡುಗೆ. ಎಲ್ಲ ಜೀವಿಯೂ ತನ್ನಂಥಹುದೇ ರೂಪ, ಆಂತರಿಕ ಕ್ರಿಯೆಗಳೆಲ್ಲವುಗಳನ್ನು ಹೊಂದಿದ ಪಡಿಯಚ್ಚು ಪಡೆಯುವುದು ಇದರಿಂದಾಗಿ ಸಾಧ್ಯ.

ಎಷ್ಟೋ ಸಂದರ್ಭಗಳಲ್ಲಿ ಆರೋಗ್ಯವಂತ ದಂಪತಿಗಳಿಗೆ ಸಂತಾನ ಪಡೆಯುವುದು ಕಷ್ಟಸಾಧ್ಯ. ಒಂದು ಮಗುವಿನ ಜನನಕ್ಕೆ ನಾನಾ ರೀತಿಯ ಸರಪಳಿ ಕ್ರಿಯೆಗಳು ವ್ಯವಸ್ಥಿತವಾಗಿ ನಡೆಯಬೇಕು. ಈ ಸರಪಳಿ ಕ್ರಿಯೆಯಲ್ಲಿ ಸ್ವಲ್ಪ ಏರುಪೇರಾದರೂ ಮಗುವಿನ ಜನನ ವ್ಯತ್ಯಯಗೊಳ್ಳುತ್ತದ.

ಸಂತಾನಹೀನರಾದ ಇಂಥ ದಂಪತಿಗಳಿಗೆ ಮಕ್ಕಳಾಗುವುದೆಂದರೆ ಕೇವಲ ಪವಾಡದಿಂದ ಮಾತ್ರ ಸಾಧ್ಯ ಎಂಬಂಥ ಸ್ಥಿತಿ ಮೂರು ದಶಕಗಳ ಹಿಂದೆ ಇತ್ತು. ಸಂತಾನೋತ್ಪತ್ತಿ ಕುರಿತಾದ ಜೈವಿಕ ತಂತ್ರಜ್ಞಾನದ ವಿಶಾಲ ತಿಳುವಳಿಕೆ, ವ್ಯಾಪಕ ಸಂಶೋಧನೆ ಹಾಗೂ ಮೈಕ್ರೋ ಸರ್ಜರಿ (ಸೂಕ್ಷ್ಮ ಶಸ್ತ್ರಚಿಕಿತ್ಸೆ)ಯಂಥ ರಂಗಗಳಲ್ಲಿ ಆದ ಬೆಳವಣಿಗೆಯಿಂದಾಗಿ, ಬಂಜೆಯರೂ ಇಂದು ಸಂತಾನ ಪಡೆಯುವುದು ಸಾಧ್ಯ. ಇದಕ್ಕಾಗಿ ಹಲವು ಬಗೆಯ ತಂತ್ರಗಳನ್ನು ಈಗ ಬಳಸಲಾಗುತ್ತಿದೆ.

ಹೆಣ್ಣು ಮಕ್ಕಳಲ್ಲಿ ಸಂತಾನೋತ್ಪತ್ತಿಯ ಅಂಗಗಳಾದ ಅಂಡಾಣು, ಗರ್ಭಾಶಯ, ಗರ್ಭಾಶಯದ ನಾಳ, ಯೋನಿದ್ವಾರಗಳಲ್ಲಿನ ನ್ಯೂನ್ಯತೆ ಸಂತಾನಹೀನತೆಗೆ ಕಾರಣವಾಗಿರಬಹುದು. ಸಂತಾನೋತ್ಪತ್ತಿ ಪ್ರಕ್ರಿಯೆಗೆ ಪೂರಕವಾಗಬಲ್ಲ ಹಾರ್ಮೋನುಗಳ ಸ್ರವಿಕೆಯಲ್ಲಿ ವ್ಯತ್ಯಾಸ ಅಥವಾ ಕೊರತೆ ಕೂಡ ಬಂಜೆತನಕ್ಕೆ ಕಾರಣವಾಗಬಹುದು.

ಕೆಲವು ಸಂದರ್ಭಗಳಲ್ಲಿ ಸಂತಾನೋತ್ಪತ್ತಿ ಕ್ರಿಯೆಗೆ ಪೂರಕವಾದ ಹಾರ್ಮೋನುಗಳೇ ಬಿಡುಗಡೆ ಆಗದೆಯೂ ಇರಬಹುದು.

ದೇಹದ ಬೊಜ್ಜಿನಂಥ ವಿಕೃತಿ ಅಥವಾ ವಂಶಪಾರಂಪರ್ಯವಾಗಿ ಬಂದ ದೋಷದಿಂದಲೂ ಹೆಣ್ಣು ಸಂತಾನಹೀನೆಯಾಗಬಹುದು.

ಅಲ್ಪ ಪ್ರಮಾಣದಲ್ಲಿ ಇರಬಹುದಾದ ರೋಗನಿರೋಧಕ ಪತ್ತೆಯ ನ್ಯೂನ್ಯತೆಯಿಂದಲೂ ಹೆಣ್ಣು ಸಂತಾನ ಪಡೆಯಲಾಗದ ಸ್ಥಿತಿ ಮೂಡಬಹುದು. ತಂತ್ರವೇ ಇಂಟ್ರಾ ಸೈಟೋಪ್ಲಾಸ್ಮಿಕ್ ಸ್ಪರ್ಮ್ ಇಂಜೆಕ್ಷನ್ (ICSI) ಇದರಿಂದಾಗಿ ಅಂಡಾಣು ಬೀಜಾಣುವನ್ನು ಸೇರಿ ಸಂತಾನೋತ್ಪತ್ತಿಗೆ ನಾಂದಿಯಾಗುವುದು ಖಾತರಿ. ಸಾಮಾನ್ಯವಾಗಿ ಗಂಡಸಿನ ರೇತಸ್ಸಿನಲ್ಲಿ ಇರುವ ಮಿಲಿಯಾಂತರ ಬೀಜಾಣುಗಳು ಪೈಪೋಟಿ ನಡೆಸುತ್ತಾ ಗರ್ಭಾಶಯದ ನಾಳ ದ್ವಾರದತ್ತ ಸಾಗುತ್ತವೆ. ಎಲ್ಲಕ್ಕಿಂತ ಮುಂಚೆ ಅಲ್ಲಿ ಕಾಯುತ್ತಿರುವ ಅಂಡಾಣುವನ್ನು ಮುಟ್ಟಿ ಅದರೊಡನೆ ಒಂದಾಗುವ ಬೀಜಾಣು ಮಾತ್ರ ಯಶಸ್ವಿ ಆಗುತ್ತದೆ. ಉಳಿದೆಲ್ಲ ಸಹಜವಾಗಿ ಅಳಿಯುತ್ತವೆ.

ICSI ತಂತ್ರದಲ್ಲಿ ಹೀಗೆ ಬೀಜಾಣುಗಳ ಪೈಪೋಟಿ ಇರದು. ಒಂದೇ ಒಂದು ಆರೋಗ್ಯವಂತ ಬೀಜಾಣುವನ್ನು ಮಾತ್ರ ಆರಿಸಿಕೊಂಡು ಅದನ್ನು ಅಂಡಾಣುವಿನೊಳಗೆ ಸೇರಿಸಲಾಗುತ್ತದೆ. ಈ ತಂತ್ರದಿಂದಾಗಿ ಆರೋಗ್ಯಪೂರ್ಣ ಬೀಜಾಣುಗಳನ್ನು ಉತ್ಪಾದಿಸಲಾಗದ ಅಥವಾ ಯಥೇಚ್ಛ ಬೀಜಾಣು ಉತ್ಪಾದನೆ ಆದರೂ, ಸೋಂಕಿನಿಂದಾಗಿ ನಿರರ್ಥಕ ಎನಿಸಿಬಿಡುವ ಗಂಡಸರಲ್ಲಿ ಇದೊಂದು ವರದಾನವಾಗಿ ಕಂಡು ಬಂದಿದೆ. ಕೆಲವು ಸ್ತ್ರೀಯರ ದೇಹದಲ್ಲಿ ಬೀಜಾಣು ನಿರೋಧಕ ಆಂಟಿ ಬಾಡಿಗಳು ಇರುವ ಸಾಧ್ಯತೆ ಇರುತ್ತದೆ. ಹಾಗೆಂದು ಎಲ್ಲ ಸ್ತ್ರೀಯರಲ್ಲೂ ಇಂಥ ಸ್ಥಿತಿ ಇರುತ್ತದೆ ಎಂದಲ್ಲ.

ಜಗತ್ತಿನಲ್ಲಿ ಸಂತಾನ ಹೀನತೆಗೆ ಮೂರನೇ ಒಂದು ಭಾಗದಷ್ಟು ಪ್ರಕರಣಗಳಲ್ಲಿ ಗಂಡಸಿನ ರೇತಸ್ಸಿನಲ್ಲಿನ ಬೀಜಾಣು ಕೊರತೆ ಕಾರಣವಾಗಿರುತ್ತದೆ. ರೇತಸ್ಸಿನಲ್ಲಿ ಅಗತ್ಯ ಪ್ರಮಾಣದ ಬೀಜಾಣುಗಳು ಇಲ್ಲದಿರಬಹುದು. ಅಥವಾ ರೇತಸ್ಸು ಬ್ಯಾಕ್ಟೀರಿಯಾಗಳಂಥ ಜೀವಿಗಳ ಸೋಂಕಿಗೆ ಒಳಗಾಗಿರಬಹುದು. ಇನ್ನೂ ಹಲವು ಪ್ರಕರಣಗಳಲ್ಲಿ ಗರ್ಭಾಶಯದ ದ್ವಾರದಲ್ಲಿ ಕಾಯುತ್ತಿರುವ ಅಂಡಾಣುವನ್ನು ಹುಡುಕಿ ಹೋಗಿ ಅದರ ಜೊತೆಗೂಡಬೇಕಾದ ಬೀಜಾಣು, ತಾನು ಇದ್ದ ಜಾಗದಲ್ಲಿಯೇ ಗಿರಕಿ ಹೊಡೆಯುತ್ತದೆ. ಅದಕ್ಕೆ

> **ಜೀವಕುಲದ ಮುಂದುವರಿಕೆಗೆ ಸಂತಾನೋತ್ಪತ್ತಿ ಸಾಧ್ಯ. ಅದು ಕುಂಠಿತಗೊಂಡಾಗ ಪರಿಹಾರ ಕಂಡುಕೊಳ್ಳುವ ದಿಶೆಯಲ್ಲಿ ಮಾನವ ದಾಪುಗಾಲಿಟ್ಟು ನಡೆಯುತ್ತಾ ಇದ್ದಾನೆ. ಹೆಣ್ಣು-ಗಂಡಿನ ಜೊತೆ ಲೈಂಗಿಕ ಸಂಪರ್ಕ ಹೊಂದದೇ ಸಂತಾನ ಪಡೆಯುವುದು ಇದರಿಂದ ಸಾಧ್ಯವಾಗಿದೆ.**

ಗರ್ಭಾಶಯ ನಾಳದಲ್ಲಿ ಸಾಗಿ ಹೋಗಬೇಕೆಂಬ ಸ್ವಭಾವ ಸಹಜ ಚಲನೆ ಇರುವುದೇ ಇಲ್ಲ.

ಮಾಗಿ, ತಯಾರಾಗಿ ನಿಂತ ಅಂಡಾಣುವಿನ ಜೊತೆ ಬೀಜಾಣು ಸೇರಿ ಸಂತಾನೋತ್ಪತ್ತಿಯ ಕ್ರಿಯೆಗೆ ನಾಂದಿಯಾಗಲು ಹಲವಾರು ಕ್ರಮಗಳನ್ನು ಈಗ ರೂಢಿಸಲಾಗಿದೆ.

ಅಗತ್ಯವೇ ಆವಿಷ್ಕಾರದ ತಾಯಿ ಎನ್ನುತ್ತಾರೆ. ಅಮೇರಿಕಾದ ವಿಜ್ಞಾನಿ ಡಾ.ಮೆಲನಿನ್ ಲೇಡ್‌ಲಾ ತಾನು ಗರ್ಭಧರಿಸಲೇಬೇಕೆಂಬ ಹಠದಿಂದ ಕಂಡು ಹಿಡಿದ ತಾಯಿಯ ಗರ್ಭದ ಅಂಡಾಣು ಮತ್ತು ತಂದೆಯ ರೇತಸ್ಸಿನ ಬೀಜಾಣು ಗರ್ಭನಾಳದ ದ್ವಾರದಲ್ಲಿಯೇ ಕೂಡಬೇಕು ಎಂದೇನಿಲ್ಲ. ಮಾಗಿದ ಅಂಡಾಣುವನ್ನು ಎತ್ತಿಕೊಂಡು ಅದರೊಳಗೆ ಬೀಜಾಣುವನ್ನು ಸೇರಿಸಿ ಪ್ರನಾಳದಲ್ಲಿಯೇ ಭ್ರೂಣ ಬೆಳೆಯುವಂತೆ ಮಾಡಬಹುದು.

ಇದನ್ನು 'ಮೈಕ್ರೋ ಮ್ಯಾನಿಪ್ಯುಲೇಟರ್' ಎಂಬ ಯಂತ್ರದ ನೆರವಿನಿಂದ ತಜ್ಞರು ಸಾಧಿಸುತ್ತಾರೆ. ಪ್ರನಾಳದಲ್ಲಿ ಅಂಡಾಣು ಮತ್ತು ಬೀಜಾಣು ಸೇರಿ ಫಲಿತವಾದ ನಂತರ ಅದನ್ನು ಲ್ಯಾಪ್ರೋ ಸ್ಕಿಪ್ ನೆರವಿನಿಂದ ತಾಯಿಯ ಗರ್ಭಾಶಯದಲ್ಲಿ ಇರಿಸಲಾಗುತ್ತದೆ.

ಅಂಡಾಣು ಮತ್ತು ಬೀಜಾಣು ಒಂದುಗೂಡಲು ಇನ್ನೊಂದು ತಂತ್ರ ಅನುಸರಿಸಲಾಗುತ್ತದೆ. ಇದನ್ನು ಪಾರ್ಷಿಯಲ್ ಝೋನಲ್ ಡ್ರಿಲ್ಲಿಂಗ್ ಎನ್ನುತ್ತಾರೆ. ತಾಯಿಯ ಗರ್ಭಾಶಯ ದ್ವಾರದಲ್ಲಿ ಕಾಯ್ದು ನಿಂತ ಮಾಗಿದ ಅಂಡಾಣುವನ್ನು ಅಲ್ಲಿಂದ ಕದಲಿಸದೇ ಅದರ ಮೈ ಕವಚದಲ್ಲಿ ಸಣ್ಣ ರಂಧ್ರ ಒಂದನ್ನು ಕೊರೆಯಲಾಗುತ್ತದೆ. ಇದರಿಂದ ಕೊಂಚ ದುರ್ಬಲವಾದ ಬೀಜಾಣು ಕೂಡ ಅಂಡಾಣುವಿನ ಜೊತೆ ಸೇರಿ ಭ್ರೂಣ ಬೆಳೆಯಲು ಸಹಾಯಕವಾಗುತ್ತದೆ.

ಪಾರ್ಥೆನೋಜೆನಿಸಿಸ್

ಇದೊಂದು ವಿಚಿತ್ರ. ಹೆಣ್ಣು ಗಂಡಿನ ಸಂಪರ್ಕ ಇಲ್ಲದೆಯೂ ಸಂತಾನ ಪಡೆಯುವುದು ಸಾಧ್ಯ. ಹಲವು ಬಗೆಯ ಜೀವರಾಶಿಗಳಲ್ಲಿ ಹೆಣ್ಣು ಅಂಡಾಣು ಮತ್ತು ಬೀಜಾಣುಗಳೆರಡನ್ನೂ ಸ್ವಯಂ ಉತ್ಪಾದಿಸಿಕೊಂಡು ಅದರ ಮಿಲನದಿಂದ ಸಂತಾನ ಪಡೆಯುತ್ತದೆ. ಇದಕ್ಕೆ ಪಾರ್ಥೆನೋಜೆನಿಸಿಸ್ ಎನ್ನುತ್ತಾರೆ. ಅಪರೂಪಕ್ಕೆ ಪವಾಡ ಎಂಬಂತೆ ಈ ಪ್ರಕರಣ ಮಾನವರಲ್ಲಿಯೂ ಕಂಡುಬರುತ್ತದೆ. ಜೀಸಸ್ ಇದೇ ರೀತಿ ಹುಟ್ಟಿದ ಕಾರಣಕ್ಕೇ ಆತನ ತಾಯಿಯನ್ನು ಕನ್ಯೆ ಮೇರಿ ಅಥವಾ ವರ್ಜಿನ್ ಮೇರಿ ಎಂದು ಕರೆಯಲಾಗುತ್ತದೆ ಎಂದು ಹೇಳಲಾಗುತ್ತಿದೆ.

ಇಂಥ ಪ್ರಯೋಗ ಮಾಡುವಾಗ ಬೀಜಾಣುವಿನ ವಂಶವಾಹಿ ಗುಣಗಳನ್ನು ಪರೀಕ್ಷಿಸಿ, ಅದು ಆರೋಗ್ಯವಂತವಾಗಿದೆ ಮತ್ತು ಯಾವುದೋ ಅರಿಯದ ಕಾರಣಕ್ಕಾಗಿ ಅದು ಗರ್ಭಾಶಯ ದ್ವಾರದತ್ತ ಸಾಗಿ ಫಲಿತಗೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬಂಥ ಪ್ರಸಂಗಗಳಲ್ಲಿ ಮಾತ್ರ ಕೈಗೊಳ್ಳಲಾಗುತ್ತದೆ.

ICSI ತಂತ್ರಜ್ಞಾನ ಬಳಕೆಗೆ ತಂದಾಗ ವಿಜ್ಞಾನಿಗಳಲ್ಲಿ ಹಲವು ರೀತಿಯ ಆತಂಕಗಳಿದ್ದವು. ಇಲ್ಲಿ ಅಂಡಾಣುವಿನೊಳಗೆ ಒಂದೇ ಒಂದು ಬೀಜಾಣುವನ್ನು ಸೇರಿಸಬೇಕಿತ್ತು. ಅಂಥ ಸಂದರ್ಭದಲ್ಲಿ ಬೀಜಾಣುವಿನ ಫಲವತ್ತತೆಯನ್ನು ಪರೀಕ್ಷಿಸಿರಲಿಲ್ಲ. ಅದನ್ನು ನೇರವಾಗಿ ಗಂಡಸಿನ ದೇಹದಿಂದ ಪಡೆದು ಪ್ರಯೋಗಕ್ಕೆ ಬಳಸಲಾಗಿತ್ತು. ಆದರೂ ಫಲಿತಾಂಶ ಹೊರಬಿದ್ದಾಗ ಅಂಥ ಅನಾಹುತವೇನೂ ಆಗಿರಲಿಲ್ಲ. ಸಾಮಾನ್ಯ ಜನರಂತೆಯೇ ತಂತ್ರಜ್ಞಾನ ನೆರವಿನಿಂದ ಹುಟ್ಟಿದ ಮಗುವೂ ಇತ್ತು. ಅದರಲ್ಲಿ ಜೈವಿಕ ವ್ಯತ್ಯಾಸಗಳೇನೂ ಇರಲಿಲ್ಲ.


ಈಗ ಜಗತ್ತಿನಾದ್ಯಂತ ಬಾಹ್ಯ ನೆರವಿನ ಸಂತಾನೋತ್ಪತ್ತಿ ಪ್ರಕರಣಗಳಲ್ಲೆಲ್ಲ ಈ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಲಾಗುತ್ತಿದೆ. ಹಲವು ದೇಶಗಳು ಇದಕ್ಕೆ ಸಂಬಂಧಿಸಿದ ಸೂಕ್ತ ಕಾನೂನನ್ನು ಜಾರಿಗೆ ತಂದಿದೆ. ಬಾಹ್ಯ ನೆರವಿನ ಸಂತಾನೋತ್ಪತ್ತಿ ತಂತ್ರಜ್ಞಾನ ಎಲ್ಲೆಡೆ ಮಾನ್ಯತೆ ಪಡೆದಿದೆ.

ಭಾರತದಲ್ಲಿಯೂ ಇಂಥ ತಂತ್ರಜ್ಞಾನದ ನೆರವಿನಿಂದ ಸಂತಾನ ಹೀನರಿಗೆ ಸಂತಾನ ಕರುಣಿಸುವ ಕೇಂದ್ರಗಳೇ ಆರಂಭಗೊಂಡಿವೆ. ಬೇರೆಲ್ಲ ದೇಶಗಳ ಹಾಗೇ ಇದಕ್ಕೆ ಸೂಕ್ತವಾದ ಕಾನೂನನ್ನು ನಮ್ಮ ದೇಶ ಜಾರಿಗೆ ತರುವುದು ಈಗ ಅತ್ಯಗತ್ಯ.

■ ಎಸ್.ಜಿ

ರಮ್ಯ ಕತೆಗಳ ಸಾಮ್ರಾಜ್ಞಿ

ಬಾರ್ಬರಾ ಕಾರ್ಟ್‌ಲ್ಯಾಂಡ್



ಆಕೆ ಬ್ರಿಟಿಷ್ ಸಂಪ್ರದಾಯದ ಮನಸ್ಸನ್ನು ಪೋಷಿಸಿಕೊಂಡೇ ಬಂದವಳು. ...ಸ್ ದಾಖಲೆ ಎನಿಸುವಷ್ಟು ರಮ್ಯ ಪ್ರಣಯ ಕಾದಂಬರಿಗಳನ್ನು ಬರೆಯುತ್ತಾ ...ೀದಳು. ಅತ್ಯಾಧುನಿಕ ಮೌಲ್ಯಗಳೇ ಜನಪ್ರಿಯವಾಗಿರುವ ಇಂದಿನ ...ಂಗದಲ್ಲೂ ಆಕೆಯ ಕಾದಂಬರಿಗಳಿಗೆ ಅಪಾರ ಬೇಡಿಕೆ ಇತ್ತು. ಆಕೆಯ ...ನದಿಂದ ಆ ಪ್ರಕಾರದ ಕಾದಂಬರಿ ಬರೆಯುವ ಪರಂಪರೆಯೇ ...ವಾಗಬಹುದು.

ಬಾರ್ಬರಾ ಕಾರ್ಟ್‌ಲ್ಯಾಂಡ್ ಇತ್ತೀಚಿಗೆ ನಿಧನರಾದರು. ಆಕೆ ಬರೆದ ...ದಂಬರಿಗಳ ಸಂಖ್ಯೆಗಳು ನೂರಕ್ಕೂ ಹೆಚ್ಚು. ಕನಿಷ್ಠ ಹದಿನೈದು ದಿನಕ್ಕೆ ಒಂದು ...ದಂಬರಿ. ಜನಪ್ರಿಯತೆಯ ತುತ್ತ ತುದಿಯಲ್ಲಿ ಇದ್ದಾಗ ವರ್ಷಕ್ಕೆ ...ತ್ನಾಲ್ಕಕ್ಕೂ ಹೆಚ್ಚು ಕಾದಂಬರಿ ಸೃಷ್ಟಿಸಿದ್ದೂ ಉಂಟು.

ಎಲ್ಲ ಕತೆಗಳ ಕೇಂದ್ರ ಪಾತ್ರ ಮುಗ್ಧ ಹೆಣ್ಣು. ಆಕೆಯನ್ನು ಒಲಿಸಿಕೊಳ್ಳಲು ...ಗುವ ನಾಯಕ. ಹೆಣ್ಣಲ್ಲಿ ಇದ್ದಕ್ಕಿದ್ದ ಹಾಗೆ ಉಕ್ಕಿಬಿಡುವ ಪ್ರೀತಿ. ಸಾಕಷ್ಟು ...ದರಿಯಾದ ಅವಳನ್ನು ತನ್ನ ಚಾಣಾಕ್ಷತನದಿಂದ ವರಿಸುವ ನಾಯಕ. ...ಂದೆ ಅವರು ಸುಖವಾಗಿ ಇದ್ದರೆಂಬ ಕೊನೆಯ ಸಾಲಿನ ವ್ಯಾಖ್ಯಾನದೊಡನೇ ...ಕ್ತಾಯ.

ಇಂಥದೊಂದು ನಿರಂತರ ಪ್ರೇಮ ಕತೆಯನ್ನು ಮತ್ತೆ ಮತ್ತೆ ಹೇಳುತ್ತಲೇ ...ೀದ ಬಾರ್ಬರಾ ಅತ್ಯಂತ ಜನಪ್ರಿಯ ಸಾಹಿತಿ. ತನ್ನ ಜೀವಿತಾವಧಿಯಲ್ಲಿ ...ವೊಬ್ಬ ಲೇಖಕನೂ ಬರೆಯದಷ್ಟು ಪುಸ್ತಕ ಬರೆದಳು. ಗಿನ್ನೆಸ್ ದಾಖಲೆ ...ರಿದಳು. ಆಕೆಯ ಕಾದಂಬರಿಗಳು ಕೇವಲ ಇಂಗ್ಲಿಷ್ ಮಾತಾಡುವ ...ಶಗಳಲ್ಲಿ ಮಾತ್ರವಲ್ಲ, ರಷ್ಯಾ, ಫ್ರಾನ್ಸ್‌ನಲ್ಲೂ ಜನಪ್ರಿಯ. ಸರಳವಾಗಿ ...ಸಿಕೊಂಡು ಹೋಗುವ, ಬುದ್ಧಿಗೆ ಕಸರತ್ತಾಗದ, ಮನೋರಂಜಕವಾದ ಶೈಲಿ ...ಯದು. ಹಾಗಾಗಿಯೇ ಜೀವಿತ ಕಾಲದಲ್ಲಿಯೇ ಅತಿಹೆಚ್ಚಿನ ಪುಸ್ತಕ ...ರಾಟ, ಜನಪ್ರಿಯತೆಗಾಗಿ ಗಿನ್ನೆಸ್ ದಾಖಲೆ ...ಸ್ತಕದಲ್ಲಿ ಆಕೆಗೆ ಸ್ಥಾನ ದೊರೆಯಿತು.

ರಮ್ಯ ಪ್ರಣಯ ಸಾಹಿತ್ಯಕ್ಕೆ ಆಕೆ ಮಾಡಿದ ...ವೆಗೆಂದೇ ಪ್ಯಾರಿಷಿಯನ್ ಚಿನ್ನದ ಪದಕ ಬೇರೆ ...ದಿತ್ತು. ಮೂವತ್ತಾರು ಭಾಷೆಗಳಲ್ಲಿ ಆಕೆಯ 723 ...ದಂಬರಿಗಳು ಪ್ರಕಟಗೊಂಡಿದ್ದವು. ಈವರೆಗೆ ಆಕೆ ...ದ ಪುಸ್ತಕಗಳ ಶತಕೋಟಿ ಪ್ರತಿಗಳು ...ರ್ಾಗಿವೆ.

ತಮ್ಮ 98ನೇ ವಯಸ್ಸಿನಲ್ಲಿ ಇತ್ತೀಚೆಗೆ ಮೇ ...ರಂದು ಲಂಡನ್‌ನಲ್ಲಿ ಚಿರನಿದ್ರೆಗೆ ಸರಿದ ಈ ...ಕತೆಗಳ ರಾಣಿಗೆ ತಿಳಿ ಗುಲಾಬಿಯ ಷಿಫಾನ್ ...ಟ್ಟೆಗಳು, ಮುತ್ತಿನ ಹಾರ ಎಂದರೆ ಭಾರೀ ಮೆಚ್ಚು. ...ರಾ ಇತ್ತೀಚಿನವರೆಗೂ ಜರ್ಬಾಗಿ ಸಂದರ್ಶನ ...ಡುತ್ತಿದ್ದ ಆಕೆ, ಬಹಿರಂಗವಾಗಿ ಕಾಣಿಸುವಾಗ ...ರೆಯದೇ ಕೃತಕ ಕಣ್ರೆಪ್ಪೆ ಬಳಸುತ್ತಾ ...ದ್ದುದುಂಟು.

ಸೈನ್ಯದಲ್ಲಿ ಅಧಿಕಾರಿಯಾಗಿದ್ದ ಬರ್ಟ್ರಾಮ್ ...ರ್ಟ್ ಲ್ಯಾಂಡ್ ಈಕೆಯ ತಂದೆ, ತಾಯಿ ಮೇರಿ ಹ್ಯಾಮಿಲ್ಟನ್ ಸ್ಕಾಬೆಲ್. ಮೊದಲ ಮಹಾಯುದ್ಧದಲ್ಲಿ ತಂದೆಯನ್ನು ಕಳೆದುಕೊಂಡ ಬಾರ್ಬರಾ, ಸಹೋದರರಾದ ರೋನಾಲ್ಡ್ ಮತ್ತು ಆಂಥೋನಿ ಇಬ್ಬರನ್ನೂ ದ್ವಿತೀಯ ಮಹಾಯುದ್ಧದ ಡನ್ ಕ್ರೀಕ್ ಕದನದಲ್ಲಿ ಕಳೆದುಕೊಂಡಳು.



ಹತ್ತೊಂಭತ್ತರ ಹುಡುಗಿಯಾಗಿದ್ದ ಬಾರ್ಬರಾ 'ಡೈಲಿ ಎಕ್ಸ್‌ಪ್ರೆಸ್' ಪತ್ರಿಕೆಗಾಗಿ ಗಾಸಿಪ್ ಅಂಕಣದೊಡನೆ ಬರಹ ಆರಂಭಿಸಿದಳು. 1923ರಲ್ಲಿ ಆಕೆಗೆ 21 ತುಂಬಿದಾಗ ಮೊದಲ ಕಾದಂಬರಿ 'ಜಿಗ್‌ಸಾ' ಹೊರಬಂತು.

ಎರಡು ಬಾರಿ ಮದುವೆಯಾಗಿದ್ದ ಬಾರ್ಬರಾ, ಸೋದರಿ ಸಂಬಂಧಿ ಅಲೆಕ್ಸಾಂಡರ್‌ನನ್ನು ಮೊದಲು ವಿವಾಹವಾಗಿದ್ದಳು. ಇವರಿಗೆ ಜನಿಸಿದ ಮಗಳು ರೈನಾ ಮುಂದೊಂದು ದಿನ ರಾಜಕುಮಾರಿ ಡಯಾನಾಗೆ ಮಲತಾಯಿ ಆದಳು. ವಿವಾಹ ಮುರಿದು ಬಿದ್ದು, ಇನ್ನೊಬ್ಬ ಸಮೀಪ ಸಂಬಂಧಿ ಹುಗ್ ಮ್ಯಾಕ್ ಕಾರ್ಕ್‌ಡೇಲ್ ಎಂಬಾತನನ್ನು ಮದುವೆ ಆದಳು.

ತನ್ನ ದೀರ್ಘ ಆಯುಷ್ಯ ಮತ್ತು ಆರೋಗ್ಯಕ್ಕಾಗಿ ವಿಟಮಿನ್ ಮಾತ್ರೆಗಳನ್ನು ಸೇವಿಸುತ್ತಿದ್ದ ಬಾರ್ಬರಾ ತನ್ನ ಕೊನೆಗಾಲದವರೆಗೂ ಸಕ್ರಿಯವಾಗಿಯೇ ಇದ್ದವಳು.

ಮದುವೆಗೆ ಮುಂಚೆ ಲೈಂಗಿಕ ಸಂಬಂಧ ಇರಲೇಕೂಡದು. ಒಂದು ವೇಳೆ ಗಂಡಸಿಗಾದರೂ ಇದರಲ್ಲಿ ರಿಯಾಯಿತಿ ಇರಬಹುದು. ಆದರೆ ಹೆಣ್ಣು ಮಾತ್ರ ಮದುವೆಯವರೆಗೆ ಕನ್ಯೆ ಆಗಿಯೇ ಉಳಿದಿರಬೇಕೆಂದು ವಾದಿಸುತ್ತಿದ್ದ ಬಾರ್ಬರ್ ಸಹಜವಾಗಿಯೇ ತನ್ನ ರಮ್ಯ ಕತೆಯ ನಾಯಕಿಯರನ್ನೆಲ್ಲ ಇಂಥ ಎಲ್ಲ ಸಾಮಾನ್ಯ ಗಂಡಸೂ ಬಯಸುವ ಕನ್ಯೆ ಆಗಿಯೇ ಚಿತ್ರಿಸುತ್ತಾ ಇದ್ದಳು.

ಒಂದು ರೀತಿಯಲ್ಲಿ ಬ್ರಿಟಿಷ್ ಸಂಪ್ರದಾಯವಾದಿ ಮನೋಭಾವ ಬಿಂಬಿಸುವ, ಮನೆಯ ಹಿರಿಯಜ್ಜಿಯಂತೆ ಇದ್ದ ಬಾರ್ಬರಾ, ಇಂಗ್ಲಿಷ್ ಪುರುಷರು 'ಸಭ್ಯ'ರಾಗಿಯೇ ಇರಬೇಕೆಂದು ನಂಬಿದಳು.

ಸಮಾಜದಲ್ಲಿ ನೈತಿಕ ಮೌಲ್ಯಗಳೇ ಕುಸಿಯುತ್ತಿರುವ ಇಂದಿನ ದಿನಗಳಲ್ಲಿಯೂ, ಚರ್ಚು ಜನಸಾಮಾನ್ಯರ ನಡತೆ, ನೈತಿಕತೆಯನ್ನು ತಿದ್ದುವ ಸಾಧನ ಆಗಬೇಕೆಂದು ಪ್ರತಿಪಾದಿಸುತ್ತಲೇ ಬಂದಿದ್ದಾರೆ.

ಲವ್‌ಲೈಟ್ ಆಫ್ ಅಪಾಲೋ, ಎವರ್ಜಿನ್ ಇನ್ ಮೇಫೇರ್, ಕ್ಯುಪಿಡ್ ರೈಡ್ಸ್ ಪಿಲಿಯನ್, ಸ್ಟಾರ್ಸ್ ಇನ್ ಮೈ ಹಾರ್ಟ್ ಮುಂತಾದ ಬಹುತೇಕ ಕಾದಂಬರಿಗಳ ನಾಯಕಿ ಕನ್ಯೆ. ಮನಸ್ಸಿನ ಭಾವನೆ ಮಾತಾಗಿಸದೇ ಉಳಿಯುವವಳು. ಇಂಥ ನಾಯಕಿಗೆ ಗಂಡನೊಬ್ಬನಿಂದ ಚುಂಬನ ಪಡೆಯುವುದೇ ಒಂದು ದುಸ್ಸಾಹಸ, ದುಷ್ಟತನದ ಪರಮಾವಧಿ ಎಂಬ ನಂಬಿಕೆ.

ಹಲವು ಇಂಥ ಮೌಲ್ಯಗಳನ್ನು ನೆಚ್ಚಿಯೇ ಆಕೆ ಕಾದಂಬರಿಗಳನ್ನು ಹೊಸೆಯುತ್ತಾ ಹೋದುದರಿಂದ, ಕಾದಂಬರಿಗಳ ಕಾರ್ಖಾನೆ ಎನಿಸಿದ ಮಿಲ್ಸ್ ಅಂಡ್ ಬೂನ್ ಮಾಲಿಕೆಯ ಇದೇ ದಾಟಿಯ ಕಾದಂಬರಿಗಳನ್ನು ಮೀರಿ ಜನಪ್ರಿಯತೆ ಕೊನೆತನಕ ಉಳಿಸಿಕೊಂಡಿದ್ದಳು ಬಾರ್ಬರಾ. ■

ಓದುಗರ ವೇದಿಕೆ

ಹೆಣ್ಣುಮಕ್ಕಳು ನೈಟಿ ತೊಡುವುದು ಈಗ ಕೇವಲ ಫ್ಯಾಷನ್ ಆಗಿ ಉಳಿದಿಲ್ಲ. ಅದೊಂದು ಸರಳ, ನಿತ್ಯದ ಉಡುಗೆ. ಎಲ್ಲೆಡೆ ಈಗ ನೈಟಿ ಜನಪ್ರಿಯ. ನೈಟಿಯನ್ನು ಹೆಣ್ಣು ಮಕ್ಕಳು ತೊಡಬೇಕೆ? ಬೇಡವೇ? ಎಂಬುದು ಚರ್ಚೆಗೆ ಗ್ರಾಸವಾಗುತ್ತದೆ. ನಮ್ಮ ಓದುಗರಲ್ಲಿ ಒಬ್ಬರು 'ನೈಟಿ' ಕುರಿತು ತಮ್ಮದೇ ಶೈಲಿಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ನೈಟಿ' ಕುರಿತು ನಿಮ್ಮ ಅನಿಸಿಕೆಗಳೇನು? ಈ ಸಲ ಪ್ರಕಟವಾಗಿರುವ ಬರಹಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು? ಬರೆದು ತಿಳಿಸಿ.

ಅಭಿಪ್ರಾಯ ಕಳುಹಿಸಬೇಕಾದ ವಿಳಾಸ :
ಸಂಪಾದಕರು,
ಬಿಸಿಲ ಬದುಕು,
ಅಂಚೆ ಪೆಟ್ಟಿಗೆ ನಂ.7951,
ಬಸವೇಶ್ವರ ನಗರ,
ಬೆಂಗಳೂರು - 79.

ನೈಟಿಯಲ್ಲಿ ಸಿನಿಮಾ ಟಾಕೀಜಿಗೆ!



ಸ್ವಲ್ಪ ದಿನದ ಹಿಂದೆ ನಮ್ಮ ಮನೆಯ ಮುಂದೆ ಒಂದು ದೃಶ್ಯವನ್ನು ನೋಡಿ ಆಶ್ಚರ್ಯ ಪಟ್ಟಿರುವೆ. ಹಗಲು ಹೊತ್ತಿನಲ್ಲಿ ಸಿನಿಮಾಕ್ಕೆ ಹೋಗುತ್ತಿದ್ದ ಒಬ್ಬ ಹೆಣ್ಣು ಮಗಳು, ಚಿಕ್ಕಮಗುವನ್ನು ಬಗಲಲ್ಲಿ ಏರಿಸಿ, ಎದೆಯ ಮೇಲೆ ತಾಳಿ ಧರಿಸಿ ನೈಟಿಯಲ್ಲಿ ಕೈ ಬೀಸುತ್ತಾ ಸಿನಿಮಾಕ್ಕೆ ಹೋದದ್ದು ನನಗೆ ತುಂಬಾ ಆಶ್ಚರ್ಯವೆನಿಸಿದೆ.

ಈ ನೈಟಿ ಎಂಬ ಡ್ರೆಸ್ಸು ಎಲ್ಲೆಲ್ಲೂ ಹಬ್ಬಿದೆ. ಮೂರು ಮನೆಯ ಹಳ್ಳಿಯಲ್ಲೂ ಕೂಡಾ ಈ ಡ್ರೆಸ್ಸನ್ನ ತೊಡುವ ಹೆಂಗಸರಿರುವರು. ತಲೆಮಾರುಗಳಿಂದ ಮನೆಯ ಮರ್ಯಾದೆ ಕಾಪಾಡಿಕೊಂಡು ಓಡಾಡುತ್ತಲಿರುವವರು. ಮನೆಯಲ್ಲಿರುವ ಅತ್ತೆ ಮಾವಂದಿರಿಗೆ ಹೇಳೂಕೂ ಬಾರದು ನುಂಗೋಕೂ ಬಾರದಂತಹ ಪರಿಸ್ಥಿತಿ. ಏನೋ ಮದುವೆಯಾಗದ ಹುಡುಗಿಯರು ತೊಟ್ಟರೆ ಪರವಾಗಿಲ್ಲ. ಈ ಮದುವೆಯಾದ ಗೃಹಿಣಿಯರಿಗೇಕೆ ಈ ಹುಚ್ಚು? ಮನೆಯಲ್ಲಿ ಮೈದುನರು ಭಾವನವರು, ನಾಲ್ಕು ಜನ ಬಂದು ಹೋಗುವ ಮನೆತನದಲ್ಲಿ ಏನು ಚಂದ ಕಾಣಿಸುತ್ತೆ? ಅಂತಾ ತಿಳಿದಿರುವರೊ ಏಷ್ಟೆನೋ?

ಆಕೆ ತೊಟ್ಟಳು ಅಂತಾ ಈಕೆ. ಈಕೆ ತೊಟ್ಟಿದ್ದಾಳೆ, ಅವಳಿಗಿಂತ ನಾನೇನು ಕಡಿಮೆ ಅಂತ ಇನ್ನೊಬ್ಬಳು. ಇವರೆಲ್ಲಾ ಮುಂದುವರಿದ ನಾರಿಯರು. ಭಾರತದ ನಾರಿಯ ಚಿತ್ರಕ್ಕೂ ನೈಟಿ ಹಾಕುವ ದಿನ ಇನ್ನೇನು ದೂರವಿಲ್ಲ.


ಹಳ್ಳಿಯಲ್ಲಿ ಸಂಪ್ರದಾಯವಿದೆ, ಧರ್ಮವಿದೆ, ನೀತಿಯಿದೆ ಅನ್ನುವಂತಹ ಕಾಲ ಮುಗಿದು ಹೋಗಿದೆ. ಹಳ್ಳಿಯ ವಾತಾವಗಣದಲ್ಲಿ ಪೇಟೆಯಲ್ಲಿ ಹುಟ್ಟಿ ಬೆಳೆದ ಹೆಣ್ಣು ಮಕ್ಕಳು ಬಂದು ಹಳ್ಳಿಯ ವಾತಾವರಣ ಕೆಟ್ಟು ಹೋಗಿದೆ. ಹಿರಿಯರೆಂಬ ಭಯ ಭಕ್ತಿ ಇಲ್ಲ. ನಾವೇನು ಮಾಡುತ್ತೇವೆ ಎನ್ನುವ ಪರಿಜ್ಞಾನವಿಲ್ಲ. ಎಂಥವರನ್ನೂ ದಂಗುಬಡಿಸುವ ಹಾಗೆ ಎದೆ ನಿಗರಿಸಿಕೊಂಡು ಎಲ್ಲರೆದುರಿಗೆ ಇಪ್ಪತ್ತನಾಲ್ಕು ಗಂಟೆ ನೈಟಿಯಲ್ಲಿರುವ ಮನೆ ಸೊಸೆ ಹೇಗೆ ಹಿರಿಯಳಾಗಬಲ್ಲಳು?

ಮನೆಗೆ ಬಂದ ಸೊಸೆ ಮಹಾಲಕ್ಷ್ಮಿಯಂತಿರಬೇಕು. ಮನೆ ಬೆಳಗುವ ನಂದಾದೀಪದಂತಿರಬೇಕು ಅಂತ ಹಿರಿಯರು ಹೇಳುವ ಕಾಲ ಮುಗಿದು ಹೋಯಿತೇನೋ ಅನ್ನಿಸುತ್ತೆ. ಹಿರಿಯರು ಮಾಡಿದ ಸಂಪ್ರದಾಯದಲ್ಲಿ ಏನೋ ಒಂದು ಮಹತ್ವ ಅಡಗಿದೆ. ಅದನ್ನು ಅರಿತು ನಡೆದರೆ, ಎಲ್ಲರಿಗೂ ಒಳ್ಳೆಯದು. ಅಕ್ಷರಜ್ಞಾನವೇ ಇಲ್ಲದೆ ಹಳ್ಳಿಗರಲ್ಲಿ ಅರೆ ಬುದ್ಧಿಯಲ್ಲಿ ಅವರು ಮಾಡುವ ಫ್ಯಾಷನ್ ಅವರಿಗೇ ಚಂದ ಕಾಣಬೇಕು.

■ ಚನ್ನಮ್ಮ ಸರಗಣಾಚಾರಿಮಠ, ಪೋತ್ನಾಳ.

ಪರಿಸರ ಸಂರಕ್ಷಣೆ ಯಾರ ಹೊಣೆ?

ಬಸ್ಸು ಭರೋ ಎಂದು ಓಡುತ್ತಿತ್ತು. ಯಾರೋ ಪಾಪ ಇಬ್ಬರು ಲಕಿಲ ನಗುತ್ತ ಮೂವರು ಕುಳಿತುಕೊಳ್ಳಬಹುದಾದ ಸೀಟಿನಲ್ಲಿ ಇಬ್ಬರು ಕುಳಿತಿದ್ದರು. ನಾನು ಅಲ್ಲಿಯೇ ಹೋಗಿ ನಿಂತಿದ್ದೆ. ನನ್ನ ಪುಣ್ಯ, ನನ್ನ ಮುಖ ನೋಡಿ ಜರುಗಿ ಕುಳಿತುಕೊಳ್ಳಲು ಜಾಗ ಮಾಡಿಕೊಟ್ಟರು. ಬಸ್ಸಿನಲ್ಲಿ ಸೀಟು ಗಿಟ್ಟಿಸುವುದೆಂದರೆ ಲಾಟ್ರಿಯಲ್ಲಿ ಲಕ್ಷ ಬಂದಷ್ಟು ಸಂತೋಷವಾಗುತ್ತದೆ. ಸೀಟುಗಳಲ್ಲಿ ಕುಳಿತವರು ನಿಂತಿರುವವರೆಗೂ ಸಪ್ಪಗೆ ಹ್ಯಾಪು ಮೋರೆಗಳಲ್ಲಿದ್ದು ಸೀಟುಗಳ ಮೇಲೆ ಕುಳಿತೊಡನೆ ಅದು ತಾವು ಸ್ವಂತವಾಗಿ ಹಾಕಿಸಿಕೊಂಡಷ್ಟೇ ಜೋರಿನಿಂದ ಬೀಗುತ್ತಿರುತ್ತಾರೆ. ಪಕ್ಕದಲ್ಲಿ ನಿಂತವರಿಗೆ ಸ್ವಲ್ಪ ಜಾಗ ಕೊಡಬೇಕೆಂಬ ವಿವೇಚನೆ ಕೂಡ ಇರುವುದಿಲ್ಲ. ನಾನು ಕುಳಿತುಕೊಂಡೆ. ಬಸ್ಸು ಚಲಿಸತೊಡಗಿತು.



ಪಕ್ಕದಲ್ಲಿರುವವರು, ಗಂಡ, ಹೆಂಡತಿ ಎಂದು ಕಾಣುತ್ತದೆ. ತಿಂಡಿ ಪೊಟ್ಟಣಗಳನ್ನು ತೆಗೆದು ತಿನ್ನತೊಡಗಿದರು. ಸುಮಾರಾಗಿ ಅವರುಗಳು ತಂದ ತಿಂಡಿ ಪೊಟ್ಟಣಗಳು ಖಾಲಿಯಾಗತೊಡಗಿದವು ಎಂದು ಕಾಣುತ್ತದೆ. ತಿಂಡಿ ತಿಂದ ಪೊಟ್ಟಣಗಳು ತಿಂಡಿಯ ತುಣುಕುಗಳು ಚಿಕ್ಕ ರಾಶಿಯಾಗಿ ಬಸ್ಸಿನಲ್ಲೆ ಹಾಕಿದ್ದರು. ನನಗ್ಯಾಕೋ ಬೇಸರವಾಗಿ 'ಏನ್‌ಸಾರ್ ಮನೇಗೇ ಹೋಗಿ ತಿನ್ನಬಾರ್ದೆ? ಬಸ್ಸು ನಿಮ್ಮೊಬ್ಬರದೆ ಅಲ್ಲಾ ಅಲ್ವ? ಎಲ್ಲಾ ಪ್ರಜೆಗಳದ್ದು ಹೀಗೆ ಗಲೀಜು ಮಾಡಿದ್ರೆ ಹೇಗೆ?' ಎಂದು ಸಿಡಿಮಿಡಿಗೊಂಡೆ. ಅದಕ್ಕೆ ಅವರಿಂದ ಬಂದ ಉತ್ತರವೇನು ಗೊತ್ತೆ!! 'ಅಯ್ಯೋ ನಿಮಗ್ಯಾಕೆ ಅದೆಲ್ಲ! ಇದು ಬರೀ ನಾವೊಬ್ರೇ ಅಲ್ಲ ಮಾಡ್ತಿರೋದು ಅಲ್ನೋಡಿ' ನೋ, ಸ್ಮೋಕಿಂಗ್ ಬೋರ್ಡ್ ಹಾಕಿದಾರೆ ತಾನೆ? ಆತ ಯಾಕೋ ಡ್ರೈವರ್ ಎದುರು ಸೀಟಿನಲ್ಲೇ ಕುಳಿತು ಹೇಗೆ ಸಿಗರೇಟಿನ ಹೊಗೆ ಸುರುಳಿ, ಸುರುಳಿಯಾಗಿ ಡ್ರೈವರ್ ಮುಖಕ್ಕೆ ಬಿಡ್ತಿದಾನೆ. ಅಂತ ಆತನ್ನ ಯಾರು ಅನ್ತಿದ್ದಾರೆ. ಅಲ್ಲ ಕಂಡಕ್ಟರೇ ಸುಮ್ನಿದಾರೆ. ನಿಮ್ದೊಂದು ಮಧ್ಯಸ್ಥಿಕೆ' ಅವರ ಮಾತು ನಿಜವೆನಿಸಿತು.

ದಿನಾ ಒಂದಲ್ಲ ಒಂದು ರೀತಿಯಲ್ಲಿ ಇಂತಹ ಅನಾಗರಿಕ ಪ್ರಸಂಗಗಳು ನಡೆಯುತ್ತಲೇ ಇರುತ್ತವೆ. ಆದರೆ ಒಬ್ಬರಿಗೆ ಹೇಳಬಹುದು. ಇಬ್ಬರಿಗೆ ಹೇಳಬಹುದು. ಆದರೆ ಇಂತಹ ವಿಷಯಗಳು ಒಬ್ಬರು ಇಬ್ಬರು ತಲೆಕೆಡಿಸಿಕೊಳ್ಳುವಂತಹುದಲ್ಲ. ಇಡೀ ಜನ ಸಮೂಹವೇ ಇದರ ಬಗ್ಗೆ ಯೋಚಿಸಬೇಕಿದೆ ಮತ್ತು ಇಂತಹ ಯೋಚನೆಗಳು ಪ್ರತಿಯೊಬ್ಬರ ಮನಸ್ಸಿನಾಳದಿಂದ ಚಿಮ್ಮುವಂತಹವುದಾಗಬೇಕು.

ಇನ್ನೊಂದು ಉದಾಹರಣೆ. ಮೊನ್ನೆ ಬೆಂಗಳೂರಿಗೆ ನನ್ನ ತಮ್ಮನನ್ನು ನೋಡಲು ಹೊರಟೆ. ಅವನ ಮನೆ ಮೊದಲ ಅಂತಸ್ತಿನಲ್ಲಿದೆ. ಅವರ ಮನೆಯ ಎದುರು ಇನ್ನೊಂದು ಮನೆ. ಎದುರುಗಡೆ ಮನೆಯವರು ಸದಾ ಬಾಗಿಲು ಹಾಕಿಕೊಂಡೇ ಇರುತ್ತಿದ್ದರು. ಸಾಮಾನ್ಯ ಸಿಟಿಗಳ ಕಡೆ ಬಾಗಿಲು ಹಾಕಿಕೊಂಡು 'ಗುಂ' ಎಂದು ಇರುವುದು ಒಂದು ಫ್ಯಾಷನ್ನೇ. ಮುಖ ನೋಡಿ ನಕ್ಕರೂ ನಗು ಹಲ್ಲು ಕಾಣಿಸುವಷ್ಟು ಮಾತ್ರ ಮುಖ ಮಾತ್ರ ಏನೋ ಒಂಥರಾ 'ಗುಂ'. ನಾನೋ ಕಲ್ಲನ್ನು ಮಾತನಾಡಿಸುವ ಬಗೆ. ಸರಿ ಮುಚ್ಚಿದ ಬಾಗಿಲನ್ನು ತೆರೆದು ಎದುರು ಮನೆಯ ಕಡೆ ನೋಡಿದೆ. ಆದರೆ ಆ ಮನೆಯವರು ಕವರಿನಲ್ಲಿ ಏನೋ ಮಾಡಿ (ಕಸ ಇರ್ಬೇಕು) ಕಟ್ಟಿಕೊಂಡು ಮಹಡಿಯ ಮೆಟ್ಟಿಲುಗಳನ್ನು ಹತ್ತತೊಡಗಿದರು ನಾನೂ ಪರಿಚಯ ಮಾಡಿಕೊಳ್ಳೋಣವೆಂದು ಅವರ ಹಿಂದೆಯೇ ಹೊರಟೆ. ಮೇಲೆ ಹೋದವರೇ ಅವರು ಧೊಪ್ ಎಂದು ಪ್ಲಾಸ್ಟಿಕ್ ಕವರಿನ ಮೂಟೆಯನ್ನು ಮೇಲಿನಿಂದ ಕೆಳಗೆಸೆದಿದ್ದರು. ನಾನು ಅವರ ಹಿಂದೆಯೇ ಬಗ್ಗಿ ನೋಡಿದೆ. ಮೇಲಿನಿಂದ ಎಸೆದಿದ್ದ ಆ ಪ್ಲಾಸ್ಟಿಕ್ ಮೂಟೆ ಬಿಚ್ಚಿಕೊಂಡು ಕೆಳಗಡೆ ಇದ್ದ ಖಾಲಿ ಸೈಟಿನಲ್ಲೇ ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು.

'ಅಯ್ಯೋ ಇದೇನು ಇವ್ರೆ ಮೇಲಿಂದ ಕಸ ಈ ತರ ಹಾಕ್ತಾ ಇದ್ರೆ ಅದು ಕೆಳ್ಗೆ ಖಾಲಿ ಸೈಟಿನಲ್ಲಿ ಬಿದ್ದು ಪರಿಸರ ಗಬ್ಬೆದ್ದು ಕೆಳಗಿರುವವರಿಗೆ ಏನಾದ್ರು ಖಾಯಿಲೆ ಗೀಯಿಲೆ ಬಂದ್ರೆ ಏನ್ಮಾಡೋದು!? ಅದೂ ಅಲ್ದೆ ಸರ್ಕಾರದೋರು ಬೀದಿಗೊಂದು ಕಸದ ತೊಟ್ಟಿ ಇಟ್ಟಿದ್ದಾರೆ, ಕಸ ಹಾಕೋಕೆ, ನಮ್ಮುಡುಗ ಬೇರೆ ಹೇಳ್ತಿದ್ದ ಕಸ ತೊಗೊಂಡೋಗೋಕೆ ಯಾರೋ ಬರ್ತಾರಂತೆ. ಅವ್ರಿಗೆ ಇಷ್ಟೂಂತ ಕೊಟ್ಬಿಟ್ರೆ ತಿಂಗ್ಳಿಗೆ, ಕಸ ತೊಗೊಂಡ್ಹೋಗಿ ಬಿಸಾಕ್ತಾರೆ. ಈಗೇನು ಎಲ್ಲದಕ್ಕೂ ಜನ ಇದಾರೆ. ಇಲ್ಲಾ ನಾವೇ ವಾಕಿಂಗ್ ತರ ದಿನಾ ಹೋದ್ರೆ ಸ್ವಾಮಿ ಕಾರ್ಯ ಸ್ವ ಕಾರ್ಯ ಎರಡೂ ಆಗುತ್ತೆ'. ಎಂದಿದ್ದಕ್ಕೆ ಅವರು ಹೇಳಿದ್ದೇನು ಗೊತ್ತೆ? 'ಅಯ್ಯೋ ಬಿಡಿ ಸುಮ್ನೆ ಅವನ್ಯಾವೋನೋಗೋ ದಂಡ ಕೊಡ್ಬೇಕು. ಅದೂ ಅಲ್ದೆ ದಿನಾ ನಮ್ಗೂ ಓಡಾಡ್ಬೇಕು ಅಂದ್ರೆ ಆಗುತ್ಯೆ. ಯಾವಾಗ್ಲೂ ಏನಾದ್ರೊಂದು ಬಿಜಿ ಇದ್ದೇ ಇರುತ್ತೆ. ಇಷ್ಟಕ್ಕೂ ಇದ್ರಿಂದ ನಿಮ್ಗೇನೋ ತೊಂದ್ರೆ ಏನೋ ನಾ ಕಾಣೆ? ಅವ್ರು ಖಾರವಾಗಿ ನನ್ನನ್ನೇ ನುಂಗುವ ಹಾಗೆ ನೋಡುತ್ತ ಹೋದಾಗ ನನ್ನನ್ನೇ ನಾನು ಪ್ರಶ್ನಿಸಿಕೊಂಡೆ. 'ಹೌದು ನಂಗ್ಯಾಕೆ ಇಲ್ಲದ ಉಸಾಬರಿ!? ಈ ಪ್ರಶ್ನೆ ನನ್ನನ್ನೇ ನಾನು ಕೇಳಿಕೊಂಡಂತೆ ಎಲ್ಲರೂ ತಮ್ಮನ್ನು ತಾವು ಕೇಳಿಕೊಂಡು ಸುಮ್ಮನಾಗಿ ಬಿಡುತ್ತಾರೆ. ಆದರೆ ನಿಮಗೆ ಗೊತ್ತೇ, ಹೊರ ದೇಶಗಳಲ್ಲಿ ಪರಿಸರವನ್ನು ಕೆಡಿಸುವುದು ಕಳ್ಳತನಕ್ಕಿಂತ ಕೆಟ್ಟದ್ದು. ಆದ್ದರಿಂದ ಪರಿಸರವನ್ನು ಕೆಡಿಸುವವರಿಗೆ ದಂಡ ಹಾಕುತ್ತಾರೆ. ಅಂತಹ ಒಂದು ಕಾನೂನು ನಮ್ಮಲ್ಲಿಯೂ ಬಂದರೆ? ಎಷ್ಟು ಚೆನ್ನ ಅಲ್ಲವೆ?

■ ಸಿ.ಎಸ್. ಭಾರತಿ


ಎರಡು ಕವನಗಳು

ದಾರಿ



ಬರುವ ನಿನ್ನ ದಾರಿಯ
ಹರವು ಎಂಥದಯ್ಯಾ?
ಕೊನೆ ಮೊದಲಿಲ್ಲದ
ಕಗ್ಗತ್ತಲೊಳು..
ಜೋತು ಬಿದ್ದ ಪುಟ್ಟ ಗೂಡು
ಗೂಡಿನೊಳು ಒಂಟಿ ಹಕ್ಕಿ
ಎದ್ದ ಮಾರುತ ಚಂಡ
ಹೊಯ್ದಾಡುತಿಹ ಗೂಡು
ಮಳೆಯಿಲ್ಲದಿದ್ದರೂ...
ಸುತ್ತಲೂ..
ಆರ್ಭಟದ ಮೋಡಗಳು
ಪುಚ್ಚ ಬಲಿತಿದ್ದರೂ
ದಿಕ್ಕಿ ದಿಶೆಗಳೆದುರಿದ್ದರೂ
ನಿನ್ನ ನಿರೀಕ್ಷೆಯೊಳು
ರೆಕ್ಕೆ ಮುರಿದ...
ಹಕ್ಕಿಯಂತೆ ಕುಳಿತಲ್ಲೇ
ದಾರಿಯ ಹರವುಗಳಿಗೆ
ಗಳಿಗೆ, ಗಳಿಗೆಗಳ...
ಗುಣಕಿ ಹಾಕುತಿರುವೆ.

ಹಣ



ಹಣವೆಂದರೆ..
ಹೆಣವೂ ಬಾಯಿತಗೀತ್ತೈತಿ
ಅನ್ನೂದು ನಿಜ
ಆದರೆ...
ಹೆಣದ ಹಣವ ನುಂಗಿ
ನೆಗೆದಾಡುವ
ಜೀವಂತ ಹೆಣಗಳು
ಹೆಣವಾಗುವಾಗ
ಹೆಣದ ಹಣ.. .
ಕಕ್ಕುವವರೆಗೂ
ಮುಕ್ಕಲಾರರು ಮಣ್ಣನ್ನು

■ ಲೀಲಾ ಕಲಕೋಟಿ

ಪ್ರಿಯ ಓದುಗರೇ,

.... ಒಂದು ನಿಮಿಷ! ...... ಈ ಪ್ರಕಟಣೆ ಓದಿ!

ಸರ್ಕಾರಿ ನೌಕರರು ಏಕೆ ಲಂಚ ಸ್ವೀಕರಿಸುತ್ತಾರೆ?

ಸರ್ಕಾರಿ ಕಚೇರಿಗಳೆಂದರೆ ಲಂಚದ ಆಗರಗಳೆಂಬುದು ಸಾರ್ವತ್ರಿಕ ಅನ್ನಿಸಿಕೆ. ಇದರ ಕಹಿ ಅನುಭವಿಸದವರು ವಿರಳ. ಅನೈತಿಕ ಮೂಲದಿಂದ ಹಣ ಗಳಿಸುವ ಈ ನೌಕರರು ಕೂಡಾ ಇದೇ ಸಮಾಜದ ಸದಸ್ಯರು. ಹಾಗಿರುವಾಗ ಇಂತಹ ಲಂಚಕೋರ ಸದಸ್ಯರನ್ನು ಸಮಾಜ (ಅಂದರೆ ನಾವು-ನೀವು) ಹೇಗೆ ಕಾಣುತ್ತದೆ? ಭ್ರಷ್ಟ ಸರ್ಕಾರಿ ನೌಕರರ ಬಗ್ಗೆ ನಿಮ್ಮ ಸ್ಪಷ್ಟ ಅನಿಸಿಕೆ ಏನು? ಅವರು ಲಂಚ ಸ್ವೀಕರಿಸಲು ಬಲವಾದ ಕಾರಣವಾದರೂ ಏನು? ಗಂಡ ಭ್ರಷ್ಟನಾಗಲು ಹೆಂಡತಿಯ ಪಾತ್ರ ಇರುತ್ತದೆಯೇ? ಅನ್ಯ ಮಾರ್ಗಗಳಿಂದ ಹಣ ಗಳಿಸಿ ಮೆರೆಯುವವರಿಗೆ ಹೇಗೆ ಪಾಠ ಕಲಿಸಬೇಕು?

ಈ ಬಗ್ಗೆ ನೀವು ಸ್ವಲ್ಪ ಚಿಂತಿಸಿ. ನಿಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ಬರೆದು ಕಳಿಸಿ. 'ಬದುಕು' ಬಳಗ ಹೊರ ತರಲಿರುವ ಹೊಸ ವಾರಪತ್ರಿಕೆಯಲ್ಲಿ ನಿಮ್ಮ ಬರಹಗಳು ಪ್ರಕಟವಾಗುತ್ತವೆ. ನಿಮ್ಮದೊಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಕಳಿಸಲು ಮರೆಯಬೇಡಿ.

ನಮ್ಮ ವಿಳಾಸ:
ಸಂಪಾದಕರು, ಅಂಕುರ ಪ್ರಕಾಶನ, 552, 15ನೇ ಮೇನ್,
3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್, ಬಸವೇಶ್ವರನಗರ,
ಬೆಂಗಳೂರು - 560 079 ✆ 322781O


ಎರಡು ಕವನಗಳು

ದಾರಿ



ಬರುವ ನಿನ್ನ ದಾರಿಯ
ಹರವು ಎಂಥದಯ್ಯಾ?
ಕೊನೆ ಮೊದಲಿಲ್ಲದ
ಕಗ್ಗತ್ತಲೊಳು..
ಜೋತು ಬಿದ್ದ ಪುಟ್ಟ ಗೂಡು
ಗೂಡಿನೊಳು ಒಂಟಿ ಹಕ್ಕಿ
ಎದ್ದ ಮಾರುತ ಚಂಡ
ಹೊಯ್ದಾಡುತಿಹ ಗೂಡು
ಮಳೆಯಿಲ್ಲದಿದ್ದರೂ...
ಸುತ್ತಲೂ..
ಆರ್ಭಟದ ಮೋಡಗಳು
ಪುಚ್ಚ ಬಲಿತಿದ್ದರೂ
ದಿಕ್ಕಿ ದಿಶೆಗಳೆದುರಿದ್ದರೂ
ನಿನ್ನ ನಿರೀಕ್ಷೆಯೊಳು
ರೆಕ್ಕೆ ಮುರಿದ...
ಹಕ್ಕಿಯಂತೆ ಕುಳಿತಲ್ಲೇ
ದಾರಿಯ ಹರವುಗಳಿಗೆ
ಗಳಿಗೆ, ಗಳಿಗೆಗಳ...
ಗುಣಕಿ ಹಾಕುತಿರುವೆ.

ಹಣ



ಹಣವೆಂದರೆ..
ಹೆಣವೂ ಬಾಯಿತಗೀತೈತಿ
ಅನ್ನೂದು ನಿಜ
ಆದರೆ...
ಹೆಣದ ಪಣವ ನುಂಗಿ
ನೆಗೆದಾಡುವ
ಜೀವಂತ ಹೆಣಗಳು
ಹೆಣವಾಗುವಾಗ
ಹೆಣದ ಹಣ..
ಕಕ್ಕುವವರೆಗೂ
ಮುಕ್ಕಲಾರರು ಮಣ್ಣನ್ನು

■ ಲೀಲಾ ಕಲಕೋಟಿ

ಪ್ರಿಯ ಓದುಗರೇ,

.... ಒಂದು ನಿಮಿಷ! ...... ಈ ಪ್ರಕಟಣೆ ಓದಿ!

ಸರ್ಕಾರಿ ನೌಕರರು ಏಕೆ ಲಂಚ ಸ್ವೀಕರಿಸುತ್ತಾರೆ?

ಸರ್ಕಾರಿ ಕಚೇರಿಗಳೆಂದರೆ ಲಂಚದ ಆಗರಗಳೆಂಬುದು ಸಾರ್ವತ್ರಿಕ ಅನ್ನಿಸಿಕೆ. ಇದರ ಕಹಿ ಅನುಭವಿಸದವರು ವಿರಳ. ಅನೈತಿಕ ಮೂಲದಿಂದ ಹಣ ಗಳಿಸುವ ಈ ನೌಕರರು ಕೂಡಾ ಇದೇ ಸಮಾಜದ ಸದಸ್ಯರು. ಹಾಗಿರುವಾಗ ಇಂತಹ ಲಂಚಕೋರ ಸದಸ್ಯರನ್ನು ಸಮಾಜ (ಅಂದರೆ ನಾವು-ನೀವು) ಹೇಗೆ ಕಾಣುತ್ತದೆ? ಭ್ರಷ್ಟ ಸರ್ಕಾರಿ ನೌಕರರ ಬಗ್ಗೆ ನಿಮ್ಮ ಸ್ಪಷ್ಟ ಅನಿಸಿಕೆ ಏನು? ಅವರು ಲಂಚ ಸ್ವೀಕರಿಸಲು ಬಲವಾದ ಕಾರಣವಾದರೂ ಏನು? ಗಂಡ ಭ್ರಷ್ಟನಾಗಲು ಹೆಂಡತಿಯ ಪಾತ್ರ ಇರುತ್ತದೆಯೇ? ಅನ್ಯ ಮಾರ್ಗಗಳಿಂದ ಹಣ ಗಳಿಸಿ ಮೆರೆಯುವವರಿಗೆ ಹೇಗೆ ಪಾಠ ಕಲಿಸಬೇಕು?

ಈ ಬಗ್ಗೆ ನೀವು ಸ್ವಲ್ಪ ಚಿಂತಿಸಿ. ನಿಮ್ಮ ಅನಿಸಿಕೆಗಳನ್ನು ಸಂಕ್ಷಿಪ್ತವಾಗಿ ಬರೆದು ಕಳಿಸಿ. 'ಬದುಕು' ಬಳಗ ಹೊರ ತರಲಿರುವ ಹೊಸ ವಾರಪತ್ರಿಕೆಯಲ್ಲಿ ನಿಮ್ಮ ಬರಹಗಳು ಪ್ರಕಟವಾಗುತ್ತವೆ. ನಿಮ್ಮದೊಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಕಳಿಸಲು ಮರೆಯಬೇಡಿ.

ನಮ್ಮ ವಿಳಾಸ:

ಸಂಪಾದಕರು, ಅಂಕುರ ಪ್ರಕಾಶನ, 552, 15ನೇ ಮೇನ್,
3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್, ಬಸವೇಶ್ವರನಗರ,
ಬೆಂಗಳೂರು - 560 079 ✆ 3227810

ಹೊಸ ಪುಸ್ತಕ




ಬಿಡಿ ಬರಹಗಳು

(ಮೂವತ್ತೊಂದು ಲೇಖನಗಳ ಸಂಗ್ರಹ)
ಸಂ: ಟಿ.ಮಹಾಬಲೇಶ್ವರ ಭಟ್ಟ
ಪ್ರ: ಹೇಮಂತ ಸಾಹಿತ್ಯ
ನಂ. 972, 'ಸಿ' 4ನೇ 'ಇ' ಬ್ಲಾಕ್,
ರಾಜಾಜಿನಗರ, ಬೆಂಗಳೂರು- 10.
ಪುಟ : 122, ಬೆಲೆ: ರೂ.75

ನಾನು ಹಕ್ಕಿ ಧರ್ಮ


(ಕವನ ಸಂಕಲನ)
ಲೇ : ಅರ್ಜುನ ಕೋರಟಕರ
ಪ್ರ : ಅರ್ಜುನ ತಾ. ಕೋರಟಕರ
ಜಮಖಂಡಿ- 587 301
ಪುಟ: 74, ಬೆಲೆ: ರೂ.40






ಆಸ್ಟ್ರೇಲಿಯಾದಲ್ಲಿ ಎಪ್ಪತ್ತು ದಿನಗಳು


(ಪ್ರವಾಸ ಕಥನ)
ಲೇ: ಟಿ.ಮಹಾಬಲೇಶ್ವರ ಭಟ್ಟ
ಪ್ರ: ಹೇಮಂತ ಸಾಹಿತ್ಯ
ನಂ. 972, 4ನೇ 'ಇ' ಬ್ಲಾಕ್,
ರಾಜಾಜಿನಗರ, ಬೆಂಗಳೂರು- 10.
ಪುಟ: 136, ಬೆಲೆ : ರೂ. 100



ರಿಟಿಷ್ ಪ್ರಧಾನಿ ಟೋನಿ ಬ್ಲೇರ್ ತಮ್ಮ ಪತ್ನಿಯ ವಾಣಂತನಕ್ಕೆ ನೆರವಾಗಲೆಂದೇ ರಜೆ ಪಡೆದಿದ್ದಾರೆ. ಮಗು ಎತ್ತಿಕೊಳ್ಳುವ ಕೆಲಸ ಕೂಡ ಈಗ ಅವರದೇ.

ವಿಚಿತ್ರ ಜಗತ್ತು






ಸಿಡ್ನಿ ಡ್ರೀಂ ವಿಶೇಷ ಕಾರ್ಯಕ್ರಮಕ್ಕಾಗಿ ಆಸ್ಟ್ರೇಲಿಯಾದ ಸಾಫ್ಟ್‌ಬಾಲ್ ತಂಡದ ಆಟಗಾರ್ತಿಯರೆಲ್ಲ ಬೆತ್ತಲಾಗಿ ನಿಂತು ಕ್ಯಾಮರಾಕ್ಕೆ ಪೋಸ್ ನೀಡಿದರು.

ಶಿಕ್ಷೆ – ಶಿಕ್ಷಣ ?: ಮೂವತ್ತರ ಶಾಲಾ ಶಿಕ್ಷಕಿ ತನ್ನ ಹದಿನೆಂಟು ವರ್ಷದ ವಿದ್ಯಾರ್ಥಿಯನ್ನೇ ಪ್ರೇಮಿಸಿ ಈಗ ಶಿಕ್ಷೆಗೆ ಗುರಿಯಾಗಿದ್ದಾಳೆ. ಹುಡುಗ ಹದಿನೇಳು ವರ್ಷದವನಿದ್ದಾಗ ಇಬ್ಬರ ಪ್ರಣಯ ಆರಂಭವಾಯಿತು. ಇಬ್ಬರೂ ಈಗ ಒಟ್ಟಿಗೇ ಬದುಕುತ್ತಿದ್ದಾರೆ. ಬ್ರಿಟಿಷ್ ಕೊಲಂಬಿಯಾದ ಹೀತರ್ ಇಂಗ್ರಾಮ್‌ಗೆ ನ್ಯಾಯಾಲಯ ಹತ್ತು ತಿಂಗಳ ಗೃಹ ಬಂಧನದ ಶಿಕ್ಷೆ ವಿಧಿಸಿದೆ.

ಹುಡುಗನ ತಾಯಿ ಶಿಕ್ಷಕಿಯದೇನೂ ತಪ್ಪಿಲ್ಲ, ಹುಡುಗನೇ ಮೇಲೆ ಬಿದ್ದು ಈ ಪ್ರಣಯಕ್ಕೆ ನಾಂದಿ ಹಾಡಿದ ಎಂದು ಹೇಳಿದ್ದರಿಂದ ಶಿಕ್ಷೆ ಕಡಿಮೆಯಾಗಿದೆ. ಇಲ್ಲವಾದಲ್ಲಿ ಅಪ್ರಾಪ್ತ ಬಾಲಕನ ಲೈಂಗಿಕ ಶೋಷಣೆ ಆರೋಪದ ಮೇಲೆ ಆಕೆಗೆ ಐದು ವರ್ಷ ಜೈಲು ಶಿಕ್ಷೆ ವಿಧಿಸಬಹುದಿತ್ತು.

ನಾಯಿ ಪಾಡು : ಚಿಕಾಗೋದ ಹತ್ತೊಂಬತ್ತರ ಹುಡುಗನಿಗೆ ನ್ಯಾಯಾಲಯ ಐದು ವರ್ಷದ ಸೆರೆವಾಸ ವಿಧಿಸಿದೆ. ಮನೆಯ ನಾಯಿಯನ್ನು ಬೆಂಕಿ ಹಚ್ಚಿ ಕೊಲ್ಲಲೆತ್ನಿಸಿದ್ದೇ ಇದಕ್ಕೆ ಕಾರಣ. ಜೆಮೈನ್ ಬ್ಯಾಂಕ್ಸ್ ಎಂಬ ಈತ ಕಳೆದ ಆಗಸ್ಟ್‌ನಲ್ಲಿ ಇನ್ನೊಂದು ಬೀದಿನಾಯಿ ಜೊತೆ ತನ್ನ ನಾಯಿಯನ್ನು ಜಗಳಕ್ಕೆ ಬಿಟ್ಟಿದ್ದ. ಇವನ ನಾಯಿ ಸೋತಿತು. ಅದರಿಂದ ಸಿಟ್ಟಿಗೆದ್ದ ಬ್ಯಾಂಕ್ಸ್ ನಾಯಿಗೆ ಬೆಂಕಿ ಹಚ್ಚಿದ.



ಫಿಜಿಯ ರಾಜಧಾನಿ ಸೂವಾದಲ್ಲಿನ ಪಾರ್ಲಿಮೆಂಟ್ ಕಟ್ಟಡದಲ್ಲಿ ಏನು ನಡೆಯುತ್ತಿದೆ? ಎಂಬ ಕುತೂಹಲಕ್ಕಾಗಿ ಅಲ್ಲಿನ ನಾಗರಿಕನೊಬ್ಬ ಬೀದಿ ದೀಪದ ಕಂಬ ಏರಿ ನೇತಾಡುತ್ತಿದ್ದಾನೆ. ಈಚೆಗೆ ನಡೆದ ದಂಗೆಯಲ್ಲಿ ಅಲ್ಲಿನ ಪ್ರಧಾನಿ ಭಾರತೀಯ ಸಂಜಾತ ಮಹೇಂದ್ರ ಚೌಧುರಿಯನ್ನು ಅದೇ ಕಟ್ಟಡದಲ್ಲಿ ಬಂಧಿಸಿ ಇಡಲಾಗಿತ್ತು.

ಪೂಜಾರಿಗಳಿಗೆ ಬೇಡಿಕೆ : ಮಲೇಶಿಯಾದ ಹಿಂದೂ ದೇವಾಲಯಗಳಲ್ಲಿ ಪೂಜಾರಿಗಳಿಗೆ ಭಾರೀ ಕೊರತೆ. ಆದರೆ ಇರುವ ಹಿಂದೂಗಳಿಗೆ ಆ ವೃತ್ತಿಯಲ್ಲಿ ಆಸಕ್ತಿ ಇಲ್ಲ. ತಿಂಗಳಿಗೆ 300 ರಿಂದ 400 ರಿಂಗಿಟ್ ವೇತನದ ಈ ಹುದ್ದೆಗಿಂತ ಬೇರೆ ಹುದ್ದೆಗಳೇ ಹೆಚ್ಚು ಲಾಭದಾಯಕ.

ಪ್ರೇಮಪಾಠ: ಏನೆಲ್ಲ ಮಾಹಿತಿ ಒದಗಿಸುವ ಇಂಟರ್‌ನೆಟ್ ಪ್ರೇಮಪಾಠ ಯಾಕೆ ಹೇಳಬಾರದು? ಅದೂ ಈಗ ಸಿದ್ಧ. ರೋಂನ ಈ ವೆಬ್‌ಸೈಟ್‌ನಲ್ಲಿ 192ಡಾಲರ್‌ಗೆ ಎರಡು ದಿನ ಪ್ರೀತಿಯ ಪಾಠ ಹೇಳಿ ಕೊಡಲಾಗುತ್ತಿದೆ. ಸಂಗಾತಿಯನ್ನು ಒಲಿಸಿಕೊಳ್ಳುವ ಹಾಸಿಗೆಗೆ ಸೆಳೆದುಕೊಳ್ಳುವ ಉಪಾಯಗಳು ಇಲ್ಲಿವೆ.

ಈ ಪಾಠ ಹೇಳಿಸಿಕೊಳ್ಳಲು ಮುಂದಾಗಿರುವವರಲ್ಲಿ 19 ರಿಂದ ಹಿಡಿದು ಅರವತ್ತು ದಾಟಿದವರೂ ಇದ್ದಾರೆ. ಹೆಚ್ಚಿನವರೆಲ್ಲ ಮೂವತ್ತು ವರ್ಷದವರು. ಈ ಪಾಠದ ಕೊನೆಯಲ್ಲಿ ಮಾತ್ರ ಒಂದು ಎಚ್ಚರದ ನುಡಿ ಇದೆ. ಸಂಗಾತಿ ಒಲಿಯಬೇಕಾದಲ್ಲಿ ಪರಿಸರ ಮತ್ತು ವ್ಯಕ್ತಿ ಇಬ್ಬರೂ ಸಹಕರಿಸಬೇಕು ಎಂಬುದೇ ಈ ವಿವೇಕದ ಮಾತು. ಇವೆರಡೂ ತಾನಾಗಿ ರೂಡಿ ಬಂದರೆ ಪ್ರೀತಿಯ ಪಾಠ ಹೇಳಿಸಿಕೊಳ್ಳುವ ಅಗತ್ಯವಾದರೂ ಎಲ್ಲಿರುತ್ತದೆ ಅಲ್ಲವೇ?



ಆಸ್ಟ್ರೇಲಿಯಾದ ಖ್ಯಾತ ಓಟಗಾರ್ತಿ ಟಾನಿಯಾ ವ್ಯಾನ್ ಹೀಸ್ 'ಸಿಡ್ನಿ ಡ್ರೀಮ್' ವಿಶೇಷ ಕಾರ್ಯಕ್ರಮಕ್ಕಾಗಿ ದೇಶದ ಬಾವುಟ ಹೊದ್ದು ನಿಂತಿರುವುದು.

'ಆಪ್ತ ಸಮಾಲೋಚನೆ'



ಡಾ. ವಸುಂಧರಾ ಭೂಪತಿ

ನಿಮ್ಮ ಸಂದೇಹ, ಸಮಸ್ಯೆಗಳನ್ನು ಬರೆದು ಕಳಿಸಿ.

ಕೆಲವು ಸಮಸ್ಯೆಗಳಿರುತ್ತವೆ. ಅವುಗಳನ್ನು ಇತರರೆದುರು ಹೇಳಿಕೊಳ್ಳಲಾಗದು. ಹಾಗೆಂದು ಮುಚ್ಚಿಟ್ಟುಕೊಂಡು ಕೊರಗುವುದೂ ಕಷ್ಟ. ಇಂತಹ ಸಮಸ್ಯೆಗಳನ್ನು ಮನಸ್ಸಿನಲ್ಲೇ ಇಟ್ಟುಕೊಳ್ಳುವುದು ಅಪಾಯಕಾರಿ ಕೂಡ. ಆರೋಗ್ಯಕ್ಕೆ ಸಂಬಂಧಿಸಿದ ಅನೇಕ ಸಂದೇಹ, ಸಮಸ್ಯೆಗಳನ್ನು ಸಕಾಲದಲ್ಲಿ ಪರಿಹರಿಸಿಕೊಂಡರೆ ಇಂತಹ ಅಪಾಯದಿಂದ ಪಾರಾಗಲು ಸಾಧ್ಯ. ಅದಕ್ಕೆಂದೇ ಓದುಗರ ಒತ್ತಾಯದ ಮೇರೆಗೆ 'ಆಪ್ತ ಸಮಾಲೋಚನೆ' ಅಂಕಣವನ್ನು ಮತ್ತೆ ಪ್ರಾರಂಭಿಸುತ್ತಿದ್ದೇವೆ. ಡಾ. ವಸುಂಧರಾ ಭೂಪತಿ ಅವರು ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.

ನಿಮ್ಮ ಕೌಟುಂಬಿಕ ಹಾಗೂ ವೈದ್ಯಕೀಯ ಸಮಸ್ಯೆಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದು ಕಳಿಸಿ.

ಸಂಪಾದಕರು, 'ಬದುಕು'ಮಾಸಪತ್ರಿಕೆ,
('ಆಪ್ತ ಸಮಾಲೋಚನೆ' ವಿಭಾಗ)
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951,
ಬಸವೇಶ್ವರ ನಗರ, ಬೆಂಗಳೂರು - 560 079.

ಹೆಂಡತಿಯನ್ನಗಲಿ ಹೇಗಿರಲಿ?

■ *ನನಗೆ ಈಗ 23 ವರ್ಷ. ನಾನು ವಿವಾಹಿತ. ನಾನು ತುಂಬಾ ಪ್ರೀತಿಸುತ್ತಿದ್ದ ನನ್ನ ಹೆಂಡತಿ, ಅವಳೇ ನನ್ನ ಜೀವ ಎಂದುಕೊಂಡಿದ್ದ ನನ್ನ ಪತ್ನಿ, ಅವಳಿಗಿದ್ದ ಕಾಯಿಲೆಯಿಂದ ಮೃತಪಟ್ಟಿರುತ್ತಾಳೆ. ಆದರೆ ನಾನು ಅವಳನ್ನು ಬಿಟ್ಟು ಒಂದೊಂದು ಕ್ಷಣವನ್ನು ಒಂದೊಂದು ಯುಗವಾಗಿ ಕಳೆಯುತ್ತಿದ್ದೇನೆ. ನಾನು ಅವಳನ್ನು ಬಿಟ್ಟು ಬದುಕಿರಬಾರದು ಎನ್ನುವ ಯೋಚನೆ, ಯಾವುದಕ್ಕೂ ಆಸಕ್ತಿ ತೋರದ ಮನಸ್ಸು ನನ್ನನ್ನು ಜೀವಂತ ಶವವನ್ನಾಗಿ ಮಾಡಿದೆ. ಏನೂ ಅರಿಯದ ನನಗೆ ತಮ್ಮ ಸೂಕ್ತ ಸಲಹೆಯನ್ನು ಕೊಡಿ.*

-ಕೆ.ಎಸ್.ಕೆ., ಅಮರಾವತಿ

ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ನೀವು ಪತ್ನಿಯನ್ನು ಕಳೆದುಕೊಂಡು ವಿಧುರರಾಗಿರುವುದು ಸಹಜವಾಗಿಯೇ ನಿಮ್ಮ ಮನಸ್ಸಿಗೆ ಆಘಾತ ಉಂಟು ಮಾಡಿದೆ. ಹುಟ್ಟಿದ ಪ್ರತಿಯೊಂದು ಜೀವಿಗೂ ಸಾವು ಕಟ್ಟಿಟ್ಟ ಬುತ್ತಿ. ಕೆಲವರು ಸ್ವಲ್ಪ ಬೇಗನೇ ಹೋದರೆ ಉಳಿದವರು ತಡವಾಗಿ ಹೋಗುತ್ತಾರೆ. ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಎಷ್ಟು ದಿನ ಕೊರಗುವಿರಿ? ನೀವು ಸಾಧ್ಯವಾದಷ್ಟು ಒಂಟಿಯಾಗಿರಬೇಡಿ. ಸ್ನೇಹಿತರೊಡನೆ ಬೆರೆಯಿರಿ. ಯೋಗಾಭ್ಯಾಸ, ಧ್ಯಾನ ಮುಂತಾದವುಗಳ ಕಡೆ ಗಮನ ಕೊಡಿ. ಇದರಿಂದಲೂ ನಿಮಗೆ ಮಾನಸಿಕ ನೆಮ್ಮದಿ ಸಿಗದಿದ್ದರೆ ಮಾನಸಿಕ ತಜ್ಞ ವೈದ್ಯರನ್ನು ಭೇಟಿಯಾಗಿ ಸಲಹೆ ಪಡೆಯಿರಿ. ನಿಮ್ಮ ಮನಸ್ಸು ಸ್ಥಿಮಿತಕ್ಕೆ ಬಂದು ಸಹಜ ಜೀವನ ನಡೆಸಲು ಪ್ರಾರಂಭ ಮಾಡಿದ ನಂತರ ಯಾರಾದರೊಬ್ಬ ವಿಧವೆಯನ್ನು ಬಾಳಸಂಗಾತಿಯಾಗಿ ಸ್ವೀಕರಿಸಿ. ಏಕೆಂದರೆ ನೀವಿನ್ನೂ ಬಾಳಹಾದಿಯನ್ನು ಬಹಳಷ್ಟು ಸವೆಸಬೇಕಿದೆ. ಒಬ್ಬರೇ ಈ ಹಾದಿಯಲ್ಲಿ ಪಯಣಿಸುವುದು ಬಹಳ ಕಷ್ಟ. ಮದುವೆಯಾಗುವುದರಿಂದ ಒಂದು ಹೆಣ್ಣಿಗೂ ಜೀವನ ದೊರೆತಂತಾಗುವುದಲ್ಲದೇ ನಿಮ್ಮ ಬಾಳಿಗೂ ಅರ್ಥ ಸಿಗುತ್ತದೆ.

ಕುಡುಕ ತಂದೆಯಿಂದ ಬೇಸತ್ತಿರುವೆ

■ *ನಾನು ಬಿ.ಎಸ್ಸಿ ಓದುತ್ತಿರುವೆ. ನಮ್ಮ ಮನೆಯಲ್ಲಿ ಒಟ್ಟು 5 ಜನ ಇದ್ದೇವೆ. ಆದರೆ ನಮ್ಮ ಮನೆಯಲ್ಲಿ ನೆಮ್ಮದಿ ಶಾಂತಿ ಎಂಬುದೇ ಇಲ್ಲ. ನಮ್ಮ ತಂದೆ ಒಬ್ಬ ಮಹಾಕುಡುಕ. ದಿನಾಲು ಕುಡಿದು ಬಂದು ನನ್ನ ತಾಯಿಯೊಂದಿಗೆ ಜಗಳ ಕಾಯುತ್ತಾನೆ. ನಮ್ಮ ತಾತನವರು ಸಾಕಷ್ಟು ಸಂಪಾದಿಸಿ ಇಟ್ಟಿದ್ದರೂ ನಮ್ಮ ತಂದೆಯ ಕುಡಿತಕ್ಕೆ ಎಲ್ಲವೂ ಕರಗಿ ಹೋಗುತ್ತಿದೆ. ನನಗೆ ವಿದ್ಯಾಭ್ಯಾಸ ಮುಂದುವರಿಸಲು ಆಸೆ ಇದೆ. ಆದರೆ ನಮ್ಮೂರು ಬಿಟ್ಟು ಬೇರೆ ಊರಿಗೆ ಹೋಗಿ ವಿದ್ಯಾಭ್ಯಾಸ ಮಾಡಬೇಕಾಗಿದೆ. ಆದರೆ ಕುಡುಕನಾದ ನಮ್ಮ ತಂದೆ ನಾನಿಲ್ಲದ ಸಮಯದಲ್ಲಿ ನಮ್ಮ ಆಸ್ತಿಯನ್ನೆಲ್ಲ ಎಲ್ಲಿ ಮಾರಿ ಬಿಡುವನೋ ಎಂಬ ಆತಂಕವಾಗಿದೆ. ಆದ್ದರಿಂದ ಏನು ಮಾಡಬೇಕೆಂದು ತಿಳಿಯದೇ ನನ್ನ ಸಮಸ್ಯೆಯನ್ನು ನಿಮಗೆ ತಿಳಿಸಿದ್ದೇನೆ. ದಯವಿಟ್ಟು ಪರಿಹಾರ ಸೂಚಿಸಿ.*

-ರಾಜಕುಮಾರ ಚಲವಾದಿ, ಬೀದರ್

ಕುಡಿತ ಈಗ ಸರ್ವವ್ಯಾಪಿಯಾಗಿರುವ ಪಿಡುಗಾಗಿದೆ. ಇದು ನಿಮ್ಮೊಬ್ಬರದೇ ಸಮಸ್ಯೆ ಎಂದು ತಿಳಿಯಬೇಡಿ. ಎಷ್ಟೋ ಸಂಸಾರಗಳು ಕುಡಿತದಿಂದಾಗಿ ಹಾಳಾಗಿ ಹೋಗಿವೆ. ಹಾಳಾಗಿ ಹೋಗುತ್ತಲೂ ಇವೆ. ಕುಡಿಯುವ ತಂದೆಗೆ ಕುಡಿತದಿಂದ ತನ್ನೊಬ್ಬನ ಜೀವನ ಮಾತ್ರವಲ್ಲ ತನ್ನನ್ನೇ ನಂಬಿರುವ ಹೆಂಡತಿ ಹಾಗೂ ಭವಿಷ್ಯದಲ್ಲಿ ಉತ್ತಮ ಪ್ರಜೆಗಳಾಗಬೇಕಾದ ಮಕ್ಕಳ ಜೀವನವನ್ನು ಚಿಗುರಲ್ಲೇ ಚಿವುಟ ಬಿಡುತ್ತಿದ್ದೇವೆಂಬ ಅರಿವು ಖಂಡಿತ ಇರುವುದಿಲ್ಲ. ನಿಮ್ಮಂತಹ ನೂರಾರು ಯುವಕರು ಇಂತಹ ಸಮಸ್ಯೆಗೆ ಸಿಲುಕಿ ಪರಿಹಾರ ಕಾಣದೇ ಒದ್ದಾಡುತ್ತಿದ್ದಾರೆ. ಈಗ ನೀವು ಧೈರ್ಯ ಹಾಗೂ ಸ್ಥೈರ್ಯ ತಂದುಕೊಳ್ಳಲೇಬೇಕು. ಮನಸ್ಸಿನ ತಳಮಳವನ್ನು ಬದಿಗೊತ್ತಿ ಓದಿನಲ್ಲಿ ತೊಡಗಿಸಿಕೊಳ್ಳಿ. ಆದರೆ ಯಾವುದೇ ಕಾರಣಕ್ಕೂ ನಿಮ್ಮ ತಂದೆ ಎಷ್ಟೇ ಜಗಳವಾಡಿದರೂ ಆಸ್ತಿಯನ್ನು ಮಾತ್ರ ಅವರ ಹೆಸರಿಗೆ ವರ್ಗ ಮಾಡಿಸಿ ಕೊಡಬೇಡಿ. ನಿಮ್ಮ ತಂದೆ ಕುಡಿಯದಿರುವ ಸಮಯದಲ್ಲಿ ಒಂದು ಬಾರಿ ನಿಮ್ಮ ಸಮಸ್ಯೆ ವಿವರಿಸಿ ಓದಲು ಸಾಧ್ಯವಾಗುತ್ತಿಲ್ಲವೆಂಬುದನ್ನು ತಿಳಿಸಿ. ಜೊತೆಗೆ ಅವರು ಕುಡಿತ ಬಿಡುವುದಾದರೆ ಖಂಡಿತ ಬಿಡಿಸಬಹುದು. ಅವರು ಒಪ್ಪದಿದ್ದರೆ, ತಮ್ಮ ದಾರಿ ಬದಲಾಯಿಸಿಕೊಳ್ಳಲು ಇಷ್ಟಪಡದಿದ್ದರೆ ನೀವೇ ನಿಮ್ಮ ದಾರಿ ಬದಲಾಯಿಸಿಕೊಳ್ಳಿ. ಅದು ಹೇಗೆಂದರೆ ರಾತ್ರಿ ಹೊತ್ತು ನಿಮ್ಮ ಮನೆಯ ಜಂಜಾಟದಿಂದ ದೂರವಾಗಿ ಸ್ನೇಹಿತರ ಇಲ್ಲವೇ ಬಂಧುಗಳ ಮನೆಯಲ್ಲಿ ಕುಳಿತು ಅಧ್ಯಯನ ಮಾಡಿ. ಇದು ಸಾಧ್ಯವಾಗೋದಿಲ್ಲ ಅನ್ನೋದಾದರೆ ಬೇರೆ ಊರಿನಲ್ಲಿ ಹಾಸ್ಟೆಲಿನಲ್ಲಿದ್ದು ವಿದ್ಯಾಭ್ಯಾಸ ಮುಂದುವರೆಸಿ. ನಿಮ್ಮ ಜೀವನ ರೂಪಿಸಿಕೊಳ್ಳುವುದರತ್ತ ಗಮನ ಹರಿಸಿ.

ಕೂದಲು ಸಮಸ್ಯೆ

■ ನನ್ನ ಜನನಾಂಗದ ಸುತ್ತ ಇರುವ ಕೂದಲು ನನಗೆ ಅಸಹ್ಯವಾಗಿದೆ. ತುಂಬಾ ಕೂದಲು ಬೆಳೆದಿವೆ. ಆದ್ದರಿಂದ ಕೂದಲಿರುವ ಜಾಗದಲ್ಲಿ ಅಂದರೆ ಜನನಾಂಗದ ಸುತ್ತಲೂ ಅರಿಶಿಣ ಪುಡಿಯಿಂದ ಉಜ್ಜಿ ದಿನಾಲು ಸ್ನಾನ ಮಾಡುವುದರಿಂದ ಕೂದಲು ಬೆಳೆಯುವಿಕೆ ಕುಂಠಿತವಾಗಿ ಕೂದಲು ಉದುರಿದರೆ, ಅದರಿಂದ ಜನನಾಂಗಕ್ಕೆ ಏನಾದರೂ ತೊಂದರೆ ಆಗುತ್ತದೆಯೇ ಎಂದು ದಯವಿಟ್ಟು ತಿಳಿಸಿ.

-ಮಾರುತಿ

ಜನನಾಂಗದ ಕೂದಲಿನ ಬಗ್ಗೆ ಅಸಹ್ಯವೇಕೆ? ಪ್ರಕೃತಿ ಸಹಜವಾಗಿ ಹರೆಯದಲ್ಲಿ ಜನನಾಂಗದ ಬಳಿ ಕೂದಲು ಉತ್ಪತ್ತಿಯಾಗುವುದು. ಪ್ರತಿದಿನ ಸ್ನಾನ ಮಾಡುವಾಗ ಆ ಸ್ಥಳವನ್ನು ಸ್ವಚ್ಛಗೊಳಿಸಿ ಶುದ್ಧವಾಗಿಟ್ಟುಕೊಂಡರೆ ಸಾಕು. ನಿಮಗೆ ಕೂದಲು ಬೇಡವೆನ್ನಿಸಿದಲ್ಲಿ ಆಗಾಗ ಶೇವ್ ಮಾಡಿಕೊಳ್ಳಬಹುದು. ಇಲ್ಲದಿದ್ದರೆ ಸಣ್ಣಗೆ ಕತ್ತರಿಸಿ ಟ್ರಿಮ್ ಮಾಡಿಕೊಳ್ಳಬಹುದು. ಅಲ್ಲಿ ಅರಿಶಿನ ಪುಡಿ ಹಾಕಿ ಉಜ್ಜುವುದರಿಂದ ಖಂಡಿತ ಪ್ರಯೋಜನವಿಲ್ಲ. ಹೆಚ್ಚು ಉಜ್ಜುವುದರಿಂದ ಆ ಜಾಗದಲ್ಲಿ ಉರಿಯೂ ಉಂಟಾಗಬಹುದು.

ನೆನಪಿನಲ್ಲುಳಿಯುತ್ತಿಲ್ಲ

■ ನಾನು ಪ್ರಥಮ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ನಾನು ಎಷ್ಟು ಓದುತ್ತಿದ್ದರೂ, ನನಗೆ ನಾನು ಓದಿದ ಯಾವುದೇ ವಿಷಯವಾಗಲಿ ಅಥವಾ ಪಠ್ಯ ಪುಸ್ತಕದ ವಿಷಯವಾಗಲಿ ಜ್ಞಾಪಕದಲ್ಲಿ ಇರುವುದಿಲ್ಲ. ನಾನು ನಿಮ್ಮ ಬಿಸಿಲ ಬದುಕು ಪತ್ರಿಕೆಯಲ್ಲಿ ಈ ವಿಷಯಕ್ಕೆ ಸಲಹೆ ನೀಡುವಿರೆಂದು ನಂಬಿರುತ್ತೇನೆ.

-ಸಿ. ಲಕ್ಷ್ಮಣನಾಯಕ, ಚಿತ್ರದುರ್ಗ

■ ನಾನು ಪಿಯುಸಿಯಲ್ಲಿ ಓದುತ್ತಿದ್ದೇನೆ. ನನಗೆ ಎಷ್ಟು ಓದಿದರೂ ಅದನ್ನು ಓದಿ ಬರೆದರು ನೆನಪೇ ಉಳಿಯುತ್ತಿಲ್ಲ. ಆದಕ್ಕಾಗಿ ನೆನಪಿನಲ್ಲುಳಿಯಲು ಏನಾದರೂ ಉಪಾಯವಿದ್ದರೆ ದಯವಿಟ್ಟು ತಿಳಿಸಬೇಕಾಗಿ ವಿನಂತಿ.

-ಹೆಸರು ಬೇಡ, ಬಾಗಲಕೋಟೆ.

ನಿಮಗೆ ಅಧ್ಯಯನದ ಕ್ರಮ ತಿಳಿದಿಲ್ಲ. ಸುಮ್ಮನೇ ಗಂಟೆಗಟ್ಟಲೇ ಓದಿದರೆ ಪ್ರಯೋಜನವಿಲ್ಲ. ಯಾವುದೇ ವಿಷಯವನ್ನಾಗಲಿ ಓದಿದ ನಂತರ ಮನನ ಮಾಡಿಕೊಳ್ಳಬೇಕು. ಹಾಗೆಯೇ ಅದರಲ್ಲಿನ ಮುಖ್ಯವಾದ ಅಂಶಗಳನ್ನು ಬರೆಯಬೇಕು. ಆಗ ನಿಮಗೆ ಯಾವ ಅಂಶಗಳು ಬಿಟ್ಟುಹೋಗಿವೆ ಎಂಬುದು ತಿಳಿಯುತ್ತದೆ. ಮತ್ತೆ ಅದನ್ನು ಓದಿ ಬರೆಯಬೇಕು. ಅಲ್ಲದೇ ಅವತ್ತಿನ ಪಾಠವನ್ನು ಅವತ್ತೆ ಓದಬೇಕು. ಜೊತೆಗೆ ಇತರ ವಿದ್ಯಾರ್ಥಿಗಳೊಡನೆ ಆ ವಿಷಯವನ್ನು ಚರ್ಚಿಸಬೇಕು. ಆಗ ಖಂಡಿತ ನಿಮಗೆ ನೆನಪಿನಲ್ಲಿ ಉಳಿಯುತ್ತದೆ. ಅಧ್ಯಯನ, ಮನನ ಹಾಗೂ ಚಿಂತನೆ ಈ ಮೂರು ಅಂಶಗಳನ್ನು ಅಳವಡಿಸಿಕೊಂಡರೆ ಖಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾಗುವಿರಿ.

ಋತುಮತಿ ಸಮಸ್ಯೆ

■ ನಾನು 16 ವರ್ಷದ ಹುಡುಗಿ. ನಾನು ಇದುವರೆಗೂ ಋತುಮತಿಯಾಗಿಲ್ಲ. ಈಗ ನನಗೆ ಹೊಟ್ಟೆ ನೋವು. ಊಟ ಮಾಡಕ್ಕೆ ಆಗದಿರುವುದು, ಹೊಟ್ಟೆ ಉರಿ ಹೀಗೆ ನಾನಾ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವೆ. ನನ್ನ ದೇಹವು ಚೆನ್ನಾಗಿ ಬೆಳೆದಿಲ್ಲ. ನಾನು ಉತ್ತಮ ಡಾಕ್ಟರಿಗೆ ತೋರಿಸಿದೆ. ಯಾವ ಗುಣಮುಖ ಅಂಶಗಳು ಕಂಡು ಬಂದಿಲ್ಲ. ಇದರಿಂದಾಗಿ ನನಗೆ ಬಹಳ ತೊಂದರೆಯಾಗಿದೆ. ಎಲ್ಲರೂ ದೊಡ್ಡವಳು ಆಗದಿರುವುದೇ ಕಾರಣ ಎಂದು ಹೇಳುತ್ತಿದ್ದಾರೆ. ಏನು ಮಾಡಬೇಕೆಂದು ತಿಳಿಯುತ್ತಿಲ್ಲ. ಊಟ ಸರಿಯಾಗಿ ಮಾಡುತ್ತಿಲ್ಲ. ಏಕೆಂದರೆ ಹಸಿವೆ ಆಗುತ್ತಿಲ್ಲ. ಆದರೆ ನಾನು ದಪ್ಪವಾಗಬೇಕೆಂಬ ಮಹಾ ಆಶೆಯಿದೆ. ಆದರೆ ನನ್ನ ಬೆಳವಣಿಗೆಯೂ ಸರಿಯಾಗಿ ಆಗಿಲ್ಲ. ಕೇವಲ ಏಳೆಂಟು ವರ್ಷದವಳಷ್ಟು ಇದ್ದೇನೆ. ವೈದ್ಯರು ಯಾವ ಸಮಸ್ಯೆಯೂ ಇಲ್ಲವೆಂದು ಹೇಳುತ್ತಿದ್ದಾರೆ. ದಯವಿಟ್ಟು ಪರಿಹಾರ ತಿಳಿಸಿ.

-ಹೆಸರು ಬೇಡ, ಊರು ಬೇಡ

ನೀವು ಋತುಮತಿಯಾಗದಿರುವುದಕ್ಕೆ ಹಾಗೂ ಬೆಳವಣಿಗೆ ಕುಂಠಿತವಾಗಿರುವುದಕ್ಕೆ ಹಾರ್ಮೋನಿನ ತೊಂದರೆ ಕಾರಣವಿರಬಹುದು. ಅದಕ್ಕಾಗಿ ನೀವು ಎಂಡೋಕ್ರೈನಾಲಾಜಿಸ್ಟ್‌ರನ್ನು ಭೇಟಿಯಾಗಿ ಚಿಕಿತ್ಸೆ ಪಡೆಯಿರಿ. ನಿಮಗೆ ಹೊಟ್ಟೆ ಉರಿ ಹಾಗೂ ಹೊಟ್ಟೆ ನೋವು ಇದೆಯೆಂದು ತಿಳಿಸಿರುವಿರಿ. ನೀವು ಬಹುಶಃ ಆಮ್ಲಪಿತ್ತದಿಂದ ಬಳಲುತ್ತಿರಬಹುದು. ಅದಕ್ಕಾಗಿ ನೀವು ಆಯುರ್ವೇದ ಔಷಧಿ ಜೀರಕ ರಸಾಯನವನ್ನು ಸೇವಿಸಿ. ಒಂದು ಚಮಚ ಔಷಧಿ ಸೇವಿಸಿ ನಂತರ ಒಂದು ಲೋಟ ಹಾಲು ಕುಡಿಯಿರಿ. ಆಹಾರದಲ್ಲಿ ಸೊಪ್ಪು, ತರಕಾರಿ, ಹಣ್ಣು, ತುಪ್ಪ, ಮಜ್ಜಿಗೆ, ಸಿಹಿ ಪದಾರ್ಥ ಹೆಚ್ಚು ಬಳಸಿ.

ಗುದ ಮೈಥುನ

■ ನಾನು ಪಿಯುಸಿ ದ್ವಿತೀಯ ವರ್ಷದಲ್ಲಿ ಓದುತ್ತಿದ್ದೇನೆ. ಒಬ್ಬ ಸದೃಢ ವ್ಯಕ್ತಿಯನ್ನು ಕಂಡಾಗ ಆತನೊಡನೆ ಸರಸವಾಡಬೇಕೆಂದೆನಿಸುತ್ತದೆ. ಹೀಗಾಗಿ ನಾನು ಮೂರ್‍ನಾಲ್ಕು ಜನರಿಂದ ಗುದಮೈಥುನವನ್ನು ಮಾಡಿಸಿಕೊಂಡಿದ್ದೇನೆ. ನಾನು ಮಾಡಿದ ಈ ಹೇಯ ಕೃತ್ಯದಿಂದ ಮುಕ್ತಿ ಹೊಂದಲು ಆತ್ಮಹತ್ಯೆಗೆ ಯತ್ನಿಸಿ ವಿಫಲಗೊಂಡಿದ್ದೇನೆ. ನಮ್ಮ ಮನೆಯಲ್ಲಿ ಎಲ್ಲರಿಗೂ ಪ್ರೀತಿಪಾತ್ರನಾಗಿದ್ದೇನೆ. ನಾನು ಅವರ ಕಣ್ಮುಂದೆ ಇರದಿದ್ದರೆ ಅವರಿಗೆ ಬೇಸರವಾಗುತ್ತದೆ. ಆದ್ದರಿಂದ ಜೀವ ಕಳೆದುಕೊಳ್ಳಬಾರದೆಂದು ನಿರ್ಧರಿಸಿದ್ದೇನೆ. ನಾನು ಮಾಡಿದ ತಪ್ಪು ನನ್ನನ್ನು ಸದಾ ಕೊರೆಯುತ್ತದೆ. ಇದರಿಂದ ಮುಕ್ತಿ ಹೊಂದಲು ನಿಮಗೆ ಈ ಸಮಸ್ಯೆ ತಿಳಿಸಿದ್ದೇನೆ. ನನಗೆ ಏಡ್ಸ್ ಬಂದಿದೆಯೇ? ಇನ್ನೂ ಟೆಸ್ಟ್ ಮಾಡಿಸಿಲ್ಲ. ನಾನು ಧಾರವಾಡ ಜಿಲ್ಲೆಯವನು. ಅಲ್ಲಿ ಯಾವುದಾದರೂ ಪರೀಕ್ಷಾ ಕೇಂದ್ರವಿದ್ದರೆ ತಿಳಿಸಿ. ದಯವಿಟ್ಟು ಪರಿಹಾರ ತಿಳಿಸಿ.

-ಹೆಸರು ಬೇಡ, ಊರು ಬೇಡ

ಆತ್ಮಹತ್ಯೆಯ ಯೋಚನೆ ಖಂಡಿತ ಸಲ್ಲದು. ನೀವು ನಿಮ್ಮ ತಪ್ಪು ಅರಿತುಕೊಂಡು ಸರಿಯಾದ ರೀತಿಯಲ್ಲಿ ಬದುಕಲು ಯೋಚಿಸಿ ಬಹಳ ಒಳ್ಳೆಯ ನಿರ್ಧಾರ ಕೈಗೊಂಡಿರುವಿರಿ. ಕೀಳರಿಮೆಯನ್ನು ಹೋಗಲಾಡಿಸಿಕೊಂಡು ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಿ, ತಪ್ಪು ಮಾಡದವರು ಯಾರಿದ್ದಾರೆ ಹೇಳಿ? ಆದರೆ ಮಾಡಿದ ತಪ್ಪು ತಿದ್ದಿಕೊಂಡು ಬಾಳುವವನೇ ನಿಜವಾದ ಮನುಷ್ಯ. ನೀವು ಗುದಮೈಥುನ ಮಾಡಿದ ವ್ಯಕ್ತಿಗೆ ಹೆಚ್.ಐ.ವಿ. ಇದ್ದರೆ ಮಾತ್ರ ನಿಮಗೂ ಬಂದಿರುವ ಸಾಧ್ಯತೆಯಿರುತ್ತದೆ. ಅಂತಹ ಅನುಮಾನವಿದ್ದಲ್ಲಿ ಒಂದು ಬಾರಿ ರಕ್ತಪರೀಕ್ಷೆ ಮಾಡಿಸಿ ಖಚಿತಪಡಿಸಿಕೊಳ್ಳಿ.

ನಿದ್ರೆಯಲ್ಲಿ ಕೂಗುವುದು

■ ನಮ್ಮ ಜಮಾನ್ರು ಹಲವಾರು ವರುಷಗಳಿಂದ ನಿದ್ರಾವಸ್ಥೆಯಲ್ಲಿ ಜೋರಾಗಿ ಕೂಗುತ್ತಾರೆ. ಎಬ್ಬಿಸದೇ ಹೋದರೆ ಇನ್ನೂ ಜೋರಾಗಿ ಓ,ಓ ಎಂದು ಕೂಗುತ್ತಾರೆ. ಮೈಮುಟ್ಟಿ ಎಬ್ಬಿಸದೇ ಇದ್ದರೆ ಎಚ್ಚರವಾಗುವುದಿಲ್ಲ. ಮೈ ಮುಟ್ಟಿ ಎಬ್ಬಿಸಿದರೂ ಬೇಗ ಎಚ್ಚರವಾಗುವುದಿಲ್ಲ. ಏನೇನೋ ವಿಚಾರ ಮಾಡಿ ಮಾನಸಿಕ ವೇದನೆಯನ್ನು ಕನಸಿನಲ್ಲಿ ಅನುಭವಿಸುತ್ತಿದ್ದಾರೆ ಎನಿಸುತ್ತದೆ. ಇದಕ್ಕಾಗಿ ಒಳ್ಳೆ ವೈದ್ಯರ ವಿಳಾಸ ತಿಳಿಸಿ.

ಒಂದು ಸಲ ಇಬ್ಬರು ಜಗಳವಾಡುತ್ತಿದ್ದುದನ್ನು ನೋಡಿ ಚೀರಾಡಿದೆ ಎಂದರು. ದಯವಿಟ್ಟು ಸಲಹೆ ಕೊಡಿ.

-ಹೆಸರಿಲ್ಲ, ಊರಿಲ್ಲ.

ನಿಮ್ಮ ಯಜಮಾನರು ಯಾವುದೋ ಒಂದು ವಿಚಾರವನ್ನು ಸುಪ್ತ ಮನಸ್ಸಿನಲ್ಲಿಯೇ ಅಡಗಿಸಿಕೊಂಡಿರಬಹುದು. ಅದು ರಾತ್ರಿ ಸಮಯ ನಿದ್ರಾವಸ್ಥೆಯಲ್ಲಿ ಈ ರೀತಿ ಕೂಗುವುದರ ಮೂಲಕ ವ್ಯಕ್ತವಾಗುತ್ತಿರಬಹುದು. ಅವರನ್ನು ಒಂದು ಬಾರಿ ಮನಶಾಸ್ತ್ರಜ್ಞರ ಬಳಿ ಕರೆದೊಯ್ದು ತಪಾಸಣೆ ಮಾಡಿಸಿ. ಚಿಕಿತ್ಸೆ ಕೊಡಿಸಿ. ನೀವು ನಿಮ್ಮ ಊರು ಯಾವುದೆಂದು ತಿಳಿಸಿದ್ದರೆ ವೈದ್ಯರ ಹಾಗೂ ಆಸ್ಪತ್ರೆಯ ಬಗ್ಗೆ ತಿಳಿಸುತ್ತಿದ್ದೆ. ಬೆಂಗಳೂರಿನ ನಿಮ್ಹಾನ್ಸ್ (Nimhans) ಆಸ್ಪತ್ರೆಯಲ್ಲಿ ಇಲ್ಲವೇ ನಿಮ್ಮ ಊರಿಗೆ ಹತ್ತಿರದ ಜಿಲ್ಲಾ ಆಸ್ಪತ್ರೆಯಲ್ಲಿ ಮಾನಸಿಕ ರೋಗ ತಜ್ಞ ವೈದ್ಯರ ಬಳಿ ಚಿಕಿತ್ಸೆ ಕೊಡಿಸಿ.



ಹೀಗೆ ಈ ಬದುಕು....

ಅಜ್ಜನಿಗೆ ಮಹಾ ಮರೆವು. ಅಜ್ಜಿಗೆ ಅವರನ್ನು ಮೀರಿಸಿದ ಮರೆವು. ಒಂದು ದಿನ ತರಕಾರಿ ತರಲು ಹೊರಟಿದ್ದ ಅಜ್ಜನಿಗೆ 'ಮೆಂತೇ ಸೊಪ್ಪು ಮರೀದೇ ತನ್ನಿ' ಎಂದು ಅಜ್ಜಿ ಹೇಳಿದರು. ಜೊತೆಗೆ 'ನೀವು ಮರೀತೀರಿ. ಒಂದು ಚೀಟೀಲಿ ಬರಕೊಂಡು ಹೋಗಿ' ಎಂದೂ ಸಲಹೆ ನೀಡಿದರು. 'ಇಷ್ಟಕ್ಕೆಲ್ಲ ಚೀಟಿ ಯಾಕೆ' ಎಂದು ಗೊಣಗಿಕೊಂಡು ಹೋದ ಅವರು ತಂದಿದ್ದು ದಂಟಿನ ಸೊಪ್ಪು. ಅಜ್ಜಿ ತರಕಾರಿ ಚೀಲ ಬಿಡಿಸಿ ಗೊಣಗುತ್ತಾ ಇದ್ದರು. 'ಇವರಿಗೆ ಎಷ್ಟು ಹೇಳಿದರೂ ಚೀಟೀಲಿ ಬರಕೊಂಡು ಹೋಗೋದಿಲ್ಲ. ಏನೋ ಹೇಳಿದರೆ ಏನೋ ತರ್ತಾರೆ. ಕೊತ್ತಂಬರಿ ಸೊಪ್ಪು ಬೇಕೇ ಬೇಕು ಅಂದಿದ್ದರೆ ಈ ದಂಟಿನ ಸೊಪ್ಪು ಹೊತ್ತುಕೊಂಡು ಬಂದಿದಾರೆ!''

- ಲಕ್ಷ್ಮಿ ಪುತ್ತೂರು.

★



ಮಗನಿಗೆ ಹಲ್ಲು ನೋವು. ವೈದ್ಯರ ಬಳಿ ಕರೆದೊಯ್ದೆವು. ಡಾಕ್ಟರ್ ತರುಣ. ಅಷ್ಟೇ ಚುರುಕು ಹಾಗೂ ಚತುರತೆಯಿಂದ ಮಾತಾಡಬಲ್ಲವರು. ಅದರಿಂದಾಗಿಯೇ ಎಲ್ಲರನ್ನೂ ಅವರು ರಂಜಿಸುತ್ತಲೇ, ನಗುನಗುತ್ತಾ ಚಿಕಿತ್ಸೆ ನೀಡುತ್ತಾ ಇದ್ದರು. ಮಗನನ್ನು ಪರೀಕ್ಷಿಸಲಾರಂಭಿಸಿದ ಡಾಕ್ಟರ್ ತುಂಟತನದ ನಗು ಚೆಲ್ಲುತ್ತಾ, ಯಾವ ಹಲ್ಲು ನೋಯುತ್ತಿದೆ ಎಂದು ತಿಳಿಯಲು

''ಯಾರಪ್ಪಾ ನಿನಗೆ ತೊಂದರೆ ಕೊಡ್ತಾ ಇರೋದು?'' ಅಂದರು.

''ಇನ್ಯಾರು? ನಮ್ಮಣ್ಣ ಅನಿಲ'' ಎಂದು ಇವನು ಉತ್ತರಿಸುವುದೇ!

- ರಾಜೇಂದ್ರ, ಮೈಸೂರು.

★



ನಮ್ಮ ಊರಿನ ದೊಡ್ಡಯ್ಯನ ಮಗ ಚಂದ್ರಪ್ಪನಿಗೆ ಮದುವೆ ಮಾಡಲು ನಿರ್ಧರಿಸಿದರು. ಇದು ಐದಾರು ವರ್ಷದ ಹಿಂದೆ. ಅಂದಿನಿಂದ ಅವರು ವಾರಕ್ಕೆ ಒಂದು, ಎರಡು ಎಂಬಂತೆ ವಧು ಪರೀಕ್ಷೆಗೆ ಹೊರಡುತ್ತಾ ಇದ್ದರು. ಅಲ್ಲಿ ದಂಡಿಯಾಗಿ ತಿಂದು ತೇಗಿ ಬರುತ್ತಿದ್ದುದು ಎಷ್ಟೋ ಅಷ್ಟೇ! ಹುಡುಗಿ ಮಾತ್ರ ಆಯ್ಕೆ ಆಗಲಿಲ್ಲ. ಚಂದ್ರಪ್ಪನಿಗೂ ವಯಸ್ಸಾಯಿತು. ಇಷ್ಟರಲ್ಲಿ ಒಂದು ಹುಡುಗಿಯಂತೂ 'ಇವನು ಬೇಡವೇ ಬೇಡ' ಎಂದು ಮುಖಕ್ಕೆ ಹೊಡೆದಂತೆ ಹೇಳಿಬಿಟ್ಟಳು.

ಅದಾದ ಮೇಲೆ ಚಂದ್ರಪ್ಪನಿಗೇ ಭಯ ಶುರುವಾಯಿತು. ಅಪ್ಪನನ್ನು ನೆಚ್ಚಿದರೆ ಮದುವೆ ಆಗುವುದೇ ಇಲ್ಲ ಅನ್ನಿಸಿರಬೇಕು. ಅವನೀಗ ಜಮೀನಿನ ಕೂಲಿಗೆ ಬರುತ್ತಿದ್ದ ಹೆಂಗಸೊಬ್ಬಳನ್ನು ಪ್ರೇಮಿಸಿದ. ಈಚೆಗೆ ಅವನ ಮದುವೆಯೂ ಆಯಿತು. ಆ ಹುಡುಗಿ ಸಿಕ್ಕಿದಾಗ ನನ್ನ ಹೆಂಡತಿ ''ವಧೂಪರೀಕ್ಷೆ ಇಲ್ಲದೇ ಪಾಸಾದ ಹುಡುಗಿ ನೀನೊಬ್ಬಳೇ ನೋಡು'' ಎಂದು ರೇಗಿಸುತ್ತಾಳೆ.

-ಚನ್ನಕೇಶವ, ದಾಬಸ್‌ಪೇಟೆ.

★

ಬೆಳಗಾಯಿತೆಂದರೆ ಮನೇಲಿ ಬಾತ್‌ರೂಂ ಮುಂದೆ ಸಂತೆ. ಸ್ಕೂಲು, ಕಾಲೇಜಿಗೆ ಹೊರಡುವ ಹುಡುಗರ ಪೈಪೋಟಿ. ಹಾಗೇ ಆಫೀಸಿಗೆ ಹೊರಡಬೇಕಾದವರ ಧಾವಂತ. ಹುಡುಗರು ಬಚ್ಚಲಿಗಿಳಿದರೆ ಆನೆ ನೀರಿಗಿಳಿದ ಹಾಗೆ.


ಮೊನ್ನೆ ಹಾಗೇ ಆಯಿತು. ಮಗಳು ಕನಕಾಗೆ ಬೇಗ ಹೊರಡಬೇಕಿತ್ತು. ಅವಳಣ್ಣ ಮಾಧವ ಸ್ನಾನದ ಮನೆ ಸೇರಿ ಎಷ್ಟು ಹೊತ್ತಾದರೂ ಬರುತ್ತಿಲ್ಲ. ಕೊನೆಗವಳು ಬಾಗಿಲು ಬಡಿದು ಹೇಳಿದಳು 'ಮಾಧೂ, ನಿನ್ನ ಫ್ರೆಂಡ್ ಈಶ್ವರಿ ಫೋನ್ ಮಾಡಿದಾಳೆ. ಆಮೇಲೆ ಫೋನ್ ಮಾಡು ಅಂತ ಹೇಳಲಾ?''

ಈಶ್ವರಿ ಎಂಬ ಹೆಸರು ಕೇಳುತ್ತಿದ್ದ ಹಾಗೆ 'ಬೇಡ ಬಂದೆ' ಎಂದು ಮೈಯಿಂದ ನೀರು ತೊಟ್ಟಿಕ್ಕಿಸುತ್ತಾ ಟವೆಲ್ ಸುತ್ತಿಕೊಂಡು ರಪ್ಪನೆ ಬಾಗಿಲು ತೆಗೆದು ಬಂದ. 'ಅವಳು ಆಮೇಲೆ ಫೋನ್ ಮಾಡ್ತಾಳಂತೆ' ಎಂದು ಮುಂದಿನ ಮಾತಿಗೆ ಅವಕಾಶವಿರದಂತೆ ಕನಕಾ ಬಚ್ಚಲು ಸೇರಿ ಬಾಗಿಲು ಹಾಕಿಕೊಂಡಳು.

- ಶಶಿಧರ, ಬೆಂಗಳೂರು.

★

ಆ ನಾಳೆ ಬರಲೇ ಇಲ್ಲ : ಕಳೆದ ವರ್ಷ ನಡೆದ ಕಾರ್ಗಿಲ್ ಸಮರದ ಸಂದರ್ಭದಲ್ಲಿ ನಡೆದ ಘಟನೆ ಇದು.



ಮದುವೆಯಾಗಿ ಇನ್ನೂ ಹತ್ತು ತಿಂಗಳು ಕೂಡ ಕಳೆದಿರಲಿಲ್ಲ. ಇಂಥ ಸಂದರ್ಭದಲ್ಲಿ ಮೆಚ್ಚಿನ ಮಡದಿಯಿಂದ ಪತ್ರವೊಂದು ಬಂದರೆ ಅದನ್ನು ತತ್‌ಕ್ಷಣ ತೆರೆದೋದಬೇಕೆಂಬ ಕಾತರ ಯಾರಿಗೆ ತಾನೇ ಇರುವುದಿಲ್ಲ?


29 ವರ್ಷದ ಮೇಜರ್ ರಾಜೇಶ್ ಅಧಿಕಾರಿಗೆ ಆತನ ಮಡದಿ ಕಿರಣ್ ಬರೆದ ಕಾಗದ ತಲುಪಿದಾಗ ಆತ ಹದಿನಾರು ಸಾವಿರ ಅಡಿ ಎತ್ತರದ ಹಿಮಾಲಯ ಪರ್ವತದ ತಪ್ಪಲಿನಲ್ಲಿದ್ದ. ಕೈಯಲ್ಲೊಂದು ಭೂಪಟ ಹಾಗೂ ರೈಫಲ್. ಪರ್ವತದ ತುದಿಯಲ್ಲಿದ್ದ ಪಾಕ್ ಅತಿಕ್ರಮಣಕಾರಿಗಳ ಬಂಕರ್ ಧ್ವಂಸ ರಾಜೇಶ್ ಅಧಿಕಾರಿಯ ಗುರಿಯಾಗಿತ್ತು. 'ಈಗ ಪುರುಸೊತ್ತಿಲ್ಲ, ನಾಳೆ ಕಾರ್ಯಾಚರಣೆ ಮುಗಿದ ಬಳಿಕ ಇದನ್ನು ಆರಾಮಾಗಿ ಓದೋಣ ಎಂದು ಹೆಂಡತಿಯ ಕಾಗದವನ್ನು ಮಡಚಿ ಭದ್ರವಾಗಿ ಜೇಬಿನೊಳಗಿಟ್ಟ. ಕಡಿದಾದ ದಾರಿಯಲ್ಲಿ ಹಿಮಬಂಡೆಗಳನ್ನು ದಾಟುತ್ತಾ ಅಧಿಕಾರಿ ಹಾಗೂ ಆತನ ಸಂಗಡಿಗರು ನಿಶ್ಚಿತ ಗುರಿ ತಲುಪಿದೊಡನೆ ವೈರಿ ಪಡೆಯತ್ತ ಗುಂಡಿನ ಸುರಿಮಳೆ ಗೈಯ್ಯತೊಡಗಿದರು. ವೈರಿಪಡೆಯ ಬಂಕರ್ ಈ ದಾಳಿಗೆ ಕುಸಿದು ಬಿತ್ತು.

ಆದರೆ, ಅಷ್ಟರಲ್ಲಿ ಹಾರಿ ಬಂದ ಗುಂಡೊಂದು ಅಧಿಕಾರಿಯ ಎದೆಯನ್ನು ಸೀಳಿತು. ಆತ ಅಲ್ಲಿಯೇ ಬಿದ್ದ. ವೀರಮರಣ ಹೊಂದಿದ. ನಂತರ ಅಧಿಕಾರಿಯ ಮನೆಗೆ ಆತನ ಪಾರ್ಥಿವ ಶರೀರ ತಲುಪಿದ್ದು ಒಂದು ವಾರದ ಬಳಿಕ.

ರಾಜೇಶ್ ಅಧಿಕಾರಿಯ ತಾಯಿ ಮಾತ್ರ ಮಗನ ಸಾವಿನ ಸುದ್ದಿಯನ್ನು ನಂಬಿರಲಿಲ್ಲ. ಆತ ಎಲ್ಲೋ ರಣರಂಗದಲ್ಲಿ ಕಾದಾಡುತ್ತಿದ್ದಾನೆ. ಒಂದಲ್ಲ ಒಂದು ದಿನ ಮನೆಗೆ ಮರಳುತ್ತಾನೆ ಎಂಬ ವಿಶ್ವಾಸದಿಂದ ಇದ್ದಳು. ಆದರೆ ಮಗನ ಮೃತದೇಹ ಮನೆಗೆ ಮರಳಿದಾಗ ಕೊನೆಗೂ ಆಕೆ ವಾಸ್ತವತೆಯನ್ನು ಒಪ್ಪಿಕೊಳ್ಳಬೇಕಾಯಿತು. ಮಡದಿ ಬರೆದಿದ್ದ ಕಾಗದ ರಾಜೇಶ್ ಅಧಿಕಾರಿಯ ಜೇಬಿನೊಳಗೆ ಬೆಚ್ಚಗೆ ಉಳಿಯಿತು. ಆಕೆ ಏನು ಬರೆದಿದ್ದಳೋ ಏನೊ. ನಾಳೆ, ಕಾರ್ಯಾಚರಣೆ ಮುಗಿದ ಬಳಿಕ ಓದಿಕೊಳ್ಳುವೆನೆಂದು ಅಧಿಕಾರಿ ಹೇಳಿದ್ದ. ಆದರೆ ಆ ನಾಳೆ ಅಧಿಕಾರಿಯ ಬಾಳಿನಲ್ಲಿ ಬರಲೇ ಇಲ್ಲ.

- ನಾಗರಾಜ ಭಟ್ಟ

ಕ್ರೀಡೆ ಎಂಬುದೊಂದು ಮನೋಭಾವ



ಆರ್ಮ್‌ಸ್ಟ್ರಾಂಗ್

ಕ್ರೀಡೆ ಯಾವತ್ತೂ ಒಂದು ಮನೋಭಾವ.

ನಾನಾಗ ಇನ್ನೂ ಚಿಕ್ಕವನು. ಮಡಿಕೇರಿಯಲ್ಲಿ ಇದ್ದೆ. ಅಲ್ಲಿ ರಾಷ್ಟ್ರೀಯ ಜೂನಿಯರ್ ಫುಟ್‌ಬಾಲ್ ಪಂದ್ಯಾವಳಿ. ಹತ್ತು ದಿನ ಕಣ್ಣಿಗೆ ಹಬ್ಬ. ಫೈನಲ್ಸ್ ದಿನ ನಡೆದ ಘಟನೆ ಕಣ್ಣಿಗೆ ಕಟ್ಟಿದಂತಿದೆ. ಪಂಜಾಬ್ ಮತ್ತು ಮಹಾರಾಷ್ಟ್ರ ಅಂತ ಕಾಣುತ್ತೆ. ಸರಿಯಾಗಿ ನೆನಪಿಲ್ಲ.

ಗೆಲ್ಲಲು ಸಾಧ್ಯ ಇದ್ದದ್ದು ಪಂಜಾಬ್ ತಂಡಕ್ಕೆ. ಒಳ್ಳೇ ಆಳ್ತನ. ಅಷ್ಟೇ ಪಟುತ್ವ. ಅವರ ಮುಂದೆ ಎದುರಾಳಿ ತಂಡದವರು ಪೀಚಾಗಿ ಕಾಣುತ್ತಾ ಇದ್ದರು. ಅವರಂತೂ ಗೆಲ್ಲುವುದಕ್ಕಿಂತ, ಸೋಲದಿರಲೆಂದೇ ಆಡುತ್ತಾ ಇದ್ದ ಹಾಗೆ ಕಂಡಿತು. ಅವರ ಗೋಲ್ ಬಳಿ ಚೆಂಡು ಬಂದರೆ ಜೀವ ಬಿಟ್ಟ ಹಾಗೆ ಆಡುತ್ತಿದ್ದರು.

ಅಂಥವರು ಎದುರಾಳಿ ತಂಡದ ಗೋಲ್‌ವರೆಗೆ ಚೆಂಡು ಕೊಂಡೊಯ್ದರೆ ಉಸಿರು ಬಿಗಿ ಹಿಡಿದು ಕೂರುವ ಹಾಗಾಗುತ್ತಿತ್ತು. ಈ ಚಿಲ್ವಾರಿಗಳು ಆ ದೈತ್ಯರ ಎದುರು ಏನೋ ಹುಡುಗಾಟ ಮಾಡುವ ಹಾಗೆ ಕಾಣುತ್ತಿತ್ತು. ಇವರು ಗೋಲಾಗಲು ಬಿಡಲಿಲ್ಲ. ಅವರ ಅಂಗಳದೊಳಕ್ಕೆ ಚೆಂಡು ಒಯ್ಯುವುದು ಸಾಧ್ಯ ಇರಲಿಲ್ಲ. ಸಮಯ ಮುಗಿಯಲೂ ಬಂತು. ಆಯ್ತು. ಇದು ಸಮ ಆಗುತ್ತೆ. ಎಕ್ಸ್‌ಟ್ರಾ ಟೈಮು... ಹೀಗೆ ಯೋಚಿಸುತ್ತಾ ಇದ್ದೆವು. ಮಹಾರಾಷ್ಟ್ರದವರಿಗೆ ಪೆನಾಲ್ಟಿ ಕಾರ್ನರ್ ದೊರೆಯಿತು. ಪಂಜಾಬ್‌ನ ಗೋಲ್ ಬಳಿ ಗೋಡೆ ಕಟ್ಟಿದ ಹಾಗೆ ಅವರು ನಿಂತರು. ಯಾರೋ ಒಬ್ಬ ಚೆಂಡು ಒದ್ದ. ರಕ್ಷಣೆಗೆ ನಿಂತಿದ್ದವನೊಬ್ಬ ತಡೆದ. ಅದೇನಾಯಿತೋ! ಅದು ಹೇಗೆ ಕಾಲು ಕೊಟ್ಟನೋ। ಅವನ ಕಾಲಿಗೆ ಬಡಿದ ಚೆಂಡು ನೇರ ಅವರ ಗೋಲಿನೊಳಗೇ ನುಗ್ಗಿತು.

ಸಮಯ ಮುಗಿದ ಸೀಟಿ ಆಯಿತು. ಮಹಾರಾಷ್ಟ್ರದ ಚಿಲ್ಟಾರಿಗಳದು ಕ್ಷಣ ದಿಗ್ಭ್ರಮೆ. ನಂಬಿಕೆ ಆಗದು.

ಮರುಕ್ಷಣ ಹರ್ಷ ಉಕ್ಕಿ ಹರಿಯಿತು.

ಅದೇ ಸ್ಥಿತಿ ಸೆಲ್ಫ್ ಗೋಲ್ ಹೊಡೆದವನದು. ಅದೇನಾಯಿತೋ! ಅವನು ಓಡಿ ಹೋಗಿ ತಮ್ಮ ಗೋಲ್‌ನ ಕಂಬಕ್ಕೆ ತಲೆ ತಲೆ ಚಚ್ಚಿಕೊಂಡು, ಬಿಕ್ಕಿ ಬಿಕ್ಕಿ ಅಳತೊಡಗಿದ. ಅವನ ತಂಡದವರು, ಕೋಚ್, ಕೊನೆಗೆ ಊರಿನ ಜನ ಹೇಳಿದರೂ ಅವನ ದುಃಖ ಅಳಿಯುತ್ತಿಲ್ಲ.

ಹೇಳುವಷ್ಟು ಹೇಳಿ, ಕೊನೆಗೆ ಬೈದು ಎಲ್ಲ ಹೊರಟೇ ಹೋದರು. ಇಡೀ ಬಯಲಲ್ಲಿ ಒಂಟಿಯಾಗಿ ಅವನು ಗೋಲ್‌ನ ಕಂಬವನ್ನು ತಬ್ಬಿಕೊಂಡು ರಾತ್ರಿಯಿಡೀ ಹಾಗೇ ಕುಳಿತಿದ್ದ.

ತನ್ನಿಂದಾಗಿ, ಗೊತ್ತಿಲ್ಲದೇ ಆದ ತಪ್ಪಿಗೆ ಸಣ್ಣ ಹುಡುಗನೊಬ್ಬನ ಹೃದಯದಾಳದ ಪ್ರತಿಕ್ರಿಯೆ ಇದೆ.

ಇದು ಸೋತ, ಸೋಲಿಗೆ ಕಾರಣವಾದವನ ಕತೆ. ಇನ್ನು ಗೆದ್ದವರ ಕತೆ ಕೇಳಿ. ತುಂಬಾ ಹಿಂದೆ ಏನಲ್ಲ. ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ಮಹಿಳೆಯರ ರಾಷ್ಟ್ರೀಯ ವಾಲಿಬಾಲ್. ತಮಿಳ್ನಾಡು ತಂಡ ಫೈನಲ್‌ಗೆ ಬಂದಿತ್ತು. ಎದುರಾಳಿಗಳು ಸಶಕ್ತ ತಂಡ. ಅವರ ಎತ್ತರ, ಆಳ್ತನಗಳನ್ನು ನೋಡಿದರೇ, ತಮಿಳ್ನಾಡಿನವರು ಸುಮ್ಮನೇ ಪಂದ್ಯ ಆಡದೇ ರೈಲು ಹತ್ತಿ ಹೋಗುವುದೇ ಒಳ್ಳೆಯದು ಎಂದು ಅನ್ನಿಸುತ್ತಿತ್ತು. ಅದೇ ಭಾವನೆ ತಂಡದವರಲ್ಲೂ ಇತ್ತು ಎಂದು ಕಾಣುತ್ತದೆ. ಮೈದಾನಕ್ಕೆ ಇಳಿದವರು ಅಂಜಿದಂತೆ ಕಾಣುತ್ತಿತ್ತು. ಅವರಲ್ಲಿಯೇ ಪಿಸುಪಿಸು, ಗುಸುಗುಸು.

ಅವರ ತಂಡದ ಮುಂಚೂಣಿಯಲ್ಲಿ ನಿಂತ ಇಬ್ಬರು ಹುಡುಗಿಯರು ತೀರಾ ಕುಳ್ಳರು ಬೇರೆ. ಎದುರಾಳಿ ತಂಡದವರು ಸುಮ್ಮನೆ ಕೈ ಎತ್ತಿದರೆ ನೆಟ್‌ಗಿಂತ ಮೇಲಿರುತ್ತಿತ್ತು. ಇತ್ತಲಿಂದ ಚೆಂಡು ಬಂದರೆ ಸುಮ್ಮನೆ ಕೈ ಎತ್ತಿ ಪಂಚ್ ಮಾಡಿದರೆ ಸಾಕು, ತಮಿಳ್ನಾಡಿನವರು ಚಟ್ನಿ ಆಗಿ ಬಿಡುತ್ತಾರೆ ಎನ್ನುವ ಹಾಗಿತ್ತು. ಆ ಗತ್ತು ಮತ್ತು ಗೆಲ್ಲುವವರು ನಾವೇ ಎಂಬ ಅಹಂಕಾರ ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು.

ಪಂದ್ಯ ಆರಂಭವಾಯಿತು. ನಿರೀಕ್ಷಿಸಿದ ಹಾಗೆ ತಮಿಳ್ನಾಡು ತಂಡ ಕೈ ಚೆಲ್ಲಿ ಕೂಡಲಿಲ್ಲ. ಪ್ರಾಣ ಪಣಕ್ಕೆ ಇಟ್ಟವರಂತೆ ಹೋರಾಡಿದರು. ಕೊನೆಯ ಸೆಟ್‌ಗೆ ಬಂದಾಗ, ಯಾರು ಆ ಸೆಟ್ ಗೆಲ್ಲುತ್ತಾರೋ ಅವರಿಗೇ ವಿಜಯ ಎಂಬಂಥ ಸ್ಥಿತಿ.

ಪಂದ್ಯ ನೋಡಲು ಬಂದ ಪ್ರೇಕ್ಷಕರಲ್ಲಿ ಹುರುಪು. ಅವತ್ತು ಫೈನಲ್ ಎಂದೇ ಇನ್ನಷ್ಟು ಹುರುಪು. ಅವತ್ತು ಹುಡುಗರೆಲ್ಲ ಜಾಗಟೆ, ಡ್ರಂ ಮುಂತಾದ್ದೆಲ್ಲ ತಂದು ಭಾರೀ ಗದ್ದಲಕ್ಕೆ ಸಜ್ಜಾಗಿದ್ದರು. ಒಂದೊಂದು ಒಳ್ಳೆಯ ಪಾಯಿಂಟ್ ಬಂದಾಗಲೂ ಜಾಗಟೆ, ಡ್ರಂಗಳ ಸದ್ದು ತಾರಕಕ್ಕೇರಿ ಆಟಗಾರರಲ್ಲಿ ಇನ್ನಷ್ಟು ಉದ್ವಿಗ್ನತೆ ಛಲ ಮೂಡುತ್ತಿತ್ತು.

ಇತ್ತೀಚಿನ ದಿನಗಳಲ್ಲಿ ಕ್ರೀಡೆ ಒಂದು ವ್ಯಾಪಾರವೇ ಆಗಿರುವುದರಿಂದ, ಇಂಥ ಹೃದಯಸ್ಪರ್ಶಿ ಸನ್ನಿವೇಶ ತೀರಾ ಅಪರೂಪ. ಮೊನ್ನೆ ಏಷಿಯಾಕಪ್ ಪಂದ್ಯ ನಡೆಯುತ್ತಿದ್ದಾಗ, ಭಾರತದ ಆಟಗಾರರು ಟಿವಿಯಲ್ಲಿ ಕಾಣಿಸಿಕೊಂಡಾಗ 'ಇವನೇ ನೋಡೋ ದುಡ್ಡು ತಿಂದಿರೋದು' ಎಂದು ನಮ್ಮ ಮನೆಯ ಸಣ್ಣ ಸಣ್ಣ ಹುಡುಗರು ಮಾತಾಡಿಕೊಳ್ಳುತ್ತಾ ಇದ್ದರು.



ವಿವಾದದ ಸುಳಿಯಲ್ಲಿರುವ ಕಪಿಲ್‌ದೇವ್

ಕೊನೆಯ ಸೆಟ್‌ನ ಅಂತಿಮ ಹಂತ. ಎದುರಾಳಿಯ ಸರ್ವ್ ಮುಗಿದು, ತಮಿಳ್ನಾಡು ತಂಡ ಸರ್ವ್ ಮಾಡಲು ನಿಂತಿತು. ಚೆಂಡು ಆಕಾಶದೆತ್ತರಕ್ಕೆ ಹೋಗಿ ಗಿರ‍್ರನೆ ಸುತ್ತುತ್ತಾ ಕೆಳಗಿಳಿಯಿತು. ಅದನ್ನು ಎತ್ತಿದ ಹುಡುಗಿ ಮುಂದಿನವಳಿಗೆ ಕೊಟ್ಟಳು. ಆಕೆ ಅದನ್ನು ಸ್ಮ್ಯಾಷ್ ಮಾಡಲು ಅನುವಾಗುವಂತೆ ಎತ್ತಿ ತನ್ನ ಎದುರಿಗೆ ನಿಂತಿದ್ದವಳಿಗೆ ಕೊಟ್ಟಳು. ಆ ಮಹಾರಾಯಿತಿ ಇನ್ನು ಇದೇ ಕೊನೆಯ ಹಿಟ್ ಆಗಿಬಿಡಬೇಕು ಎಂಬಂತೆ ಚಚ್ಚಿದ ಬಿರುಸು ಹ್ಯಾಗಿತ್ತು ಎಂದರೆ, ಅದನ್ನು ರಿಸೀವ್ ಮಾಡುವುದು ಸಾಧ್ಯವೇ ಇಲ್ಲ ಎಂಬಂತಿತ್ತು.

ಆದರೆ ಆದದ್ದು ಬೇರೆಯೇ. ತಮಿಳ್ನಾಡಿನ ಪುಟಾಣಿ ಹುಡುಗಿ ಅದನ್ನು ಹೂವಿನ ಹಾಗೆ ಎತ್ತಿಕೊಟ್ಟಳು. ಎರಡನೆಯವಳು ಅದನ್ನು ಅನುವಾಗುವ ಹಾಗೆ ಪಾಸ್ ಮಾಡಿದಳು. ಹಿಟರ್ ಆ ಚೆಂಡನ್ನು ಭಾರೀ ಬಲ ಪ್ರಯೋಗಿಸಿ ಹೊಡೆಯುವ ಹಾಗೆ ಜಿಗಿದು, ಕ್ಷಣಾರ್ಧದಲ್ಲಿ ಅದನ್ನು ಸುಮ್ಮನೆ ಬೆರಳಿಂದ ನೂಕಿ ಗ್ಯಾಪ್‌ನತ್ತ ನೂಕಿದಳು. ಸಶಕ್ತ ಎದುರಾಳಿ ತಂಡ ಪಿಗ್ಗಿ ಬಿತ್ತು. ಸಿಳ್ಳೆ, ಚಪ್ಪಾಳೆ, ಕೇಕೆ....

ನಮ್ಮ ಹುಡುಗರ ಕಿವಿ ಗಡಚಿಕ್ಕುವ ಗಂಟೆ, ಜಾಗಟೆಗಳ ಸದ್ದು. ತಮಿಳ್ನಾಡಿನ ಹುಡುಗಿಯರು ಬೆಕ್ಕಸ ಬೆರಗಾಗಿ ನಿಂತರು. ಗೆಲುವಿನ ಪಾಯಿಂಟ್ ತಂದಿತ್ತ ಹುಡುಗಿಯನ್ನು ಬಾಚಿ ತಬ್ಬಿ ಎತ್ತಿಕೊಂಡರು. ಮರುಕ್ಷಣ ಥಟ್ಟಂತ ಚಿಮ್ಮಿದ ಕಣ್ಣೀರು. ಅವರೆಲ್ಲ ಪರಸ್ಪರ ತಬ್ಬಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದರು. ಅದೊಂದು ವಿಚಿತ್ರ ಸನ್ನಿವೇಶ.

ನಿಜವಾದ, ಹೃದಯ ತಟ್ಟಿದ ಎರಡು ಸೋಲು ಗೆಲುವಿನ ಸನ್ನಿವೇಶಗಳು ಇವು. ಅಲ್ಲಿ ಸಾಹಸ, ಚಾಣಾಕ್ಷತೆ, ಸ್ಕಿಲ್ ಎಲ್ಲ ಮೀರಿದ ಮನುಷ್ಯ ಸಹಜವಾದ ಭಾವನೆಗಳ ವಿಜೃಂಭಣೆ ಇದೆ.

ಇತ್ತೀಚಿನ ದಿನಗಳಲ್ಲಿ ಕ್ರೀಡೆ ಒಂದು ವ್ಯಾಪಾರವೇ ಆಗಿರುವುದರಿಂದ, ಇಂಥ ಹೃದಯಸ್ಪರ್ಶಿ ಸನ್ನಿವೇಶ ತೀರಾ ಅಪರೂಪ. ಮೊನ್ನೆ ಏಷಿಯಾಕಪ್ ಪಂದ್ಯ ನಡೆಯುತ್ತಿದ್ದಾಗ, ಭಾರತದ ಆಟಗಾರರು ಟಿವಿಯಲ್ಲಿ ಕಾಣಿಸಿಕೊಂಡಾಗ 'ಇವನೇ ನೋಡೋ ದುಡ್ಡು ತಿಂದಿರೋದು' ಎಂದು ನಮ್ಮ ಮನೆಯ ಸಣ್ಣ ಸಣ್ಣ ಹುಡುಗರು ಮಾತಾಡಿಕೊಳ್ಳುತ್ತಾ ಇದ್ದರು.

ಮೊದಲಿನ ಹಾಗೆ ಉದ್ವಿಗ್ನತೆ, ಮುಂದೆ ಏನಾಗುತ್ತದೆ ಎಂಬ ಕುತೂಹಲವೂ ಆ ಮಕ್ಕಳಲ್ಲಿ ಇದ್ದಂತೆ ಇರಲಿಲ್ಲ. ಏನೋ ಕ್ರಿಕೆಟ್ ಆಡುತ್ತಿದ್ದಾರೆ. ನೋಡೋದು ಒಂದು ಕೆಟ್ಟ ಚಟ. ಬಿಡೋಕ್ಕಾಗಲ್ಲ, ಅದಕ್ಕಾಗಿ ನೋಡ್ತಾ ಇರೋದು ಅನ್ನೋ ಹಾಗೆ ಅವರ ಭಾವನೆ ಇದ್ದ ಹಾಗಿತ್ತು.

ಈಗ ಎಲ್ಲರ, ಮುಖ್ಯವಾಗಿ ಕ್ರೀಡಾಭಿಮಾನಿಗಳ ಮನಸ್ಸಿನಲ್ಲಿ ನಾವು ತೋರಿಸಿದ ಪ್ರೀತಿ, ಅಭಿಮಾನಿಗಳಿಗೆ ಇವರ‍್ಯಾರೂ ಅರ್ಹರಾಗಿರಲಿಲ್ಲ. ನಾವೆಲ್ಲ ತೀರಾ ಮೋಸ ಹೋದೆವು ಎಂಬಂತಹ ವಿಷಣ್ಣತೆ ಆವರಿಸಿ ನಿಂತು ಬಿಟ್ಟಿದೆ.

ಹ್ಯಾನ್ಸಿ ಕ್ರೋನಿಯೇ, ಹರ್ಷೆಲ್ ಗಿಬ್ಸ್ ದಕ್ಷಿಣ ಆಫ್ರಿಕಾದ ವಿಚಾರಣೆ ಸಮಯಕ್ಕೆ ನೀಡಿರುವ ಹೇಳಿಕೆಗಳನ್ನು ಗಮನಿಸಿದರೆ, ಒಬ್ಬ ನಿಜವಾದ ಹೀರೋಗೆ ಇರಬೇಕಾದ ಆಂತರಿಕ ವ್ಯಕ್ತಿತ್ವ ಇರಲಿಲ್ಲ ಎಂದೆನಿಸುತ್ತದೆ. ನಾವು ನಿತ್ಯ ನೋಡುವ ಲಂಚಕ್ಕೆ ಕೈಯೊಡ್ಡುವ ಎರಡನೇ ದರ್ಜೆ ಗುಮಾಸ್ತನ ಹಾಗೆ ಇವರೂ ನಡೆದುಕೊಂಡಿದ್ದಾರೆ ಎನ್ನಿಸುತ್ತದೆ.

ಕೋಟ್ಯಾಂತರ ರೂಪಾಯಿ ಸಂಪಾದಿಸುವ ಈ ಕ್ರೀಡಾಪಟುಗಳು, ತಂದೆಯ ಅನಾರೋಗ್ಯ, ಮತ್ತೊಂದು ಮಗದೊಂದು.... ಅಂಥ ಸಮಯದಲ್ಲಿ ಇನ್ನಷ್ಟು ದುಡ್ಡು ಬರೋದಾದರೆ ಯಾಕೆ ಬಿಡಬೇಕು ಅಂತ ಒಪ್ಪಿಕೊಂಡೆ ಎಂದು ಹೇಳಿಕೆ ನೀಡಿರುವುದು ಗಮನಿಸಿದರೆ, ಮನುಷ್ಯನ ಮಟ್ಟ ಎಷ್ಟೇ ದೊಡ್ಡದಾಗಬಹುದು. ಆದರೆ ಅವನ ಸ್ವಭಾವ ಸಹಜ ಗುಣ ಮಾತ್ರ ಹಾಗೇ ಇರುತ್ತದೆ ಎಂದು ಮತ್ತೆ ಮತ್ತೆ ಸಾಬೀತಾಗುತ್ತದೆ ಅಲ್ಲವೇ?

ಇಂಥ ಸನ್ನಿವೇಶದಲ್ಲಿಯೂ, ಇವತ್ತೂ ಜನ ಪ್ರೇರಣೆಗಾಗಿ, ಉತ್ಸಾಹ ತುಂಬಿಕೊಳ್ಳಲು ತಲೆ ಎತ್ತಿ ನೋಡಬಹುದಾದ್ದು ಕ್ರೀಡಾಪಟುಗಳನ್ನೇ. ಏಕೆಂದರೆ ಅವರೂ ಸಾಮಾನ್ಯ ಕುಟುಂಬಗಳಿಂದ, ಜನರ ನಡುವಿಂದ ಎದ್ದು ಬಂದಿರುತ್ತಾರೆ. ಸಹಸ್ರಾರು ಜನರ ಆರಾಧ್ಯ ದೈವ ಎಂಬಂಥ ಮಟ್ಟಕ್ಕೆ ಬಂದು ಮುಟ್ಟಿರುತ್ತಾರೆ. ಆ ಸಾಧನೆಯ ಹಿಂದೆ ಎಷ್ಟೊಂದು ಪರಿಶ್ರಮ ಮತ್ತು ಏಕಾಗ್ರತೆಗಳು ಇರುತ್ತವೆ. ಅದು ತಮಗೆ ಮಾದರಿ ಆಗುತ್ತವೆ, ಪ್ರೇರಣೆ ಆಗುತ್ತವೆ ಎಂಬ ನಂಬಿಕೆ.

ಅಂಥವರು ಇಲ್ಲ ಎಂದಲ್ಲ. ಕಳೆದ ಬಾರಿ 'ಟೂರ್ ಡಿ ಫ್ರಾನ್ಸ್' ಎಂಬ ಅತಿ ಕ್ಲಿಷ್ಟ ಸೈಕಲ್ ಸವಾರಿ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದ ಅಮೇರಿಕಾದ ಲ್ಯಾನ್ಸ್ ಆರ್ಮ್‌ಸ್ಟ್ರಾಂಗ್ ಅಂಥ ಇತ್ತೀಚಿನ ಉದಾಹರಣೆ.

ಜಗತ್ತಿನ ಎಲ್ಲ ಸೈಕಲ್ ಸ್ಪರ್ಧೆಗಳಲ್ಲಿ 'ಟೂರ್

ಭಾರತದಲ್ಲಿ ಬೆಲೆ ಇಳಿತ

'ಬೆಲೆ ಏರಿಕೆಗಾಗಿ
ನೀವೇನು ಮಾಡಿದಿರಿ?'
ಪ್ರಶ್ನೆ ಕೇಳಿ ಮೊದಲು ಹೆದರಿ
ಕಡೆಗೆ ಹೇಳಿದರು
ಮುಗುಳ್ನಕ್ಕು ಅವರು
'ಇಡೀ ಜಗತ್ತಿನಲ್ಲಿಯೇ ಆಗಿದೆ
ಬೆಲೆ ಏರಿಕೆ
ಆದರೆ ಕಾಣಿಸಲಿಲ್ಲ ಭಾರತದಲ್ಲಿ
ಹತ್ತತ್ತು ರೂಪಾಯಿಗೆ ಸಿಗುತ್ತಾರೆ
ಬಾಲಕರು
ಇಪ್ಪತ್ತಕ್ಕೆ ಅವರ
ಪಾಲಕರು
ನಾಲ್ಕು ರೊಟ್ಟಿಗಳಿಗೆ ಪ್ರತಿಯಾಗಿ
ಹರೆಯದ ಹೆಣ್ಣು
ಹೋಗಿ ನೋಡಿ ಸ್ವಲ್ಪ ಗಮನವಿಟ್ಟು
ಮೆಲ್ಲ-ಮೆಲ್ಲನೆ ಅದೆಷ್ಟು
ಆಗುತ್ತಿದೆ ಇಳಿತ
ನಮ್ಮ ಭಾರತ.

ಹಿಂದಿಯಲ್ಲಿ : ಘನಶ್ಯಾಮ ಅಗ್ರವಾಲ
ಕನ್ನಡಕ್ಕೆ : ಡಿ.ಎನ್.ಶ್ರೀನಾಥ್

ಡಿ ಫ್ರಾನ್ಸ್' ಅತಿ ಕ್ಲಿಷ್ಟಕರವಾದದ್ದು. ಎಷ್ಟೋ ಜನ ಗುರಿ ಮುಟ್ಟಲಾಗದೇ ಕುಸಿದು ಬಿದ್ದಿದ್ದಾರೆ. ಅಂಥದರಲ್ಲಿ ಒಮ್ಮೆ ಕ್ಯಾನ್ಸರ್ ರೋಗಿ ಆಗಿದ್ದ ಲ್ಯಾನ್ಸ್ ಆರ್ಮ್ ಸ್ಟ್ರಾಂಗ್ ಪ್ರಶಸ್ತಿ ಗೆದ್ದಿದ್ದು, ಕಷ್ಟಗಳನ್ನು ಮೀರಿ ನಿಲ್ಲುವ ಮನುಷ್ಯನ ಛಲಕ್ಕೆ ಸಂದ ವಿಜಯವಾಗಿತ್ತು.

1993ರ ಹೊತ್ತಿಗೆ ಅಮೇರಿಕನ್ ಹಾಗೂ ವಿಶ್ವ ಸೈಕಲ್ ಸವಾರಿ ಪ್ರಶಸ್ತಿ ಗೆದ್ದುಕೊಂಡಿದ್ದ ಆರ್ಮ್‌ಸ್ಟ್ರಾಂಗ್ ಇನ್ನೂ ಹೆಚ್ಚಿನ ಸಾಧನೆ ಮಾಡಬೇಕು ಅಂದುಕೊಂಡ. ಆಗಲೇ ಕಿಬ್ಬೊಟ್ಟೆಯಲ್ಲಿ ನೋವು ಕಾಣಿಸಿತು. ಸೈಕಲ್ ತುಳಿದರೆ ನೋವು. ತಲೆ ತಿರುಗಿ, ಕಣ್ಣು ಕಟ್ಟಿದಂತಾಗಿ ಬೀಳುವಂತಾಗುತ್ತಿತ್ತು.

ಅವನನ್ನು ಪರೀಕ್ಷಿಸಿದ ವೈದ್ಯರು ವೃಷಣದ ಕ್ಯಾನ್ಸರ್ ಆಗಿದೆ ಎಂದು ಪತ್ತೆ ಹಚ್ಚಿದರು. ಚಿಕಿತ್ಸೆ ಮುಂದುವರಿಯಿತು. ಕ್ಯಾನ್ಸರ್ ಎಂದರೆ ಗೊತ್ತಲ್ಲ. ಒಂದು ರೀತಿಯಲ್ಲಿ ಬದುಕಿನ ಕೊನೆ. ಆರ್ಮ್‌ಸ್ಟ್ರಾಂಗ್ ಶಸ್ತ್ರ ಚಿಕಿತ್ಸೆಗೆ ಒಳಗಾದ. ನಾಲ್ಕು ಬಾರಿ ತೀವ್ರ ರೀತಿಯ ಕೆಮೋಥೆರಪಿಗೆ ಒಳಗಾಗಬೇಕಾಯಿತು. ಪ್ರತಿ ಬಾರಿ ಕೆನೋಥೆರಪಿಗೆ ಹೋಗುವ ಮುನ್ನ ಐವತ್ತರಿಂದ ಎಂಬತ್ತು ಕಿಲೋ ಮೀಟರ್ ಸೈಕಲ್ ತುಳಿಯುತ್ತಿದ್ದ.

ಕ್ಯಾನ್ಸರ್ ವಾಸಿಯಾಗಿದೆ ಎಂದು ವೈದ್ಯರೇನೋ ಹೇಳಿದರು. ಆದರೆ ರೋಗಿಗೆ ನಂಬಿಕೆ ಆಗಲಿಲ್ಲ. ಒಮ್ಮೆ ಕ್ಯಾನ್ಸರ್ ಬಂದರೆ ಮುಗಿಯಿತು. ಎಲ್ಲ ಚಟುವಟಿಕೆಗೆ ದೀರ್ಘ ವಿರಾಮ. ಇದು ಸಾಮಾನ್ಯವಾದ ನಂಬಿಕೆ.


ಈ ಕಾರಣಕ್ಕೆ 1997ರಲ್ಲಿ ಚೇತರಿಸಿಕೊಂಡಿದ್ದ ಆರ್ಮ್‌ಸ್ಟ್ರಾಂಗ್ ಸ್ಪರ್ಧೆಯೊಂದಕ್ಕೆ ಹೆಸರು ಕೊಟ್ಟಿದ್ದರೂ, ಕೊನೆ ಗಳಿಗೆಯಲ್ಲಿ ನಿವೃತ್ತನಾಗಿ ಬಿಟ್ಟ.

ಚೇತರಿಕೆಗಾಗಿ ಗಿರಿಧಾಮಕ್ಕೆ ಹೋದ. ದೇಹ ಚೇತರಿಸಿಕೊಳ್ಳುತ್ತಿತ್ತು. ಬೆಟ್ಟದ ರಸ್ತೆಯಲ್ಲಿ ಗೆಳೆಯನೊಂದಿಗೆ ಸೈಕಲ್ ತುಳಿಯುತ್ತಾ ಇರುವಾಗ ದೇಹವೇನೋ ಚೇತರಿಸಿಕೊಂಡಿದೆ, ಮನಸ್ಸು ಚೇತರಿಸಿಕೊಂಡಿಲ್ಲ ಎನ್ನಿಸಿತು. ದೇಹ ಚೆನ್ನಾಗಿದ್ದರೂ, ಅದನ್ನು ಹಿಂದಕ್ಕೆ ಎಳೆಯುತ್ತಾ ಇರುವ ಮನಸ್ಸು ಚೇತರಿಸಿಕೊಳ್ಳಲು ಏನಾದರೂ ಮಾಡಬೇಕು ಅನ್ನಿಸಿತು.

ಆ ಛಲ ಕೆಲಸ ಮಾಡಿತು. ದೇಹದ ಹಾಗೆ ಮನಸ್ಸೂ ಚೇತರಿಸಿಕೊಂಡಿತು. ಅತ್ಯಂತ ಕ್ಲಿಷ್ಟ ಎನಿಸಿದ 'ಟೂರ್ ಡಿ ಫ್ರಾನ್ಸ್' ನ ಪ್ರಶಸ್ತಿ ಆರ್ಮ್ ಸ್ಟ್ರಾಂಗ್ ಪಾಲಾಯಿತು.

ಇಂಥ ಪ್ರಶಸ್ತಿ ಗೆದ್ದ ಎರಡನೇ ಅಮೆರಿಕನ್ ಈತ. ಇವನು ಎಲ್ಲ ಅನುಕೂಲ ಇದ್ದೂ ಸಣ್ಣ ಕಷ್ಟ ಬಂದರೆ ಕಂಗೆಡುವ ನಾವು, ಕ್ಯಾನ್ಸರ್‌ನಂಥ ಮಾರಕ, ಭೀಕರ ರೋಗದ ಎದುರು ಸೆಣಸಿ ಎತ್ತರಕ್ಕೇರಿದ ಆರ್ಮ್‌ಸ್ಟ್ರಾಂಗ್‌ನಂಥವರು ನಿಜವಾದ ಅರ್ಥದಲ್ಲಿ ಹೀರೋಗಳು ಎನಿಸಿಬಿಡುತ್ತಾರೆ. ಏಕೆಂದರೆ ಕ್ರೀಡೆ ಎಂದರೆ ಸೋಲು, ಗೆಲುವುಗಳ ನಿರ್ಧಾರದ ಒಂದು ಪೈಪೋಟಿಯಲ್ಲ. ಅದೊಂದು ಮನೋಭಾವ.

■ ಸುಹಾಸ



ಮ್ಯಾಚ್ ಫಿಕ್ಸಿಂಗ್ ಹಗರಣದ ಮೊದಲ ಬಲಿಪಶು ಹ್ಯಾನ್ಸಿ ಕ್ರೋನಿಯೇ

ಗ್ರಿಗೋರಿ ಮ್ಯಾಕ್ನಮೀ ಖ್ಯಾತ ಮಾನವ ಶಾಸ್ತ್ರಜ್ಞ. ತನ್ನ ಸಂಶೋಧನೆ ವೇಳೆ ಆತ ರೆಡ್ ಇಂಡಿಯನ್ ಒಬ್ಬನ ಬಳಿ, ಅವರಲ್ಲಿ ನೀರು ಕುರಿತಾದ ಜಾನಪದ ಗೀತೆಗಳೇ ಯಾಕೆ ಹೆಚ್ಚಾಗಿವೆ ಎಂದು ತಿಳಿಯಲು ಬಯಸಿದ.


'ಇಲ್ಲಿ ಸದಾ ನೀರಿನ ಕೊರತೆ ಅದಕ್ಕೆ' ಎಂದ ಆ ಹಳೇ ಮನುಷ್ಯ.

'ನಿಮ್ಮಲ್ಲಿ ಪ್ರೀತಿಯ ಬಗ್ಗೆಯೇ ಹೆಚ್ಚು ಹಾಡುಗಳು ಇವೆ ಅಲ್ಲವೇ?' ಎಂದು ಮರು ಪ್ರಶ್ನಿಸಿದಾಗ, ಸಂಶೋಧಕ ಪೆಚ್ಚಾಗಿಬಿಟ್ಟ.

★

ಕಲೆ, ಕಥೆಗಾರಿಕೆ, ತಮಾಷೆ ತುಂಬಾ ಅದ್ಭುತ ಸಂಗತಿಗಳು. ನಾವು ಆಧುನಿಕವಾಗುತ್ತಾ ನಮ್ಮ ಕತ್ತೆ ಕೆಲಸಗಳನ್ನು ಮಾಡಲು ಯಂತ್ರಗಳನ್ನು ಸೃಷ್ಟಿಸಿಕೊಳ್ಳುತ್ತಾ ಇದ್ದೇವೆ. ಇಂಥ ಸಂದರ್ಭದಲ್ಲಿ ಕತೆ ಹೇಳುವ, ಪೇಟಿಂಗ್ ಮಾಡುವ, ತಮಾಷೆ ಮಾಡುವಂಥ ನಾಜೂಕು ಕೆಲಸಗಳನ್ನು ಕೇವಲ ಮನುಷ್ಯ ಮಾತ್ರ ಮಾಡಬಲ್ಲ. ಅದಕ್ಕೆ ಯಾವ ಯಂತ್ರವೂ ಬರಲಾರದು. ಆಗ ನಿಜವಾದ ಮನುಷ್ಯನ ಕಲೆ, ಮೌಲ್ಯಕ್ಕೆ ಹೆಚ್ಚಿನ ಬೆಲೆ ಬರುವುದು ಖಂಡಿತ.

-ಬ್ರ್ಯಾನ್ ಫೆರೆನ್.



ಮರಾಠಿಗರಿಗೆ ಬೆಳಗಾವಿ

ನೀಡಿದ ಕೊಡುಗೆ

ಪು.ಲ.ದೇಶಪಾಂಡೆ

ಕರ್ನಾಟಕದ ಬೆಳಗಾವಿ ಜಿಲ್ಲೆ ಮರಾಠಿ ಸಾಹಿತ್ಯಕ್ಕೆ ನೀಡಿದ ಬಹು ದೊಡ್ಡ ಕೊಡುಗೆ ಪು.ಲ. ದೇಶಪಾಂಡೆ. ಇವರ ಹಿರಿಯರು ಮೂಲತಃ ಬೆಳಗಾವಿ ಜಿಲ್ಲೆಯವರು. ಪು.ಲ. ಮಹಾರಾಷ್ಟ್ರದ ಸಂಸ್ಕೃತಿಯ ವಲಯದಲ್ಲಿ ತಮ್ಮ ಬಹುಮುಖಿ ವ್ಯಕ್ತಿತ್ವದಿಂದಲೇ ಛಾಪು ಮೂಡಿಸಿದವರು.

ಪು.ಲ.ದೇಶಪಾಂಡೆ ಮೂಲತಃ ಬೆಳಗಾವಿ ಜಿಲ್ಲೆಯವರು. ಬೆಳಗಾವಿ ಸಮೀಪದ ಕಲಾನಿಧಿಗಢ ಅವರ ಹಿರಿಯರ ತವರು. ಅವರು ಹುಟ್ಟಿದ್ದು ಮುಂಬಯಿಯಲ್ಲಾದರೂ, ಪುಣೆ, ಬೆಳಗಾವಿ, ಸಾಂಗ್ಲಿಗಳಲ್ಲಿ ದುಡಿದ ಅವರು ಮರಾಠಿಯ ಅನನ್ಯ ವ್ಯಕ್ತಿತ್ವ.

ಬೆಳಗಾವಿಯ ಟಿಳಕವಾಡಿಯಲ್ಲಿ ಪು.ಲ. ಅವರ ಭಾಷಣ ಇದೆ ಎಂದರೆ ಅಲ್ಲಿನ ಮರಾಠಿ ರಸಿಕರು ಹಿಂಡುಗಟ್ಟಿ ಹೋಗುತ್ತಿದ್ದರು.

ಪು.ಲ. ಅವರನ್ನು ಕೇವಲ ಸಾಹಿತಿ, ಸಂಗೀತಗಾರ ಎಂದೆಲ್ಲ ಗುರುತಿಸುವುದು ಅವರ ವ್ಯಕ್ತಿತ್ವವನ್ನೇ ಸೀಮಿತಗೊಳಿಸಿ ನೋಡಿದಂತೆ. ಏಕೆಂದರೆ ಅತ್ಯಂತ ಬುದ್ಧಿವಂತ ಮರಾಠಿ ಸಾಹಿತ್ಯ ಪ್ರಿಯನಿಗೆ ಹೇಗೋ ಹಾಗೆ ಸಾಮಾನ್ಯ ಮರಾಠಿಗನಿಗೂ ಅವರು ಒಂದಲ್ಲ ಒಂದು ರೀತಿ ಇಷ್ಟವಾಗಿದ್ದ ವ್ಯಕ್ತಿ. ಅವರ ಜೀವನದ ಘಟನೆಗಳು ಎಂದು ಹೇಳಲಾದ ರಸಿಕ ಪ್ರಸಂಗಗಳು ಬಾಯಿಂದ ಬಾಯಿಗೆ ಪ್ರಚಾರವಾಗಿ, ಅವರ ಇಡೀ ವ್ಯಕ್ತಿತ್ವಕ್ಕೇ ವಿಚಿತ್ರ ಮೆರುಗು ಹಾಗೂ ಆಯಾಮ ಬಂದಿತ್ತು.

ಪು.ಲ. ದೇಶಪಾಂಡೆ ಪ್ರತಿಷ್ಠಾನ ಕಟ್ಟಿದ್ದ ಅವರು, ತಮ್ಮ ಆದಾಯದಿಂದಲೇ ಗಳಿಸಿದ್ದ ಒಂದು ಕೋಟಿ ರೂಪಾಯಿಗೂ ಮೀರಿದ ಹಣವನ್ನು ನಾನಾ ಕಾರ್ಯಗಳಿಗೆ ವಿನಿಯೋಗಿಸಿದ್ದರು. ಆದಾಯದ ಬಗ್ಗೆ ಎಂದೂ ಅವರು ಮೋಹ ಹೊಂದಿದವರಲ್ಲ. ಹಾಗಾಗಿಯೇ ತಮಗೆ ಸರಿದೋರಿದ ಕಾರ್ಯಕ್ಕೆ ವೆಚ್ಚ ಮಾಡಲೂ ಅವರೆಂದೂ ಹಿಂದೆ ಮುಂದೆ ನೋಡಿದವರಲ್ಲ.

ಸಾಹಿತ್ಯ, ಸಂಗೀತ ಕ್ಷೇತ್ರದಲ್ಲಿ ಇಂಡಿಯಾದಲ್ಲಿ ಇರುವ ಅತ್ಯುನ್ನತ ಪ್ರಶಸ್ತಿಗಳನ್ನೆಲ್ಲ ಪಡೆದಿದ್ದ ಪು.ಲ.ಗೆ ಕವಿ ಗುರು ರವೀಂದ್ರರೆಂದರೆ ಇನ್ನಿಲ್ಲದ ಪ್ರೀತಿ. ಈ ಪ್ರೀತಿಯಿಂದಾಗಿಯೇ ತಮ್ಮ ಐವತ್ತನೇ ವಯಸ್ಸಿನಲ್ಲಿ ಶಾಂತಿನಿಕೇತನಕ್ಕೆ ಹೋದರು. ಅಲ್ಲಿ ಉಳಿದುಕೊಂಡು ಮೂರೇ ತಿಂಗಳಲ್ಲಿ ಬಂಗಾಳಿ ಭಾಷೆಯನ್ನು ಕಲಿತರು. ಅದಕ್ಕಾಗಿ ಒಬ್ಬ ಶಿಕ್ಷಕನನ್ನೇ ನೇಮಕ ಮಾಡಿಕೊಂಡಿದ್ದರು.

ಬದುಕಿರುವಾಗಲೇ ದಂತಕತೆಯಂತಾಗಿದ್ದ ಪು.ಲ. ಜೀವನದಲ್ಲಿ ನಡೆಯಿತೆನ್ನಲಾದ ರಸಿಕ ಪ್ರಸಂಗಗಳನ್ನು ಈಗಲೂ ಬೆಳಗಾವಿಯ ಜನ ಬಾಯಿ ಚಪ್ಪರಿಸುವಂತೆ ಇತರರಿಗೆ, ತಾವೇ ಕಂಡಂತೆ ಬಣ್ಣಿಸುತ್ತಾರೆ. ಹಾಗೆ ಪ್ರಚಲಿತವಿರುವ ಒಂದು ರಸಿಕ ಪ್ರಸಂಗ ಹೀಗೆ:

ಪು.ಲ. ಯಾರದೋ ಮದುವೆಗೆ ಹೋಗಿದ್ದರು. ಅಲ್ಲಿ ಗಂಡು ಹೆಣ್ಣು ಬಿಟ್ಟು ಇವರನ್ನು ನೋಡಲೆಂದೇ ಬಂದವರ ಸಂಖ್ಯೆಯೇ ಹೆಚ್ಚು. ಅವರ ಸುತ್ತ ನೆರೆದು, ಮಾತು ನಗೆಯ ಹೊಳೆಯಲ್ಲಿ ತೇಲಿದ ನಂತರ ಊಟ.

ಎಲ್ಲ ಮದುವೆ ಮನೆಗಳಲ್ಲೂ ಇರುವ ಹಾಗೆ ಅಲ್ಲೊಬ್ಬ ಮಿಟುಕಲಾಡಿ ಹೆಣ್ಣು. ತುಂಬಾ ಸುಂದರಿ. ಅಷ್ಟೇ ಅಹಂಕಾರದಿಂದ ಬೀಗುವಾಕೆ. ಅವಳನ್ನು ಮಾತಾಡಿಸಿದರೇ ಏನೋ ಎಂತೋ ಎಂಬ ಹಾಗೆ ಇದ್ದವಳು. ಇದನ್ನು ಅರಿತೆ ಏನೋ ಆಕೆ ಮಹಾ ಧಿಮಾಕಿನಿಂದ ತಿರುಗುತ್ತಾ ಇದ್ದಳು.

ಊಟಕ್ಕೆ ಉಳಿತಾಗಲೂ ಪು.ಲ. ಹಾಸ್ಯದ ಚಟಾಕಿಗಳಿಗೆ ಕೊನೆ ಇಲ್ಲ. ಈ ಚೆಂದದ ಹೆಣ್ಣು ಮೊದಲು ನೀರು ಬಡಿಸಿದಳು. ಆನಂತರ ಕಾಯಿಸಿದ ತುಪ್ಪ ಅದಾದ ನಂತರ ಪಾಯಸ, ಹೀಗೇ ನೀರು ನೀರಾದ ಪದಾರ್ಥಗಳನ್ನೆ ಆರಿಸಿಕೊಂಡು ಅವಳು ಬಳಸಲು ನಿಂತಂತೆ ಕಾಣುತ್ತಿತ್ತು. ಇದನ್ನು ಚೆನ್ನಾಗಿ ಗಮನಿಸಿದವರು ಪು.ಲ.

ಪಾಯಸ ಬಡಿಸಲು ಬಂದಾಗ ಪು.ಲ. ಹೇಳಿದರು. 'ಪತಲಾ ಸೋಡೂನ ಯಾವಾ' ಅಂದರೆ ಇಂಥ ನೀರು ನೀರಾದ ಪದಾರ್ಥಗಳನ್ನು ಬಿಟ್ಟು ಬೇರೆ ಏನಾದರೂ ಬಡಿಸು ಮಾರಾಯಿತಿ ಎಂಬುದು ಮೇಲು ನೋಟದ ಅರ್ಥ. ಆದರೆ ಮರಾಠಿಯಲ್ಲಿ 'ಪತಲಾ' ಎಂದರೆ ಸೀರೆ ಎಂದು ಕೂಡ ಆಗುತ್ತದೆ. ಚಂದದ, ಅಷ್ಟೇ ಸೋಗಿನ ಹೆಣ್ಣಿಗೆ ಆಯ ನೋಡಿ ಪೆಟ್ಟು ಹಾಕುವುದರಲ್ಲಿ, ಅದೂ ರಸಿಕತನದಿಂದಲೇ ಚಾಟಿ ಏಟು ಕೊಡುವುದರಲ್ಲಿ ನಿಸ್ಸೀಮರು ಪು.ಲ. ಅವರು ಹೀಗೆ ಹೇಳುತ್ತಿದ್ದಂತೆ ಕ್ಷಣವೇ ಬೇಕಾಯಿತು ಸುತ್ತ ಇದ್ದವರಿಗೆ ಅರ್ಥವಾಗಲು. ಮರುಕ್ಷಣ ಅವರೆಲ್ಲ ಸೂರು ಹಾರುವಂತೆ ನಕ್ಕಿದ್ದು ನೋಡಿಯೇ ಆಕೆ ನಾಚಿ ನೀರಾದಳು ಮತ್ತೆ ಅಲ್ಲಿ ಕಾಣಿಸಿಕೊಳ್ಳಲಿಲ್ಲ.

ಮಿಟುಕಲಾಡಿತನ ಮಾಡುತ್ತಾ, ಆಯಾಸಗೊಳಿಸುವಂತಹ ಮೈಮುರಿಯುವ ಹೊರೆಯ ಯಾವುದೇ ವಸ್ತುವನ್ನೂ ಬಡಿಸಲು ಮುಂದಾಗದೆ ಬಿನ್ನಾಣವಾಡುತ್ತಿದ್ದ ಆ ಹೆಣ್ಣಿಗೇ ಪು.ಲ. ಒಂದೇ ಮಾತಿನ 'ಟಾಂಟ್' ಹೊಡೆದು ಮಣಿಸಿದ್ದರು. ಇಂಥ ಇನ್ನೂ ಅನೇಕ ಕತೆ ಎನ್ನಬಹುದಾದ ರಸಿಕ ಪ್ರಸಂಗಗಳನ್ನು


ಈಗಲೂ ಬೆಳಗಾವಿಯ ಜನ ಹೇಳುತ್ತಾ ಇರುತ್ತಾರೆ.

ಇವರು ಬೆಳಗಾವಿಯವರಾದರೂ, ಮಹಾರಾಷ್ಟ್ರದ ಸಾಂಸ್ಕೃತಿಕ ರಾಜಧಾನಿ ಎನಿಸಿದ ಪುಣೆಯನ್ನು ಮೆಚ್ಚಿಕೊಂಡು ಅಲ್ಲೇ ನೆಲೆಸಿದರು. ಪುರುಷೋತ್ತಮ ಲಕ್ಷ್ಮಣ ದೇಶಪಾಂಡೆ ಅವರ ಪೂರ್ಣ ಹೆಸರಾದರೂ ಪು.ಲ. ಎಂದೇ ಚಿರಪರಿಚಿತರಾದವರು. 1936ರಲ್ಲಿ ಮುಂಬಯಿಯ ಜೋಗೇಶ್ವರಿಯಲ್ಲಿರುವ ಇಸ್ಮಾಯಿಲ್ ಯೂಸಸ್ ಕಾಲೇಜು ಸೇರಿದ ಪು.ಲ. ಅಲ್ಲಿಯೇ ಪರಿಚಯವಾದ ಸುನೀತಾ ಠಾಕೂರ್ ಅವರನ್ನೇ ಹತ್ತು ವರ್ಷದ ನಂತರ ಮದುವೆ ಆದರು.

ಗಾಂಧೀಜಿ ನಂತರ ಅವರ ಸಿದ್ಧಾಂತಗಳನ್ನು ಅವರ ಅನುಯಾಯಿಗಳು ನಗೆಪಾಟಲು ಮಾಡಿರುವ ರೀತಿಯನ್ನು ಬಿಂಬಿಸುವ 'ತುಝೆ ಆಹೆ ತುಝೆ ಪಾಶ' ವಿಡಂಬನಾ ನಾಟಕ ಅವರಿಗೆ ಭಾರೀ ಹೆಸರು ತಂದ ಕೃತಿ. ಅದೇ ಸಮಯಕ್ಕೆ (1955) ಆಕಾಶವಾಣಿಯನ್ನು ಸೇರಿದ್ದ ಅವರಿಗೆ, ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ತೊಡಗಲು ವಿಪುಲ ಅವಕಾಶ ಸಿಕ್ಕಿತು.

ಕಾದಂಬರಿ, ನಾಟಕ ಮುಂತಾದವುಕ್ಕಿಂತ ಹೆಚ್ಚಾಗಿ ಅವರಿಗೆ ಹೆಚ್ಚಿನ ಹಣ ತಂದು ಕೊಟ್ಟಿದ್ದು ಸಿನಿಮಾ ಚಿತ್ರಕತೆಗಳು. ಸಂಗೀತ ನಿರ್ದೇಶಕರೂ ಆಗಿದ್ದ ಅವರು ಸಾಹಿತ್ಯದ ಅಭ್ಯಾಸಿಗಳೂ ಅಲ್ಲದೆ ಸಾಮಾನ್ಯರ ನಡುವೆಯೂ ತಮ್ಮ ಮಾತುಗಾರಿಕೆ, ಜೋಕುಗಳಿಂದಾಗಿ ಜನಪ್ರಿಯರಾದವರು.

ಇವತ್ತು ಮರಾಠಿ ಸಾಹಿತ್ಯ, ಸಂಸ್ಕೃತಿ ಎಂದು ಕಳೆಯುತ್ತಿರುವುದನ್ನು ಬಲಗೊಳಿಸಿದವರು ಪು.ಲ. ಇವತ್ತಿಗೂ ಮರಾಠೀ ಸಾಹಿತಿಗಳು ಎಲ್ಲಿಗಾದರೂ ಭಾಷಣಕ್ಕೆ ಹೋದರೆ ಅವರಿಗೆ ಯಥೇಚ್ಛ ಸಂಭಾವನೆ ನೀಡುವ ಪರಿಪಾಠವಿದೆ. ಪುಣೆ, ಸಾಂಗ್ಲಿ, ಕೊಲ್ಹಾಪುರ ಮುಂತಾದ ನಗರಗಳಿಗೆ ವಾಣಿಜ್ಯ ಕೇಂದ್ರ ಎನಿಸಿದ ಮುಂಬಯಿ, ದೂರದ ನಗರವಾದ ಬೆಳಗಾವಿಯಲ್ಲಿ ಸಾಹಿತಿಗಳ ಉಪನ್ಯಾಸ ಏರ್ಪಡಿಸಿದರೆ ಅದಕ್ಕೆ ಭಾರೀ ಮೊತ್ತದ ಪ್ರವೇಶ ಧನ ವಿಧಿಸಲಾಗುತ್ತದೆ.



ಗಾಂಧೀಜಿ ನಂತರ ಅವರ ಸಿದ್ಧಾಂತಗಳನ್ನು ಅವರ ಅನುಯಾಯಿಗಳು ನಗೆಪಾಟಲು ಮಾಡಿರುವ ರೀತಿಯನ್ನು ಬಿಂಬಿಸುವ 'ತುಝೆ ಆಹೆ ತುಝೆ ಪಾಶ' ವಿಡಂಬನಾ ನಾಟಕ ಅವರಿಗೆ ಭಾರೀ ಹೆಸರು ತಂದ ಕೃತಿ.

ಮರಾಠಿ ಭಾಷಿಕ ಜನ ಉತ್ಸಾಹದಿಂದ ಭಾರೀ ಮೊತ್ತದ ಪ್ರವೇಶ ಧನ ತೆತ್ತು ಇಂಥ ಸಾಹಿತ್ಯ ಭಾಷಣ ಕೇಳಲು ಹೋಗುತ್ತಾರೆ. ರಾತ್ರಿ ಊಟವಾದ ನಂತರ ಸಾಮಾನ್ಯವಾಗಿ ನಡೆಯುವ ಇಂಥ ಭಾಷಣಗಳಲ್ಲಿ ಸಾಮಾನ್ಯ ಜನ ಸಕ್ರಿಯವಾಗಿ ಪಾಲ್ಗೊಳ್ಳುವುದು, ಭಾಷಣದ ನಂತರ ಗುಂಪುಗುಂಪಾಗಿ ನಡೆಸುವ ಚರ್ಚೆಗಳಲ್ಲಿ ಬಹಳ ಹೊತ್ತಿನ ತನಕ ನಡೆಯುವ ಗೋಷ್ಠಿಗಳಲ್ಲಿ ಪಾಲ್ಗೊಳ್ಳುವುದು ಸಾಮಾನ್ಯ.

ಇಂಥ ಗೋಷ್ಠಿ ಸಂಸ್ಕೃತಿಯಲ್ಲಿ ಅತ್ಯಂತ ಬೇಡಿಕೆಯ ಭಾಷಣಕಾರರಾಗಿದ್ದವರು ಪು.ಲ. ದೇಶಪಾಂಡೆ. ನಮ್ಮಲ್ಲಿ ಸಾಹಿತ್ಯ ಗೋಷ್ಠಿ, ವಿಚಾರ ಸಂಕಿರಣಗಳಾದರೆ ಅಭಿಮಾನ ಶೂನ್ಯ ಜನರನ್ನು ಒಂದೆಡೆ ಸೇರಿಸುವುದೇ ದೊಡ್ಡ ಸರ್ಕಸ್ ಆಗುವುದು ನೆನೆದಾಗ, ಮರಾಠಿಗರ ಭಾಷಾ ಪ್ರಿಯತೆ ಮತ್ತು ಅಭಿಮಾನಗಳು ಕನ್ನಡಿಗರಿಗೆ ಮಾದರಿ, ಪ್ರೇರಣೆ ಆಗಬಲ್ಲವು.


ತಮ್ಮ ಜೀವಿತ ಅವಧಿಯಲ್ಲಿ ನಾಟಕ, ಸಂಗೀತ, ಸಾಹಿತ್ಯ ನಿರ್ಮಾಣದಲ್ಲಿ ಸದಾ ಸಕ್ರಿಯವಾಗಿದ್ದ ಪು.ಲ. ಇದೆಲ್ಲದರ ನಡುವೆಯೂ ತಮ್ಮ ಭಾಷಣ ಕಲೆಯನ್ನು ಮಾತ್ರ ಮರೆಯಲಿಲ್ಲ.

ಆಕಾಶವಾಣಿಯಲ್ಲಿ ದುಡಿಯುತ್ತಾ ಇರುವಾಗಲೇ, ದೂರದರ್ಶನ ಸೇವೆಗೆ ಸೇರಿದ ಪು.ಲ. ಲಂಡನ್‌ನ ಬಿ.ಬಿ.ಸಿ.ಯಲ್ಲಿ ತರಬೇತಿ ಪಡೆದು ಬಂದ ಅವರು, ಮೊದಲ ಭಾರತೀಯ ದೂರದರ್ಶನ ಕಾರ್ಯಕ್ರಮಗಳ ನಿರ್ಮಾಪಕರಾಗಿದ್ದರು.

■ ಎ.ಆರ್. ಸಂಗಣ್ಣವರ್

ವಿಜ್ಞಾನದಲ್ಲಿ ವಿನೋದ

ಒಂದು ಪೋಸ್ಟ್‌ಕಾರ್ಡನ್ನು ನಿಮ್ಮ ಎಡಗೈಯಲ್ಲಿ ಹಿಡಿಯಿರಿ. ನಿಮ್ಮ ಬಲಗೈ ಆ ಕಾರ್ಡನ್ನು ಹಿಡಿಯಲು ಎಡಗೈಯ ಕೆಳಗೆ ಸಿದ್ಧವಾಗಿರಲಿ. ಆದರೆ ನಿಮ್ಮ ಕೈ ಬೆರಳುಗಳು ಸ್ಪರ್ಶಿಸುತ್ತಿರಬಾರದು. ಈಗ ಕಾರ್ಡನ್ನು ಬಿಟ್ಟು ಬಿಡಿ. ಆಗ ಅದು ಕೆಳಗೆ ಬೀಳುವ ಮುನ್ನ ಅದನ್ನು ಹಿಡಿಯಲು ನಿಮಗೆ ಸಾಧ್ಯವಾಗುತ್ತದೆ.



ಈಗ ನಿಮ್ಮ ಗೆಳೆಯನನ್ನು ಕರೆಯಿರಿ. ಅವನಲ್ಲಿ ಕೂಡ ಕೈಯನ್ನು ಹಾಗೇ ಹಿಡಿಯಲು ಹೇಳಿ. ಈಗ ನೀವು ನಿಮ್ಮ ಎಡಗೈಯಲ್ಲಿರುವ ಪೋಸ್ಟ್ ಕಾರ್ಡನ್ನು ಕೆಳಕ್ಕೆ ಬಿಡಿ. ಅವನಿಗೆ ಆ ಕಾರ್ಡನ್ನು ಹಿಡಿಯಲು ಸಾಧ್ಯವಾಗುವುದೇ ನೋಡಿ. ನಿಮಗೆ ಆಶ್ಚರ್ಯವಾಗಬಹುದು. ಅವನ ಬೆರಳುಗಳಿಂದ ಕಾರ್ಡನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಇದನ್ನು ನೀವು ಪುನರಾವರ್ತಿಸಿ. ಆದರೂ ಅವನಿಂದ ಕಾರ್ಡನ್ನು ಹಿಡಿಯಲು ಸಾಧ್ಯವಾಗಲಿಲ್ಲ. ನೀವು ಹಿಡಿಯಬಲ್ಲಿರಿ. ಯಾಕೆ ಹೀಗಾಯಿತು?

ನೀವು ಪೋಸ್ಟ್‌ಕಾರ್ಡನ್ನು ಹಿಡಿದಿರುವಾಗ ನಿಮ್ಮ ಮೆದುಳು 'ಕಾರ್ಡನ್ನು ಬಿಡು' ಮತ್ತು 'ಕಾರ್ಡನ್ನು ಹಿಡಿ' ಎಂಬ ಸಂದೇಶಗಳನ್ನು ನಿಮ್ಮ ಎರಡು ಕೈಗಳಿಗೂ ಒಟ್ಟಿಗೆ ನೀಡಲು ಶಕ್ತವಾಗಿರುತ್ತದೆ. ಆದ್ದರಿಂದ ಒಂದೇ ವೇಳೆಯಲ್ಲಿ ನೀವು ಎರಡೂ ಕೆಲಸಗಳನ್ನು ಮಾಡಬಲ್ಲಿರಿ. ಆದರೆ ನೀವು ಕಾರ್ಡನ್ನು ಜಾರಿಸಿ ನಿಮ್ಮ ಗೆಳೆಯನಿಗೆ ಹಿಡಿಯಲು ಹೇಳಿದರೆ ಅವನಿಂದ ಅದನ್ನು ಹಿಡಿಯಲು ಸಾಧ್ಯವಾಗುವುದಿಲ್ಲ. ಏಕೆಂದರೆ ಅವನು ಮೊದಲು ಕಾರ್ಡ್ ಬೀಳುತ್ತಿರುವುದನ್ನು ನೋಡಬೇಕು. ಆನಂತರವೇ ಅವನ ಮೆದುಳು 'ಹಿಡಿ' ಎಂಬ ಸಂದೇಶವನ್ನು ಅವನ ಬೆರಳುಗಳಿಗೆ ನೀಡಬೇಕು. ಇದು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಅವನು ಪೋಸ್ಟ್‌ಕಾರ್ಡ್ ನೋಡಿದ ಬಳಿಕವಷ್ಟೆ ಅದನ್ನು ಹಿಡಿಯಬಹುದು. ಆದರೆ ಅವನಿಗೆ ಅದನ್ನು ನೋಡಿದ ಅರಿವಾಗಿ ನಂತರ ಹಿಡಿಯಲು ಯತ್ನಿಸುವಾಗ ಅದು ನುಸುಳಿ ಬಿದ್ದಿರುತ್ತದೆ. ಆದ್ದರಿಂದ ನಿಮ್ಮ ಗೆಳೆಯ ಅದನ್ನು ಹಿಡಿಯಲಾರ.

ಸಂಗ್ರಹ : ನಾಗರಾಜ ಭಟ್ಟ

ಮುಗೀತು ಚುನಾವಣೆ.... ಮುಗೀತು

ರವಿಕುಮಾರ್ ಹ.
ಹಿರೇಕೆರೂರು.



ಈ ಜಾಹೀರಾತುಗಳಿಗೆ ಬೇಕೇ ಬೇಕು ಸೆನ್ಸಾರೆಂಬ ಕಡಿವಾಣ !



ಟಿವಿಯಲ್ಲಿ ಕಾಣಿಸಿಕೊಳ್ಳುತ್ತಿರುವ ಜಾಹೀರಾತುಗಳು ಕೇವಲ ಒಂದು ಉತ್ಪನ್ನ ಕೊಳ್ಳಲು ಪ್ರೇರಿಸುವ ಸಾಧನವಾಗಿ ಉಳಿದಿಲ್ಲ. ನಮ್ಮ ಸಂಸ್ಕೃತಿ, ಜೀವನದ ಮೌಲ್ಯಗಳ ಮೇಲೇ ತೀವ್ರ ದಾಳಿ ನಡೆಸುತ್ತಿವೆ. ಈಗಾಗಲೇ ಇಂಥ ಜಾಹೀರಾತುಗಳ ಪ್ರಭಾವದಿಂದ ಸಾಕಷ್ಟು ಅನಾಹುತ ಆಗುತ್ತಿರುವುದು ಕಾಣುತ್ತಿದ್ದೇವೆ. ಇದಕ್ಕೆ ತಡೆಯೊಡ್ಡದೇ ಇದ್ದಲ್ಲಿ ವಿನಾಶ ಖಂಡಿತ.

ನಾವು-ನೀವು ಮನೆ ಮಂದಿಯೊಟ್ಟಿಗೆ ಟಿ.ವಿ. ನೋಡುತ್ತಿದ್ದೇವೆ. ಕಾರ್ಯಕ್ರಮ ನೋಡುವಾಗ ಇಷ್ಟವಿರಲಿ ಇಲ್ಲದಿರಲಿ, ಕಣ್ಣಿಗೆ ಮನಸ್ಸಿಗೆ ಕಸವೆಂಬಂತೆ ಜಾಹೀರಾತುಗಳು ಊಟದಲ್ಲಿ ಸಿಗುವ ಕಲ್ಲಿನ ಹರಳಿನಂತೆ ಉಪದ್ರವ ನೀಡುತ್ತಿರುತ್ತವೆ. ಇಂದಿನ ಕುತ್ತಿಗೆ ಕತ್ತರಿಸುವ ಪೈಪೋಟಿ ನಡುವೆ ಉತ್ಪಾದಕ ತನ್ನ ಮಾಲನ್ನು ಹೇಗಾದರೂ ಗಿರಾಕಿಗಳ ಕೊರಳಿಗೆ ಕಟ್ಟಿ, ಬದುಕಿ ಪಾರಾಗುವ ಸನ್ನಾಹದಲ್ಲಿರುತ್ತಾನೆ.

ಜಾಹೀರಾತಿನ ಈ ಗಡಿಬಿಡಿ, ಅವಸರ, ಉದ್ವೇಗದ ವಾತಾವರಣದಲ್ಲಿ, ಜಾಹೀರಾತಿನ ಮೂಲ ಗುಣಗಳಾದ 'ನಾನು ಉತ್ಪಾದಿಸಿದ ಮಾಲು ಚೆನ್ನಾಗಿದೆ, ಅದನ್ನು ಕೊಳ್ಳಿರಿ' ಎಂಬುದನ್ನು ಮರೆತಂತೆ ಕಾಣಿಸುತ್ತದೆ. ಇದಕ್ಕಿಂತ ಹೆಚ್ಚಾಗಿ, ಸಕಾರಾತ್ಮಕ ಜಾಹೀರಾತಿಗಿರಬೇಕಾದ ಮಾನವೀಯ ಮೌಲ್ಯದ ತಳಹದಿಯನ್ನೇ ಅವಗಣಿಸಿ, ಅಮೇರಿಕನ್ ಜೀವನ ಮೌಲ್ಯಗಳಾದ, ಹಣವೇ ಜೀವನ, ಉಡುಗೊರೆ, 'ಪುಕ್ಕಟೆಯ' ಆಕರ್ಷಣೆ. ಕಷ್ಟಪಡದೇ ಕೋಟ್ಯಾಧಿಪತಿಗಳಾಗುವ ಸನಿಹದ ಹಾದಿ, ಜೂಜುಕೋರ ಮನೋಭಾವ, ಕೊಳ್ಳುಬಾಕ ಸಂಸ್ಕೃತಿ, ಹೊಡಿ, ಬಡಿ, ಕೊಲ್ಲು, ಸಕಲವೂ ನಾಶ ಮಾಡುವ ಪ್ರವೃತ್ತಿ, ಇಂಥದೇ ಇಂದಿನ ಕೆಲ ಜಾಹೀರಾತುಗಳ ಬೆನ್ನೆಲುಬು.

ಜಾಹೀರಾತಿನ ಹೆಸರಿನಲ್ಲಿ ಅಪಾಯಕಾರಿ ದೃಶ್ಯ ಭ್ರಮೆಗಳನ್ನು ನೀಡಿ 'ಅನುಕರಿಸಬೇಡಿ, ಅಪಾಯ' ಎಂದು ಬರೆದು ಜವಾಬ್ದಾರಿಯಿಂದ ಪಾರಾಗುವ ಸನ್ನಾಹ ಕಾಣುತ್ತಿದೆ. ವಿಮಾನದಲ್ಲಿ ಪಯಣಿಸುತ್ತಿರುವ ಹುಡುಗಿಯೊಬ್ಬಳ ಕಂಕುಳದಿಂದ ಬಂದ ದುರ್ಗಂಧದ ಸಲುವಾಗಿ ಗಗನಸಖಿ ಆಕೆಯನ್ನು ವಿಮಾನದ ಬಾಗಿಲಿನಿಂದ ಕೆಳಗೆ ತಳ್ಳುವ ಅಮಾನವೀಯತೆ ತೋರುತ್ತಾಳೆ. ಹುಡುಗಿ 6 ರೂಪಾಯಿ ಬೆಲೆ ಬಾಳುವ 'ಡಿಯೋಡ್ರೆಂಟ್' ಅನ್ನು ಕೊಳ್ಳದಿರುವುದು ಮಾಡಿದ ತಪ್ಪು! 'ಸಹನಾಭವತು' ಮೌಲ್ಯದ ನಾಡಿನಲ್ಲಿ, ನಾನೂ - ಬದುಕು, ನೀನೂ ಬದುಕು ಎಂಬುದನ್ನು ಮರೆತು 'ಕೊಲ್ಲುವ' ಮೌಲ್ಯವನ್ನು ಹೇಗೆ ಈ ಜಾಹೀರಾತು ಅಳವಡಿಸಿಕೊಂಡಿತು?

ಕೋಕೋ ಕೋಲಾ ಬಾಟಲಿಗಾಗಿ ನಮ್ಮ ಸಿನಿಮಾ ಹೀರೋಗಳು ರೈಲಿನಿಂದ ರೈಲಿಗೆ, ವಿಮಾನದಿಂದ, ಕೋಕೋ ಕೋಲಾ ಹೊಂದಿದ ಯುವತಿಯ ಕಾರಿನ ಬಳಿಗೆ, ಹಾಗೂ ಎತ್ತರ ಕಟ್ಟಡದಿಂದ, ಕಟೌಟ್‌ವೊಂದರ ಚಡ್ಡಿ ಜಿಪ್ಪು ಬಿಚ್ಚುತ್ತ ನದಿಯಲ್ಲಿ ಯುವತಿಯಿದ್ದ ದೋಣಿಯ ಎರಡನೇ ಸೀಟಿಗೆ ಕರಾರುವಾಕ್ಕಾಗಿ ಜಿಗಿದು ಕೌಶಲ ಪ್ರದರ್ಶಿಸುವುದು ಕೇವಲ ಒಂದು ಬಾಟಲಿ ಪೇಯಕ್ಕಾಗಿ. ಅಷ್ಟೊಂದು ಮಾನವ ಶಕ್ತಿ, ಕೌಶಲ, ಬುದ್ಧಿಮತ್ತೆ ವಿನಿಯೋಗವಾಗುವುದು ನೀರಡಿಕೆ ನೀಗಿಸುವ ಪಾನೀಯಕ್ಕಾಗಿ! ಚಡ್ಡಿ ಜಿಪ್ಪು ಬಿಚ್ಚುವುದು ಸಂಸ್ಕೃತಿಯೇ?

ಇನ್ನು ಮಕ್ಕಳ ಲೋಕದ ಜಾಹೀರಾತುಗಳಂತೂ ಅತ್ಯಂತ ಉದ್ಧಟತನವನ್ನೇ ಮಕ್ಕಳಿಗೆ ಕಲಿಸುವಲ್ಲಿ ಮುಂದಾಗಿವೆ.

ಅಮೆರಿಕನ್ ಕಥೆಯ ಸೂಪರ್ ಹೀರೋಗಳಾದ, ಬ್ಯಾಟ್ಸ್‌ಮನ್ನು, ಸೂಪರ್ ಮ್ಯಾನು, ಸ್ಪೈಡರ್‌ಮ್ಯಾನ್, ಫ್ಯಾಂಟಮ್‌ಗಳು ಬಾಲಕರ ಮನವನ್ನಾಕ್ರಮಿಸುತ್ತಿದ್ದಾರೆ. ಮ್ಯಾಟ್ಟಲ್ ಕಂಪನಿಯ ಕಾರಿನ ಗೊಂಬೆಗಳು, ಅಪಘಾತ, ವಿನಾಶ, ಹಾಳು ಮಾಡುವ ಗುಣವನ್ನು ಮಕ್ಕಳ ಮನಸ್ಸಿಗೆ ತುಂಬುತ್ತಿವೆ. ಟಿವಿಯಲ್ಲಿ ಕಾಣುವ ಬೃಹದಾಕಾರವು ವಾಸ್ತವವಾಗಿ ಅಂಥದಲ್ಲ, ಕಾರು ಸಣ್ಣವು ಎಂಬುದು ಬಾಲ ಮನಕ್ಕೆ ಹೇಗೆ ಹೊಳೆಯಬೇಕು? ಒಬ್ಬ ಹುಡುಗ ಇನ್ನೊಬ್ಬನ ಕಾರು ನಾಶ ಮಾಡುತ್ತಾನೆ. ಅವನ ಕಾರು ಚಿಂದಿಯಾಗಿ ಟೈರುಗಳು ಬೇರೆಯಾಗಿ ಉರುಳುತ್ತವೆ. ಇದು ನಮ್ಮ ದೇಶಕ್ಕೆ ಅಗತ್ಯವಾದ ಸಂಸ್ಕೃತಿಯೇ?

ದೊಡ್ಡವರನ್ನು 'ಮೂರ್ಖ'ರನ್ನಾಗಿಸುವ ಮಕ್ಕಳ ಜಾಹೀರಾತು ಇದೀಗ ಬಂದಿದೆ. ಕ್ರಿಮಿಗಳಾದ ಹಲ್ಲಿ, ಜೇಡ, ಹಾವಿನ ಮರಿ, ಜಿರಳೆ ಇವುಗಳನ್ನು ದೊಡ್ಡವರ ಮೈ ಮೇಲೆ ಎಸೆದೋ, ಸೀಟಿನ ಮೇಲೆ ಇಟ್ಟೋ ಅವರನ್ನು ಫೂಲ್ ಮಾಡುವ ಈ ಹೊಸ ಚಾಳಿ ಹೇಳಿ ಕೊಡಲು ಈಗ ಜಾಹೀರಾತು ಮುಂದಾಗಿವೆ. ಇವೇ ಏನು, ನಾವು ಮಕ್ಕಳಿಗೆ ಕಲಿಸಿಕೊಡುವಂಥದು?

ಹೊಟ್ಟೆಗಿಲ್ಲದ ಮಕ್ಕಳಂತೆ, ಕೇವಲ ಲಾಲೀ ಪಾಪ್‌ನಂಥ ಸಿಹಿ ತಿಂಡಿಗೆ ವಿಕೃತವಾಗಿ ಬಾಯಿ ಚಪ್ಪರಿಸುವ, ಚೀಪುವ ವಿಕೃತ ದೃಶ್ಯಗಳು ನಮಗೆ ಬೇಕೆ? ಅಮುಲ್‌ನಂಥ ಸಭ್ಯ ಸುಂದರ ಜಾಹೀರಾತು ನಿರ್ಮಿಸಲು ಈ ಜನಗಳಿಗೆ ಸಾಧ್ಯವಿಲ್ಲವೆ? ಬಿಳಿ ಯೂನೀಫಾರ್ಮಿನಲ್ಲಿ ಸಣ್ಣ ನೀಲಿ ಕಲೆ ಉಳಿದಲ್ಲಿ 'ನೀಲಿ ಡಬ್ಬೋವಾಲೀ' ಎಂದು ಹಾಸ್ಯ ಮಾಡಿ ಕೀಳರಿಮೆ ಹುಟ್ಟಿಸಬೇಕೆ? ಮಕ್ಕಳು ನಡೆಸುವ ವಿಮಾನ ದೃಶ್ಯ, ಅದರಲ್ಲಿ ಒಬ್ಬ ಹುಡುಗ ಓಡಿಸುತ್ತಿರುವ ವಿಮಾನ ನಾಶ, ಅಂದರೆ ಆ ಹುಡುಗನ ಕೊಲ್ಲುವಿಕೆ. ಇದೆಲ್ಲ ಏಕೆ ಎಂದರೆ ಕೇವಲ ಮೃದು ಪಾನೀಯವೋ, ಅಥವಾ ಜಾಮ್‌ಗಾಗೋ. ಆದರೆ ಆ ವಸ್ತುವಿಗೂ, ಈ ದೃಶ್ಯಗಳಿಗೂ ಏನು ಸಂಬಂಧ? ನಿಜಕ್ಕೂ ಈ ಜಾಹೀರಾತುದಾರರ ತಲೆ ಕೆಡುತ್ತಿದೆಯೇ? ಮಾನಸಿಕ ಸಮತೋಲ ಕಳೆದುಕೊಳ್ಳುತ್ತಿದ್ದಾರೋ? ಇಂಥ ಜಾಹೀರಾತು ನಗೆ ತರಿಸುವುದಿಲ್ಲವೆ?

ಇದೆಲ್ಲ ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಫಲ. ಮತ್ತೊಬ್ಬನನ್ನು ಹೇಗಾದರೂ ತುಳಿದು ನೀ ಬದುಕು ಮನೋಭಾವ ಪಾಶ್ಚಾತ್ಯರದ್ದು. ಖಂಡಿತಾ ನಮ್ಮದಲ್ಲ. ಸಹನಾಭವತು, ದಯವೇ ಧರ್ಮದ ಮೂಲ, ಸಹಬಾಳ್ವೆ ನಮ್ಮ ಮೌಲ್ಯ. ಕೇವಲ ನಾವು ಉತ್ಪಾದಿಸುವ ಸರಕುಗಳನ್ನು ಕೊಳ್ಳಿ ಎಂದು ಹೇಳುವ ಭರದಲ್ಲಿ ಜಾಹೀರಾತುಗಳು ಮೂಲಭೂತವಾದ ಮಾನವೀಯ ಮೌಲ್ಯಗಳನ್ನು ಕಳೆದುಕೊಳ್ಳಬಾರದು. ಭಾರತೀಯ ಜೀವನದ ಮೂಲಮಂತ್ರವೇ ಇದು. ಇದರ ರಕ್ಷಣೆಗೆ ಈಗ ತೀವ್ರ ಅವಶ್ಯಕವಾಗಿರುವುದು ಜಾಹೀರಾತು ಸೆನ್ಸಾರ್. ಇದು ಎಷ್ಟು ಬೇಗ ಬಂದರೆ ಅಷ್ಟು ಒಳ್ಳೆಯದೇ. ಇದರ ಬಗ್ಗೆ ಎಲ್ಲರೂ ತೀವ್ರ ನಿಗಾ ವಹಿಸಿ, ಸ್ಪಂದನಶೀಲರಾಗಿ ಒತ್ತಡ ತರಬೇಕು. ಇದೇ ಈಗಿರುವ ದಾರಿ.

■ ಎಸ್. ಗಿರೀಶ್ ಪುತ್ರಾಯ

ಆತಂಕಕಾರಿ ಬೆಳವಣಿಗೆ

ವಿದ್ಯಾರ್ಥಿಗಳ ಆತ್ಮಹತ್ಯೆ

ಈಗ ಹೆಚ್ಚಾಗುತ್ತಿರುವ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳಿಗೆ ನಾನಾ ಕಾರಣಗಳಿವೆ. ಸಮಾಜದ ನಾನಾ ಮಗ್ಗುಲುಗಳು, ಅವು ಹದಿ ಹರೆಯದ ವಿದ್ಯಾರ್ಥಿಯ ಮೇಲೆ ಬೀರುವ ಒತ್ತಡ, ಹಿರಿಯರು ಆತನ ಮೇಲೆ ಹೊರುವ ನಿರೀಕ್ಷೆ ಎಲ್ಲದರ ದುಷ್ಟ ಪರಿಣಾಮ ಇದು.

ಪರೀಕ್ಷೆಗಳು ಬರುತ್ತವೆ, ಹೋಗುತ್ತವೆ. ಅದರ ಜೊತೆಗೇ ಕೆಲವು ಕಳವಳಕಾರಿ ಘಟನೆಗಳೂ ನಡೆಯುತ್ತವೆ. ತಮ್ಮ ಕೈ ಮೀರಿದ ಕಾರಣಕ್ಕಾಗಿ ನಿರೀಕ್ಷಿಸಿದ ಫಲಿತಾಂಶ ಪಡೆಯಲಾಗದ ವಿದ್ಯಾರ್ಥಿಗಳು ನಿರಾಶರಾಗುತ್ತಾರೆ. ತಂದೆ, ತಾಯಿಯ ಭಯ. ಜೊತೆಯವರಿಂದ ಎದುರಿಸಬೇಕಾಗುವ ಹೀನಾಯದ ನೋಟ ಎಲ್ಲ ನೆನಪಾಗಿ ಇನ್ನು ಮರಳಿ ಬರಲಾರದ ಲೋಕಕ್ಕೆ ತೆರಳಲು ನಿರ್ಧರಿಸಿ ಬಿಡುತ್ತಾರೆ. ಇಂಥ ಪ್ರಕರಣಗಳು ಮೊದಲೂ ನಡೆಯುತ್ತಾ ಇದ್ದವು. ಆದರೆ ಅಪರೂಪ. ಈಗೀಗ ಇವು ಭಾರೀ ಪ್ರಮಾಣದಲ್ಲಿ ಏರಿಕೆ ಆಗುತ್ತಿವೆ. ಸಾವಿನಲ್ಲಿ ಪರಿಹಾರ ಕಾಣಬಯಸುವ ಈ ಎಳೆಯರೆಲ್ಲ ಹದಿಮೂರರಿಂದ ಇಪ್ಪತ್ತು ವರ್ಷ ವಯಸ್ಸಿನವರು.

ಈ ಪ್ರವೃತ್ತಿ ಯಾವುದೋ ಒಂದು ಊರಿನ ಕತೆಯಲ್ಲ. ರಾಜ್ಯದ ಎಲ್ಲ ಕಡೆಯೂ ಏರುತ್ತಿದೆ ಎಂಬುದೇ ಆತಂಕಕಾರಿ.


ಮೇ, ಜೂನ್ ತಿಂಗಳು ಬರುತ್ತಿದ್ದಂತೆ ನಾನಾ ಪರೀಕ್ಷಾ ಫಲಿತಾಂಶಗಳು ಹೊರಬೀಳುತ್ತವೆ. ಅದರ ನಂತರದ ಒಂದೆರಡು ದಿನಗಳಲ್ಲಿಯೇ ಫೇಲಾದ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳೂ ಹೆಚ್ಚಾಗಿ ನಡೆಯುತ್ತವೆ.

ನಾವು ವಿದ್ಯಾರ್ಥಿಗಳಾಗಿದ್ದಾಗ ಮೈಸೂರು ವಿಶ್ವ ವಿದ್ಯಾಲಯದ ಫಲಿತಾಂಶ ಪ್ರಕಟವಾದ ದಿನ ಹಾಗೂ ನಂತರದ ಒಂದೆರಡು ದಿನಗಳಲ್ಲಿ, ವಿಶ್ವವಿದ್ಯಾಯಲಯದ ಕಾರ್ಯಸೌಧ ಕ್ರಾಫರ್ಡ್ ಹಾಲ್ ಹಿಂದೆಯೇ ಇರುವ ಕುಕ್ಕರಹಳ್ಳಿ ಕೆರೆಯ ಸುತ್ತಮುತ್ತ ಪೊಲೀಸ್ ಕಾವಲು ಹಾಕುತ್ತಾ ಇದ್ದರು. ಇಲ್ಲಿಯೇ ಮೈಸೂರು, ನಂಜನಗೂಡು ಸಂಪರ್ಕಿಸುವ ರೈಲು ಮಾರ್ಗವೂ ಇದ್ದುದರಿಂದ, ತೀರಾ ನಿರಾಶರಾದ ವಿದ್ಯಾರ್ಥಿಗಳು ಫೇಲಾದದ್ದು ತಿಳಿದು ರೈಲಿಗೆ ತಲೆಕೊಟ್ಟು ಸಾಯುತ್ತಾ ಇದ್ದುದೂ ಉಂಟು.

ಹುಬ್ಬಳ್ಳಿಯಲ್ಲಿ ಇರುವ ಉಣಕಲ್ ಕೆರೆ ಕೂಡ ಇಂಥ ಆತ್ಮಹತ್ಯೆಯ ತಾಣವಾಗುತ್ತಿದೆ. ಕಳೆದ ವರ್ಷವೇ ಈ ಕೆರೆಗೆ ಬಿದ್ದು ಮೂರು ಜನ ಆತ್ಮಹತ್ಯೆ ಮಾಡಿಕೊಂಡಿದ್ದರು.

ಈಚಿನ ದಿನಗಳಲ್ಲಿ ಹೀಗೆ ಹೊರಗೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುವವರಿಗಿಂತ ಮನೆಯೊಳಗೇ ನೇಣಿಗೆ ಬಲಿಯಾಗುವವರ ಸಂಖ್ಯೆ ಜಾಸ್ತಿ ಆಗುತ್ತಿದೆ. ಇಂಥ ವ್ಯಕ್ತಿಗಳನ್ನು ಗುರುತಿಸುವುದು, ಗುರುತಿಸಿದ ನಂತರವೂ ಕಣ್ಣಿಟ್ಟು ಕಾಯುವುದು ಕಷ್ಟ.

ಬೆಂಗಳೂರಿನ ಹುಡುಗಿ 17 ವರ್ಷದ ಸೌಮ್ಯಳ ಪ್ರಕರಣವೇ ಇದಕ್ಕೆ ಉದಾಹರಣೆ. ಚೆನ್ನಾಗಿಯೇ ಓದುತ್ತಿದ್ದ, ಹಿಂದಿನ ಎಲ್ಲ ಪರೀಕ್ಷೆಗಳಲ್ಲೂ ಅತ್ಯುತ್ತಮ ಶ್ರೇಣಿಯಲ್ಲೇ ಉತ್ತೀರ್ಣಳಾಗುತ್ತಿದ್ದ ಆಕೆ ಈ ಬಾರಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣಳಾಗಿದ್ದಳು. ಕಾಲೇಜಲ್ಲಿ ಫಲಿತಾಂಶ ನೋಡಿ ಬಂದು ಮನೆಯಲ್ಲಿ ತಾನು ಪ್ರಥಮ ದರ್ಜೆಯಲ್ಲಿ ಪಾಸಾಗಿರುವುದಾಗಿ ಹೇಳಿದ್ದಳು. ತಾನು ತಂದೆ ತಾಯಿಗೆ ಸುಳ್ಳು ಹೇಳಿದ್ದು, ಮುಂದೊಂದು ದಿನ ಸತ್ಯ



ಅಳತೆ ಮೀರಿದ ಓದಿನ ಹೊರೆ

ಬಯಲಾದಾಗ ತಾನು ಎದುರಿಸಬೇಕಾದ ಅವಮಾನ ನೆನೆದೇ ನಡುಗಿದ ಆಕೆ ಸಂಜೆಯ ಹೊತ್ತಿಗೆ ಮನೆಯಲ್ಲೇ ನೇಣು ಹಾಕಿಕೊಂಡು ಅಸು ನೀಗಿದ್ದಳು.

ಒಂದೆರಡು ವರ್ಷದ ಹಿಂದೆ ಪಿಯುಸಿಗೆ ಪ್ರತಿಷ್ಠಿತ ಕಾಲೇಜಲ್ಲಿ ತನಗೆ ಅರ್ಹತೆ ಇದ್ದರೂ ಪ್ರವೇಶ ದೊರೆಯಲಿಲ್ಲ ಎಂಬ ಕಾರಣಕ್ಕೆ ವಿದ್ಯಾರ್ಥಿನಿ ಒಬ್ಬಳು ಆತ್ಮಹತ್ಯೆ ಮಾಡಿಕೊಂಡಿದ್ದಳು.

ಈ ಆತ್ಮಹತ್ಯೆಗಳಲ್ಲಿನ ಇನ್ನೊಂದು ವಿಲಕ್ಷಣತೆ ಎಂದರೆ ಹುಡುಗರಿಗಿಂತ ಹೆಚ್ಚಾಗಿ ಹುಡುಗಿಯರು ಈ ಮಾರ್ಗ ಅನುಸರಿಸುತ್ತಾ ಇರುವುದು. ಕಳೆದ ಮೂರು ವರ್ಷಗಳಲ್ಲಿ ಒಂಬತ್ತು ಹುಡುಗಿಯರು ಆತ್ಮಹತ್ಯೆಯ ದಾರಿ ಆಶ್ರಯಿಸಿದ್ದರೆ, ಇದೇ ಅವಧಿಯಲ್ಲಿ ಆರು ಜನ ಹುಡುಗರು ಸಾವಿಗೆ ಶರಣಾಗಿದ್ದಾರೆ.

ಎಸ್ಎಸ್ಎಲ್ಸಿ, ಪಿಯುಸಿಯಿಂದ ಹಿಡಿದು ಬಿ.ಇ ಪದವಿ ಪರೀಕ್ಷೆಗಳಲ್ಲಿ ಫೇಲಾದವರು ಆತ್ಮಹತ್ಯೆಗೆ ಮೊರೆ ಹೋಗುತ್ತಾರೆ. ಆದರೆ ಈಚಿನ ದಿನಗಳಲ್ಲಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳೂ ನಿರಾಸೆಯಿಂದ ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿ ಆರಂಭವಾಗಿರುವುದಂತೂ ತೀರಾ ಗಂಭೀರ ವಿಷಯವಾಗಿದೆ.



ವೈದ್ಯಕೀಯ ಪ್ರವೇಶಕ್ಕೆ ಭಾರೀ ಬೇಡಿಕೆ

ಬೆಂಗಳೂರಿನ ಹದಿಮೂರು ವರ್ಷದ ಶಾಂತಿ ಐದನೇ ತರಗತಿಯಲ್ಲಿ ಫೇಲಾದ್ದರಿಂದ ನಿರಾಶಳಾಗಿ ಮೈಮೇಲೆ ಸೀಮೆ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಭೀಕರವಾಗಿ ಸತ್ತಿದ್ದಾಳೆ.

ಇದು ಕೇವಲ ದೊಡ್ಡ ದೊಡ್ಡ ನಗರಗಳ ಪ್ರತಿಷ್ಠೆಯ ಕಾದಾಟದ ಪರಿಣಾಮ ಎಂದು ಭಾವಿಸುವಂತಿಲ್ಲ. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಸಮೀಪದ ಹಳ್ಳಿಯೊಂದರ ಹುಡುಗಿಯರಿಬ್ಬರು ಪಿಯುಸಿಯಲ್ಲಿ ಫೇಲಾದ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದು ಗಮನಿಸಿದರೆ, ಇದು ಇನ್ನು ಎಲ್ಲಿಗೆ ಮುಟ್ಟುವುದೋ! ಎಂದೆನಿಸುತ್ತದೆ.

ಇವತ್ತಿಗೆ ಹೆಣ್ಣು ಮಕ್ಕಳಿಗೂ ಓದು, ಪದವಿ, ಅದರಲ್ಲೂ ತಕ್ಷಣ ಕೆಲಸ ಸಿಗಬಹುದಾದ ಕೋರ್ಸುಗಳಿಗೆ ಪ್ರವೇಶ ಪಡೆಯುವುದು ಮುಖ್ಯವಾಗುತ್ತಿದೆ. ಮದುವೆ ಎಂಬುದೊಂದು ಮಾರ್ಕೆಟ್ ಆಗುತ್ತಿರುವಾಗ ಕೆಲಸದ ಅಗತ್ಯ ಇಂದು ಹೆಣ್ಣಿಗೆ ಮೊದಲಿಗಿಂತ ಹೆಚ್ಚಾಗಿದೆ. ನಾನಾ ರೀತಿಯ ಸಾಮಾಜಿಕ ಒತ್ತಡಗಳು, ಅದೆಲ್ಲಕ್ಕಿಂತ ಹೆಚ್ಚಾಗಿ ತಂದೆ ತಾಯಂದಿರ ನಿರೀಕ್ಷೆ, ಜೊತೆಯವರಿಂದ ಎದುರಿಸಬಹುದಾದ ಪ್ರತಿಕ್ರಿಯೆಗಳೂ ಹುಡುಗ, ಹುಡುಗಿಯರನ್ನು ಸಾವಿನತ್ತ ನೂಕುತ್ತಿವೆ. ಈಚೆಗೆ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ತಂದೆ ತಾಯಿ ಕಾಳಜಿ ತೋರುವುದು ಸಹಜವಾಗಿಯೇ ಹೆಚ್ಚಿದೆ. ಆದರೆ ಮಕ್ಕಳು ಹೆಚ್ಚು ಸೂಕ್ಷ್ಮವಾಗುತ್ತಿದ್ದಾರೆ, ಅಷ್ಟೇ ಸಂಕೀರ್ಣವಾಗುತ್ತಿದ್ದಾರೆ ಎಂಬ ಭಾವನೆ ಮೂಡಲೂ ಕಾರಣವಿದೆ.

ಶಿವಮೊಗ್ಗದ ಹರಿಕೃಷ್ಣ ಅವರ ಉದಾಹರಣೆಯನ್ನೇ ನೋಡಿ. ಕಳೆದ ವರ್ಷ ಪಿಯುಸಿಯ ಮೊದಲ ಟರ್ಮ್ ಪರೀಕ್ಷೆಯಲ್ಲಿ ಮಗಳು ಸರಿಯಾಗಿ ಅಂಕ ಪಡೆದಿರಲಿಲ್ಲ. 'ಯಾಕೆ ಹೀಗಾಯಿತು? ಏನು ಸಮಸ್ಯೆ?' ಎಂದು ಕೇಳಿದ್ದೇ ತಪ್ಪಾಯಿತು. ಮರುದಿನ ಬೆಳಗಾಗುವಾಗ ಮಹಡಿಯ ರೂಮಲ್ಲಿ ಮಗಳು ಸೀಲಿಂಗ್ ಫ್ಯಾನಿಗೆ ಹೆಣವಾಗಿ ತೂಗಾಡುತ್ತಿದ್ದಳು.

ತಂದೆ ತಾಯಿಗಳಾಗಿ ಇಷ್ಟೂ ಮಾಡಬಾರದೆಂದರೆ ಹೇಗೆ? ಎಂಬ ಪ್ರಶ್ನೆಯೂ ಎದುರಾಗುತ್ತದೆ. ಆದರೆ ಎಲ್ಲ ಪ್ರಕರಣಗಳಲ್ಲೂ ಇಷ್ಟು ವಿಚಿತ್ರತೆ ಇರುವುದಿಲ್ಲ. ತಮ್ಮ ಮಕ್ಕಳು ಮೆಡಿಕಲ್, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಹೋಗಲೇಬೇಕೆಂದು ಪಟ್ಟು ಹಿಡಿದು, ಮಕ್ಕಳ ಮೇಲೆ ಒತ್ತಡ ಹೇರುವ ತಂದೆ ತಾಯಿಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಈ ಕಾರಣಕ್ಕಾಗಿಯೇ ಎಳೆಯರ ಮೇಲೆ ಮಾಧ್ಯಮಿಕ ಶಾಲೆಗೆ ಬರುವ ಹೊತ್ತಿಗಾಗಲೇ ಒತ್ತಡ ಆರಂಭ ಆಗುತ್ತದೆ. ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿ ಮಟ್ಟಕ್ಕೆ ಬರುವಷ್ಟರಲ್ಲಿ ಮಕ್ಕಳ ಮೇಲೆ ಎಷ್ಟೊಂದು ಒತ್ತಡ ಇರುತ್ತದೆಂದರೆ, ಸ್ಕೂಲು, ಕಾಲೇಜು, ಟ್ಯೂಷನ್ ಎಂದು ದಿನವಿಡೀ ಆ ಹುಡುಗ, ಹುಡುಗಿಯರು ಬಸವಳಿಯುತ್ತಾರೆ. ಟ್ಯುಟೋರಿಯಲ್‌ಗಳು, ಟ್ಯೂಷನ್ ಹೇಳುವವರು ಆದಷ್ಟೂ ಹುಡುಗರ ತಲೆಗೆ ತುರುಕಲು ಯತ್ನಿಸುತ್ತಾರೇ ಹೊರತು ಅದನ್ನು ಅರ್ಥ ಮಾಡಿಸುವ ಗೋಜಿಗೇ ಹೋಗುವುದಿಲ್ಲ. ಕೇಂದ್ರೀಯ ವಿದ್ಯಾಶಾಲೆಗಳ ಪಠ್ಯಕ್ರಮ ನೋಡಿದರೇ ಡಿಗ್ರಿ ಮುಗಿಸಿದವರಿಗೂ ಎದೆ ಹಾರುತ್ತದೆ. ಇಂಥದನ್ನೆಲ್ಲ ಆ ಎಳೆಯರು ತಲೆಯಲ್ಲಿ ತುಂಬಿಕೊಂಡು, ಒಮ್ಮೆ ಪರೀಕ್ಷೆಯಲ್ಲಿ ಕಾರಿಕೊಂಡರೆ ಸಾಕು ಎಂಬಂತಾಗುತ್ತದೆ. ಕೆಲವೊಮ್ಮೆ ಭಯ, ಆತಂಕಗಳಿಂದಾಗಿ ಎಲ್ಲ ವಿಷಯ ಗೊತ್ತಿದ್ದರೂ ಸರಿಯಾದ ಉತ್ತರ ಬರೆಯುವುದು ಅಸಾಧ್ಯವಾಗಿ ಬಿಡುತ್ತದೆ. ಇದರ ಜೊತೆಗೇ ತಾವು ಸ್ವಲ್ಪ ತಪ್ಪಿದರೂ ತಮ್ಮ ಇಡೀ ಬದುಕು ಮುಗ್ಗರಿಸುತ್ತದೆ ಎಂಬ ಆತಂಕವೂ ಸೇರಿ ಎಲ್ಲ ಎಡವಟ್ಟಾಗುತ್ತದೆ.

ತಂದೆ ತಾಯಿಗಳ ಒತ್ತಡ, ಸಾಮಾಜಿಕ ನಿರೀಕ್ಷೆ ಬರಲಾಗದ ಹೊರತು ಇದಕ್ಕೆ ಪರಿಹಾರ ಇಲ್ಲ ಎಂದೆನ್ನಿಸುತ್ತದೆ.

ಚಿಕ್ಕ ವಯಸ್ಸಿಂದಲೇ ಮಕ್ಕಳಲ್ಲಿ ಕತ್ತು ಹಿಸುಕುವ ಸ್ಪರ್ಧೆ ಮೂಡಿಸುವುದೇ ಇಂದಿನ ಶಿಕ್ಷಣದ ಬಹು ದೊಡ್ಡ ಧ್ಯೇಯ ಆದಂತಿದೆ. ಶಿಶುವಿಹಾರದ ಮಕ್ಕಳಿಗೂ ರ್‍ಯಾಂಕ್‌ಗಳನ್ನು ನೀಡಿ, ಪರಸ್ಪರ ಪೈಪೋಟಿ ಬೆಳೆಸುವ ಹಾಗೇ, ದ್ವೇಷವನ್ನೂ ಬಿತ್ತುವ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದೆ.

ಪ್ರತಿಸಲ ಮಾರ್ಕ್ಸ್ ಕಾರ್ಡ್‌ಗೆ ಸಹಿ ಹಾಕುವಾಗಲೂ ತಂದೆ ತಾಯಿಗಳು ಗದರುವುದು, ಅವರು ಅಷ್ಟೆಲ್ಲ ಮಾರ್ಕು ತೆಗೆಯುವಾಗ ನಿನಗೇನಾಗಿದೆ? ಎಂದು ಹೋಲಿಸುವುದು ಒಂದೆಡೆಯಾದರೆ, ಮೊದಲ ರ್‍ಯಾಂಕ್ ಬಂದಲ್ಲಿ ಇಂಥಿಂಥ ವಸ್ತು ತೆಗೆಸಿಕೊಡುತ್ತೇನೆ ಎಂಬ ಆಮಿಷವನ್ನು ಒಡ್ಡುವುದು ನಡೆದಿದೆ.




ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಕ್ರೇಜ್

ತೀರಾ ಚಿಕ್ಕ ವಯಸ್ಸಿನಲ್ಲಿಯೇ ಇಂಥ ಒತ್ತಡಕ್ಕೆ ಸಿಕ್ಕಿ ಮನಸ್ಸುಗಳು, ತೀರಾ ಅಸಹಾಯಕ ಪರಿಸ್ಥಿತಿ ತಲುಪಿದಾಗ ಗತ್ಯಂತರ ಇಲ್ಲವಾದಾಗ ಮನೆಬಿಟ್ಟು ಓಡಿ ಹೋಗುವುದು, ಆತ್ಮಹತ್ಯೆ ಮಾಡಿಕೊಳ್ಳುವುದು ಮಾಡುತ್ತಾರೆ.

ಇಡೀ ಸಮಾಜದಲ್ಲಿಯೇ ವಿಚಿತ್ರ ಕ್ರೇಜ್ ಬೆಳೆದಿದೆ. ಇಂಥ ಕೋರ್ಸ್ ಓದಲು ಸೇರುವವರು ಮಾತ್ರ ಬುದ್ಧಿವಂತರು, ಅವರಿಗೆ ಮಾತ್ರ ಉತ್ತಮ ಭವಿಷ್ಯವಿದೆ ಎಂಬಂತೆ ಬಿಂಬಿಸಲಾಗುತ್ತಿದೆ. ಈ ಕಾರಣದಿಂದಾಗಿಯೇ ಇಂದು ಪಿಯುಸಿ ಮುಗಿಸಿದ ಪ್ರತಿ ವಿಜ್ಞಾನ ವಿಭಾಗದ ವಿದ್ಯಾರ್ಥಿಯೂ ವೈದ್ಯಕೀಯ, ಅದು ಇಲ್ಲವಾದಲ್ಲಿ ಮಾಹಿತಿ ತಂತ್ರಜ್ಞಾನದ ಎಂಜಿನಿಯರಿಂಗ್ ಕೋರ್ಸ್ ಸೇರಬೇಕೆಂದೇ ಬಯಸುತ್ತಾನೆ.

ಪರೀಕ್ಷೆಯ ಪ್ರಶ್ನೆ ಪತ್ರಿಕೆ ರೂಪಿಸುವ ರೀತಿಯೂ ಇಂದು ಬದಲಾಗಿದ್ದು ನೂರಕ್ಕೆ ತೊಂಬತ್ತಕ್ಕಿಂತ ಹೆಚ್ಚು ಅಂಕ ಗಳಿಸುವುದು ಸಾಧ್ಯವಾಗಿದೆ. ಇದರ ಜೊತೆಗೇ



ಕುಟುಂಬ, ಸಮಾಜದ ಒತ್ತಡದಿಂದ ಮುರಿದು ಬೀಳುವ ಮನಸ್ಸುಗಳು

ಇದಕ್ಕಿಂತ ಕಡಿಮೆ ಅಂಕ ಗಳಿಸಿದವರು ಅರ್ಹತೆ ಆಧಾರದ ಮೇಲೆ ಮೆಡಿಕಲ್ ಮತ್ತು ಎಂಜಿನಿಯರಿಂಗ್ ಸೀಟುಗಳನ್ನು ಪಡೆಯುವುದು ಅಸಾಧ್ಯವಾಗುತ್ತಿದೆ.

ಮೇಲಕ್ಕೆ ಏರುವುದೇ ಜೀವನದ ಮಹತ್ವಾಕಾಂಕ್ಷೆ ಅನ್ನುವ ಮಧ್ಯಮ ವರ್ಗದ ಜನ, ತಾವು ಮಕ್ಕಳಿಗೆ ವಂತಿಗೆ ಸೀಟನ್ನು ಲಕ್ಷಾಂತರ ರೂಪಾಯಿ ನೀಡಿ ಕೊಡಿಸುವುದು ಸಾಧ್ಯವಾಗದು. ಆ ಕಾರಣಕ್ಕೇ ಇಂಥ ಕುಟುಂಬಗಳಲ್ಲಿ ಮಕ್ಕಳ ಮೇಲೆ ಚೆನ್ನಾಗಿ ಓದಬೇಕೆಂಬ ಎನ್ನುವುದಕ್ಕಿಂತ ಹೆಚ್ಚು ಸ್ಕೋರ್ ಮಾಡಬೇಕೆಂಬ ಅಮಾನುಷ ಒತ್ತಡವನ್ನು ನಿರಂತರವಾಗಿ ಹೇರಲಾಗುತ್ತಿದೆ.

ಇಂಥವರ ಸಾಧನೆ ಹೀಗಿತ್ತು ಎಂದೆಲ್ಲ ಬಣ್ಣಿಸುವ ಹಾಗೆಯೇ, ನೀನು ಯಾವುದಕ್ಕೂ ಪ್ರಯೋಜನವಿಲ್ಲ. ಕಷ್ಟಪಟ್ಟು ಸ್ಕೋರ್ ಮಾಡದೇ ಇದ್ದಲ್ಲಿ ಬದುಕೇ ಎಂಬಂಥ ಗಾಢ ಭಾವನೆಯನ್ನು ಎಳೆಯ ಮನಸ್ಸುಗಳಲ್ಲಿ ಬಿತ್ತುತ್ತಾರೆ.

ಹದಿ ಹರೆಯದಲ್ಲಿರುವ ಈ ಹುಡುಗ ಹುಡುಗಿಯರು ಮೊದಲೇ ತಮ್ಮ ದೇಹ ಮತ್ತು ಮನಸ್ಸಿನ ಸ್ಥಿತ್ಯಂತರ ಅವಸ್ಥೆಯಲ್ಲಿ ಭಾರೀ ಒತ್ತಡಕ್ಕೆ ಗುರಿಯಾಗಿರುತ್ತಾರೆ. ಅಂಥವರಿಗೆ ಮೇಲಿಂದ ಮೇಲೆ ಮನೆ ಮತ್ತು ಸಮಾಜ ಒತ್ತಡ ಹೇರುತ್ತಾ ಹೋದಾಗ ಸಹಜವಾಗಿಯೇ ಈ ಒತ್ತಡದ ಭಾರ ತಾಳಿಕೊಳ್ಳಲಾಗದೇ ಕುಸಿಯುತ್ತಾರೆ. ಆಗ ಅವರಿಗೆ ಬದುಕಿರುವುದಕ್ಕಿಂತ ಸಾವೇ ಸರಿಯಾದ ಪರಿಹಾರ ಎನ್ನಿಸುತ್ತದೆ.

ಇದು ಕೇವಲ ಪಿ.ಯು.ಸಿ ಪರೀಕ್ಷೆ ಅಥವಾ ಎಸ್.ಎಸ್.ಎಲ್.ಸಿ ಪರೀಕ್ಷೆಗಳಿಗೆ ಸಂಬಂಧಿಸಿದ ವಿಷಯ ಅಲ್ಲ. ಈ ತಂದೆ ತಾಯಿಗಳು ಮಕ್ಕಳ ಮೇಲೆ ಯಾವ ರೀತಿ ಒತ್ತಡ ಹೇರುತ್ತಾರೆ ಎಂಬುದನ್ನು ಕಣ್ಣಾರೆ ಕಾಣಲು ಸಿಇಟಿ (ಪ್ರವೇಶ ಪರೀಕ್ಷೆ) ನಂತರ ನಡೆಯುವ ಕೌನ್ಸೆಲಿಂಗ್ ಸಂದರ್ಭದಲ್ಲಿ ಹೋಗಿ ನೋಡಬೇಕು. ಅಲ್ಲಿರುವ ಅಧಿಕಾರಿಗಳಿಗೆ ವಿದ್ಯಾರ್ಥಿಯ ಮನಸ್ಸು, ಆತನ ಜೊತೆಗೇ ಬಂದಿರುವ ತಂದೆ ತಾಯಿಗಳು ಕಾಲೇಜು ಮತ್ತು ವಿಷಯಗಳ ಆಯ್ಕೆ ಬಗ್ಗೆ ಅನಗತ್ಯ ಮೂಗು ತೂರಿಸಿ, ಗೊಂದಲ ಹುಟ್ಟಿಸಿ ಅಲ್ಲಿರುವ ಅಧಿಕಾರಿಗಳಿಗೂ ಕಿರಿಕಿರಿ ಉಂಟು ಮಾಡುತ್ತಾರೆ. ಕೆಲವು ವಿದ್ಯಾರ್ಥಿಗಳಿಗೆ ಮೊದಲೇ ಕೀಳರಿಮೆ. ಒಮ್ಮೆ ಪರೀಕ್ಷೆಯಲ್ಲಿ ಫೇಲಾದರೆ, ಕಡಿಮೆ ಮಾರ್ಕ್ ತೆಗೆದರೆ ನಾವು ಯಾವುದಕ್ಕೂ ಅರ್ಹರಲ್ಲ ಎಂಬ ಭಾವನೆ ದಟ್ಟವಾಗುತ್ತದೆ. ಅದನ್ನು ಸಮಾಜ ಮತ್ತು ಕುಟುಂಬ ಇನ್ನಷ್ಟು ಒತ್ತಿ ಹೇಳಿದಾಗ ಸಹಜವಾಗಿಯೇ ಮತ್ತಷ್ಟು ಕುಸಿಯುತ್ತಾನೆ. ಕೈಹಿಡಿದು ಮೇಲೆತ್ತಿ ನಡೆಸುವವರೇ ಇಲ್ಲವಾದ ಕಾರಣ ಒಂಟಿಯಾಗುತ್ತಾನೆ.

ಎಷ್ಟೋ ಸಂದರ್ಭಗಳಲ್ಲಿ ಚೆನ್ನಾಗಿ ಮಾರ್ಕು ಪಡೆದು, ತಂದೆ ತಾಯಿ ಆರಿಸಿದ ವೃತ್ತಿಪರ ಕೋರ್ಸು ಸೇರಿದ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಯತ್ನಿಸುವುದುಂಟು. ಇಂಥ ಪ್ರಸಂಗ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ನಡೆದಿದೆ.

ಇಂಥ ಸಂದರ್ಭದಲ್ಲಿ ಬಿಜಾಪೂರದ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗೆ ಸಕಾಲದಲ್ಲಿ ಮಾನಸಿಕ ತಜ್ಞರ ನೆರವು ಹಾಗೂ ಚಿಕಿತ್ಸೆ ದೊರೆತು, ಸುಧಾರಿಸಿಕೊಂಡ. ಈಗ ಆತ ಓದು ಮುಂದುವರಿಸಿದ್ದಾನೆ. ಆದರೆ ಅದೇ ಮೈಸೂರಿನ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಒಬ್ಬ ಸಮಾಜ, ಕುಟುಂಬದ ಒತ್ತಡ ಹಾಗೂ ಕೋರ್ಸ್‌ನ ಒತ್ತಡ ಸಹಿಸಲಾರದೇ ಆತ್ಮಹತ್ಯೆ ಮಾಡಿಕೊಂಡಿದ್ದೂ ಇದೆ. ಈಚಿನ ದಿನಗಳಲ್ಲಿ ಇಂಥ ವಿದ್ಯಾರ್ಥಿ ಸಾವಿನ ಪ್ರಕರಣಗಳು ಹೆಚ್ಚುತ್ತಿರುವ ಹಾಗೆಯೇ, ಚಿಕ್ಕವಯಸ್ಸಿನ ವಿದ್ಯಾರ್ಥಿಗಳೂ ಇಂಥ ಪ್ರವೃತ್ತಿಗೆ ಬಲಿ ಆಗುತ್ತಾ ಇರುವುದು ತೀರಾ ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ.

ಸಕಾಲದಲ್ಲಿ ಸಮಾಜ ಹಾಗೂ ತಂದೆ ತಾಯಿ ಈ ಬಗ್ಗೆ ಎಚ್ಚರ ವಹಿಸದೇ ಇದ್ದಲ್ಲಿ, ಬಹುಪಾಲು ಇಂಥ ಪ್ರಸಂಗಗಳಲ್ಲಿ ಸಿಲುಕಿಕೊಂಡ ಜನ ಸಾವಿನ ಮೊರೆ ಹೋಗದೇ ಇದ್ದರೂ, ಒತ್ತಡ ತಾಳಲಾರದೇ ಮಾನಸಿಕವಾಗಿ ಜರ್ಝರಿತರಾಗಬಹುದು. ಇಂಥ ಸಮಸ್ಯೆಗಳಿಂದ ಮನಸ್ಸು ಬಿಡುಗಡೆಗೊಳ್ಳಲು ಸುಲಭ ಉಪಾಯ ಎಂದು ಪರಿಗಣಿಸಿ ಮಾದಕ ವಸ್ತುಗಳಿಗೆ ದಾಸರಾಗಲೂಬಹುದು.




ಅತಿ ಹೆಚ್ಚು ಸ್ಕೋರ್ ಗಳಿಸಲು ಟ್ಯೂಷನ್‌ಗಳೆಂಬ ಕ್ಯಾಪ್ಸೂಲ್‌ಗಳು

ಇಂಥ ಪ್ರಸಂಗಗಳನ್ನು ನಾವು ಈಗಾಗಲೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕಾಣುತ್ತಾ ಇದ್ದೇವೆ. ಅದು ಇಲ್ಲಿಗೆ ನುಸುಳಬಾರದು ಎಂದಿದ್ದರೆ ತಕ್ಷಣವೇ ಎಚ್ಚರವಾಗಿರುವುದು ಅಗತ್ಯ.

■ ರಮಾಕಾಂತ

ಹೀಗಿರಬಹುದು ನಮ್ಮ ಮುಂದಿನ ದಿನಗಳು



ಕಾಲ ಅತ್ಯಂತ ವೇಗದಿಂದ ಬದಲಾಗುತ್ತಿದೆ. ನಿತ್ಯವೂ ಹೊಚ್ಚ ಹೊಸ ಆವಿಷ್ಕಾರಗಳು. ಇದರಿಂದ ನಾನಾ ರೀತಿಯ ಅನುಕೂಲ, ಸುಖಗಳು. ಇಡೀ ಮನೆಯನ್ನು ನಿರ್ವಹಿಸುವ, ಸಂಚಾರ, ಬ್ಯಾಂಕಿಂಗ್, ಖರೀದಿ, ವ್ಯಾಪಾರ ಎಲ್ಲವನ್ನೂ ಅತ್ಯಂತ ಸುಗಮಗೊಳಿಸಬಲ್ಲ ಕಂಪ್ಯೂಟರ್ ವ್ಯವಸ್ಥೆಯೊಂದು ಈಗಾಗಲೇ ಜಾರಿಗೆ ಬರತೊಡಗಿದೆ.

ಬೆಳಿಗ್ಗೆ ಕಣ್ಣು ಬಿಡುವ ಸಮಯಕ್ಕೆ ಸರಿಯಾಗಿ ಹಿತವಾದ ಸಂಗೀತದ ಸದ್ದು. ಕಿಟಕಿಯನ್ನು ರಾತ್ರಿ ಮುಚ್ಚಿದ್ದ ಪರದೆ ತನ್ನಿಂತಾನೇ ತೆರೆದುಕೊಂಡಿವೆ. ಮಲಗುವ ಕೋಣೆಯ ತುಂಬ ಹಿತವಾದ ಮುಂಜಾವಿನ ಬೆಳಕು.

ಸ್ನಾನದ ಮನೆಯತ್ತ ನಡೆದರೆ, ಅಲ್ಲಿ ಮೈಗೆ ಹಿತವೆನಿಸುವಷ್ಟು ಬಿಸಿಯಾದ ನೀರು. ಕೈಗೆ ಎಟುಕುವಂತೆ ತಾಜಾ ಟವೆಲ್. ಕೈ ನಿಲುಕಿನಲ್ಲಿ ಮೂಗರಳಿಸುವಂತೆ ಮಾಡುವ ಸುಗಂಧದ ಸೋಪ್. ಸ್ನಾನ ಮುಗಿಸಿ ಬರುವಷ್ಟರಲ್ಲಿ ಮೂಗಿಗೆ ಬಡಿಯುವ ಬಿಸಿ ತಿಂಡಿಯ ಘಮ, ಘಮ. ಕಾಫಿಯ ಪರಿಮಳ.

ತಿಂಡಿ ತಿನ್ನಲು ಕುಳಿತರೆ, ಮೇಜಿನ ಮೇಲಿನ ವಿಡಿಯೋದಲ್ಲಿಯೇ ಮೂಡಿ ಬರುವ ಅಂದಿನ ಸುದ್ದಿ. ವೀಡಿಯೋ ತೆರೆ ಎಷ್ಟು ದೊಡ್ಡದೆಂದರೆ ಅಕ್ಷರಗಳನ್ನು ಓದಲು ಕಣ್ಣು ಕಿರಿದುಗೊಳಿಸಬೇಕಿಲ್ಲ. ಅಷ್ಟರಲ್ಲಿ ಕಂಪ್ಯೂಟರ್ ಮೇಲೆ ಅವತ್ತಿನ ಕಾರ್ಯಕ್ರಮದ ಪಟ್ಟಿಯೊಂದು ಮೂಡಿ ಬರುತ್ತಿದೆ. ಅವತ್ತೇ ಹೊಸದೊಂದು ಪ್ಯಾಂಟ್, ಶರ್ಟ್ ಖರೀದಿಸಬೇಕಿದೆ. ಅದಕ್ಕಾಗಿ ಅಂಗಡಿಗೆ ಹೋಗಿ, ಶೋಕೇಸಿನ ಬಟ್ಟೆಗಳನ್ನು ಕಿರುವಿ ಹಾಕಿ ತಲೆ ಕೊಡವಿಕೊಂಡು ಎಲ್ಲ ಏನೂ ಅಗತ್ಯವಿಲ್ಲ. ಬಟ್ಟೆಯನ್ನು ಕಂಪ್ಯೂಟರ್ ಮೇಲೆಯೇ ಆರಿಸಬಹುದು. ನಿಮ್ಮ ಅಳತೆ ಮುಂಚೆಯೇ ದಾಖಲಾಗಿರುವದರಿಂದ ಅದನ್ನು ರವಾನಿಸಿ, ಹೊಸ ಬಟ್ಟೆಯ ಖರೀದಿಯನ್ನು ಕೇವಲ ಒಂದೆರಡು ಸೆಕೆಂಡಿನಲ್ಲಿ ಮುಗಿಸಬಹುದು. ನಿಮ್ಮ ಅಳತೆಯ ವಸ್ತ್ರ ನಲವತ್ತೆಂಟು ಗಂಟೆಗಳಲ್ಲಿ ತಯಾರಾಗಿ ನಿಮ್ಮ ಮನೆ ಬಾಗಿಲಿಗೇ ಬರುತ್ತದೆ.

ಇವತ್ತು ಆತ್ಮೀಯ ಗೆಳೆಯನ ಅಥವಾ ಗೆಳತಿಯ ಹುಟ್ಟುಹಬ್ಬ ಎಂಬುದನ್ನೂ ಕಂಪ್ಯೂಟರ್ ನೆನಪಿಸುತ್ತದೆ. ಅಂದು ಅವರ ಮನೆಗೆ ಹೋಗಿ ವಿಷ್ ಮಾಡುವುದನ್ನು ಮರೆಯದಿರುವಂತೆ ಕಂಪ್ಯೂಟರ್ ನೆನಪಿಸುತ್ತದೆ.

ಈ ಕಂಪ್ಯೂಟರ್ ಇಡೀ ಮನೆಯನ್ನು ನಿರ್ವಹಿಸುತ್ತದೆ. ನೀವು ಕೆಲಸದ ಮೇಲೆ ಹೊರಗೆ ಹೊರಟರೆ, ಇಡೀ ಮನೆಯನ್ನು ಚೊಕ್ಕಟಗೊಳಿಸುವ ಕೆಲಸ ಅಲ್ಲದೇ, ಕಿಟಕಿ, ಬಾಗಿಲು ಮುಚ್ಚುವುದು, ಇಡೀ ಮನೆಯ ಬಿಸಿ ನಿರ್ದಿಷ್ಟ ಮಟ್ಟದಲ್ಲಿ ಇರುವಂತೆ ನೋಡಿಕೊಳ್ಳುವುದು ಈ ಕಂಪ್ಯೂಟರ್‌ನ ಕೆಲಸ.

ನೀವು ತಿಂದ ತಟ್ಟೆಗಳನ್ನು ತೊಳೆದು ಅದರ ಸ್ಥಾನದಲ್ಲಿ ಇಡುವುದು, ಮನೆಯ ರೆಫ್ರಿಜರೇಟರ್ ಒಮ್ಮೆ ಪರೀಕ್ಷಿಸಿ, ಯಾವ್ಯಾವುದು ಮುಗಿದಿದೆ ಎಂದು ಗುರುತಿಸಿ, ಮನೆಗೆ ಬೇಕಾದ ಸಾಮಗ್ರಿಗೆ ಆರ್ಡರ್ ಕೊಡುವುದನ್ನೂ ಈ ಕಂಪ್ಯೂಟರ್ ಮಾಡುತ್ತದೆ. ಹೀಗಾಗಿ ಮನೆಗೆ ಹಿಂದಿರುಗಿದಾಗ ಹಾಲೋ, ತುಪ್ಪವೋ, ಮೊಸರೋ ಮುಗಿದು ಹೋಗಿದೆಯಲ್ಲ! ಎಂದು ಹೌಹಾರುವ ಅಗತ್ಯವೇ ಇರುವುದಿಲ್ಲ.


ಮನೆ ಬಿಟ್ಟು ಹೊರಡುವಾಗ ಇಂಥದೊಂದು ಅಡುಗೆ, ಇಷ್ಟು ಹೊತ್ತಿಗೆ ಸಿದ್ಧವಾಗಿರಬೇಕೆಂದು ಪರ್ಸನಲ್ ಕಂಪ್ಯೂಟರ್‌ಗೆ ಆದೇಶ ನೀಡಿ ಹೋದರೆ ಆಯಿತು. ಅದು ಪಾಕಶಾಸ್ತ್ರ ವಿಧಾನದ ಅನ್ವಯವೇ ಅಡುಗೆ ತಯಾರಿಸಿ, ಹೇಳಿದ ಸಮಯಕ್ಕೆ ತಾಜಾ ತಾಜಾ ಅಡುಗೆ ಸಿದ್ಧಗೊಳಿಸಿ ಇಡುತ್ತದೆ.

ಮನೆಯಲ್ಲಿ ನಾಯಿ ಇದೆಯೇ! ಚಿಂತೆ ಬೇಡ. ಅದಕ್ಕೆ ಹೊತ್ತು ಹೊತ್ತಿಗೆ ಊಟ ಹಾಕುವ ಕೆಲಸವನ್ನೂ ಇದೇ ಕಂಪ್ಯೂಟರ್ ನಿರ್ವಹಿಸುತ್ತದೆ. ಅಷ್ಟೇ ಅಲ್ಲ ಅಂಗಳದ ತೋಟದೊಳಗೆ, ಮನೆಯೊಳಗೆ ಅಪರಿಚಿತರು, ಕಳ್ಳರು ನುಗ್ಗದಂತೆ ತಡೆಯುವ ಹೊಣೆಯೂ ಇದೇ ಕಂಪ್ಯೂಟರ್‌ದು. ಮನೆಯ ಟಿ.ವಿ ಟೇಪ್‌ರೆಕಾರ್ಡರ್, ಐರನ್ ಬಾಕ್ಸ್‌ನಲ್ಲಿ ಯಾವುದೊಂದೂ ರಿಪೇರಿ ಆಗಬೇಕಿದ್ದರೆ, ಇವತ್ತು, ನಾಳೆ ಎಂದು ಮರೆತು, ಆ ಉಪಕರಣದ ಅಗತ್ಯ ಬಿದ್ದಾಗ ಕೈಕೈ ಹಿಸುಕಿಕೊಳ್ಳುವ ಪ್ರಶ್ನೆಯೇ ಇರುವುದಿಲ್ಲ. ಯಾವುದೇ ಉಪಕರಣ ಕೆಡುವುದಿರಲಿ, ಸರಿಯಾಗಿ ಕಾರ್ಯ ನಿರ್ವಹಿಸದೇ ಇದ್ದಲ್ಲಿ ತಕ್ಷಣ ತಾಂತ್ರಿಕ ವಿಭಾಗಕ್ಕೆ ತನ್ನಿಂದ ತಾನೇ ದೂರು ನೀಡಿ, ತಕ್ಷಣ ಕೆಟ್ಟ ಉಪಕರಣದ ದುರಸ್ತಿಯ ವ್ಯವಸ್ಥೆಯನ್ನೂ ತಾನೇ ನೋಡಿಕೊಳ್ಳುತ್ತದೆ.

ನೀವು ಹೊರಗಡೆ ಇದ್ದಾಗ ಮನೆಯ ಕಂಪ್ಯೂಟರ್‌ಗೆ ಬೇಕಾದ ಆದೇಶವನ್ನು ನಿಮ್ಮ ಮೊಬೈಲ್ ಫೋನ್‌ನಿಂದಲೇ ರವಾನಿಸಬಹುದು.

ಆಫೀಸಿಗೆ ಹೋಗಲು ಕಾರನ್ನು ಗ್ಯಾರೇಜಿಂದ ಹೊರಗೆ ತೆಗೆಯುವುದು, ಅದರ ಬಾಗಿಲು ಹಾಕುವುದು, ಗೇಟು ತೆಗೆಯುವುದು, ಆನಂತರ ಕಾರು ಹೊರತಂದ ಮೇಲೆ ಮತ್ತೆ ಇಳಿದು ಬಂದು ಗೇಟು ಹಾಕುವುದೂ, ಇದ್ಯಾವ ಗೋಜೂ ಇಲ್ಲ.


ಮನೆಯ ಬಾಗಿಲಲ್ಲಿ ಕಾರು ನಿಮಗಾಗಿ ಸಿದ್ಧ ಇರುತ್ತದೆ. ಹೊರಗಿನ ವಾತಾವರಣ ಚಳಿಚಳಿಯಾಗಿ ಇದ್ದರೆ ಕಾರೊಳಗೆ ಆತ್ಮೀಯ ಬಿಸುಪಿನ ವಾತಾವರಣ,



ಯೋಚಿಸಿ ಕಾರ್ಯನಿರ್ವಹಿಸಬಲ್ಲ ಭವಿಷ್ಯದ ಮನೆ

ಬೇಸಿಗೆಯಲ್ಲಿ ತಂಪೆನಿಸುವ ಹಾಗೆ ಇಡುವ ಕೆಲಸ, ಕಾರು ಹೊರಡಿಸಿಕೊಂಡು ಬಂದೊಡನೆ ತಾನಾಗಿಯೇ ತೆರೆಯುವ ಗೇಟು, ಕಾರು ಹೊರಹೋದ ಮೇಲೆ ತನ್ನಿಂದ ತಾನೇ ಅದು ಮುಚ್ಚಿಕೊಳ್ಳುತ್ತದೆ. ಇನ್ನೊಂದು ವಿಶೇಷ ಎಂದರೆ ಕಾರನ್ನು ನೀವು ಡ್ರೈವ್ ಮಾಡಬೇಕಾಗಿಯೂ ಇಲ್ಲ. ನೀವು ಹೋಗಬೇಕಾದ ಸ್ಥಳ, ಅದಕ್ಕೆ ಅನುಸರಿಸಬೇಕಾದ ಮಾರ್ಗ ಎಲ್ಲವೂ ಕಂಪ್ಯೂಟರ್‌ನಲ್ಲಿ ದಾಖಲಾಗಿರುತ್ತದೆ. ಅದು ತನ್ನಿಂದ ತಾನೇ ನಡೆಯುತ್ತದೆ. ರಸ್ತೆಯಲ್ಲಿನ ಇತರ ಕಾರುಗಳೂ ಇದೇ ರೀತಿ ಕಂಪ್ಯೂಟರ್ ನಿಯಂತ್ರಿತ ವೇಗದ ಮಿತಿ ಪಾಲಿಸುವ, ಸಿಗ್ನಲ್‌ಗಳಲ್ಲಿ ತನ್ನಿಂದ ತಾನೇ ನಿಂತು, ಹಸಿರು ದೀಪ ಬಂದಾಗ ತಾನಾಗಿಯೇ ತನ್ನ ಮಾರ್ಗದಲ್ಲಿ ಮುಂದುವರಿಯುವ ವ್ಯವಸ್ಥೆ ಅಲ್ಲಿರುತ್ತದೆ.

ಇಲ್ಲಿ ಒಂದು ಕಾರು ಮತ್ತೊಂದು ಕಾರ್‌ಗೆ ಡಿಕ್ಕಿ ಹೊಡೆಯುವ ಭಯವೇ ಇಲ್ಲ. ಒಂದು ವಾಹನ ಇನ್ನೊಂದು ವಾಹನಕ್ಕೆ ಡಿಕ್ಕಿ ಹೊಡೆಯಲು ಸಾಧ್ಯವೇ ಇಲ್ಲದಂತಹ ಕಂಪ್ಯೂಟರ್ ವ್ಯವಸ್ಥೆ ಇರುತ್ತದೆ. ಕಾರ್ ಕೂಡ ಹಳೆಯ ಲಡಕಾಸಿ ಮಾಡೆಲಿನದಲ್ಲ. ಪುಟ್ಟದಾಗಿ, ಶುಭ್ರವಾಗಿರುವ ಆಕಾರ. ಬರೀ ಮೂರು ಲೀಟರ್ ಪೆಟ್ರೋಲ್ ತುಂಬಿಸಿದರೆ ಕಾರು ನೂರು ಕಿಲೋಮೀಟರ್ ಸುತ್ತಬಹುದು. ಅದೆಷ್ಟು ಜಾಣ ಕಾರ್ ಎಂದರೆ ಕತ್ತಲಾಗುತ್ತಿದ್ದಂತೆ ತನ್ನಿಂದ ತಾನೇ ಹೆಡ್‌ಲೈಟುಗಳು ಹೊತ್ತಿಕೊಳ್ಳುತ್ತವೆ. ನೀವು ಟ್ರೈನಿನಲ್ಲಿ ಬೇರೊಂದು ಊರಿಗೆ ಹೋಗಬೇಕಾದರೆ ಟಿಕೆಟ್ ಕಾಯ್ದಿರಿಸಿ, ಅದಕ್ಕಾಗಿ ಒಂದು ದಿನ ವ್ಯಯಿಸಬೇಕಾದ ಅಗತ್ಯವೂ ಇಲ್ಲ. ನೀವು ಟ್ರೈನು ಹತ್ತುವಾಗ ನಿಮ್ಮಲ್ಲಿಯೇ ಇರುವ ಸಣ್ಣ ಚಿಪ್ ಒಂದರಿಂದಲೇ ನೀವು ಯಾರೆಂಬುದನ್ನು ಟ್ರೈನಿನ ಕಂಪ್ಯೂಟರ್ ವ್ಯವಸ್ಥೆ ದಾಖಲಿಸಿಕೊಳ್ಳುತ್ತದೆ. ನಿಮ್ಮ ಸ್ಟೇಷನ್ ಬಂದು ಇಳಿದ ಮೇಲೆ, ನೀವು ಪ್ರಯಾಣಿಸಿದ ದೂರ ಗುರುತಿಸಿ, ನಿಮ್ಮ ಬ್ಯಾಂಕ್ ಖಾತೆಯಿಂದ ಟಿಕೆಟ್‌ನ ಹಣವನ್ನು ಅದು ರೈಲ್ವೆಗೆ ವರ್ಗಾಯಿಸುತ್ತದೆ.



ಬೆರಳ ತುದಿಯಲ್ಲೇ ಜಗತ್ತಿನೊಡನೆ ನಿಕಟ ಸಂಪರ್ಕ ಕಲ್ಪಿಸಬಲ್ಲ ಕಂಪ್ಯೂಟರ್ ಮೌಸ್

ರೈಲಿನಲ್ಲಿ ಪ್ರಯಾಣಿಸುವಾಗ ಆಫೀಸಿನ ಕೆಲಸ ಏನಾಯಿತೋ! ಅಲ್ಲಿ ಏನೇನು ಮಾಡಿಕೊಂಡಿದ್ದಾರೋ! ಎಂದು ಗಾಬರಿ ಪಡಬೇಕಾದ ಅಗತ್ಯವಿಲ್ಲ. ನೀವು ಕುಳಿತ ಸೀಟಿನ ಬಳಿಯೇ ಇರುವ ಕಂಪ್ಯೂಟರ್‌ಗೆ ನಿಮ್ಮ ಕೋಡ್ ತಿಳಿಸಿದರಾಯಿತು. ಅದು ನಿಮ್ಮನ್ನು ನಿಮ್ಮ ಆಫೀಸಿನ ಕಂಪ್ಯೂಟರ್ ಜಾಲ ಪ್ರವೇಶಿಸಲು ಅನುಕೂಲ ಮಾಡಿ ಕೊಡುತ್ತದೆ. ನೀವು ಪ್ರಯಾಣಿಸುತ್ತಲೇ ನಿಮಗೆ ಬಂದಿರುವ ಇ-ಮೇಲ್ ಗಮನಿಸಿ, ಅವುಗಳಿಗೆ ಉತ್ತರವನ್ನು ನೀಡಬಹುದು. ನೀವು ಕಳಿಸ ಬಹುದಾದ ಇ-ಮೇಲ್‌ಗಳನ್ನೂ ರೈಲಿನಲ್ಲಿ ಪ್ರಯಾಣಿಸುತ್ತಲೇ ನೀಡಬಹುದು.


ಇಷ್ಟರಲ್ಲಿ ನಿಮ್ಮ ಗೆಳೆಯ ಅಥವಾ ಗೆಳತಿಯ ಬರ್ತ್‌ಡೇಗೆ ಏನೂ ಗಿಫ್ಟ್ ಖರೀದಿಸದೇ ಇರುವುದು ನೆನಪಾದರೂ ಗಾಬರಿ ಬೀಳಬೇಕಿಲ್ಲ. ರೈಲಿನ ಕಂಪ್ಯೂಟರ್ ಮೂಲಕವೇ ಇಂಟರ್‌ನೆಟ್‌ನಲ್ಲಿ ಬೇಕಾದ ಉಡುಗೊರೆಯನ್ನು ಆರಿಸಿ, ಅದನ್ನು ನಿಮ್ಮ ಆತ್ಮೀಯ ವ್ಯಕ್ತಿಗೆ ತಲುಪಿಸುವಂತೆ ಸಂದೇಶ ಕೊಡಬಹುದು.

ಇದೆಲ್ಲ ಕಟ್ಟುಕತೆ ಅಥವಾ ಯಾವುದೋ ವೈಜ್ಞಾನಿಕ ಕತೆಯಂತೆ ಅನಿಸುತ್ತಿದ್ದರೆ ನಿಮಗೆ ಈಗಾಗುತ್ತಿರುವ ಎಲೆಕ್ಟ್ರಾನಿಕ್ ರಂಗದ ಬೆಳವಣಿಗೆಯ ಪರಿಚಯವೇ ಇಲ್ಲ ಎಂದಾಯಿತು. ಈಗಾಗಲೇ ನಾವು ಮೊದಲಲ್ಲಿಯೇ ವಿವರಿಸಿದ ತನ್ನನ್ನು ತಾನೇ ನಿರ್ವಹಿಸುವ 'ಸ್ಮಾರ್ಟ್ ಮನೆ' ಈಗಾಗಲೇ ಸಾಕಾರವಾಗಿದೆ.

ಸಾಫ್ಟ್‌ವೇರ್ ರಂಗದ ಅತ್ಯಂತ ಶ್ರೀಮಂತ ಬಿಲ್ ಗೇಟ್ಸ್ ಮನೆಯಲ್ಲಿ ಈಗಾಗಲೇ ವಿವರಿಸಿದ ಕಂಪ್ಯೂಟರ್ ನಿಯಂತ್ರಿತ ಸರ್ವ ವ್ಯವಸ್ಥೆಯನ್ನು ಕಾಣಬಹುದು.

ಉಳಿದಂತೆ ಇಂಟರ್‌ನೆಟ್ ಮೂಲಕ ಖರೀದಿಸುವ ವ್ಯವಸ್ಥೆ ಈಗಾಗಲೇ ಜನಪ್ರಿಯವಾಗುತ್ತಿದೆ. ಈಗೀಗ ಕೇವಲ ಪರ್ಸನಲ್ ಅಥವಾ ಖಾಸಗಿ ಕಂಪ್ಯೂಟರ್ ಹೊಂದಿರುವವರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಉಳಿದಂತೆ ಸಾಮಾನ್ಯ ಜನರೂ ಇಂಥ ವ್ಯವಸ್ಥೆ ಬಳಸುವಂತಾಗಲು ಹೆಚ್ಚು ದಿನ ಕಾಯಬೇಕಿಲ್ಲ. ಒಂದು ಕಾಲಕ್ಕೆ ಟೆಲಿಫೋನ್ ಕೇವಲ ಶ್ರೀಮಂತರ ಸ್ವತ್ತು ಹಾಗೂ ಪ್ರತಿಷ್ಠೆಯ ಸಂಕೇತ ಎಂಬಂತಿತ್ತು. ಈಗ ಟೆಲಿಫೋನ್ ಎಲ್ಲರ ಅಗತ್ಯ. ಹಾಗೇ ಅದು ಕ್ರಮೇಣ ಎಲ್ಲರಿಗೂ ಲಭ್ಯವಾಗುತ್ತಿದೆ.

ಈಗಿನ ಈ ರಂಗದಲ್ಲಿ ಆಗುತ್ತಿರುವ ಪ್ರಗತಿ ಗಮನಿಸಿದರೆ ಕಂಪ್ಯೂಟರ್ ನಿಯಂತ್ರಿತ, ಮನುಷ್ಯನಿಗೆ ಎಲ್ಲ ಅನುಕೂಲ ಕಲ್ಪಿಸುವ ವ್ಯವಸ್ಥೆಯೊಂದು ಶೀಘ್ರದಲ್ಲೇ ಬರುವುದರಲ್ಲಿ ಅನುಮಾನ ಇಲ್ಲ. ■



ಕಾನೂನು

ಇಂಗ್ಲಿಷ್ ಮೂಲ : ಬನಪೂಲ್
ಕನ್ನಡ ಅನುವಾದ : ಕೋವರ್‌ಕೊಲ್ಲಿ ಕರುಣಾಕರ

ಅವನಿಗೆ ಈಗ ಬಹಳ ಅವಶ್ಯಕವಾಗಿ ಬೇಕಾಗಿದ್ದು ಕೇವಲ ಒಂದು ಮೆಡಿಕಲ್ ಸರ್ಟಿಫಿಕೇಟು ಮಾತ್ರವಾಗಿತ್ತು. ಅದೊಂದು ದೊರಕಿದರೆ ಅಸ್ತವ್ಯಸ್ತಗೊಂಡ ಅವನ ಅಂತರಂಗದ ತುಮುಲವನ್ನು ಸರಿಪಡಿಸಬಹುದೆಂಬುದು ಮಾತ್ರ ಖಚಿತವಾಗಿತ್ತು.

ಅನಿವಾರ್ಯದ ಹೊಸ ತಿರುವಿನತ್ತ ಮನಸ್ಸು ದೃಢಪಡಿಸಿ ಮುಂದಿನ ಸ್ಟೇಷನ್ನಿನಲ್ಲಿ ಜೀವನ್ ಇಳಿದ.

ಅವನಿಗೆ ಈಗ ಬಹಳ ಅವಶ್ಯಕವಾಗಿ ಬೇಕಾಗಿದ್ದು ಕೇವಲ ಒಂದು ಮೆಡಿಕಲ್ ಸರ್ಟಿಫಿಕೇಟು ಮಾತ್ರವಾಗಿತ್ತು. ಅದೊಂದು ದೊರಕಿದರೆ ಅಸ್ತವ್ಯಸ್ತಗೊಂಡ ಅವನ ಅಂತರಂಗದ ತುಮುಲವನ್ನು ಸರಿಪಡಿಸಬಹುದೆಂಬುದು ಮಾತ್ರ ಖಚಿತವಾಗಿತ್ತು.

ಆ ಊರಿನ ಡಿ.ಎಂ.ಓ.ಗೆ ವಿಚಾರ ವ್ಯಕ್ತಪಡಿಸಿ ಕಾರ್ಯ ಮುಗಿಸಿಕೊಂಡರೆ ಆಯ್ತು ಎಂದು ಸಮಾಧಾನ ತಂದುಕೊಂಡ. ಆ ಡಾಕ್ಟರ್ ತನ್ನ ವೈದ್ಯಕೀಯದಲ್ಲಿ ಬಹಳ ಪರಿಣತ ಹಾಗೂ ಎಷ್ಟೋ ರೋಗಿಗಳಿಗೆ ತನ್ನ ಉದಾರ ಸೇವೆಯನ್ನು ನೀಡಿದ್ದಾರೆ.

ತಮ್ಮ ಸೇವೆಯಲ್ಲಿ ಉತ್ತಮ ಹೆಸರು ಗಳಿಸಿದ ಅವರು ಆಗಾಗ ಇಂಥ ಕೆಲವು ಪ್ರಸಂಗಗಳಲ್ಲಿ ಅಡಿಯಿಟ್ಟು ದಾಟಿದ್ದುಂಟು.

ಸ್ವಾಭಾವಿಕವಲ್ಲದ ಪ್ರಸಂಗವನ್ನು ಸಂಪ್ರದಾಯಶೀಲದಿಂದ ಅಷ್ಟು ಬೇಗನೆ ನೆರವೇರಿಸಲು ಸಾಧ್ಯವೇ? ಅವರು ಜೀವನ್‌ನ ಬಗ್ಗೆ ಅಷ್ಟೊಂದು ಕಾಳಜಿ ವಹಿಸಲಿಲ್ಲ.

ಜೀವನ್ ಡಾಕ್ಟರರ ಈ ಪ್ರತಿಭಟನೆಯನ್ನು ನಿರೀಕ್ಷಿಸಿದ್ದ. ಆದುದರಿಂದ ಯಾವ ಬಗೆಯ ಸಂದರ್ಭವನ್ನು ಬೇಕಾದರೂ ಸ್ವೀಕರಿಸಲು ಅಣಿಯಾಗಿದ್ದ.

ಡಾಕ್ಟರರು ಅವನೊಡನೆ ವಾದಿಸಿದರು.

'ಮಿ. ಜೀವನ್, ನಿಮಗೆ ಇವತ್ತಿನ ತಾರೀಕು ಹಾಕಿದ ಮೆಡಿಕಲ್ ಸರ್ಟಿಫಿಕೇಟನ್ನು ನಾನು ಕೊಡಬಲ್ಲೆ. ಆದರೆ ನಿಮ್ಮ ಇಚ್ಛೆಯಂತೆ ಹಿಂದಿನ ತಾರೀಖು ಇರುವ ಸರ್ಟಿಫಿಕೇಟು ಬೇಕೆನ್ನುವುದು ಮಾತ್ರ ಅಸಾಧ್ಯದ ಮಾತು. ನಿಮ್ಮ ಬಗ್ಗೆ ನಾನು ಏನನ್ನು ಬಲ್ಲೆ. ನಿಮ್ಮ ಪರಿಸರ, ನಿಮ್ಮ ಸಂಪರ್ಕ ಎಂಥಹದು ಎಂದು ಯಾರು ಬಲ್ಲರು. ಇದೆಲ್ಲ ತಿಳಿಯದೆ ಸುಮ್ಮನೆ ಹೇಗೆ ನಾನು ಮೆಡಿಕಲ್ ಸರ್ಟಿಫಿಕೇಟು ಕೊಡಬಲ್ಲೆ? it is not possible'

ಜೀವನ್ ಡಾಕ್ಟರ ಬಳಿ ಅಂಗಲಾಚಿ ಬೇಡಿದ. ಹಿಂದಿನ ತಾರೀಖು ಹಾಕಿದ್ದ ಒಂದು ಕೃತಕವಾದ ಡಾ. ಸರ್ಟಿಫಿಕೇಟು ಈಗ ಅವನಿಗೆ ಬಹಳ ಅನಿವಾರ್ಯ ವಾಗಿತ್ತು. ಓರ್ವ ಜೀವನ್‌ಚಂದ್ರ ಕುಂದು ಎಂಬವರು ಡಾ. ಟಿ.ಸಿ. ಪಾಲ್ ಎಂಬುವರ ಶುಶ್ರೂಷೆಯಲ್ಲಿ ಸದ್ರಿ ಆಸ್ಪತ್ರೆಯಲ್ಲಿ ಇದ್ದರೆಂದು.

'ಬಹಳಾ ಉಪಾಯದ ವಿಷಯ!' ಡಾಕ್ಟರ್ ವಿವೇಚಿಸಿದರು.

'ಡಾಕ್ಟರ್ ನಾನೀಗ ಒಂದು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿದ್ದೇನೆ. ನನ್ನನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ...'

'ನೂರು'

'ಇನ್ನೂರು...'

'ಐನೂರು....ಸಾವಿರ...?'

ಅಂಕೆಗಳು ಭೀಕರವಾಗಿ ಏರತೊಡಗಿದವು. ಆತನಲ್ಲಿ ಹಣದ ಕೊರತೆ ಇರಲಿಲ್ಲ. ಈ ಒಂದು ಶ್ರಮದ ಉಪಕಾರವನ್ನು ಡಾಕ್ಟರು ಉದಾರಿಯಾಗಿ ನೆರವೇರಿಸಿದ್ದರೆ, ಜೀವನ್ ಅವರಿಗೆ ತುಂಬಾ ಕೃತಜ್ಞನಾಗಿ ಅವರ ಬೇಡಿಕೆಯನ್ನು ನೆರವೇರಿಸುವ ಸ್ಥಿತಿಯಲ್ಲಿದ್ದ.

ಡಾಕ್ಟರ್ ಅವರ ಕಂಠವನ್ನೂ ಸರಿಪಡಿಸಿಕೊಂಡು ಅರ್ಥವತ್ತಾಗಿ ತನ್ನ ಬಗ್ಗದ ಮೀಸೆಯ ಮೇಲೆ ಬೆರಳಾಡಿಸಿ ಅದನ್ನು ಒಮ್ಮೆ ಬಲವಾಗಿ ತಿರುವಿ ತೀಡಿದರು.

ಡಾಕ್ಟರ ಪ್ರತಿಭಟನೆಯು ಕ್ಷಣದಲ್ಲಿ ನುಚ್ಚುನೂರಾದಂತೆ ಸ್ಪಷ್ಟವಾಯಿತು.

'ನಿಮ್ಮ ದೇಹದಲ್ಲಿ ಯಾವುದಾದರೂ ತೊಂದರೆ ಇದೆಯೇ?' ಈಗ ಡಾಕ್ಟರರ ದನಿ ತುಸು ಇಳಿಯಿತು.


'ಮೃದುವಾಗಿ ಸ್ವಲ್ಪ ಸಮಯಗಳ ಹಿಂದೆ ಅಪೆಂಡಿಕ್ಸ್ ಆಗಿತ್ತು' ಎಂದು ಉಲಿದ ಜೀವನ್.

'ಹಾಗಿದ್ದಲ್ಲಿ ನಿಮ್ಮ ಅಪೆಂಡಿಕ್ಸನ್ನು ತೆಗೆಯುವ ಆಸ್ಪದ ಕೊಡಿ'.

'ಇದು ನಿಮ್ಮದು ಅನಾವಶ್ಯಕ ಮಾತು. ಇದರಿಂದ ನನಗೇನಾದರೂ ಉಪಕಾರವಿದೆಯೇ?'

'ಖಂಡಿತವಾಗಿಯೂ, ಏನಿಲ್ಲದಿದ್ದರೂ ನೀವು ಈ ವ್ಯಾಧಿಯಿಂದ ಬಿಡುಗಡೆ ಹೊಂದುವಿರಲ್ಲ....'

'ನಿಮ್ಮದು ಪ್ರಯೋಜನವಿಲ್ಲದ ತರ್ಕ. ನಾನು ನಿಮ್ಮಿಂದ ಅಪೇಕ್ಷಿಸುತ್ತಿರುವುದು ಕೇವಲ ಒಂದು ಸರ್ಟಿಫಿಕೇಟನ್ನು ಮಾತ್ರ. ಇದೊಂದೆ ನನಗೀಗ ಬಹಳ ಮುಖ್ಯ'.



ಡಾಕ್ಟರ್ ಶಾಂತರಾಗಿ ಹೇಳಿದರು.

'ಮಿ. ಜೀವನ್... ನೋಡಿ, ನೀವು ಅದನ್ನು ಕೇವಲ ಮೆಡಿಕಲ್ ಸರ್ಟಿಫಿಕೇಟ್ ಎಂದು ತಿಳಿದಿರಬಹುದು. ಆದರೆ ಅದನ್ನು ನಾನು ಕಣ್ಣು ಮುಚ್ಚಿ ಬರೆದು ಕೊಡುವುದು ಬಹಳ ಅಸಾಧ್ಯದ ಮಾತು. (Your admitance will go down an official need) ಇಲ್ಲವಾದರೆ ಅದು ನನ್ನ ತಲೆ ಹೋಗುವ ಪ್ರಶ್ನೆಯಾಗಿ ಅಸ್ತಿತ್ವಗೊಳ್ಳಬಹುದು.

ನಿಮಗೆ ಶಸ್ತ್ರಚಿಕಿತ್ಸೆ ಮಾಡಿದ ನಂತರ ಅದರ ಗುರುತಿನ ಮಾಹಿತಿ ನಿಮ್ಮ ಹೊಟ್ಟೆಯ ಮೇಲೆ ಉಳಿಯುತ್ತದೆ. 'ಡಾಕ್ಟರ್ ಸಕಲವನ್ನು ಸಹನೆಯಿಂದ ವಿವರಿಸಿದರು. ಜೀವನ್‌ನ ಆವೇಶಕ್ಕೆ ತಣ್ಣೀರು ಎರಚಿದಂತೆ ಆಯಿತು.

'ಆದರೆ ನೋಡಿ, ನನ್ನ ರಿಜಿಸ್ಟರಿನಲ್ಲಿ ನೀವು ಹೇಳಿದ ಹಿಂದಿನ ತಾರೀಖಿನಲ್ಲಿ ನನ್ನ ಆಸ್ಪತ್ರೆಗೆ ಬಂದಂತೆ ದಾಖಲೆ ಮಾಡಿಕೊಳ್ಳಬಲ್ಲೆ. ಈ ವಿಷಯದಲ್ಲಿ ನನಗೆ ಸಹಾಯಕನಾಗಿರುವ ಕಂಪೌಂಡರ್ ಮತ್ತು ಉಳಿದ ಸಿಬ್ಬಂದಿಗಳೊಡನೆ ನಾನು ಅಂಥ ವಿಶ್ವಾಸ ಇರಿಸಬೇಕಾಗುತ್ತದೆ. ಇವೆಲ್ಲ ಇಲ್ಲದೆ ಇಂಥ ಕಾರ್ಯವನ್ನು ಸೃಷ್ಟಿಸುವುದು ಅಸಾಧ್ಯದ ಸಂಗತಿ. You know one can't tamper with the law!'

ಡಾಕ್ಟರ್ ಇಷ್ಟೆಲ್ಲಾ ವಿವರಿಸಿದ ನಂತರ ತಮ್ಮ ಮೀಸೆಯನ್ನೊಮ್ಮೆ ತೀಡಿ ಬೆರಳಿನೊಡನೆ ಸುರುಳಿ ಸುತ್ತಿದರು.

ಈಗ ಜೀವನ್ ಕೇಳಿದ, 'ಈಗ ಹೇಳಿ ಎಷ್ಟು ಕೊಡಲಿ?'

'Two thousand ಮತ್ತು ಇತರ ಖರ್ಚು'.

ಕ್ಷಣ ಮೌನ ವಾತಾವರಣ ಆವರಿಸಿತು. ಆತ ಮನಸ್ಸಿನಲ್ಲೇ ತಾಳೆ ಹಾಕಿದ.

ಎರಡು ಸಾವಿರಕ್ಕಿಂತಲೂ ಅಧಿಕ ಮೌಲ್ಯವಿದೆ ತನ್ನ ಜೀವನಕ್ಕೆ ಎಂದು ನಿರ್ಧರಿಸಿ ಕಾರ್ಯವನ್ನು ನೆರವೇರಿಸಲು ಮಾತುಕೊಟ್ಟ.

ಡಾಕ್ಟರ್ ಒಂದು ಉತ್ತಮ ಶಸ್ತ್ರ ಚಿಕಿತ್ಸೆಯನ್ನು ಮಾಡುವ ಸಾಧನೆಯಲ್ಲಿದ್ದರು.

ಕೆಲವೇ ಗಂಟೆಗಳಲ್ಲಿ ಜೀವನನ ಶಸ್ತ್ರಚಿಕಿತ್ಸೆಯು ಮುಗಿಯಿತು. ಹಾಗೂ ಆತ ಡಾಕ್ಟರರ ಸೌಮ್ಯವಾತಾವರಣದಲ್ಲಿ ಇದ್ದು ಶೀಘ್ರದಲ್ಲಿಯೇ ಚೇತರಿಸಿಕೊಂಡ.

ಯಾವುದೋ ಒಂದು ಬೇಡಿಕೆಯೊಡನೆ ಡಾಕ್ಟರಲ್ಲಿಗೆ ಬಂದ ಜೀವನ್ ತನ್ನ ಒಡಲಿನ ವ್ಯಾಧಿಯನ್ನು ಕಳೆದುಕೊಂಡ. ಆಸ್ಪತ್ರೆಯ ದಾದಿಗಳೂ, ಕಂಪೌಂಡರು ಜೀವನನನ್ನು ಉಳಿದೆಲ್ಲಾ ರೋಗಿಗಳಿಗಿಂತಲೂ ಬಹಳ ಆತ್ಮೀಯವಾಗಿ ಕಂಡರು.

ಬಹಳ ದೊಡ್ಡ ಐಶ್ವರ್ಯ ಕುಟುಂಬವೊಂದರಿಂದ ಬಂದ ಜೀವನ್ ಸಾವಿರಾರು ರೂಪಾಯಿಗಳನ್ನು ತನ್ನ ಬೋಗಕ್ಕಾಗಿ ಎಷ್ಟೋ ಬಾರಿ ಧೂಳು ಮಾಡಿದ್ದ. ಆದರೆ ಈ ಆಸ್ಪತ್ರೆಯಲ್ಲಿ ಇದ್ದಷ್ಟು ದಿನ ಆತ ಎಂದೆಂದೂ ಗಳಿಸದ ಆತ್ಮಾನಂದವನ್ನು ಪಡೆದಿದ್ದ.

ಅಂದು ಜೀವನ್ ಆಸ್ಪತ್ರೆಯಿಂದ ಬಿಡುಗಡೆ ಹೊಂದಿ ಹೋಗುವ ದಿನವಾಗಿತ್ತು. ಡಾಕ್ಟರ್ ತಮ್ಮ ನಿವಾಸಕ್ಕೆ ಆತನನ್ನು ಬರಮಾಡಿಕೊಂಡರು. ಅವರು ಅವನಿಗಾಗಿ ಬರೆದಿಟ್ಟ ಸರ್ಟಿಫಿಕೇಟನ್ನು ಆತನ ಮುಂದೆ ನೀಡಿ ಹೇಳಿದರು.

''ನೀವು ಹೇಳಿದಂತೆ ಒಮ್ಮೆಲೆ ಮಾಡಿಲ್ಲದಿದ್ದರೂ ನಿಮ್ಮ ದೇಹದ ಒಂದು ರೋಗವನ್ನು ತೊಲಗಿಸಿ, ಕಾನೂನಿನ ಕಣ್ಣುಗಳಿಗೆ ನಾನು ಮಣ್ಣು ಎರಚಿದ್ದರೂ ಅಂಥ ಕಾನೂನು ನಿಮ್ಮ ಮೇಲೆ ಬೆರಳು ತೋರಿಸಲಾರದು. Now you can have it ''ಜೀವನ್ ಡಾಕ್ಟರರ ಉದಾರ ಮನಸ್ಸಿನ ಉಪಕಾರಕ್ಕೆ ಕೃತಜ್ಞನಾದ. ಡಾಕ್ಟರ್ ಕೇಳಿದರು,

''ಈಗಲಾದರೂ ಹೇಳಿ ಯಾಕಾಗಿ ಈ ಕೃತಕ ಸರ್ಟಿಫಿಕೇಟು ಬೇಕೂಂತ ಒಂಟಿ ಕಾಲಿನಲ್ಲಿ ನಿಂತಿದ್ದು?''

ಜೀವನ್‌ಗೆ ಸಹಜವಾಗಿಯೂ ಈಗ ಗಾಬರಿ ಉಂಟಾಯಿತು.

ಡಾಕ್ಟರ್ ಮತ್ತೆ ಒತ್ತಾಯಿಸಿದರು.

'ಹೇಳಿ, ಹೇಳಿ.... ಹೆದರ ಬೇಕಾಗಿದ್ದೇನೂ ಇಲ್ಲ'.

ವಿಷಯ ಬಹಿರಂಗ ಪಡಿಸಲು ಆತ ಹಿಂಜರಿಯುತ್ತಿದ್ದ. ಜೀವನ್ ಕೇಳಿದ.

'ನನ್ನ ಮೇಲೆ ನಿಮಗೆ ಪೂರಾ ವಿಶ್ವಾಸವಿದೆಯೇ?'

'ಖಂಡಿತವಾಗಿಯೂ, Surely'.

'ನಾನು ಒಬ್ಬನನ್ನು ಕೊಂದೆ'

'Good lord! ಯಾರು ಆತ?'

ಕ್ಷಣ ಮೌನಿಯಾದ. ಕೊಲೆಯಾದವನ ಹೆಸರನ್ನು ಜ್ಞಾಪಿಸುತ್ತಾ ನಿಂತ. ಜಜ್ಜಿ ಹೋದ ಆತನ ಮುಖವು ಜೀವನ್‌ನ ಸ್ಮೃತಿಯಲ್ಲಿ ಮಿಂಚಿತು. ಹೌದು ಆತನ ಬಲಗೈ ಚರ್ಮದ ಮೇಲೆ 'ರಮೇಶ' ಎಂಬುದಾಗಿ ಹಚ್ಚೆ ಹಾಕಿತ್ತು.

'ಹೌದು ರಮೇಶ' ಎಂದು ಏದುಸಿರುಬಿಟ್ಟ.

'ಯಾಕೆ ಆತನನ್ನು ಕೊಲೆ ಮಾಡಿದಿರಿ?'

ಈಗ ಡಾಕ್ಟರರ ಕಂಠ ಸಂಪೂರ್ಣ ಬದಲಾಯಿತು.

'ಹೆಣ್ಣು!' ಎಂದ ಜೀವನ್ ಪಾಪ ಕ್ಷಮೆಯಂತೆ ಮಂದಹಾಸವನ್ನು ಬೀರುತ್ತಾ ಉಲಿದ.

'ಆ ಅಯೋಗ್ಯನೊಬ್ಬ ಎದುರಾಳಿ'

'ಇದು ಎಲ್ಲಿ ಸಂಭವಿಸಿತು?'

'ಟ್ರೈನಿನಲ್ಲಿ'

ಅವರಿಬ್ಬರ ಮಾತಿನ ಮಧ್ಯೆ ನುಸುಳಿದ ಅಂಚೆಯವನು ಒಂದು ಉದ್ದದ ಲಕೋಟೆಯನ್ನು ಡಾಕ್ಟರರ ಕೈಯಲ್ಲಿರಿಸಿ ಹೋದ.

ಅಷ್ಟರಲ್ಲಿ ಕುಳಿತಲ್ಲಿಂದ ಎದ್ದ ಜೀವನ್ ಡಾಕ್ಟರರ ಕೈ ಕುಲುಕಿ,


'ತುಂಬಾ thanks ಡಾಕ್ಟರ್, ನಿಮ್ಮ ಉಪಕಾರವನ್ನು ನಾನೆಂದೂ ಮರೆಯಲಾರೆ' ಎಂದು ಆ ಸರ್ಟಿಫಿಕೇಟನ್ನು ಕಿಸೆಯೊಳಗೆ ತುರುಕುತ್ತಾ ಅಲ್ಲಿಂದ ಮಾಯವಾದ.

ಅಂಚೆಯವನು ತಂದುಕೊಟ್ಟ ಲಕೋಟೆಯನ್ನು ಒಡೆದು ಅದರಲ್ಲಿ ಕಣ್ಣಾಡಿಸಿದರು. ಕ್ಷಣದಲ್ಲಿ ಅವರ ಮುಖವು ಕಳೆಗುಂದಿತು. ಎಲ್ಲೋ ನಡೆದ ದುರಂತದ ವರದಿಯಾಗಿತ್ತು ಅದು. ಆ ಪತ್ರವು ಪೋಲಿಸ್ ಅಧಿಕಾರಿಯಿಂದ ಬಂದ ವಿಶೇಷ ಸುದ್ದಿಯಾಗಿತ್ತು. ಒಂದು ತಿಂಗಳ ಹಿಂದೆ ರೈಲಿನಲ್ಲಿ ಕಂಪಾರ್ಟ್‌ಮೆಂಟಿನಲ್ಲಿ ದೊರಕಿದ ಅಪರಿಚಿತ ವ್ಯಕ್ತಿಯ ಶವದ ಬಗ್ಗೆ. ಪೋಸ್ಟ್ ಮಾರ್ಟಂ ಮಾಹಿತಿಯಂತೆ ಆ ಶವವು ಕೊಲೆಯಾಗಲ್ಪಟ್ಟಿತ್ತು. ಶವದ ಕೈಯ ಚರ್ಮದ ಮೇಲೆ 'ರಮೇಶ' ಎಂದು ಹಚ್ಚೆಯಲ್ಲಿ ಬರೆದಿತ್ತು. ಇವಿಷ್ಟಲ್ಲದೆ ಇನ್ನು ಯಾವ ತರದ ಮಾಹಿತಿಯ ಸುಳಿವಿಲ್ಲ. ಮತ್ತೆ ಮಾಡಿದ ವಿಚಾರಣೆ ಪ್ರಕಾರ ಪೊಲೀಸರಿಗೆ ಲಭಿಸಿದ್ದು ಹೀಗೆ:

'ಉತ್ತರ ಕಲ್ಕತ್ತದ ಮೆಸ್ ಒಂದರಲ್ಲಿ ವಾಸಿಸುತ್ತಿದ್ದ 'ರಮೇಶ' ಎಂಬಾತ ಪ್ರಸಿದ್ಧ ಡಾ.ಟಿ.ಸಿ. ಪಾಲ್ ಎಂಬುವರ ಹಿರಿಯ ಮಗ. ದಯವಿಟ್ಟು ತಾವು ಇದನ್ನು ಆದಷ್ಟು ಬೇಗನೆ ದೃಢಪಡಿಸಬೇಕು. ನೀವು ಇದರ ಬಗ್ಗೆ ತೀಕ್ಷ್ಣವಾಗಿ ಅವಲೋಕಿಸಿ ಕೊಲೆಗಾರನ ಸುಳಿವು ಸಿಕ್ಕಿದಲ್ಲಿ ದಯವಿಟ್ಟು ನಮಗೆ ತಿಳಿಯಪಡಿಸಿ'.


ಡಾಕ್ಟರ್ ಟಿ.ಸಿ. ಪಾಲ್‌ರ ಕಣ್ಣುಗಳು ಮಂಜು ಮಂಜಾಗತೊಡಗಿದವು. ■

'ಐ ಲವ್ ಯೂ' ಹಗರಣ ಅಲ್ವೇ....
ಅದು ಕಂಪ್ಯೂಟರ್‌ಗೆ ಲಗ್ಗೆ ಇಟ್ಟ ವೈರಸ್ !!



ಕ್ಯಾನ್ಸರ್‌ಗಿಂತ ಭಯಾನಕ ರೋಗಗಳನ್ನು ಸೃಷ್ಟಿಸುತ್ತಿರುವ ಕುಡಿಯುವ ನೀರು

■ ಪ್ರೊ. ಟಿ. ಗೋವಿಂದಯ್ಯ
ನಿರ್ದೇಶಕರು, ಸಮಾಜ ವಿಜ್ಞಾನ
ಸಂಶೋಧನಾ ಸಂಸ್ಥೆ,
82, ಅನುಭವನಗರ,
2ನೇ ಅಡ್ಡರಸ್ತೆ, ಬೆಂಗಳೂರು-72.



ನೀರು ಜೀವಧಾರಕ. ಹಾಗೇ ಪವಿತ್ರಗೊಳಿಸುವ ಸಾಧನ. ಒಳ ಹೊರಗನ್ನು ಶುದ್ಧಗೊಳಿಸಬೇಕಾದ ನೀರೇ ಇಂದು ಕಲುಷಿತಗೊಂಡಿದೆ. ಇಂದು ನೀರಿಂದಲೇ ಜನ ನಾನಾ ಮಾರಕ ರೋಗಗಳಿಂದ ನರಳಿ ನರಳಿ ಸಾಯಬೇಕಾದ ಸ್ಥಿತಿ. ಸರ್ಕಾರಕ್ಕೆ ಕಾಳಜಿ ಇಲ್ಲ. ಜನಕ್ಕೆ ಪರಿಜ್ಞಾನ ಇಲ್ಲ. ಇದೇ ಸ್ಥಿತಿ ಮುಂದುವರಿದರೆ ನಮ್ಮ ನಾಳೆ ಹೇಗಿರಬಹುದು ?

ಜೀವ ಸಂಕುಲದ ಪ್ರಥಮ ಅಗತ್ಯಗಳೆಂದರೆ ನೀರು, ಶುದ್ಧ ಗಾಳಿ, ಆಹಾರ ಮತ್ತು ವಾಸ ಯೋಗ್ಯ ಮನೆ. ವಿಶ್ವ ಪರಿಸರದಲ್ಲಿ ಈ ಎಲ್ಲವೂ ಕಲುಷಿತಗೊಳ್ಳುತ್ತಿರುವ ವೇಗ ಆತಂಕಕಾರಿ. ಆ ದೃಷ್ಟಿಯಿಂದಲೇ ಜೂನ್ 5 ರಂದು ನಡೆದ ವಿಶ್ವ ಪರಿಸರ ದಿನದ ಸಂದೇಶವೇ 'ಶುದ್ಧ ನೀರು ಮತ್ತು ತಾಜಾ ಗಾಳಿಯತ್ತ' ಎಂಬುದಾಗಿತ್ತು.

ಭಾರತದಲ್ಲಿ ಗ್ರಾಮೀಣ ಪರಿಸರದ ಗಾಳಿ ಇನ್ನೂ ಅಷ್ಟಾಗಿ ಕಲುಷಿತಗೊಂಡಿಲ್ಲ. ಅಗತ್ಯ ಪ್ರಮಾಣದ ಶುದ್ಧ ನೀರು ದೊರೆಯುವುದು ಮಾತ್ರ ಕಷ್ಟವಾಗುತ್ತದೆ. ಪ್ರತಿ ನಾಗರಿಕನಿಗೆ ದಿನಕ್ಕೆ 200 ಲೀಟರ್ ನೀರು ಅಗತ್ಯ ಎಂದು ಅಂತಾರಾಷ್ಟ್ರೀಯ ನಿಯಮವೇ ಇದೆ. ನಮ್ಮ ನಗರಗಳಲ್ಲಿ ತಲಾ 140 ಲೀಟರ್ ಒದಗಿಸುವುದೇ ಕಷ್ಟ ಸಾಧ್ಯ. ಗ್ರಾಮೀಣ ಪ್ರದೇಶಗಳಲ್ಲಂತೂ ತಲಾ 20 ರಿಂದ 40 ಲೀಟರ್ ನೀರು ದೊರೆಯುವುದು ಕಷ್ಟ.

ಗ್ರಾಮೀಣ ಪ್ರದೇಶಗಳಲ್ಲಿ ತೀರಾ ಇತ್ತೀಚಿನವರೆಗೆ ಕೆರೆ, ಬಾವಿ, ಕೊಳಗಳು ಅಗತ್ಯ ನೀರನ್ನು ಪೂರೈಸುವ ಸಾಧನಗಳಾಗಿದ್ದವು. ಇವೆಲ್ಲ ಆಯಾ ಗ್ರಾಮಗಳ ಸಾರ್ವಜನಿಕ ಸ್ವತ್ತು. ಅವುಗಳ ರಕ್ಷಣೆಯೂ ಆಯಾ ಗ್ರಾಮಗಳವರ ಹೊಣೆಯಾಗಿತ್ತು.

ಕೆರೆ, ಕಟ್ಟೆ, ಬಾವಿಗಳು ಗ್ರಾಮೀಣ ಭಾಗದಲ್ಲಿ ಅಂತರ್ಜಲ ವೃದ್ಧಿಗೆ ಪೂರಕವಾಗಿದ್ದವು. ಆಯಾ ಹಳ್ಳಿಗಳ ಜನರೇ ಪ್ರತಿ ವರ್ಷ ಕೆರೆ, ಕಟ್ಟೆಗಳ ಹೂಳೆತ್ತಿ ಜಮೀನಿಗೆ ಹಾಕಿಕೊಳ್ಳುತ್ತಾ ಇದ್ದರು. ಇದರಿಂದ ನೀರಿನ ಗರಿಷ್ಠ ಸಂಗ್ರಹಣೆ ಸಾಧ್ಯವಾಗುತ್ತಿತ್ತು. ಜಮೀನೂ ಫಲವತ್ತಾಗುತ್ತಿತ್ತು.

1980ರ ನಂತರ ಕುಡಿಯುವ ನೀರಿನ ಅಭಾವ ಹೆಚ್ಚಾಯಿತು. ಇದಕ್ಕೆ ಪರ್ಯಾಯ ವ್ಯವಸ್ಥೆ ರೂಪಿಸಲು ವ್ಯಾಪಕವಾಗಿ ಬೋರ್‌ವೆಲ್‌ಗಳನ್ನು ಬಳಸುವ ಯೋಜನೆ ಜಾರಿಗೆ ಬಂತು. ಇದರ ರೂವಾರಿ ಅಂದಿನ ಗ್ರಾಮೀಣಾಭಿವೃದ್ಧಿ ಸಚಿವ ನಜೀರ್‌ಸಾಬ್. ಸಮಸ್ಯೆ ಪರಿಹಾರ ಅವರಿಗೆ ಮುಖ್ಯವಾದಂತೆ, ಅವರ ದೂರಗಾಮಿ ಪರಿಣಾಮಗಳ ಕಲ್ಪನೆ ಇರಲಿಲ್ಲ. ಆದ್ದರಿಂದಲೇ ಇವತ್ತಿನ ಅನಾಹುತ ನಾವು ಕಾಣುತ್ತಿದ್ದೇವೆ.


ರಾಜ್ಯ ಸರ್ಕಾರ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ನಲ್ಲಿ, ಕಿರುನೀರು ಮತ್ತು ಕೈ ಪಂಪು, ಬೋರ್‌ವೆಲ್‌ಗಳ ಯೋಜನೆಗಳನ್ನು ಹಮ್ಮಿಕೊಂಡಿದೆ. 1992-93ರಲ್ಲಿ ನಲ್ಲಿ ಮೂಲಕ ನೀರು ಸರಬರಾಜು ಮಾಡುವ ಯೋಜನೆಗೆ 98.94 ಕೋಟಿ ಕಿರುನೀರು ಪೂರೈಕೆ ಯೋಜನೆಗಳಿಗೆ 89.58 ಕೋಟಿ ಹಾಗೂ ಕೈ ಪಂಪು ಅಳವಡಿಸಿದ ಬೋರ್‌ವೆಲ್ ಯೋಜನೆಗಳಿಗೆ 178.16 ಕೋಟಿ ರೂ. ವೆಚ್ಚ ಮಾಡಿತು. 1996-97ರಲ್ಲಿ ಈ ಯೋಜನೆಗಳಲ್ಲಿ ಶೇ.48, ಶೇ.33 ಹಾಗೂ ಶೇ.158ರಷ್ಟು ಹೆಚ್ಚಳ ಆಗಿದೆ. ಇಂಥ ಗ್ರಾಮೀಣ ಕುಡಿಯುವ ನೀರು ಯೋಜನೆಗಳಿಗೆ ವಿಶ್ವಬ್ಯಾಂಕ್, ಡ್ಯಾನಿಡಾ ಹಾಗೂ ನೆದರ್‌ಲ್ಯಾಂಡ್ ದೇಶಗಳ ಧನ ಸಹಾಯ ಇದೆ. ಈ ಹಣಕಾಸು ನೆರವಿನಿಂದ ಏಳು ವರ್ಷಗಳಲ್ಲಿ 1200 ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರು ಪೂರೈಸಬೇಕೆಂಬುದು ಉದ್ದೇಶ. ಹಳ್ಳಿ ಹಳ್ಳಿಗಳಲ್ಲಿ ಬೋರ್‌ವೆಲ್‌ಗಳು ತಲೆ ಎತ್ತಿವೆ. ಆದರೆ ಹಳ್ಳಿಗಳ ಜನಕ್ಕೆ ಅಗತ್ಯ ಪ್ರಮಾಣದ ಹಾಗೂ ಶುದ್ಧವಾದ ನೀರು ದೊರಕಿಸುವುದು ಮಾತ್ರ ಸಾಧ್ಯವಾಗಿಲ್ಲ.

ಇಲ್ಲಿ ನೀರು ಪೂರೈಕೆಗಿಂತ ಹೆಚ್ಚಾಗಿ, ಸಂಬಂಧಿಸಿದ ಅಧಿಕಾರಿಗಳು, ಬೋರ್‌ವೆಲ್ ಕಂಪೆನಿಗಳವರು ಹಾಗೂ ಸ್ಥಳೀಯ ರಾಜಕೀಯ ಮುಖಂಡರು ಶಾಮೀಲಾಗಿ ಲಾಭ ಮಾಡಿಕೊಳ್ಳುತ್ತಾ ಇರುವುದೂ ಈ ಯೋಜನೆಗಳ ವೈಫಲ್ಯಕ್ಕೆ ಕಾರಣ. ಬಹುತೇಕ ಗ್ರಾಮಗಳಲ್ಲಿ ಬೋರ್‌ವೆಲ್‌ಗಳು ಕೆಟ್ಟಿವೆ. ಅವನ್ನು ರಿಪೇರಿ ಮಾಡುವವರಿಲ್ಲ. ರಿಪೇರಿ ಮಾಡಿರುವುದಾಗಿ ದಾಖಲೆಗಳಲ್ಲಿ ನಮೂದಿಸಿ ಹಣ ನುಂಗಿ ಹಾಕಿರುವುದೇ ಹೆಚ್ಚು. ಕೆಲವೆಡೆ ಯೋಜನೆಗಳು ಪೂರ್ಣಗೊಂಡಿಲ್ಲ. ಇನ್ನು ಹಲವು ಕಡೆ ವಿದ್ಯುತ್ ಕೊರತೆಯಿಂದಾಗಿ ಸಮರ್ಪಕ ನೀರು ಪೂರೈಕೆ ಸಾಧ್ಯವಾಗುತ್ತಿಲ್ಲ.

ಅಂತರ್ಜಲ ಮಟ್ಟ ಕಾಯ್ದುಕೊಂಡು ಬರುವಲ್ಲಿ ಸಕ್ರಿಯ ಪಾತ್ರ ನಿರ್ವಹಿಸುತ್ತಾ ಬಂದಿದ್ದ ಕೆರೆ, ಕಟ್ಟೆಗಳಲ್ಲಿ ಈಗ ಹೂಳು ತುಂಬಿಕೊಂಡಿದೆ. ಕೆರೆಯಂಗಳಗಳ ಒತ್ತುವರಿ ಆಗಿದೆ. ಊರಿನ ಸರ್ಕಾರೀ ಜಮೀನು, ಗೋಮಾಳ, ನೆಡು ತೋಪು ಎಲ್ಲ ಕೃಷಿಗೆ ಬಳಕೆಯಾಗುತ್ತಿದೆ.

ಬಹುತೇಕ ಕೆರೆಗಳಲ್ಲಿ ತುಂಬಿರುವ ಹೂಳಿನಿಂದಾಗಿ ನೀರಿನ ಸಂಗ್ರಹ ತೀರಾ ಕಡಿಮೆ. ಹೆಚ್ಚುವರಿ ನೀರು ವ್ಯರ್ಥವಾಗಿ ಹರಿದು ಹೋಗುತ್ತವೆ. ಸಂಗ್ರಹವಾದ ನೀರು ಕೂಡ ಕೆಲವೇ ದಿನಗಳಲ್ಲಿ ಜಿನುಗಿ ಹೋಗುತ್ತದೆ. ಮಳೆ ನೀರಿನ ಶೇಕಡಾ ಹತ್ತು, ಹದಿನೈದು ಭಾಗ ಕೂಡ ಭೂಮಿಯಲ್ಲಿ ಇಂಗದೇ ಅಂತರ್ಜಲ ಮಟ್ಟ ದಿನದಿಂದ ದಿನಕ್ಕೆ ಕುಸಿಯುತ್ತದೆ.

ಒಂದೆಡೆ ಮಿತಿಮೀರಿ ಕೊಳವೆ ಬಾವಿ ತೋಡಿ ನಡೆಸುತ್ತಿರುವ ದುರಾಚಾರ, ಇನ್ನೊಂದೆಡೆ ಅಂತರ್ಜಲ ವೃದ್ಧಿಗೆ ಯಾವುದೇ ಕ್ರಮ ಕೈಗೊಳ್ಳದೇ, ಹತ್ತು ಇಪ್ಪತ್ತು ಅಡಿ ತೋಡಿದರೆ ಸಿಗುತ್ತಿದ್ದ ನೀರಿಗಾಗಿ ಇಂದು ಐನೂರು, ಆರು ನೂರು ಅಡಿಗಳಿಗಿಂತ ಕೆಳಗೆ ಹೋಗಬೇಕಾಗಿದೆ.



ನೀರಿಗಾಗಿ ವಿಶ್ವ ಯುದ್ಧ

ಇಪ್ಪತ್ತನೇ ಶತಮಾನದಲ್ಲಿ ತೈಲಕ್ಕಾಗಿ ಯುದ್ಧ ನಡೆದದ್ದು, ಈಗಲೂ ನಡೆಯುತ್ತಾ ಇರುವುದು ನಮಗೆ ತಿಳಿದಿದೆ. ಈಗಿರುವ ಕಲುಷಿತ ನೀರಿನ ವ್ಯವಸ್ಥೆಯೇ ಮುಂದುವರಿದಲ್ಲಿ 2050ರ ವೇಳೆಗೆ ಪ್ರಪಂಚದ ಶೇಕಡಾ 70ರಷ್ಟು ಜನ ಯೋಗ್ಯ ನೀರು ದೊರಕದೇ ಪರದಾಡಬೇಕಾಗುತ್ತದೆ ಎಂದು ವಿಶ್ವಸಂಸ್ಥೆಯ ತಜ್ಞ ಇಸ್ಮಾಯಿಲ್ ಸೀಗಲ್‌ಡಿನ್ ಹೇಳಿದ್ದಾರೆ.

ಇದೇ ಪರಿಸ್ಥಿತಿ ಮುಂದುವರೆದರೆ ಮುಂದೆ ವಿಶ್ವದ ಮಹಾಯುದ್ಧ ನೀರಿಗಾಗಿ ನಡೆಯಲಿದೆ ಎಂದೂ ಅವರು ಭವಿಷ್ಯ ನುಡಿದಿದ್ದಾರೆ.

ನೀರಿನ ಸುರಕ್ಷತೆ ಎಂಬ ಕಲ್ಪನೆ ಸರ್ಕಾರಕ್ಕೂ ಇಲ್ಲ. ಜನರಿಗೂ ಇಲ್ಲ. ಅದರ ಪರಿಣಾಮ ಎಂದರೆ ಉಲ್ಬಣಿಸುತ್ತಿರುವ ಸಾಂಕ್ರಾಮಿಕ ರೋಗಗಳು. ಈಗಾಗಲೇ ನೀರಿಗೇ ಕೊರತೆ ಇದೆ. ಇನ್ನು ಸುರಕ್ಷಿತ ನೀರಂತೂ ಇನ್ನೆರಡು ಮೂರು ವರ್ಷಗಳಲ್ಲಿ ಕನಸಾಗಲಿದೆ. ಗ್ರಾಮೀಣ ಹಾಗೂ ನಗರ ನೀರು ಸರಬರಾಜು ಯೋಜನೆಗಳು ಇಂದು ಜನರನ್ನು ನಿಧಾನವಾಗಿ ಕೊಲ್ಲುವ ಸರ್ಕಾರದ ಯೋಜನೆಗಳಂತಾಗಿವೆ. ಇದೇ ಪರಿಸ್ಥಿತಿ ಮುಂದುವರೆದರೆ ನರಕವೆಂಬುದು ಬೇರೆಲ್ಲೂ ಇಲ್ಲ. ಪ್ರತಿ ಮನೆಯೂ ನರಕವೇ ಎಂಬಂಥ ಪರಿಸ್ಥಿತಿ ಮೂಡಲಿದೆ.

ನೀರಿನ ಕೊರತೆ ಈ ಬಗೆಯದಾದರೆ, ಇಲ್ಲಿ ದೊರೆಯುತ್ತಿರುವ ನೀರು ಎಷ್ಟು ಆರೋಗ್ಯಕರ ಅಥವಾ ಶುದ್ಧ ಎಂಬ ಪ್ರಶ್ನೆಯೂ ಮುಖ್ಯ.

ಬೋರ್‌ವೆಲ್‌ಗಳಲ್ಲಿ ದೊರೆಯುತ್ತಿರುವ ಅಥವಾ ಬೋರ್‌ವೆಲ್‌ಗಳಿಂದ ಟ್ಯಾಂಕರ್‌ಗೆ ನೀರು ತುಂಬಿಕೊಂಡು ಸರಬರಾಜು ಮಾಡುವ ವ್ಯವಸ್ಥೆ ಈಗ ಜನಪ್ರಿಯ. ಆದರೆ ಬೋರ್‌ವೆಲ್‌ಗಳಲ್ಲಿ ದೊರೆಯುವ ನೀರೇ ಅಶುದ್ಧವಾದರೆ!

ಹಳ್ಳಿಗಳಲ್ಲಿ ಇರಲಿ, ಬೆಂಗಳೂರಂಥ ನಗರಗಳಲ್ಲೇ ಇದು ವ್ಯಾಪಕ ಪಿಡುಗಾಗಿದೆ. ನಗರದ ರಾಜಾಜಿನಗರ, ಸುಬ್ರಹ್ಮಣ್ಯ ನಗರದಲ್ಲಿ ತೋಡಿದ ಬಾವಿಗಳಲ್ಲಿ ಮಲ, ಮೂತ್ರ ಸೇರಿಕೊಂಡು ಬಳಕೆಗೆ ಅಯೋಗ್ಯವಾದ ಕಾರಣ ಇಲ್ಲಿನ ಬಾವಿಗಳನ್ನು ಬೇರೆ ದಾರಿ ಇಲ್ಲದೆ ಮುಚ್ಚಬೇಕಾದ ಪರಿಸ್ಥಿತಿ.

ರಾಜಾಜಿನಗರದ 9ನೇ ಬ್ಲಾಕ್‌ನಲ್ಲಿರುವ ಕಲಾವಿದ ಕಮಲೇಶ್ ತಮ್ಮ ಬಾವಿಯೊಳಗೆ ಮತ್ತೊಂದು ರಿಗ್ ಹಾಕಿಸಿದ್ದಾರೆ. ಆದರೂ ಕೆಟ್ಟ ಚರಂಡಿ ವ್ಯವಸ್ಥೆಯಿಂದಾಗಿ ಮಲಮೂತ್ರ ಪೈಪಿನ ಸಂದಿನೊಳಗಿಂದ ಕೊಳವೆ ಬಾವಿಯ ನೀರಲ್ಲಿ ಬೆರೆಯುತ್ತಿದೆ.

ಇದರಿಂದಾಗಿ ಗಬ್ಬು ವಾಸನೆ, ಸೊಳ್ಳೆಗಳ ಹಾವಳಿ. ಈ ಕಾಟಕ್ಕೆ ಬೇಸತ್ತು ಹಲವರು ಬಾವಿಗಳನ್ನೇ ಮುಚ್ಚಿದ್ದಾರೆ. ಇನ್ನು ಕೆಲವರಿಗೇ ಆ ಶಕ್ತಿ ಇಲ್ಲವೇ ಹೆಣಗಾಡುತ್ತಿದ್ದಾರೆ.

ಕೆಲವೊಮ್ಮೆ ಜಲಮಂಡಳಿ ಒದಗಿಸುವ ನೀರಿನ ಪೈಪಿನೊಳಗೂ ಚರಂಡಿ ನೀರು ಬೆರೆಯುತ್ತದೆ. ಅವರನ್ನು ಕೇಳಿದರೆ ನೀರು ಪೂರೈಸುವುದು ಮಾತ್ರ ತಮ್ಮ ಕೆಲಸ, ಮಾಲಿನ್ಯದ ಸಮಸ್ಯೆ ನಗರಪಾಲಿಕೆಗೆ ಸೇರಿದ್ದು ಎಂದು ಕೈತೊಳೆದುಕೊಳ್ಳುತ್ತಾರೆ. ಕೆರೆ ಅಂಗಳಗಳ ಒತ್ತುವರಿ, ಸರ್ಕಾರೀ ಜಮೀನಿನ ಒತ್ತುವರಿಯಿಂದ ಕೆರೆ, ಕಟ್ಟೆ, ಬಾವಿಗಳು ಈಗಾಗಲೇ ಒಣಗಿವೆ. ಅಲ್ಲಿ ದೊರೆಯುವ ಅಲ್ಪ ಸ್ವಲ್ಪ ನೀರೂ ಅಶುದ್ಧ. ಕೊಳವೆ ಬಾವಿಗಳಲ್ಲಿ ನೀರಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಹನಿ ನೀರಿಗೂ ಪರದಾಡಬೇಕಾದ ಸ್ಥಿತಿ.

ಸರ್ಕಾರ ಗ್ರಾಮೀಣ ಜನಕ್ಕೆ ಒದಗಿಸುತ್ತಿರುವ ಕೊಳವೆ ಬಾವಿ ನೀರು ಆರೋಗ್ಯಕ್ಕೆ ಮಾರಕ. ಅಲ್ಲಿ ಇರುವ ಖನಿಜಾಂಶಗಳು, ವಿಷ ಅಂಶಗಳಿಂದ ಜನಕ್ಕೆ ತಗಲುವ ನಾರು ಹುಣ್ಣು, ಆನೇಕಾಲು ರೋಗ, ಕಾಮಾಲೆ, ಟೈಫಾಯ್ಡ್, ಆಮಶಂಕೆ, ಮಲೇರಿಯಾದಂಥ ರೋಗಗಳು ಕುಡಿಯುವ ನೀರಿಂದಲೇ ಬರುತ್ತವೆ. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ತಲೆ ದೋರಿದ ಅತಿಸಾರ ಇಂಥ ತಾಜಾ ಉದಾಹರಣೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಗೋವಿಂದರಾವ್ ಹೇಳುತ್ತಾರೆ.

ಅತಿಯಾಗಿ ಕ್ರಿಮಿನಾಶಕ ಮತ್ತು ರಸಗೊಬ್ಬರಗಳ ಬಳಕೆಯಿಂದಾಗಿ ಅಂತರ್ಜಲ ಕೂಡ ವಿಷಪೂರಿತ ವಾಗುತ್ತದೆ ಎಂದೂ ಅವರ ಅಭಿಪ್ರಾಯ.

ನಮ್ಮಲ್ಲಿನ ಬಹುಪಾಲು ಜನರ ಕಾಯಿಲೆ ಮತ್ತು ಮರಣಕ್ಕೆ ಮಾಲಿನ್ಯ ಕಾರಣ. ನಮ್ಮ ಜನರನ್ನು ಕಾಡುತ್ತಿರುವ ಕಾಯಿಲೆಗಳಲ್ಲಿ ಶೇಕಡಾ 80ಕ್ಕೂ ಹೆಚ್ಚು ನೀರಿನಿಂದಾಗಿಯೇ ಬರುತ್ತಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ವರದಿ ಹೇಳಿದೆ.


ಭಾರತದಲ್ಲಿ ಶೇ. 90ಕ್ಕೂ ಹೆಚ್ಚು ಕುಡಿಯುವ ನೀರು ಕಲುಷಿತ ಎಂದು ರಾಷ್ಟ್ರೀಯ ಪರ್ಯಾಯ ಮತ್ತು ಸಂಶೋಧನಾ ಸಂಸ್ಥೆ ಹೇಳುತ್ತಿದೆ. ಕೈಗಾರಿಕೆಗಳ ಕೊಳಚೆ ಹಾಗೂ ಗೃಹ ಬಳಕೆಯ ಕೊಳಚೆ ಮತ್ತು ಕೃಷಿಯಿಂದಾಗಿ ನೀರು ಮಲಿನಗೊಂಡಿದೆ. ಎಷ್ಟೋ ಕಡೆ ನಗರಗಳ ಒಳ ಚರಂಡಿ ನೀರು ನೇರವಾಗಿ ಜಲ ಮೂಲಕ್ಕೆ ಸೇರಿ ಮತ್ತೆ ಕುಡಿಯುವ ನೀರಾಗಿ ಬರುತ್ತದೆ.

ರಾಜಾಸ್ಥಾನದ ಹಲವೆಡೆ ಕೈಗಾರಿಕೆಗಳವರು ತಮ್ಮ ಮಾಲಿನ್ಯವನ್ನು ನೆಲದೊಳಗೇ ಸುರಿಯುತ್ತಾರೆ ಎಂದೂ ಈ ವರದಿ ಹೇಳಿದೆ.

ಈಗೀಗ ಶುದ್ಧ ನೀರೆಂದು ಮಾರಾಟವಾಗುವ ಬಾಟಲಿ ನೀರೂ ಮಾಲಿನ್ಯ ಮುಕ್ತವಲ್ಲ ಎನ್ನುತ್ತದೆ ಒಂದು ವರದಿ. ಭಾರತದಲ್ಲಿ ದಿನಕ್ಕೆ ಹತ್ತು ಸಾವಿರ ಜನ

ಗುಂಡುಗಲಿ !

ಇವರು..
ಜನರ
ಮುಂದೆ ಹುಲಿ...
ಸಂಸತ್ತಿನಲ್ಲಿ ಇಲಿ
ಚುನಾವಣೆಗಳ ಕಲಿ
ಹೆಂಡತಿ ಅಂದರೆ
ಗಲಿಬಿಲಿ!
-ಕ.ಬ. ವೀರಣ್ಣ ಕಣ್ಣಾಗಲ



ಯೋಗ್ಯ ನೀರು

ಎಲ್ಲೆಲ್ಲೂ ನೀರು. ಕುಡಿಯಲು ಮಾತ್ರ ಹನಿ ನೀರಿಲ್ಲ ಎಂದು ಸಮುದ್ರ ನೋಡಿ ಹೇಳುವ ಮಾತು. ಭೂಮಿಯ ಮೇಲ್ಮೈ ನೀರಿನಲ್ಲಿ ಸಮುದ್ರದ ಪಾಲು ಶೇಕಡಾ 97ರಷ್ಟು, ಶೇಕಡಾ ಎರಡಕ್ಕಿಂತ ಹೆಚ್ಚು ಮಂಜುಗಡ್ಡೆಯ ರೂಪದಲ್ಲಿ ಲಭ್ಯ.

ಕೃಷಿ ಮತ್ತು ಸಾರ್ವಜನಿಕ ಬಳಕೆಗೆ ದೊರೆಯುವುದು ಶೇ.0.00037 ಮಾತ್ರ. ಇದಿಷ್ಟರಿಂದಲೇ ನೀರು ಎಷ್ಟು ಅಮೂಲ್ಯ ಎಂಬುದು ತಿಳಿಯುತ್ತದೆ.

ನೀರಿನಿಂದ ಹರಡುವ ಕಾಯಿಲೆಗಳನ್ನು ಪಡೆದರೆ, ಸುಮಾರು ಅಷ್ಟೇ ಜನ ಇಂಥ ಕಾಯಿಲೆಗಳಿಂದಾಗಿ ಸಾಯುತ್ತಾರೆ ಎಂದು ವಿಶ್ವ ಸಂಸ್ಥೆ ಹಾಗೂ ವಿಶ್ವ ಬ್ಯಾಂಕ್ ವರದಿಯೊಂದು ತಿಳಿಸಿದೆ.

ಪ್ರತಿದಿನ ವಿಶ್ವದಲ್ಲಿ ಐದು ವರ್ಷದೊಳಗಿನ 30,500 ಮಕ್ಕಳು ಸಾಯುತ್ತಿದ್ದು, ಇದಕ್ಕೆ ಪ್ರಮುಖ ಕಾರಣ ಯುದ್ಧ, ಏಡ್ಸ್ ಹಾಗೂ ದಾರಿದ್ರ್ಯ. ಇಂಥವುಗಳಲ್ಲಿ ನೀರಿಂದ ಹರಡುವ ರೋಗವೂ ಮುಖ್ಯ ಎಂಬುದೂ ಇದೇ ವರದಿಯ ಸಾರಾಂಶ.

ಬೆಂಗಳೂರು ನಗರದಲ್ಲಿನ ಶೇಕಡಾ 30 ರಷ್ಟು ಭಾಗದ ಅಂತರ್ಜಲ ಕುಡಿಯಲು ಅರ್ಹವಲ್ಲ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧ್ಯಯನ ಹೇಳುತ್ತದೆ. ಅಂತರ್ಜಲದಲ್ಲಿ ನೈಟ್ರೇಟ್ ಪ್ರಮಾಣ ಗರಿಷ್ಠವೆಂದರೆ ಲೀಟರ್‌ಗೆ 50 ಮಿಲಿ ಗ್ರಾಂ. ಆದರೆ ನಗರದ ಹಲವೆಡೆ ಅಂತರ್ಜಲದಲ್ಲಿ ಇರುವ ನೈಟ್ರೇಟ್ ಪ್ರಮಾಣ ಲೀಟರ್‌ಗೆ 300ರಿಂದ 750 ಮಿ.ಗ್ರಾಂ.

ನೈಟ್ರೇಟ್ ಪ್ರಮಾಣ ಜಾಸ್ತಿಯಾದರೆ ಮಕ್ಕಳು ಬ್ಲೂ ಬೇಬಿ ರೋಗಕ್ಕೆ ತುತ್ತಾಗುತ್ತವೆ. ವಯಸ್ಕರು ಇಂಥ ನೀರು ಕುಡಿದಲ್ಲಿ ಕ್ಯಾನ್ಸರ್ ಕೂಡ ಬರಬಹುದೆಂದು ಇದೇ ಅಧ್ಯಯನ ತಿಳಿಸಿದೆ.

ಈ ಬಗೆಯ ಗಂಡಾಂತರಗಳ ಅರಿವಿಲ್ಲದೇ ಜನ ನೈಟ್ರೇಟ್ ಅಧಿಕವಾಗಿರುವ ನೀರನ್ನು ಕುಡಿಯುತ್ತಲೇ ಇದ್ದಾರೆ.

ಬೆಂಗಳೂರು ನಗರದ ವ್ಯಾಪ್ತಿಯ ಶ್ರೀರಾಮಪುರದ ಅಂತರ್ಜಲದಲ್ಲಿ ನೈಟ್ರೇಟ್ ಪ್ರಮಾಣ ಲೀಟರ್‌ಗೆ 300ರಿಂದ 350 ಮಿ.ಗ್ರಾಂ. ಚೋಳನಾಯಕನ ಪಾಳ್ಯ, ರಹಮತ್ ನಗರ, ಬಾಣಸವಾಡಿ, ನಾಗಶೆಟ್ಟಿಹಳ್ಳಿ, ಕೃಷ್ಣರಾಜಪುರ ಮುಂತಾದೆಡೆ ಈ ಪ್ರಮಾಣ 250 ಮಿ.ಗ್ರಾಂ. ಚರಂಡಿ ನೀರು ಅಂತರ್ಜಲದಲ್ಲಿ ಬೆರೆಯುವುದೇ ಇದಕ್ಕೆ ಕಾರಣ ಎಂದೂ ಅಧ್ಯಯನ ತಿಳಿಸಿದೆ.

1995ರಲ್ಲಿ ಶ್ರೀಕಂಠಮೂರ್ತಿ ಅವರ ನೇತೃತ್ವದಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಡೆಸಿದ ಮಾದರಿ ಸಂಗ್ರಹಗಳಿಂದ ಗಂಗೇನಹಳ್ಳಿ, ಅಹಮದ್‌ನಗರ, ಮೇಸ್ತ್ರಿಪಾಳ್ಯ ಮುಂತಾದೆಡೆ ನೈಟ್ರೇಟ್ ಪ್ರಮಾಣ 241ರಿಂದ 30 ಮಿ.ಗ್ರಾಂ ಎಂದೂ ಕಂಡು ಬಂದಿದೆ.

1998ರಲ್ಲಿ ಇದೇ ತಂಡ ಉಪ್ಪಾರ ಪೇಟೆ, ನಾಗರಭಾವಿ, ಆರ್.ವಿ. ಮುಖ್ಯರಸ್ತೆ, ಮತ್ತೀಕೆರೆ ಮುಂತಾದ ಪ್ರದೇಶಗಳಿಂದ 759 ಮಾದರಿಗಳನ್ನು ಸಂಗ್ರಹಿಸಿದ್ದು, ಇಲ್ಲೆಲ್ಲ ಅಂತರ್ಜಲದಲ್ಲಿ ನೈಟ್ರೇಟ್ ಪ್ರಮಾಣ ಲೀಟರ್‌ಗೆ 19ರಿಂದ 20 ಮಿ.ಗ್ರಾಂ ಎಂದು ಕಂಡು ಬಂದಿದೆ.



''ನಿನ್ನ ಕೂದಲಿಗೆ ಎಷ್ಟು ಬೇಕಾದ್ರು, ಕಪ್ಪು ಬಳಿ ಆದ್ರೆ ನನ್ನಿಂದ ಮುಸುರಿ ತಿಕ್ಕಲು ಹೇಳಿ ನಿನ್ನ ಮುಖಕ್ಕೆ ಮಸಿ ಬಳ್ಕೋಬೇಡ್ವೇ....!''

ಮಾನವ ದೇಹಕ್ಕೆ ರಂಜಕ, ಕಬ್ಬಿಣ, ಪೊಟ್ಯಾಷಿಯಂ ಮುಂತಾಗಿ ಹಲವು ಲವಣಗಳು ಅವಶ್ಯಕ. ಆದರೆ ಈ ಲವಣಗಳು ಮಿತಿ ಮೀರಿದರೂ ಆರೋಗ್ಯಕ್ಕೆ ಮಾರಕ.

ಹಲವೆಡೆ ಇಂಥ ಲವಣಾಂಶಗಳು ಮಿತಿ ಮೀರಿದ ಪ್ರಮಾಣದಲ್ಲಿ ಇರುವುದರಿಂದ ನಾನಾ ಬಗೆಯ ಕಾಯಿಲೆಗಳಿಗೆ ಜನ ತುತ್ತಾಗುತ್ತಾ ಇದ್ದಾರೆ.

ಫ್ಲೋರೈಡ್ ವಿಚಾರವನ್ನೇ ಗಮನಿಸಿ. ಫ್ಲೋರೀನ್ ಹಲವು ಬಗೆಯಲ್ಲಿ ಮಾನವನಿಗೆ ಲಭ್ಯ. ಫ್ಲೋರೈಡ್ ರೂಪದಲ್ಲಿ ಅದು ಸಮುದ್ರ, ಮೀನು, ಚಹಾ, ಗಿಣ್ಣು, ಪಾನ್, ಟೂತ್‌ಪೇಸ್ಟ್‌ಗಳಲ್ಲಿ ಇರುತ್ತದೆ. ಇದು ಮೂಳೆಗಳು ಬೆಳೆಯಲು ಸಹಾಯಕ. ಫ್ಲೋರೈಡ್ ಕೊರತೆಯಾದರೆ 'ಡೆಂಟಲ್ ಕೊರೀನ್' ಎಂಬ ಕಾಯಿಲೆ ಬರುತ್ತದೆ.

ನೀರಿನಲ್ಲಿ ಪ್ರತಿ ಲೀಟರ್‌ಗೆ 0.5ರಿಂದ ಒಂದು ಮಿಲಿ ಗ್ರಾಂ ಫ್ಲೋರೈಡ್ ಇರುವುದು ಒಳ್ಳೆಯದು. ಈ ಪ್ರಮಾಣ ಮಿತಿ ಮೀರಿದರೆ 'ಫ್ಲೂರೋಸಿಸ್' ಎಂಬ ಕಾಯಿಲೆ ಬರುತ್ತದೆ.

ನಿಗೂಢ ಜ್ವರ

ಮಂಗಳೂರು ತಾಲ್ಲೂಕು ಮುಲ್ಕಿ ಸಮೀಪ ರಂಗಪ್ಪಯ್ಯನ ಕಾಡಿನ ಬಿಜಾಪುರ ಕಾಲೋನಿಯಲ್ಲಿ ಈಚೆಗೆ ನಿಗೂಢ ಜ್ವರ ಕಾಣಿಸಿಕೊಂಡು ಇಬ್ಬರನ್ನು ಬಲಿ ತೆಗೆದುಕೊಂಡಿತು. 90 ಮಂದಿ ಹೊರ ರೋಗಿಗಳಾಗಿ, 67 ಮಂದಿ ಒಳ ರೋಗಿಗಳಾಗಿ ಚಿಕಿತ್ಸೆ ಪಡೆದರು.

ಈ ಕಾಯಿಲೆಯ ಸ್ವರೂಪ ಏನೆಂಬುದು ಇನ್ನೂ ತಿಳಿಯದು. ಆದರೆ ಅಲ್ಲಿನ ಬೋರ್‌ವೆಲ್ ನೀರು ಬಳಕೆಯಿಂದ ಹೀಗಾಗಿದೆ ಎಂಬುದಂತೂ ಸತ್ಯ. ಅದರ ನಿವಾರಣೆಗಾಗಿ ಈಗ ಅಲ್ಲಿ ಟ್ಯಾಂಕರ್‌ಗಳ ಮೂಲಕ ನೀರು ಒದಗಿಸುವ ಕೆಲಸ ನಡೆಯುತ್ತಿದೆ.

ನಮ್ಮಲ್ಲಿ 160 ಗ್ರಾಮಗಳಲ್ಲಿ ನಡೆಸಿದ ಮಾದರಿ ಸಮೀಕ್ಷೆಯಲ್ಲಿ ಕೇವಲ 17 ಗ್ರಾಮಗಳ ನೀರು ಮಾತ್ರ ಕುಡಿಯಲು ಯೋಗ್ಯ ಪ್ರಮಾಣದ ಫ್ಲೋರೈಡ್ ಹೊಂದಿದ್ದು ಕಂಡು ಬಂತು. ಉಳಿದ ಹಳ್ಳಿಗಳಲ್ಲಿನ ನೀರಲ್ಲಿ ಅಗತ್ಯಕ್ಕಿಂತ ಶೇಕಡಾ 300ರಿಂದ ಸಾವಿರ ಪಟ್ಟು ಫ್ಲೋರೈಡ್ ಅಂಶ ಇದ್ದದ್ದು ತಿಳಿದು ಬಂದಿದೆ.

ಡ್ಯಾನಿಡಾ ಸಂಸ್ಥೆ ಕೋಲಾರ ಜಿಲ್ಲೆಯ ಬಾಗೇಪಲ್ಲಿ ತಾಲೂಕಿನಲ್ಲಿ ನಡೆಸಿದ ಅಧ್ಯಯನದಿಂದ ಇಲ್ಲಿನ ಏಳು ಹಳ್ಳಿಗಳ ಶೇಕಡಾ 27.45ರಷ್ಟು ಜನಸಂಖ್ಯೆ ಫ್ಲೂರೋಸಿಸ್ ರೋಗಕ್ಕೆ ತುತ್ತಾಗಿದ್ದು ತಿಳಿದಿದೆ. ಮಕ್ಕಳಲ್ಲಿ ಶೇಕಡಾ 31.8ರಷ್ಟು ಈ ಬೇನೆಗೆ ತುತ್ತಾಗಿದ್ದರೆ, ಶಾಲೆಗಳಲ್ಲಿ ಓದುತ್ತಿರುವ ಶೇಕಡಾ 70ಕ್ಕೂ ಹೆಚ್ಚು ಮಕ್ಕಳಲ್ಲಿ ದಂತದ ಫ್ಲೂರೋಸಿಸ್ ಕಂಡು ಬಂದಿದೆ.

ಬಾಗೇಪಲ್ಲಿ ಪಟ್ಟಣದಲ್ಲಿಯೂ ಫ್ಲೂರೋಸಿಸ್ ಹಾವಳಿ ವ್ಯಾಪಕವಾಗಿದೆ.

ಕಲ್ಬುರ್ಗಿ ಜಿಲ್ಲೆ ಕಮಲಾಪುರ ತಾಂಡ್ಯದ 48 ಮಕ್ಕಳಲ್ಲಿ 15 ಮಕ್ಕಳಿಗೇ ಫ್ಲೂರೋಸಿಸ್ ಆಗಿದೆ. ಫ್ಲೋರೈಡ್ ಅಂಶ ಮಿತಿಮೀರಿದ ಪ್ರಮಾಣದಲ್ಲಿರುವ ನೀರು ಕುಡಿಯುವುದೇ ಇದಕ್ಕೆ ಕಾರಣ ಎಂದು ಮಕ್ಕಳ ತಜ್ಞ ಡಾ|| ಎಸ್.ಎಸ್. ಪಾಟೀಲ್ ಹೇಳುತ್ತಾರೆ.

ಈ ರೋಗ ತಾಗಿದ ಕೆಲವು ಮಕ್ಕಳ ಕಾಲು ಕಮಾನಿನಂತೆ ಬಾಗಿದ್ದರೆ, ಕೆಲವು ಮಕ್ಕಳ ಕಾಲು

ಸುರುಳಿ ಸುತ್ತಿಕೊಂಡಿವೆ. ಕೆಲವು ಮಕ್ಕಳ ಕಾಲು, ಹೊಟ್ಟೆ ಉಬ್ಬಿದ್ದರೆ, ಇನ್ನು ಕೆಲವಕ್ಕೆ ಕೈ ತನ್ನ ಆಕಾರ ಕಳೆದುಕೊಂಡಿದೆ. ತಲೆ ದಪ್ಪವಾಗಿದ್ದು, ಹಲ್ಲುಗಳು ಹಳದಿ ಬಣ್ಣಕ್ಕೆ ತಿರುಗಿದ್ದರೆ ಪಕ್ಕೆಲುಬುಗಳಂತೂ ಚಿತ್ರವಿಚಿತ್ರ ಆಕಾರ ಪಡೆದಿವೆ.

ಈ ರೋಗ ಮನುಷ್ಯನನ್ನು ಸಾಯಲೂ ಬಿಡದೆ, ಬದುಕಲೂ ಬಿಡದೆ ನರಕಯಾತನೆ ನೀಡಿ ಕಾಡುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿಯೂ ಫ್ಲೋರೈಡ್‌ಯುಕ್ತ ಕೊಳವೆ ಬಾವಿ ನೀರು ಕುಡಿದು ಸಾವಿರಾರು ಜನ ಫ್ಲೋರೋಸಿಸ್‌ಗೆ ತುತ್ತಾಗಿರುವ ವರದಿಗಳು ಬರುತ್ತಿವೆ.

ಫ್ಲೋರೈಡ್‌ಯುಕ್ತ ನೀರು ಸೇವನೆಯಿಂದ ಕೈ, ಕಾಲು, ಬೆನ್ನಿನ ಸ್ನಾಯುಗಳು ದುರ್ಬಲವಾಗುತ್ತವೆ. ಸ್ನಾಯು ಸೆಳೆತ, ಅಸಿಡಿಟಿ, ಮೂತ್ರ ವಿಸರ್ಜನೆಯಲ್ಲಿ ತೊಂದರೆ, ಚರ್ಮ ಸುಕ್ಕುಗಟ್ಟುವಿಕೆ, ಅಜೀರ್ಣ, ಚರ್ಮವ್ಯಾಧಿ, ಕೀಲುಗಳ ನೋವು, ಚಿಕ್ಕವರು ವಯಸ್ಸಾದವರಂತೆ ಕಾಣುವುದು, ಹಲ್ಲು ಕಪ್ಪಾಗಿ ಬೇಗ ಉದುರುವುದು, ಶಾಶ್ವತ ಉಬ್ಬಸ ಇತ್ಯಾದಿ ಈ ರೋಗದ ಲಕ್ಷಣಗಳು.

ಬಳ್ಳಾರಿ ಜಿಲ್ಲೆಯೊಂದರಲ್ಲೇ 15 ಸಾವಿರ ಫ್ಲೋರೋಸಿಸ್ ರೋಗಿಗಳು ಇರುವುದು ದೃಢಪಟ್ಟಿದೆ. ಈ ಜಿಲ್ಲೆಯ ಕೆಲವು ಭಾಗಗಳಲ್ಲಿ ಬೋರ್‌ವೆಲ್‌ನಿಂದ ದೊರೆಯುವ ನೀರಲ್ಲಿ ಪ್ರತಿ ದಶಲಕ್ಷ ಕಣಗಳಲ್ಲಿ 5.5.ಗಿಂತ ಫ್ಲೋರೈಡ್ ಹೆಚ್ಚಾಗಿರುವುದು ಸಾರ್ವಜನಿಕ ಆರೋಗ್ಯ ಇಲಾಖೆ ಅಧ್ಯಯನದಿಂದಲೇ ತಿಳಿದು ಬಂದಿದೆ. ಈ ಪ್ರಮಾಣ 1.5ಕ್ಕಿಂತ ಹೆಚ್ಚಾದಲ್ಲಿ ಮಾರಕ. ಅಂಥ ಬಾವಿಗಳನ್ನು ಗುರುತಿಸಿ, ಅಲ್ಲಿನ ನೀರನ್ನು ಜನ ಕುಡಿಯಲು ಬಳಸದಂತೆ ನಿಷೇಧಿಸುವುದು ಅತ್ಯಗತ್ಯ. ಇಲ್ಲವಾದಲ್ಲಿ ಇದಕ್ಕೆ ಬಲಿಯಾಗುವ ಜನ ನರಕಯಾತನೆ ಅನುಭವಿಸಿದರೆ, ರೋಗ ಪೀಡಿತ ಮಾನವರನ್ನು ಸರ್ಕಾರ ಹೊರ ಬೇಕಾಗುತ್ತದೆ.

ಇದೇ ರೀತಿಯ ಇನ್ನೊಂದು ಮಾರಕ ಲವಣಾಂಶ ಎಂದರೆ ಸಲ್ಫೇಟ್. ಕುಡಿಯುವ ನೀರಲ್ಲಿ ಲೀಟರ್‌ಗೆ 200 ಮಿ.ಗ್ರಾಂಗೂ ಮೀರಿದ ಸಲ್ಫೇಟ್ ಇದ್ದಲ್ಲಿ ಕರುಳು ಬೇನೆ ಬರುತ್ತದೆ ಎಂಬುದು ತಜ್ಞರ ಅಭಿಪ್ರಾಯ.

ಬೆಂಗಳೂರು ನಗರದ ಶಿವನಚೆಟ್ಟಿ ಗಾರ್ಡನ್, ಪೂರ್ವ ಅಲಸೂರು, ಅಗ್ರಹಾರ ವೆಂಕಟಾಪುರ ಮುಂತಾದೆಡೆ ಕೊಳಚೆ ಬಾವಿಗಳಲ್ಲಿ ದೊರೆಯುವ ನೀರಲ್ಲಿ ಲೀಟರ್‌ಗೆ 300 ಮಿ.ಗ್ರಾಂಗೂ ಹೆಚ್ಚು ಸಲ್ಫೇಟ್ ಇದೆ ಎಂದು ಪತ್ತೆಯಾಗಿದೆ.

ಕ್ಯಾಲ್ಸಿಯಂ ಮೂಳೆಗಳು ಗಟ್ಟಿಯಾಗಲು ಮನುಷ್ಯನಿಗೆ ಅಗತ್ಯ. ಆದರೆ ಆತ ಕುಡಿಯುವ ನೀರಿನಲ್ಲಿ ಅಗತ್ಯಕ್ಕಿಂತ ಹೆಚ್ಚು ಕ್ಯಾಲ್ಸಿಯಂ ಇದ್ದಲ್ಲಿ ಮೂತ್ರ ಪಿಂಡದಲ್ಲಿ ಹರಳು ಗಟ್ಟಿ ಕೂರುತ್ತದೆ.

ಲೀಟರ್ ನೀರಲ್ಲಿ 200 ಮಿ. ಗ್ರಾಂವರೆಗೆ ಕ್ಯಾಲ್ಸಿಯಂ ಇದ್ದರೆ ಪರವಾಗಿಲ್ಲ. ಈ ಪ್ರಮಾಣ ಮೀರಿದರೆ ಅಪಾಯ. ಬೆಂಗಳೂರು ನಗರ ವ್ಯಾಪ್ತಿಯ ಯಮಲೂರು, ಬೆಳ್ಳಂದೂರು ಮತ್ತು ಅಗ್ರಹಾರ ವೆಂಕಟಾಪುರಗಳಲ್ಲಿ ಬಳಸುತ್ತಿರುವ ಬೋರ್‌ವೆಲ್‌ಗಳ ಕುಡಿಯುವ ನೀರಲ್ಲಿ ಲೀಟರ್‌ಗೆ 300 ಮಿ.ಗ್ರಾಂಗೂ ಹೆಚ್ಚು ಕ್ಯಾಲ್ಸಿಯಂ ಇರುವುದು ಪತ್ತೆಯಾಗಿದೆ. ಈ ಭಾಗದ ಜನರಲ್ಲಿ ಸಹಜವಾಗಿಯೇ 'ಕಿಡ್ನಿ ಸ್ಟೋನ್' ನಿಂದ ನರಳುವವರ ಸಂಖ್ಯೆ ಜಾಸ್ತಿ.

ಕೃಷಿಯಲ್ಲಿನ ರಾಸಾಯನಿಕ ವಸ್ತುಗಳು, ಕೀಟನಾಶಕಗಳು ಹಾಗೂ ಒಳಚರಂಡಿ ನೀರಲ್ಲಿ ಹೆಚ್ಚುತ್ತಿರುವ ರಾಸಾಯನಿಕಗಳ ಪ್ರಮಾಣದಿಂದ ಅಂತರ್ಜಲ ಮಾಲಿನ್ಯಗೊಳ್ಳುತ್ತಿದೆ. ಇದು ಭಾರತೀಯ ವಿಜ್ಞಾನ ಸಂಸ್ಥೆಯ, ಪರಮಾಣು ಸಂಶೋಧನಾ ಕೇಂದ್ರದ ವಿಜ್ಞಾನಿಗಳ ಅಭಿಪ್ರಾಯ.

ಭಾರತದಲ್ಲಿ ಶೇಕಡಾ 12ರಷ್ಟು ಜನಕ್ಕೆ ಮಾತ್ರ ಕುಡಿಯಲು ಯೋಗ್ಯವಾದ ನೀರು ದೊರೆಯುತ್ತಿದೆ ಎಂಬುದು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಗೋವಿಂದರಾವ್ ಅಭಿಪ್ರಾಯ.

ಒಂದು ಕಾಲಕ್ಕೆ ಇಡೀ ಬೆಂಗಳೂರು ನಗರದ ಜನರ ಕುಡಿಯುವ ನೀರು ಹಾಗೂ ಕೃಷಿ ಅಗತ್ಯಗಳನ್ನು ಇಲ್ಲಿದ್ದ ನೂರಾರು ಕೆರೆಗಳೇ ಪೂರೈಸುತ್ತಿದ್ದವು. ಇಂದು ಕೆರೆಗಳೆಲ್ಲ ಕಸದ ತೊಟ್ಟಿಗಳಾಗಿವೆ. ಇರುವ ಕೆಲವು ಕೆರೆಗಳಲ್ಲಿ ಚರಂಡಿ ನೀರು ತುಂಬಿಕೊಂಡು ಸೊಳ್ಳೆಗಳ ಉತ್ಪಾದನಾ ಕೇಂದ್ರಗಳಂತಾಗಿವೆ.

ನಮ್ಮಲ್ಲಿನ ಬಹುತೇಕ ನದಿಗಳು ಕೈಗಾರಿಕೆಗಳು ಮಾಲಿನ್ಯ ಹಾಗೂ ಪಟ್ಟಣಗಳ ಚರಂಡಿ ನೀರಿನಿಂದ ವಿಷಯುಕ್ತವಾಗಿವೆ.

ಬಹಳಷ್ಟು ಕಡೆ ಕೆರೆ, ಬಾವಿಗಳ ನೀರೂ ಇವತ್ತು ಮಲಿನಗೊಂಡಿದೆ. ಕೆರೆ, ಬಾವಿಗಳೊಳಗೆ ಭೂಮಿಯೊಳಗಿಂದ ನಾನಾ ರೀತಿಯ ಕಲ್ಮಶಗಳು ಸೇರಿಕೊಳ್ಳುತ್ತಿವೆ. ಕೆರೆಯಂಗಳದ ಒತ್ತುವರಿ, ಅಲ್ಲಿ ನಿರ್ಮಿಸಿರುವ ಸೆಪ್ಟಿಕ್ ಟ್ಯಾಂಕ್‌ಗಳಿಂದ ಮಲಮೂತ್ರ, ಬ್ಯಾಕ್ಟೀರಿಯಾಗಳು ಹರಿದು ಬಂದು ಈ ಜಲಮೂಲಗಳನ್ನು ಸೇರುತ್ತವೆ.

ಮಳೆಗಾಲದಲ್ಲಿ ಕೆರೆ ಬಾವಿಗಳ ನೀರಿನ ಮಟ್ಟ ಏರಿದಾಗಲಂತೂ ಈ ಸಮಸ್ಯೆ ಭೀಕರ. ಮಂಡ್ಯ, ಚಿಕ್ಕಬಳ್ಳಾಪುರ ಮುಂತಾದೆಡೆ ನಡೆದ ಅಧ್ಯಯನಗಳಿಂದ ಈ ಅಂಶ ರುಜುವಾತಾಗಿದೆ. ಅಲ್ಲಿ ದೊರೆಯುವ ಕುಡಿಯುವ ನೀರಿನಲ್ಲಿಯೇ ಮಾನವನ ಮಲದ ಕಣಗಳು ಕಂಡು ಬಂದಿವೆ. ಇನ್ನು ಕೆಲವೆಡೆ ಮಾರಕ ಬ್ಯಾಕ್ಟೀರಿಯಾಗಳು ಪತ್ತೆಯಾಗಿವೆ. ದಶಲಕ್ಷ ನೀರಿನ ಕಣಗಳಲ್ಲಿ ಒಂದು ಕಣದಷ್ಟು ಇಂಥ ಮಾರಕ ಬ್ಯಾಕ್ಟೀರಿಯಾಗಳಿದ್ದರೆ ಏನೂ ಹಾನಿಯಾಗುವುದಿಲ್ಲ. ಆದರೆ ಲಭ್ಯವಿರುವ ಕುಡಿಯುವ ನೀರಲ್ಲಿ ನೂರು ಪಾಲು ಇಂಥ ಬ್ಯಾಕ್ಟೀರಿಯಾಗಳು ಹೆಚ್ಚಾಗಿ ಇರುವುದು ಕಂಡು ಬಂದಿದೆ.

ಸಹಜವಾಗಿಯೇ ಇಂಥ ನೀರಿನ ಸೇವನೆಯಿಂದ ಡಯೇರಿಯಾ ಕಾಲರಾ ಮುಂತಾದ ತೊಂದರೆಗಳು ತಲೆದೋರುತ್ತವೆ. ■

ಬೆಂಗಳೂರಿಗೂ ನೀರಿನ ಅಭಾವ

ರಾಜಧಾನಿ ಬೆಂಗಳೂರಿನ ಕುಡಿಯುವ ನೀರಿಗಾಗಿ ಕಾವೇರಿ ನೀರು ಬಳಕೆ ಆಗುತ್ತಿದೆ. ಕಾವೇರಿ ಒಂದು, ಎರಡು ಮತ್ತು ಮೂರನೇ ಹಂತದ ಯೋಜನೆಗಳಾಗಿವೆ. ಆದರೂ ನಗರಕ್ಕೆ ದಿನಬಿಟ್ಟು ದಿನ ನೀರು ಪೂರೈಸಲಾಗುತ್ತಿದೆ. ನಗರ ಪಾಲಿಕೆಯ ನೂರರಲ್ಲಿ ಎಂಬತ್ತು ವಾರ್ಡುಗಳಲ್ಲಿ ಕುಡಿಯುವ ನೀರಿನ ಅಭಾವವಿದೆ.

ನೀರಿನ ಅಸಮರ್ಪಕ ವಿತರಣೆಯೇ ಈ ಅಭಾವಕ್ಕೆ ಕಾರಣ. ಕೆಲವು ಶ್ರೀಮಂತರು ಮನೆಗಳಲ್ಲಿ 'ಸಂಪ್' ಎಂಬ ವಿಶಾಲ ನೀರಿನ ತೊಟ್ಟಿ ಕಟ್ಟಿಕೊಂಡು ಸಾಕಷ್ಟು ನೀರು ಸಂಗ್ರಹಿಸಿಕೊಳ್ಳುತ್ತಾರೆ. ಇದರಿಂದಲೂ ನೀರಿನ ಅಭಾವ ಉಂಟಾಗುತ್ತಿದೆ.



''ಏನ್ರಿ..... ಇದು ನನ್ನ 'ಆರೋಗ್ಯ ಲೇಖನ' ಎಂಬುದರ ಬದಲು 'ಆಯೋಗ್ಯ ಲೇಖನ' ಎಂದು ಪ್ರಿಂಟಾಗಿದೆ ಸಂಪಾದಕರೇ..... ಪತ್ರಿಕೆಯನ್ನು 'ಆಪರೇಷನ್' ಮಾಡಬೇಕು.....!



ಒಂದುಗೂಡಿಸಿತು ಚಂಡಮಾರುತ

ಎಂಟು ತಿಂಗಳ ಹಿಂದೆ ಒರಿಸ್ಸಾದ ಕರಾವಳಿಯನ್ನು ಅಪ್ಪಳಿಸಿದ ಚಂಡಮಾರುತ ಸಾವಿರಾರು ಬಲಿ ಪಡೆಯಿತು. ಉಳಿದವರ ಬದುಕು ಸಾವಿಗಿಂತ ಕೇಡಾಗಿತ್ತು. ಜಾತಿ, ಧರ್ಮ, ರಾಜಕೀಯ ಗುಂಪುಗಳಾಗಿ ಒಡೆದು ಚೂರಾಗಿದ್ದ ಹಳ್ಳಿಯ ಜನ ಬದುಕಿ ಉಳಿದಾಗ ಒಂದುಗೂಡಿಯೇ ಏನಾದರೂ ಮಾಡುವುದು ಅನಿವಾರ್ಯ ಆಗಿತ್ತು.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಒರಿಸ್ಸಾ ಜನತೆಯ ಪಾಲಿಗೆ ದುರದೃಷ್ಟದ ದಿನಗಳು. ಕರಾವಳಿಯ ಜಗತ್‌ಸಿಂಗ್‌ಪುರ ಮತ್ತು ಎರ್ಸಾಮಾ ಜಿಲ್ಲೆಗಳಲ್ಲಿ ಚಂಡಮಾರುತದ ಹಾವಳಿ. ಅನಿರೀಕ್ಷಿತ ಬಿರುಗಾಳಿ, ಮಳೆ, ಗುಡಿಸಲು, ಮಣ್ಣಿನ ಮನೆಗಳು ಅವರ ಬೊಂಬೆಯಂತೆ ತೂರಿ ಹೋದವು.

ಬದುಕುಳಿಯಲು ಸಾಧ್ಯವಾದಷ್ಟು ಜನ ಗಟ್ಟಿ ಮನೆಗಳಲ್ಲಿ ಆಶ್ರಯ ಪಡೆದರು. ಮೂರು ದಿನಗಳ ಕಾಲ ಅಪ್ಪಳಿಸಿದ ಚಂಡಮಾರುತ. ಹಳ್ಳಿಗಳ ಒಂದೊಂದು ಹಟ್ಟಿ ಮನೆಯ ಸೂರಿನಡಿಯೂ ನೂರಾರು ಜನ.

ಇದೇ ಜನ ಮುಂಚೆ ಕಿತ್ತಾಡಿದ್ದರು. ಜಾತಿ, ಧರ್ಮ, ನಾನಾ ಸಣ್ಣಪುಟ್ಟ ವಿವಾದಗಳಿಗಾಗಿ ಪರಸ್ಪರ ಜಗಳಾಡಿದ್ದರು. ಬಡಿದಾಡಿದ್ದರು. ಸಾವು ಬೆನ್ನಟ್ಟಿದಾಗ, ಈ ಜಗಳ, ವೈಷಮ್ಯ ಎಲ್ಲ ಮರೆತು ಒಂದೇ ಸೂರಿನಡಿ ಆಶ್ರಯ ಪಡೆದಾಗ ಅವರ ವೈಷಮ್ಯ, ಜಾತಿ ಯಾವುದೂ ನೆನಪಾಗಲಿಲ್ಲ.

ಮಳೆ, ಗಾಳಿ ನಿಂತು ಹೊರಗೆ ಬಂದವರು ಬಿದ್ದಿದ್ದ ತೆಂಗಿನ ಕಾಯಿ ಹುಡುಕಿ ತಂದರು. ಅದನ್ನು ಚೆಚ್ಚಿ ಅಲ್ಲಿದ್ದ ಎಲ್ಲರೊಡನೆ ಹಂಚಿಕೊಂಡು ಹಸಿದ ಹೊಟ್ಟೆ ತುಂಬಿಸಿಕೊಂಡರು.

ಒಂದೆರಡು ದಿನಗಳ ನಂತರ ಹೊರಗಿಂದ ಸಹಾಯ ಬಂತು. ರಾಮಕೃಷ್ಣ ಮಿಷನ್, ಯುವ ಜನ ಮತ್ತು ಸಾಮಾಜಿಕ ಅಭಿವೃದ್ಧಿ ಕೇಂದ್ರಗಳ ಕಾರ್ಯಕರ್ತರ ದಂಡು ನೆರವಿನೊಡನೆ ಬಂತು. ಬದುಕುಳಿದಿದ್ದ ಚಂಡಮಾರುತ ಸಂತ್ರಸ್ತರಿಗೆ ಸಮುದಾಯ ಕೇಂದ್ರಗಳನ್ನು ಆರಂಭಿಸಲಾಯಿತು. ಒಬ್ಬೊಬ್ಬರೂ ಒಂದೊಂದು ಕೆಲಸ ಹಂಚಿಕೊಂಡು ದುಡಿದರು.

ಸಾವಿನ ಕರಿನೆರಳು ಬಾಚಿರುವಾಗ ಜಾತಿ, ಧರ್ಮ, ರಾಜಕೀಯ ಯಾವುದೂ ಮುಖ್ಯವಾಗಲಿಲ್ಲ. ಬದುಕಿ ಉಳಿಯುವುದೇ ಮುಖ್ಯವಾಗಿತ್ತು. ಈಗ ಚಂಡಮಾರುತದ ಭೀಕರತೆ ಕರಗಿದೆ. ಆದರೂ ಪ್ರತಿ ಹಳ್ಳಿಯಲ್ಲಿ ಆಗ ಆರಂಭವಾದ ಸಮುದಾಯ ಕೇಂದ್ರಗಳು ಇಡೀ ಹಳ್ಳಿಯ ಪುನರ್ವಸತಿಯ ಹಾಗೇ ಪುನರುಜ್ಜೀವನಕ್ಕೆ ನಾಂದಿ ಹಾಡಿವೆ. ಜನ ಒಂದಾಗಿ ದುಡಿಯಲು ಆರಂಭಿಸಿದ್ದಾರೆ.

ಕಳೆದ ವರ್ಷದ ಅಕ್ಟೋಬರ್ 28ರಂದು ಜಗತ್‌ಸಿಂಗ್‌ಪುರ ಜಿಲ್ಲೆಯ

ಸೌರನಪುರ ಗ್ರಾಮಕ್ಕೆ ಚಂಡಮಾರುತ ದಾಳಿ ಇಟ್ಟಿತು. ಇಡೀ ಹಳ್ಳಿಯಲ್ಲಿ ಇದ್ದುದು ಐದೋ ಆರೊ ಗಟ್ಟಿ ಮನೆಗಳು. ಒಂದೆರಡು ಸರ್ಕಾರಿ ಕಟ್ಟಡಗಳು. ಗಾಳಿ, ಮಳೆ ಚೆಚ್ಚಲು ಆರಂಭಿಸಿದಾಗ ಗುಡಿಸಲುಗಳು ತರಗೆಲೆಗಳಂತೆ ಹಾರಿ ಹೋದವು. ಬದುಕಿ ಉಳಿಯಲು ಊರಿನ ಜನ ಸಿಕ್ಕ, ಸಿಕ್ಕ ಮನೆಗಳಿಗೆ ನುಗ್ಗಿದರು. ಅವುಗಳ ಶ್ರೀಮಂತ ಒಡೆಯರೂ ಯಾರನ್ನೂ ತಡೆಯಲಿಲ್ಲ. ಜಾತಿಯ ಮೇಲು, ಕೀಳು ಅದಕ್ಕೆ ಅಡ್ಡಿಯಾಗಲಿಲ್ಲ. ಹಿಂದೊಮ್ಮೆ ಜನತಾ ದಳ, ಕಾಂಗ್ರೆಸ್ ಎಂದೆಲ್ಲ ಕಿತ್ತಾಡಿ, ಬಡಿದಾಡಿದ್ದ ಇದೇ ಊರಿನ ನೂರಾರು ಜನ ಸಾವಿನ ಹೊಸ್ತಿಲಲ್ಲಿ ಎಲ್ಲ ಮರೆತು ಬದುಕಿಗಾಗಿ ಮೊರೆ ಇಡುತ್ತಾ ಮೂರು ದಿನಗಳವರೆಗೆ ಒತ್ತಿಕೊಂಡೇ ಉಳಿಯಬೇಕಾಯಿತು.



ಚಂಡ ಮಾರುತ ನಿಂತು ತಾವು ಇನ್ನೂ ಬದುಕಿ ಉಳಿದಿದ್ದೇವೆ ಎಂದು ಖಚಿತವಾದಾಗ, ಮುಂದಿನ ಹಾದಿ ಯಾವುದೆಂದು ದಿಕ್ಕುತೋಚದ ಸ್ಥಿತಿ. ಎರಡು ದಿನಗಳವರೆಗೆ ಅಲ್ಲಲ್ಲಿ ಬಿದ್ದ ತೆಂಗಿನಕಾಯಿ ಹುಡುಕಿ ಹೊಟ್ಟೆ ತುಂಬಿಸಿಕೊಂಡರು. ಮೂರನೆಯ ದಿನದಿಂದ ಹೊರಗಿನ ಸಹಾಯ ಬರಲಾರಂಭಿಸಿತು.

ಆಗ ಆರಂಭವಾಯಿತು ಸಮುದಾಯ ಕೇಂದ್ರ. ಆರಂಭದಲ್ಲಿ ಹಿಂಜರಿಕೆ. ಆ ಜಾತಿಯವರು ತಂದ ನೀರು, ಈ ಜಾತಿಯವರು ಮುಟ್ಟಿದ ಪಾತ್ರೆ. ಅದನ್ನು ಬಳಸುವುದು ಹೇಗೆ? ಎಂಬ ಅಳುಕು. ಆದರೆ ನೆರವಿಗೆ ಬಂದಿದ್ದ ಯುವಜನ ಮತ್ತು ಸಾಮಾಜಿಕ ಕೇಂದ್ರದ ಕಾರ್ಯಕರ್ತರು 'ಇಲ್ಲಿ ಜಾತಿ, ಧರ್ಮಗಳ ಬೇಧಕ್ಕೆ ಅವಕಾಶ ಇರದು' ಎಂದು ಕಟ್ಟುನಿಟ್ಟಾಗಿಯೇ ಎಚ್ಚರಿಸಿದರು.

ಜನ ಬದುಕುಳಿಯಬೇಕಾದರೆ ಸಮುದಾಯ ಕೇಂದ್ರದ ಊಟಕ್ಕೆ ಕೈ ಚಾಚಬೇಕಾಗಿತ್ತು. ಅಷ್ಟೇ ಅಲ್ಲ ಅಲ್ಲಿನ ಪ್ರತಿ ಕೆಲಸದಲ್ಲೂ ತಮ್ಮ ಪ್ರತಿಷ್ಠೆ, ಮೇಲು, ಕೀಳೆಂಬ ಭಾವನೆ ಮರೆತೇ ದುಡಿಯಬೇಕಿತ್ತು. ಚಂಡ ಮಾರುತದ ಸದ್ದಡಗಿ ಎಂಟು ತಿಂಗಳೇ ಆಗುತ್ತಾ ಬಂದಿವೆ. ಅಂದು ಸಹಾಯಕ್ಕಾಗಿ ಬಂದಿದ್ದ ಕೇಂದ್ರದ ಕಾರ್ಯಕರ್ತರು, ಅವತ್ತು ಆರಂಭಿಸಿದ ಸಮುದಾಯ ಕೇಂದ್ರಗಳನ್ನು ಇವತ್ತಿಗೂ ಮುಂದುವರಿಸಿಕೊಂಡೇ ಬಂದಿದ್ದಾರೆ. ಅವತ್ತು ಹೊಟ್ಟೆ ಹಸಿವು ನೀಗಿಸಲು ಆರಂಭವಾಗಿದ್ದ ಕೇಂದ್ರಗಳು ಗ್ರಾಮ ಅಭಿವೃದ್ಧಿಯ ಕೇಂದ್ರಗಳಾಗಿವೆ. ಇಂಥ ಪ್ರತಿ ಕೇಂದ್ರಕ್ಕೂ ಒಂದು ಸಮಿತಿ ಇರುತ್ತದೆ. ಅಲ್ಲಿ ಪ್ರತಿ ವರ್ಷ, ಜಾತಿಗೆ ಪ್ರಾತಿನಿಧ್ಯವಿದೆ. ಅವತ್ತು ಕೇವಲ ಅಡುಗೆ ತಯಾರಿಕೆಗೆ ಒಂದಾಗಿದ್ದ ಜನತೆ ಇಂದು ತಮ್ಮದೇ ಹಳ್ಳಿಗಳ ಅಭಿವೃದ್ಧಿಗೆ ಪಣತೊಟ್ಟು ದುಡಿಯುತ್ತಿದ್ದಾರೆ.

ಅಲ್ಲಿ ದುಡಿಯುತ್ತಿರುವ ಹೆಣ್ಣು ಮಕ್ಕಳನ್ನು ಭೇಟಿಯಾದರೆ, ಮೊದಮೊದಲು ಜಾತಿಗಳ ಪರಿವೆ ಕಾಡುತ್ತಾ ಇದ್ದುದು ನಿಜ ಎಂದು ಮುಜುಗರದಿಂದಲೇ ಒಪ್ಪಿಕೊಳ್ಳುತ್ತಾರೆ. ಇನ್ನೂ ಕೆಲವರು ನೇರವಾಗಿ ಅಂತರಾಳದ ಮಾತು ತೆರೆದು ಇಡುತ್ತಾರೆ. 'ಅವತ್ತು ಸಾವು ಬಂದು ಅಪ್ಪಳಿಸುವಾಗ ಒಂದೊದೇ ಸೂರಿನಡಿ ಜಾತಿ, ಮತ ಮರೆತು ಒತ್ತಿಕೊಂಡು ನಡುಗುತ್ತಾ ಕೂತಿದ್ದಾಗ ಇಲ್ಲದಿದ್ದ, ಕಾಡದ ಜಾತಿಯ ಪ್ರಜ್ಞೆ ಇವತ್ತು ಯಾಕೆ ಕಾಡಬೇಕು?' ಎಂದು ಕೇಳಿದವರನ್ನೇ ಪ್ರಶ್ನಿಸುತ್ತಾರೆ.

ಆಣತಿ



ಜನ ಗಣತಿ
ದನ ಗಣತಿ
ಮತ
ದಾರರ ಗಣತಿ
ಹೀ..ಗೆ,
ಆಣತಿಗಳ
ಪಾಲಿಸುತ್ತಲೇ
ಹೋಗುವ
ಮಾಸ್ತರು
ಈಗ
ಗುಮಾಸ್ತರು!?

– ಪ್ರಕಾಶ ಅಂಬರಕರ

ಮನುಷ್ಯನಿರಲಿ, ಯಾವುದೇ ಪ್ರಾಣಿ ಸಂಕುಲವಾಗಲೀ, ಬಿಕ್ಕಟ್ಟು ಅಪಾಯ ತಲೆದೋರಿದಾಗ ಒಂದಾಗಿ ಅದನ್ನು ಎದುರಿಸುವುದು ಸಹಜ. ಆದರೆ ಅಂದಿನ ಒಗ್ಗಟ್ಟು, ಬಿಕ್ಕಟ್ಟು ಮರೆಯಾದಾಗ ತನ್ನಿಂದ ತಾನೇ ದೂರವಾಗಿ ಬಿಡುತ್ತದೆ.

ಒರಿಸ್ಸಾದಲ್ಲಿ ಮಾತ್ರ ಮಾನವರನ್ನು ಒಗ್ಗೂಡಿಸುವ ಪ್ರಯೋಗ ಯಶಸ್ವಿಯಾಗಿ ಮುಂದುವರಿದಿದೆ. ಪ್ರತಿ ಗ್ರಾಮ ಸಮುದಾಯ ತನ್ನ ಗ್ರಾಮಕ್ಕೆ ಬೇಕಾದ ಯೋಜನೆಗಳನ್ನು ಗುರುತಿಸುತ್ತಿದೆ. ಆ ಯೋಜನೆ ಅನುಷ್ಠಾನದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು.ಪ್ರತಿ ಯೋಜನೆ ಜಾರಿ ಆಗುವಾಗಲೂ, ಗ್ರಾಮ ಸಮಿತಿ ಸಭೆ ಸೇರಿ ಹಳ್ಳಿಯ ಯಾರು ಯಾರು ಏನೇನು ಕೆಲಸ ಮಾಡಬೇಕು ಎಂಬುದನ್ನು ನಿರ್ಧರಿಸುತ್ತದೆ.

ಪರಿಹಾರ ಕಾರ್ಯದಲ್ಲಿ ನಿರತವಾಗಿದ್ದ ಆಕ್ಸ್‌ಫ್ಯಾಮ್, ಯುವಜನ ಮತ್ತು ಸಾಮಾಜಿಕ ಅಭಿವೃದ್ಧಿ ಕೇಂದ್ರ ಹಾಗೂ ರಾಮಕೃಷ್ಣ ಮಿಷನ್‌ನಂಥ ಸಂಸ್ಥೆಗಳು ಈ ಯಶಸ್ವಿ ಪ್ರಯೋಗ ನಡೆಸುತ್ತಾ, ಇಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಒಗ್ಗಟ್ಟು ಮೂಡಿಸುತ್ತಾ, ಅಭಿವೃದ್ಧಿಗೆ ತೊಡಕಾಗಿರುವ ಜಾತೀ ಧರ್ಮ, ರಾಜಕೀಯಗಳನ್ನು ನಿವಾರಿಸಿಕೊಂಡು ಹೊಸ ಆಯಾಮಗಳತ್ತ ಮುಖ ಮಾಡಿವೆ. ಚಂಡಮಾರುತದ ಭೀಕರತೆ ಕಂಡ ಹಳ್ಳಿಯ ಜನಗಳಲ್ಲಿ ಈಗ ಒಂದು ಹೊಸ ಪ್ರಜ್ಞೆ ಮೂಡಿದೆ. ತಾವೆಲ್ಲ ಒಂದಾಗಿ ಕೆಲಸ ಮಾಡಿದರೆ ಮಾತ್ರ ಹಳ್ಳಿಯ ಅಭಿವೃದ್ಧಿ ಎಂಬುದು ಮನವರಿಕೆ ಆಗಿದೆ. ಹಾಗಾಗಿಯೇ ತಾವೇ ರೂಪಿಸಿಕೊಂಡ ಯೋಜನೆಗಳಲ್ಲಿ ಅವರೆಲ್ಲ ಒಂದಾಗಿ ದುಡಿಯಲಾರಂಭಿಸಿದ್ದಾರೆ.

ಬಾಲಿಕುಡಾ ಬ್ಲಾಕ್‌ನಲ್ಲಿ ಚಂಡಮಾರುತ ಪರಿಹಾರ ಶಿಬಿರ ನಡೆಸುತ್ತಾ ಇದ್ದ ಯುವಜನ ಮತ್ತು ಗ್ರಾಮೀಣ ಅಭಿವೃದ್ಧಿ ಕೇಂದ್ರದ ಅಜಿತ್ ಬಸ್ತಿಯಾನನ್ನು ನಾಲ್ಕಾರು ದಿನದ ನಂತರ ಕಂಡ ಹಳ್ಳಿಗರು ''ಹೊರಗಿನವರು ಬಂದು ನಮಗೆ ಎಷ್ಟು ದಿನ ಅಂತ ಊಟ ಹಾಕೋಕ್ಕೆ ಸಾಧ್ಯ? ನಮ್ಮ ಊಟ ನಾವೇ ಸಂಪಾದಿಸಿಕೋಬೇಕಲ್ಲವಾ?'' ಎಂದರು. ಆಗ ಎಲ್ಲರೂ ಕುಳಿತು ಯೋಜಿಸಿದ್ದು ವರಾಧ್ನಾ ಎಂಬಲ್ಲಿ ತಡೆ ಒಡ್ಡು ನಿರ್ಮಾಣ.

ಹಳ್ಳಿಗರೆಲ್ಲ ಒಂದಾಗಿ ನಿರ್ಮಿಸಿದ ತಡೆ ಒಡ್ಡಿಗೆ ಕೂಲಿಯಾಗಿ ಸರ್ಕಾರದಿಂದ ರೋಜಗಾರ್ ಯೋಜನೆಯಿಂದ ಹಣ ಬರುತ್ತಿತ್ತು. ಅದನ್ನು ಆಹಾರ ಕೊಳ್ಳಲು ಜನ ವಿನಿಯೋಗಿಸಿದರು. ಊರಿಗೊಂದು ಉಪಕಾರದ ಯೋಜನೆಯೂ ಆಯಿತು.

ಇಂಥ ಹಲವು ಹತ್ತು ಯೋಜನೆಗಳನ್ನು ಈಗಾಗಲೇ ಒರಿಸ್ಸಾದ ಹಳ್ಳಿಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದಿನ ಸಮುದಾಯ ಕೇಂದ್ರದ ಮಾದರಿಯಲ್ಲೇ ಗ್ರಾಮೀಣ ಅಭಿವೃದ್ಧಿ ಕೇಂದ್ರ ಸಮಿತಿಗಳು ಎಲ್ಲರ ಪಾಲುದಾರಿಕೆಯಲ್ಲಿ ಕಾರ್ಯನಿರ್ವಹಿಸುತ್ತಾ ಇವೆ.

ಇದರ ಜೊತೆಗೇ ಜಾತಿ ನಿರ್ಮೂಲನದ ಸಾಮಾಜಿಕ ಅರಿವೂ ಬೆಳೆಯುತ್ತಾ ಇದೆ. ಇದೇ ಬಾಲಿಕುಡಾ ಬ್ಲಾಕ್‌ನ ಕೋಪಿಡಾ ಗ್ರಾಮದಲ್ಲಿ ಶಿವ ದೇವಾಲಯಕ್ಕೆ ದಲಿತರ ಪ್ರವೇಶ ಇರಲಿಲ್ಲ. ಪರಿಹಾರ ಶಿಬಿರದಲ್ಲಿ ದುಡಿಯಲು ಕೇರಳದ ಯುವಕನೊಬ್ಬ ಬಂದಿದ್ದ. ಗ್ರಾಮ ವಿಕಾಸ ಕೇಂದ್ರ ಊರಿನ ಅಭಿವೃದ್ಧಿಗಾಗಿ ಯೋಜನೆ ಹಮ್ಮಿಕೊಂಡಾಗ, ಹಾಳಾಗಿದ್ದ ಶಿವ ದೇವಾಲಯದ ದುರಸ್ತಿಯೂ ಒಂದಾಗಿತ್ತು. ಅದರ ರಿಪೇರಿ ಕೆಲಸವನ್ನು ಬೇರೆಯವರಿಗೆ

ವಹಿಸಿದ ಹಾಗೆಯೇ ದುರ್ಬಲರಿಗೂ ವಹಿಸಲಾಗಿತ್ತು. ಎಂದೂ ಶಿವದೇವಾಲಯದ ಒಳಗೆ ಕಾಲಿರಿಸದಿದ್ದ ಅಸ್ಪೃಶ್ಯರು ದೇವಾಲಯದ ಒಳಗೆ ಹೋಗಿ ರಿಪೇರಿ ಕೆಲಸದಲ್ಲಿ ತೊಡಗಿದರು. ಈಗ ಅವರೆಲ್ಲರೂ ಶಿವದೇವಾಲಯಕ್ಕೆ ಪ್ರವೇಶಿಸಲು ತಾನಾಗಿಯೇ ಅನುಮೋದನೆ ದೊರೆತುಬಿಟ್ಟಿದೆ. ಹೀಗೆ ಸದ್ದಿಲ್ಲದೇ ಹಲವಾರು ಸಾಮಾಜಿಕ ಬದಲಾವಣೆಗಳೂ ಇಲ್ಲಿ ನಡೆಯುತ್ತಿವೆ.

ಒರಿಸ್ಸಾದ ಈ ಭಾಗದಲ್ಲಿನ ಜನರ ಐಕ್ಯತೆಗೆ ಚಂಡಮಾರುತ ವರದಾನವಾಗಿ ಬಂದಂತೆ ಕಾಣುತ್ತದೆ. ಜಗತ್‌ಸಿಂಗಪುರದ ಸುಮ್ರಾ ಗ್ರಾಮದಲ್ಲಿ ಹಲವಾರು ಗುಂಪುಗಳು. ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುತ್ತಾ ಇರಲಿಲ್ಲ. ಮದುವೆ, ಹಬ್ಬ ಮುಂತಾದ್ದು ಆದಾಗಲೂ ಒಬ್ಬರು ಇನ್ನೊಬ್ಬರ ಮನೆಗೆ ಹೋಗುತ್ತಾ ಇರಲಿಲ್ಲ. ಚಂಡ ಮಾರುತದ ಹಾವಳಿ ನಂತರ ಸಮುದಾಯ ಶಿಬಿರಗಳ ಮೂಲಕ ಒಂದುಗೂಡಿದ ಜನತೆಯಲ್ಲಿ ಇದ್ದಕ್ಕಿದ್ದ ಹಾಗೆ ಹಿಂದಿನ ಗುಂಪುಗಾರಿಕೆ, ವೈಷಮ್ಯಗಳು ಮರೆಯಾಗಿವೆ. ಪರಸ್ಪರ ಸಹಕರಿಸುತ್ತಾ, ಎಲ್ಲಾ ಒಟ್ಟಾಗಿಯೇ ದುಡಿಯುತ್ತಾರೆ. ಇದೊಂದು ಆಶ್ಚರ್ಯಕರ ಸಂಗತಿ ಎಂದು ಊರಿನ ಪ್ರಧಾನ ರವೀಂದ್ರ ಸ್ವಾಯಿನ್ ಹೇಳುತ್ತಾನೆ.

ಇದೇ ಗ್ರಾಮದ ಸಮೀಪ ಇರುವ ಇನ್ನೊಂದು ಹಳ್ಳಿ ಮಹಿಮಾದೇವಿ ಪುರ. ಅಲ್ಲಿ ಜಾತಿ, ಧರ್ಮಕ್ಕಿಂತ ಹೆಚ್ಚಾಗಿ ರಾಜಕೀಯದ ತಿಕ್ಕಾಟ. ಜನತಾದಳದವರಿಗೆ ಕಾಂಗ್ರೆಸ್‌ನವರನ್ನು ಕಂಡರಾಗದು. ಆದರೀಗ ಚಂಡಮಾರುತದ ಮಂತ್ರದಂಡದ ಪ್ರಭಾವ ಅವರೆಲ್ಲರನ್ನೂ ಒಂದುಗೂಡಿಸಿದೆ. ಚುನಾವಣೆಗಳು ಬಂದಾಗ ಹೋಗಿ ಮತ ಹಾಕುವ ವಿಚಾರಕ್ಕಷ್ಟೇ ಅವರ ಒಲವು ಸೀಮಿತ. ಉಳಿದಂತೆ ಹಳ್ಳಿಯ ಕೆಲಸದಲ್ಲಿ ಒಂದಾಗಿ ದುಡಿಯುತ್ತಾರೆ.


ಇಂಥ ಪರಿವರ್ತನೆ ಸಾಧ್ಯವಾಗಿಸಿದ್ದು ದೇಶದ ಬೇರೆ ಬೇರೆ ಭಾಗಗಳಿಂದ ಬಂದ ಸಾಮಾಜಿಕ ಕಾರ್ಯಕರ್ತರು. ಹೆಣಗಳ ಕೆಟ್ಟ ವಾಸನೆ ಇಡುಗಿದ್ದ ಹಳ್ಳಿಗಳಿಗೆ, ಇದರಿಂದ ಹೇಗೆ ಪಾರಾಗುವುದೆಂಬುದೇ ಚಿಂತೆ. ಅಸಹ್ಯ ಕೊಳೆತ ಹೆಣಗಳು. ಹತ್ತಿರ ಹೋಗಲೂ ಸಾಧ್ಯವಿರದಷ್ಟು ಕೆಟ್ಟವಾಸನೆ. ಮೂಗಿಗೆ ಬಟ್ಟೆ ಕಟ್ಟಿಕೊಂಡರೂ ಬಡಿಯುತ್ತಿದ್ದ ನಾತ. ಒಂದು ಹೆಣದ ವಿಲೇವಾರಿ ಮಾಡಿ ಬಂದರೂ, ವಾರಗಟ್ಟಲೇ ಕಾಡುತ್ತಿದ್ದ ವಾಕರಿಕೆ. ಅಂಥದ್ದರಲ್ಲಿ ದಂಡುಗಟ್ಟಿಕೊಂಡು ಬಂದ ಆನಂದ ಮಾರ್ಗಿಗಳು ನಗುನಗುತ್ತಾ, ಒಂದಿಷ್ಟೂ ಮುಖ ಸಿಂಡರಿಸಿಕೊಳ್ಳದೇ, ಮೂಗಿಗೆ ಬಟ್ಟೆಕೂಡ ಕಟ್ಟಿಕೊಳ್ಳದೇ ಸತ್ತು ಕೊಳೆಯುತ್ತಿದ್ದ ದೇಹಗಳನ್ನು ಎತ್ತಿ ಸಾಗಿಸಿದರು. ಚಿತೆಗಳನ್ನು ನಿರ್ಮಿಸಿ ಗತಿ ಕಾಣಿಸಿದರು. ಇದೆಲ್ಲ ಕಣ್ಣಾರೆ ಕಂಡ ಒರಿಸ್ಸಾ ಜನತೆಗೆ ಮನಪರಿವರ್ತನೆ ಸಹಜವಾಗಿ ಆಗಿದೆ. ಎಲ್ಲೆಲ್ಲಿಂದಲೋ ಬಂದ ಯುವಕರು, ತಮಗಾಗಿ ಜೀವಬಿಟ್ಟು ದುಡಿಯುತ್ತಿದ್ದುದು ಕಂಡು ನಾಚಿಕೆ ಆಗಿದೆ. ಇದುವರೆಗೆ ಆಗಿರುವ ತಪ್ಪು ಸರಿಪಡಿಸಲೇಬೇಕೆಂಬ ಛಲ ಮೂಡಿದೆ.

ಒರಿಸ್ಸಾ ಚಂಡಮಾರುತ ಪೀಡಿತ ಹಳ್ಳಿಗಳಲ್ಲಿ ಈಗೊಂದು ಹೊಸ ಭರವಸೆ ಕಂಡಿದೆ. ಐಕ್ಯದ ಗಾನ ಕೇಳಿಬರುತ್ತಿದೆ. ಇದು ಚಿರಕಾಲ ಉಳಿಯಲಿ. ಈ ಹಳ್ಳಿಗರ ಬಾಳು ಹಸನಾಗಲಿ ಎಂದು ಶ್ರಮಿಸುವ ಯುವಕರ ದಂಡು ಅಭಿನಂದನೀಯ.

■ ಸಂಗ್ರಹ : ವಿವಿಧ ಮೂಲಗಳಿಂದ

ಮೇಯರ್ ಶಪಥ

ಬೆಂಗಳೂರು ಮಹಾನಗರ ಪಾಲಿಕೆಯ ಮೇಯರ್ ಪಾಲಿಕೆಯ ಖರ್ಚಿನಲ್ಲಿ ವಿದೇಶ ಪ್ರವಾಸ ಕೈಗೊಳ್ಳದಿರಲು ನಿರ್ಧರಿಸಿದ್ದಾರೆ. ಈ ಬಗ್ಗೆ ಅವರು ಸ್ಟ್ಯಾಂಪ್ ಪೇಪರ್‌ನಲ್ಲಿ ಬರೆದು, ಸಹಿ ಹಾಕಿದ್ದಾರೆ. ಬೆಂಗಳೂರಿನ ಪಾಲಿಕೆ ಈಚಿನ ದಿನಗಳಲ್ಲಿ ಕೆಲವು ದಿಟ್ಟ ಹೆಜ್ಜೆ ಇಟ್ಟಿದೆ. ಮೊದಲಿಗೆ ಸಿಬ್ಬಂದಿ ಸರಿಯಾದ ಸಮಯಕ್ಕೆ ಹಾಜರಾಗುವಂತೆ ಮಾಡಲಾಯಿತು. ಆನಂತರ ರಸ್ತೆ ರಿಪೇರಿ ಕೈಗೆತ್ತಿಕೊಂಡಿತು.



ಹಣದ ಮುಗ್ಗಟ್ಟಿನಿಂದ ನರಳುತ್ತಿದ್ದ ಪಾಲಿಕೆ ಆಸ್ತಿ ತೆರಿಗೆ ವಸೂಲಿಗೆ ಸ್ವಯಂ ಆಸ್ತಿ ಘೋಷಣೆಯ ಮಾರ್ಗ ಅನುಸರಿಸಿ ಅರವತ್ತೆಂಟು ಕೋಟಿ ರೂಪಾಯಿ ಸಂಗ್ರಹಿಸಿತು. ಇದರಿಂದಾಗಿ ಪಾಲಿಕೆಗೆ ದುಡ್ಡು ಬರುವುದರ ಜೊತೆಗೇ, ನಾಗರಿಕರಿಗೆ ಸಿಬ್ಬಂದಿಯಿಂದ ಆಗುತ್ತಿದ್ದ ಕಿರುಕುಳ, ವಸೂಲಿ ವರಾತಗಳು ತಪ್ಪಿದವು.

ಈಗ ಮತ್ತೊಂದು ಮಾದರಿ ಹೆಜ್ಜೆ ಇಟ್ಟಿರುವ ಮೇಯರ್ ಪಾಲಿಕೆ ಖರ್ಚಿನಲ್ಲಿ ವಿದೇಶ ಪ್ರವಾಸ ಕೈಗೊಳ್ಳದಿರಲು ನಿರ್ಧರಿಸಿದ್ದಾರೆ.

ಇದನ್ನು ಇತರ ಪಾಲಿಕೆಗಳು ಹಾಗೂ ಪಾಲಿಕೆಗಳ ಸದಸ್ಯರು ಅನುಸರಿಸಿದರೆ ಸಾರ್ಥಕವಾದೀತು.


ನೀವು ಎದುರಾಡುವವರೆಗೂ ಇನ್ನೊಬ್ಬನ ಅಂತರಂಗದ ಮಾತು ಹೊರಬೀಳುವುದಿಲ್ಲ.

- ಜಾರ್ಜ್ ಬರ್ನಾಡ್ ಶಾ

★

ವಿಚಾರಣೆಯೇ ಬೇಡ ಎಂದು ವಾದಿಸುವವನು ತಾನಾಗಿ ತಪ್ಪು ಒಪ್ಪಿಕೊಂಡ ಹಾಗೇ ಸರಿ.

- ಸೈರಸ್



ವಿದೇಶದಲ್ಲಿಯೂ ಕುಣಿದ ಉಪ್ಪಿನ ಕುದ್ರು ಯಕ್ಷಗಾನ ಗೊಂಬೆಗಳು


ಕರ್ನಾಟಕದಲ್ಲಿ ತಲೆ ತಲಾಂತರದಿಂದಲೂ ಬಂದ ಸಾಂಪ್ರದಾಯಿಕ ಕಲೆ ಗೊಂಬೆಯಾಟ. ಪುರಂದರದಾಸರ ಹಾಗೂ ಕನಕದಾಸರ ಕೀರ್ತನೆಗಳಲ್ಲಿ, ರತ್ನಕರವರ್ಣಿಯ ಭರತೇಶ ವೈಭವ ಮತ್ತು ಬಸವ ಪುರಾಣದಲ್ಲಿಯೂ ಈ ಕಲೆಯ ಬಗ್ಗೆ ಉಲ್ಲೇಖವಿದೆ.

ಕುಂದಾಪುರ ತಾಲೂಕಿನ 'ಉಪ್ಪಿನಕುದ್ರು' ಎಂಬ ಸಣ್ಣಹಳ್ಳಿಯಲ್ಲಿ, ಅನಾದಿಕಾಲದಿಂದಲೂ ನಡೆದು ಬಂದ ಜಾನಪದ ಕಲೆಯಾದ ಯಕ್ಷಗಾನ ಗೊಂಬೆಯಾಟಕ್ಕೆ ಮುನ್ನೂರು ವರ್ಷಗಳ ಇತಿಹಾಸವಿದೆ.

ಮುನ್ನೂರು ವರ್ಷಗಳ ಹಿಂದೆ, ಲಕ್ಷ್ಮಣ ಕಾಮತ್, ನರಸಿಂಹ ಕಾಮತ್ ಹಾಗೂ ಮಂಜಪ್ಪ ಕಾಮತ್ ಎನ್ನುವ ಒಂದೇ ಮನೆತನದ ಅಣ್ಣ ತಮ್ಮಂದಿರಿಂದ ಈ ಕಲೆ ಪ್ರಾರಂಭವಾಯಿತು. ಈ ಕಲಾ ಪ್ರವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಕ್ಕೆ ಇವರ ಮನೆತನಕ್ಕೆ ಭಾಗವತರ 'ಮನೆ' ಎಂದು ಹೆಸರಾಯಿತು.

ಲಕ್ಷ್ಮಣ ಕಾಮತ್‌ರ ಮಗ ವೆಂಕಟ್ರಮಣ ಕಾಮತ್ ಇವರ ಮಗನೇ ದೇವಣ್ಣ ಕಾಮತ್. ದೇವಣ್ಣ ಕಾಮತ್‌ರು ತಮ್ಮ ಬಾಲ್ಯದಿಂದಲೇ ತಂದೆಯವರ ಮಾರ್ಗದರ್ಶನದಲ್ಲಿ ಈ ಜಾನಪದ ಕಲೆಯನ್ನು ಕರಗತ ಮಾಡಿಕೊಂಡರು. ಮುಂದೆ ಇವರು ಈ ಗೊಂಬೆಯಾಟದಿಂದ ತನ್ನ ಕುಟುಂಬದ ಸ್ವತ್ತೆಲ್ಲ ಕಳೆದುಕೊಂಡು ದಾರಿದ್ರ್ಯವನ್ನು ಅನುಭವಿಸಬೇಕಾಯಿತೆಂದು ತಮ್ಮಲ್ಲಿರುವ ಎಲ್ಲಾ ಗೊಂಬೆಗಳನ್ನು ಅಟ್ಟದಲ್ಲಿ ಹಾಕಿದರು.

ಕೊನೆಗೊಂದು ದಿನ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು



ಕೊಗ್ಗ ಕಾಮತ್

ಈ ಗೊಂಬೆ ಆಟದಿಂದ ಕುಟುಂಬದ ಸ್ವತ್ತೆಲ್ಲ ಕಳೆದುಕೊಂಡು ದಾರಿದ್ರ್ಯವನ್ನು ಅನುಭವಿಸಬೇಕಾಯಿತು ಎಂದು ತಮ್ಮಲ್ಲಿರುವ ಎಲ್ಲಾ ಗೊಂಬೆಗಳನ್ನು ಅಟ್ಟದಲ್ಲಿ ಹಾಕಿದ್ದರು.

'ನಾನು ಚಿಕ್ಕಂದಿನಲ್ಲಿ ನೋಡಿದ್ದ ದೇವಣ್ಣ ಕಾಮತ್‌ರ ಗೊಂಬೆಯಾಟ ನೋಡಲು ದೆಹಲಿಯಿಂದ ಉಪ್ಪಿನ ಕುದ್ರುವಿಗೆ ಬಂದಿದ್ದೇನೆ' ಎಂದಾಗ ಅವರು ಅಟ್ಟದಲ್ಲಿದ್ದ ಗೊಂಬೆಗಳನ್ನು ಹೊರ ತೆಗೆದು ಪ್ರದರ್ಶಿಸಿದರು. ಇವರ ಪ್ರೋತ್ಸಾಹದಿಂದಲೇ ಈ ಕಲೆ ಪುನಶ್ಚೇತನ ಪಡೆಯಿತು.

ಮಗ ಕೊಗ್ಗಕಾಮತ್‌ರೊಂದಿಗೆ ಹಲವಾರು ಯಶಸ್ವಿ ಕಲಾ ಪ್ರದರ್ಶನ ನಡೆಸಿದರೂ ದೇವಣ್ಣ ಕಾಮತ್‌ರಿಗೆ ಅಂದಿನ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದ್ 1966ರಲ್ಲಿ ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ಮಾರ್ಗದರ್ಶನದಲ್ಲಿ ಸೆಂಟ್ರಲ್ ಹ್ಯಾಂಡಿ ಕ್ರಾಫ್ಟ್ ಬೋರ್ಡ್‌ನವರಿಂದ ತರಬೇತಿ ಕೇಂದ್ರ ಆರಂಭವಾಯಿತು. ಕೇಂದ್ರದಲ್ಲಿ ಹಲವಾರು ಹುಡುಗರಿಗೆ ತರಬೇತಿ ನೀಡಿದರು. ತಮ್ಮ ಎಂಬತ್ತನೇ ವಯಸ್ಸಿನಲ್ಲಿ (1971) ಸ್ವರ್ಗವಾಸಿಯಾದರು.

ಇವರ ನಂತರ ಮಗ ಕೊಗ್ಗ ಕಾಮತ್ ಈ ಕಲೆಯನ್ನು ಮುಂದುವರೆಸಿದರು. 1975ರಲ್ಲಿ ಹೆಗ್ಗೋಡಿನಲ್ಲಿ ನಡೆದ ಗೊಂಬೆಯಾಟ ವಿಚಾರ ಗೋಷ್ಠಿಯಲ್ಲಿ ಡಾ.ಕೆ.ಶಿವರಾಮ ಕಾರಂತರಿಂದ ಕೊಗ್ಗ ಕಾಮತ್‌ರಿಗೆ ಮೊದಲ ಪ್ರಶಂಸೆ ದೊರೆಯಿತು. 1976ರಲ್ಲಿ ಕೊಗ್ಗಕಾಮತ್‌ರಿಗೆ 'ದೆಹಲಿ ಸಂಗೀತ' ನಾಟಕ ಅಕಾಡೆಮಿ ಫೆಲೋಶಿಪ್ ಸಿಕ್ಕಿತು. ಮುಂಬಯಿ, ಪೂನಾ, ಬೆಂಗಳೂರು, ಮೈಸೂರು, ಮದ್ರಾಸು, ಗೋವಾ ಹಾಗೂ ಕೇರಳ ಮುಂತಾದ ರಾಜ್ಯಗಳಲ್ಲಿ ಕಲಾ ಪ್ರದರ್ಶನ ನಡೆಸಿ ಮೆಚ್ಚುಗೆ, ಬಹುಮಾನ ಪಡೆದರು.

ಕೆ.ಎಸ್.ಉಪಾಧ್ಯಾಯರ ಮುಂದಾಳತ್ವದಲ್ಲಿ ಫ್ರಾನ್ಸ್ ದೇಶಕ್ಕೆ ಪ್ರಯಾಣ. ರೇನ್ಸ್ ಫೆಸ್ಟಿವಲ್ ಮತ್ತು ಬ್ರಿಟನ್, ನಾರ್ಮಂಟಿ ಮೊದಲಾದ ಕಡೆ ನಲ್ವತ್ತಾರು ಪ್ರದರ್ಶನ ನಡೆಸಿದರು. ಪುನಃ ಫ್ರಾನ್ಸ್, ಬೆಲ್ಜಿಯಂ ಎಮ್‌ಸ್ಟರ್ಡಂ, ರಾಯಲ್ ಇನ್‌ಸ್ಟಿಟ್ಯೂಟ್ ಮೊದಲಾದ ಕಡೆಯಲ್ಲಿ ಪ್ರದರ್ಶನ ನಡೆಸಿದರು. 1980ರಲ್ಲಿ ಇವರಿಗೆ ದೆಹಲಿ ಸಂಗೀತ ನಾಟಕ ಅಕಾಡೆಮಿಯಿಂದ ರಾಷ್ಟ್ರ ಪ್ರಶಸ್ತಿ ದೊರೆಯಿತು.

ಆಸ್ಟ್ರೇಲಿಯಾದ ಸಿಡ್ನಿ, ಅಡಿಲೆಡ್, ವಾಯಲ, ಕ್ಯಾನ್ ಬೆರ್ರಾ ಹಾಗೂ ಪ್ಯಾರಿಸ್, ರೇನ್ಸ್, ನೇನ್ಸಿ, ಜಿನೇವಾ ಮೊದಲಾದ ಕಡೆಯಲ್ಲಿ ಯಶಸ್ವಿ ಪ್ರದರ್ಶನ ನೀಡಿದರು. ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿಯೂ ಅವರಿಗೆ ಸಿಕ್ಕಿದೆ.

ಕೊಗ್ಗ ಕಾಮತ್‌ರ ಮಗ ಭಾಸ್ಕರ್‌ಕಾಮತ್ ತಮ್ಮ ಹದಿನೆಂಟನೆ ವಯಸ್ಸಿನಲ್ಲಿ ಕೇಂದ್ರ ಸರ್ಕಾರದ 'ಯಂಗ್ ವರ್ಕರ್ಸ್ ಟ್ಯಾಲೆಂಟ್ ಸ್ಕಾಲರ್‌ಶಿಪ್' ಪಡೆದು ಮೂರು ವರ್ಷ ಅಭ್ಯಾಸ ನಡೆಸಿದ್ದಾರೆ. ಹಾಗೂ ಗೊಂಬೆಯಾಟ ತಂಡದೊಂದಿಗೆ ದೇಶ ವಿದೇಶ ಪ್ರವಾಸ ಮಾಡಿದ್ದಾರೆ.


ನಂತರ ಈ ಕಲೆಯಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಖಾತೆಯ 'ಜೂನಿಯರ್ ರಿಸರ್ಚ್ ಫೆಲೋಶಿಪ್'ಗೆ ಆಯ್ಕೆಯಾಗಿ ಐದು ವರ್ಷ ಸಂಶೋಧನಾಭ್ಯಾಸ ಮಾಡಿದ್ದಾರೆ. ಉಪ್ಪಿನ ಕುದ್ರು ಗೊಂಬೆಯಾಟದ ಸಂಪೂರ್ಣ ಇತಿಹಾಸ ಸಿದ್ಧಪಡಿಸಿದ್ದಾರೆ. 1996ರಲ್ಲಿ ಡಾ. ಲೀಲಾವತಿ ಉಪಾಧ್ಯಾಯರ ನೇತೃತ್ವದಲ್ಲಿ ಪಾಕಿಸ್ತಾನದ ಲಾಹೋರಿನಲ್ಲಿ ನಡೆದ ಅಂತರಾಷ್ಟ್ರೀಯ ಗೊಂಬೆಯಾಟದಲ್ಲಿ ಪಾಲ್ಗೊಂಡಿದ್ದಾರೆ.

ಕಲಾವಿದರ ಕಸರತ್ತಿನಿಂದ ನಿರ್ಜೀವ ಗೊಂಬೆಗಳಿಗೆ ಜೀವ ತುಂಬಿ ಜೀವಂತ ಕಲಾವಿದನಿಗಿಂತ ಕಡೆಯಿಲ್ಲ ಎಂಬಂತೆ ಕುಣಿಸುವುದು ಇವರ ಮನೆತನದಿಂದ ಬಂದ ಅದ್ಭುತ ಕಲೆಯಾಗಿದೆ. 'ಚೂಡಾಮಣಿ ಮತ್ತು ಲಂಕಾದಹನ', 'ನರಕಾಸುರನ ವಧೆ', 'ಗರುಡ ಗರ್ವಭಂಗ', 'ಪಾಂಡವಾಶ್ವಮೇಧ', 'ಘೋರ ಭೀಷ್ಮ ಕಾಳಗ', 'ಶ್ರೀ ದೇವಿ ಮಹಾತ್ಮೆ' ಮತ್ತು 'ಶಿವಪಂಚಾಕ್ಷರಿ ಮಹಿಮೆ' 'ಶ್ವೇತಕುಮಾರ ಚರಿತ್ರೆ' ಇವರ ಗೊಂಬೆಯಾಟದ ಪ್ರದರ್ಶನಗಳಾಗಿವೆ.

ಈ ಯಕ್ಷಗಾನ ಗೊಂಬೆಯಾಟದ ಸಾಂಪ್ರದಾಯಿಕ ಚೌಕಟ್ಟಿನಲ್ಲಿಯೇ ನಡೆಯುತ್ತಿದೆ. ಅದರ ಶೈಲಿಯನ್ನು ಕಾಪಾಡಿಕೊಂಡು ಬರುವುದು ಮುಖ್ಯ. ಈ ಮಾಧ್ಯಮವನ್ನು ಯಾವ ಅವಶ್ಯಕತೆಗೆ ಶ್ರಮಿಸಬೇಕೆಂಬುದು ಗಂಭೀರವಾಗಿ ಚಿಂತಿಸಬೇಕಾದ ವಿಷಯವಾಗಿದೆ. ಅಲ್ಲದೆ, ಈ ಕಲೆಯ ಸಾಧ್ಯತೆಗಳನ್ನು ಶೋಧಿಸುವುದು ಈ ಕಲೆಗೆ ಸಂದ ಗೌರವವೆನಿಸುತ್ತದೆ.

■ ಡಬ್ಲ್ಯು. ಬಸವರಾಜ್, ಕಂಪ್ಲಿ

ಶಸ್ತ್ರಾಸ್ತ್ರ ಖರೀದಿ



ಇಡೀ ವಿಶ್ವದಲ್ಲಿ ಶಸ್ತ್ರಾಸ್ತ್ರ ಖರೀದಿಗೆ ಕಳೆದ ವರ್ಷ 780 ಶತಕೋಟಿ ಡಾಲರ್ ಖರ್ಚು ಮಾಡಲಾಗಿದೆ ಎಂದು ಸ್ವೀಡನ್‌ನ ಖಾಸಗಿ ಸಂಸ್ಥೆ 'ಸಿಪ್ರಿ' ಅಂದಾಜು ಮಾಡಿದೆ. ಇದರಲ್ಲಿ ರಾಷ್ಟ್ರಗಳು ಅಧಿಕೃತವಾಗಿ ಖರ್ಚು ಮಾಡಿದ ಹಣದ ಲೆಕ್ಕ ಇದೆ. ಭಯೋತ್ಪಾದಕರು, ದಂಗೆಕೋರರು ಶಸ್ತ್ರಾಸ್ತ್ರ ಖರೀದಿಗಾಗಿ ಖರ್ಚು ಮಾಡಿದ ಹಣದ ವಿವರ ಇಲ್ಲ.

ಹೀಗೆ ಅನಧಿಕೃತವಾಗಿ ಆಫ್ರಿಕಾ ಒಂದರಲ್ಲೇ ಖರೀದಿ ಆಗಿರಬಹುದಾದ ಶಸ್ತ್ರಾಸ್ತ್ರಕ್ಕೆ ವಿಶ್ವದಲ್ಲಿ ಶಸ್ತ್ರಾಸ್ತ್ರ ಖರೀದಿಗೆ ಖರ್ಚಾಗುವ ಹಣದ ಶೇಕಡಾ 0.6 ರಿಂದ ಶೇಕಡಾ 0.9ರಷ್ಟು ಹಣ ಖರ್ಚಾಗಿರಬಹುದು ಎಂದೂ ಈ ಸಮೀಕ್ಷೆ ತಿಳಿಸಿದೆ.

ಇದರಲ್ಲಿ ರಷಿಯಾದ ಬಂಡುಕೋರರು ಹಾಗೂ ಭಯೋತ್ಪಾದಕರು ಖರೀದಿಸಿರಬಹುದಾದ, ಅವರು ಕೆಲವು ರಾಷ್ಟ್ರಗಳಿಂದಲೇ ಪಡೆದಿರಬಹುದಾದ ಶಸ್ತ್ರಾಸ್ತ್ರದ ಲೆಕ್ಕಾಚಾರವೂ ಇಲ್ಲ.

ಸ್ವೀಡನ್‌ನಲ್ಲಿ ಬೋಫೋರ್ಸ್ ಕಾರ್ಖಾನೆ ಇದ್ದು, ಯುರೋಪಿಯನ್ ರಾಷ್ಟ್ರಗಳಲ್ಲಿ ಹೆಚ್ಚಾಗಿ ಶಸ್ತ್ರಾಸ್ತ್ರ ತಯಾರಿಕೆ ನಡೆಯುತ್ತಿದೆ ಎಂಬುದೂ ಇಲ್ಲಿ ಗಮನಾರ್ಹ.


ಟಾಲ್‌ಸ್ಟಾಯ್ ಹೇಳಿದ

ಮಕ್ಕಳ ಕತೆಗಳು

ಅನುವಾದ : ಚಂದ್ರಾ, ನಾಗಭೂಷಣಸ್ವಾಮಿ

ಟಾಲ್‌ಸ್ಟಾಯ್ ರಶಿಯಾ ದೇಶದ ಲೇಖಕ, ಜಗತ್ತಿನ ಅತ್ಯುತ್ತಮ ಸಾಹಿತಿಗಳಲ್ಲಿ ಒಬ್ಬನು ಎಂದು ಪ್ರಸಿದ್ಧನಾಗಿದ್ದಾನೆ. ಆತ ತನ್ನ ರೈತರ ಮಕ್ಕಳಿಗೆಂದು ಕೆಲವು ಮಕ್ಕಳ ಕಥೆಗಳನ್ನು ಬರೆದಿದ್ದಾನೆ. ಬಹಳ ಹಿಂದಿನ ಕಾಲದಲ್ಲಿ ಈಸೋಪ್ ಎಂಬಾತ ಹೇಳಿದ ಕಥೆಗಳನ್ನು ಟಾಲ್‌ಸ್ಟಾಯ್ ಹೊಸ ರೀತಿಯಲ್ಲಿ ಹೇಳಿದ್ದಾನೆ. ಕಥೆಯ ಅರ್ಥ ಏನು, ನೀತಿ ಏನು ಎಂದು ಟಾಲ್‌ಸ್ಟಾಯ್ ಬಿಡಿಸಿ ಹೇಳುವುದಿಲ್ಲ. ಮಕ್ಕಳು ಜಾಣರು, ಕಥೆ ಅವರಿಗೆ ತಿಳಿಯುತ್ತದೆ ಎಂದು ಹೇಳುತ್ತಿದ್ದ. ಅವನು ಹೇಳಿದ ಕಥೆಗಳಲ್ಲಿ ಕೆಲವನ್ನು ಇಲ್ಲಿ ಪ್ರತಿ ತಿಂಗಳು ನೀಡುತ್ತೇವೆ. ನಿಮಗೂ ಇಷ್ಟ ಆದರೆ ಬೇರೆ ಮಕ್ಕಳಿಗೂ ಹೇಳಿ.

ಎರಡು ಹುಂಜ ಮತ್ತು ಒಂದು ಹದ್ದು




ಒಂದು ಊರಿನಲ್ಲಿ ಕೋಳಿಗಳ ಗುಂಪೊಂದು ತಿಪ್ಪೆಗುಂಡಿಯ ಮೇಲೆ ಕಾಳು ಹೆಕ್ಕುತ್ತಾ ಇದ್ದವು. ಆ ಗುಂಪಿನಲ್ಲಿ ಎರಡು ಹುಂಜಗಳಿದ್ದವು. ಒಂದು ಬಲವಾಗಿತ್ತು. ಇನ್ನೊಂದು ದುರ್ಬಲವಾಗಿತ್ತು. ಬಲವಾಗಿದ್ದ ಹುಂಜ ಜಗಳ ತೆಗೆದು ಶಕ್ತಿ ಇಲ್ಲದ ಹುಂಜವನ್ನು ಸೋಲಿಸಿ ಓಡಿಸಿಬಿಟ್ಟಿತು. ಉಳಿದ ಕೋಳಿಗಳೆಲ್ಲ ಗೆದ್ದ ಹುಂಜದ ಸುತ್ತಲೂ ಸೇರಿ ಅದನ್ನು ಬಹಳ ಹೊಗಳಿದವು. ಆಗ ಹುಂಜಕ್ಕೆ ಅಹಂಕಾರದಿಂದ ಮೈಯುಬ್ಬಿತು. ತನ್ನ ಸಾಹಸ ಶೌರ್ಯಗಳನ್ನು ಜಗತ್ತಿಗೆಲ್ಲ ಸಾರಬೇಕು ಎಂಬ ಆಸೆ ಹುಟ್ಟಿತು.

ಅಲ್ಲೆ ಹತ್ತಿರದಲ್ಲಿ ಒಂದು ಅಂಗಡಿ ಇತ್ತು. ಹುಂಜ ಅಂಗಡಿಯ ಚಾವಣಿಯನ್ನು ಏರಿತು. ''ಎಲ್ಲರೂ ನನ್ನನ್ನು ನೋಡಿ, ನಾನು ಇದೇ ಈಗ ಒಂದು ಹುಂಜವನ್ನು ಕಾಳಗದಲ್ಲಿ ಸೋಲಿಸಿದ್ದೇನೆ. ನಮ್ಮ ಗುಂಪಿನ ಕೋಳಿಗಳೆಲ್ಲ ನನ್ನನ್ನು ಮೆಚ್ಚಿಕೊಂಡಿವೆ. ನನ್ನಂಥ ಬಲಶಾಲಿಯಾದ ಹುಂಜ ಜಗತ್ತಿನಲ್ಲೇ ಇಲ್ಲ'' ಎಂದು ನಿಮಿರಿ ನಿಂತು, ಕತ್ತೆತ್ತಿ ಜೋರಾಗಿ ಕೂಗಿತು.

ಅಲ್ಲೆ ಹಾರಾಡುತ್ತಿದ್ದ ಹದ್ದಿಗೆ ಹುಂಜದ ಕೂಗು ಕೇಳಿಸಿತು. ರೊಂಯ್ಯನೆ ಹಾರಿ ಬಂದು ಹುಂಜವನ್ನು ಕಚ್ಚಿ ಎತ್ತಿಕೊಂಡು ಹೋಗಿ ತಿಂದುಬಿಟ್ಟಿತು.

ದಾರಿಹೋಕರು



ಒಂದು ದಿನ ಒಬ್ಬ ಯುವಕ ಮತ್ತು ಒಬ್ಬ ಮುದುಕ ಎಲ್ಲೋ ಹೊರಟಿದ್ದರು. ದಾರಿಯಲ್ಲಿ ನಡೆಯುತ್ತಿರುವಾಗ ಯುವಕ ನೆಲದ ಮೇಲೆ ಒಂದು ಹಣದ ಚೀಲ ಬಿದ್ದಿರುವುದನ್ನು ನೋಡಿದ. ಬಗ್ಗಿ ಅದನ್ನು ತೆಗೆದುಕೊಂಡ. ''ಈ ಹಣ ಸಿಗಲಿ ಎಂದೇ ದೇವರು ನನ್ನನ್ನು ಇಲ್ಲಿಗೆ ಕಳಿಸಿದ'' ಅನ್ನುತ್ತಾ ಹಣವನ್ನು ಜೇಬಿಗಿಳಿಸಿದ.

''ಸಿಕ್ಕಿದ ಹಣವನ್ನು ಇಬ್ಬರೂ ಹಂಚಿಕೊಳ್ಳೋಣ'' ಎಂದ ಮುದುಕ.

''ಅದು ಹೇಗೆ ಸಾಧ್ಯ? ಅದನ್ನು ನೋಡಿದವನು ನಾನು, ಬಗ್ಗಿ ತೆಗೆದುಕೊಂಡವನು ನಾನು, ಹಣ ಪೂರ್ತಿ ನನಗೇ ಸೇರಬೇಕು'' ಎಂದ ಯುವಕ. ಮುದುಕ ಏನೂ ಉತ್ತರ ಹೇಳಲಿಲ್ಲ.

ಇಬ್ಬರೂ ಇನ್ನೂ ಮುಂದೆ ಹೋದರು. ಯಾರೋ ತಮ್ಮನ್ನು ಹಿಂಬಾಲಿಸಿಕೊಂಡು ಬರುತ್ತಿದ್ದಾರೆ ಅನ್ನಿಸಿತು. ನಿಜವಾಗಲೂ ಅವರ ಹಿಂದೆ ಕೆಲವು ಕುದುರೆ ಸವಾರರು ಬರುತ್ತಿದ್ದರು. ''ಯಾರದು, ಹಣ ಕದ್ದುಕೊಂಡು ಹೋಗುತ್ತಿರುವುದು?'' ಎಂದು ಕೂಗಿದರು.

ಯುವಕನಿಗೆ ಹೆದರಿಕೆಯಾಯಿತು. ''ಅಜ್ಜಾ, ನಮ್ಮ ಬಳಿ ಇರುವ ಹಣದಿಂದ ನಮಗೇನೂ ತೊಂದರೆಯಾಗದಷ್ಟೇ?'' ಎಂದು ಕೇಳಿದ. ಆಗ ಮುದುಕ ''ಅದು ನಮ್ಮ ಹಣ ಅಲ್ಲ, ನಿನ್ನ ಹಣ. ಆದ್ದರಿಂದಲೇ ನಮ್ಮ ತೊಂದರೆ ಅಲ್ಲ, ನಿನ್ನ ತೊಂದರೆ'' ಅಂದ. ಕುದುರೆ ಸವಾರರು ಯುವಕನನ್ನು ಹಿಡಿದುಕೊಂಡು ನ್ಯಾಯಾಧೀಶನ ಬಳಿಗೆ ಹೋದರು. ಮುದುಕ ಮನೆಗೆ ಹೋದ.

ಒಂದು ಸಾಹಸದ ಕತೆ



ಇದು ಕತೆಯಲ್ಲ. ನಡೆದ ಘಟನೆ. ಕರ್ನಾಟಕದ ಸಾಮಾನ್ಯ ಹೆಣ್ಣೊಬ್ಬಳು ಏಕಾಂಗಿಯಾಗಿ ಅನ್ಯಾಯದ ವಿರುದ್ಧ ಸೆಣೆಸಿ ಗೆದ್ದ ಕತೆ. ಒಂದು ಹಂತದಲ್ಲಿ ಇನ್ನು ಎಲ್ಲ ಮುಗಿಯಿತು, ಬದುಕಿಗೆ ಅರ್ಥವಿಲ್ಲ. ಮಡಿಲ ಕೂಸನ್ನು ಬಾವಿಗೆಸೆದು ತಾನೂ ಆತ್ಮಹತ್ಯೆ ಮಾಡಿಕೊಂಡರೆ; ತನ್ನ ಹಿಂಸೆ, ಯಾತನೆ ಎಲ್ಲ ಕೊನೆಯಾಗಿಬಿಡುತ್ತದೆ ಎಂದೂ ಆಕೆ ತೀರ್ಮಾನಿಸಿದ್ದರು. ಅದು ಹೇಗೋ ಜೀವ ಬಿಗಿ ಹಿಡಿದರು. ಜೀವನದ ಹಾದಿಯನ್ನು ನಡೆಯುತ್ತಾ ನಡೆಯುತ್ತಾ ಹೊಸ ಮಜಲೊಂದು ಮುಟ್ಟಿದರು.

ಆಕೆಯ ಹೆಸರು ಗೌರಮ್ಮ. ಸಾರ್ಥಕ ಸಾಹಸ ಕಾರ್ಯಗಳಿಗಾಗಿ ನೀಡಲಾಗುವ ನೀರಜ್ ಬಾನೋಟ್ ಪ್ರಶಸ್ತಿ ಈ ವರ್ಷ ಆಕೆಯ ಪಾಲಿಗೆ. ಈ ಪ್ರಶಸ್ತಿ ಪಡೆದ ಕರ್ನಾಟಕದ ಮೊದಲ ಮಹಿಳೆ ಆಕೆ.

ಪ್ರೀತಿಸಿ ಮದುವೆಯಾದ ಗಂಡ ನೀಡುತ್ತಿದ್ದ ಹಿಂಸೆ, ಕಿರುಕುಳ, ಆತ ಬೇರೆ ಹೆಂಗಸರ ಜೊತೆ ನಡೆಸುತ್ತಿದ್ದ ಚೆಲ್ಲಾಟ, ಸರ್ಕಾರಕ್ಕೆ ಮಾಡಿದ ವಂಚನೆ ಎಲ್ಲವುಗಳ ವಿರುದ್ಧ ಹದಿನಾರು ವರ್ಷ ಸೆಣಸಾಡಿ ವಿಜಯ ಸಾಧಿಸಿದ ಮಹಿಳೆ ಈಕೆ.

ಗಂಡಸರ ಇಂಥ ದೌರ್ಜನ್ಯ, ವಂಚನೆ ಎಲ್ಲ ಸಹಿಸಿ ಹೆಣ್ಣು ಅಸಹಾಯಕತೆಯಿಂದ ಕೈಕಟ್ಟಿ ಕೂರಬೇಕಾಗಿಲ್ಲ, ಎದ್ದು ನಿಂತು ಪ್ರತಿಭಟಿಸಿದರೆ, ಕೊನೆ ಮುಟ್ಟುವವರೆಗೂ ಛಲ ಹೊತ್ತು ಹೋರಾಡಿದರೆ ಗೆಲುವು ಖಂಡಿತ ಎಂದು ಸಾಧಿಸಿ ತೋರಿದ ಮಹಿಳೆ.

ಗೌರಮ್ಮ ನಮ್ಮ, ನಿಮ್ಮೆಲ್ಲರ ಮನೆಯ ಸಾಮಾನ್ಯ ಹೆಣ್ಣುಗಳ ಹಾಗೆ. ಎದುರೇ ನೋಡಿದರೆ ಇಂಥ ಛಲ ಹೊತ್ತು ಸಾಧಿಸಿದ ಮಹಿಳೆ ಎಂದು ಕೂಡ ಅನಿಸುವುದಿಲ್ಲ. ಆದರೆ ಮಾತಿಗೆ ಕುಳಿತರೆ ಆಕೆಯ ಅಂತರಾಳದಿಂದ ಬರುವ ಮಾತುಗಳು ನೇರ. ಅಲ್ಲಿ ಸಿದ್ಧಾಂತದ, ಪುಸ್ತಕದ ಓದಿನ ವರಸೆಗಳಿಲ್ಲ. ಆಕೆ ಪಾಠ ಕಲಿತಿದ್ದು ಬದುಕಿಂದ. ತನ್ನದೇ ಬತ್ತಿ ಬರಡಾಗಿಬಿಟ್ಟ ಜೀವನದಿಂದ. ಅಂಥ ಬದುಕನ್ನು ಯಾವುದೇ ಕಾರಣಕ್ಕೂ ಒಪ್ಪಬಾರದು, ತಾನು ದುರ್ಬಲನಾಗಬಾರದೆಂಬ ಸಣ್ಣದೊಂದು ನಿಲುವು ಅವರ ಇಡೀ ವ್ಯಕ್ತಿತ್ವದ ಬೆನ್ನೆಲುಬಂತೆ ಕಾಣುತ್ತದೆ.

ಗೌರಮ್ಮನದು ಸಾಮಾನ್ಯ ಕುಟುಂಬ. ತಂದೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್. ಬೆಂಗಳೂರಲ್ಲಿ ವಾಸ. ತಂದೆ ವೆಂಕಟರಮಣ ಅವರಿಗೆ ಸಹೋದ್ಯೋಗಿ ಮಹದೇವ ಬಗ್ಗೆ ಅಕ್ಕರೆ. ಆತ ಬಡ ಕುಟುಂಬದಿಂದ ಬಂದವನೆಂಬುದು ಕಾರಣ. ಆಗಾಗ ಮಹದೇವ ಮನೆಗೆ ಬರುತ್ತಿದ್ದ.

ಆಗ ಹೈಸ್ಕೂಲು ಕೊನೆಯ ವರ್ಷದಲ್ಲಿದ್ದ ಗೌರಮ್ಮನಿಗೆ ಮಹದೇವನಲ್ಲಿ ಸಲುಗೆ ಬೆಳೆಯಿತು. ಕೆಲವೇ ದಿನಗಳಲ್ಲಿ ಈ ಸಲುಗೆ ಇನ್ನಷ್ಟು ಗಾಢವಾಗಿ, ಇಬ್ಬರ ಒಡನಾಟ ಹೆಚ್ಚಾಯಿತು.

ಇಬ್ಬರೂ ಮದುವೆ ಆಗಬೇಕೆಂಬ ನಿರ್ಧಾರಕ್ಕೆ ಬಂದರು. ಆದರೆ ಯಾರಿಗೂ ಇದನ್ನು ಹಿರಿಯರಿಗೆ ತಿಳಿಸಿ ಹೇಳುವ ಧೈರ್ಯ ಇಲ್ಲ. ದಾರಿ ಕಾಣದೇ ತೊಳಲುವಾಗ, ಅದು ಹೇಗೋ ನಂಟರು ಇವರ ಒಡನಾಟದ ವಿಷಯವನ್ನು ಗೌರಮ್ಮನ ತಂದೆಯ ಕಿವಿಗೆ ಹಾಕಿದರು. ಸುದ್ದಿ ಕೇಳಿದ ಅವರು ಕೆರಳಿ ಕೆಂಡವಾದರು.

'ಪೊಲೀಸಿನವನಿಗೆ ಮಾತ್ರ ಮಗಳನ್ನು ಕೊಡುವುದಿಲ್ಲ' ಅವರದು ಒಂದೇ ಮಾತು. ಪೊಲೀಸು ಇಲಾಖೆಯ ಒಳ ಹೊರಗು ಗೊತ್ತಿದ್ದ ಅವರಿಗೆ, ಮುದ್ದಿನಿಂದ ಸಾಕಿದ ಮಗಳನ್ನು ಅದೇ ಇಲಾಖೆಯ ವ್ಯಕ್ತಿಗೆ ಕೊಡುವುದೆಂದರೆ ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದ ಹಾಗೆ.

ಪ್ರೀತಿ, ಪ್ರೇಮದ ಕನಸು ತುಂಬಿಕೊಂಡಿದ್ದ ಗೌರಮ್ಮನಿಗೆ ಆಕಾಶ ಕಳಚಿ ತಲೆ ಮೇಲೆ ಬಿದ್ದಂತಾಯಿತು. ತಂದೆಯ ಹಟದ ಎದುರು ಮಗಳೂ ಹಟ ಹೂಡಿದಳು. 'ತನ್ನ ಮದುವೆ ಆಗುವುದಾದರೆ ಮಹದೇವನ ಜೊತೆ ಆಗಲಿ. ಇಲ್ಲವಾದಲ್ಲಿ ತನಗೆ ಮದುವೆಯೇ ಬೇಡ' ಎಂದು ಪಟ್ಟು ಹಿಡಿದು ಕುಳಿತು ಬಿಟ್ಟಳು.

ಆಗ ಆಕೆಗಿನ್ನು ಹದಿನೇಳು ವರ್ಷ. ಮಗಳ ಹಟಕ್ಕೆ ಮಣಿದರು ತಂದೆ. ಒಬ್ಬಳೇ ಮಗಳು. ಆಕೆಗೆ ಹಿತ, ಸಂತೋಷ ಆಗುವುದಾದರೆ ತಾವೇಕೆ ಅಡ್ಡಿ ಬರಬೇಕು ಎಂಬ ಉದಾರತೆಯೇ ಅವರಲ್ಲಿ ಮುಖ್ಯವಾಗಿತ್ತು.

ಮಗಳ ಬದುಕು ಹಸನಾಗಲಿ, ಮೆಚ್ಚಿದವನನ್ನು ಮದುವೆ ಆಗಿ ಸುಖವಾಗಲಿ ಎಂದು ಧಾರೆ ಎರೆದು ಕೊಟ್ಟರು. ಗೌರಮ್ಮ ಬದುಕಲ್ಲಿ ಛಲ ಹೊತ್ತು ಸಾಧಿಸಿದ ಮೊದಲ ಗೆಲುವು ಇದಾಗಿತ್ತು. ಅದರ ಪರಿಣಾಮ ಎಂದರೆ, ಮುಂದಿನ ಎಲ್ಲ ಹೊಣೆಯನ್ನೂ ಆಕೆ ಹೊರಬೇಕಾಯಿತು.

ಪ್ರೀತಿಸಿ ಮದುವೆಯಾದ ಗೌರಮ್ಮ - ಮಹದೇವ ಸಂತೃಪ್ತಿಯಿಂದ ಬಾಳಿದ್ದು ಕೇವಲ ಆರು ತಿಂಗಳು. ಅಷ್ಟರಲ್ಲಿ ಆಕೆಗೆ ಗಂಡನ ನಿಜವಾದ ಬಣ್ಣ ತಿಳಿಯುವ ಮೊದಲ ಪ್ರಸಂಗ ನಡೆಯಿತು.

ಮಹದೇವ ಪಕ್ಕದ ಮನೆಯ ಜಯ ಎಂಬ ಯುವತಿಯೊಡನೆ ಪ್ರಣಯ ಆರಂಭಿಸಿದ. ತನ್ನ ಕಣ್ಣೆದುರೇ ನಡೆಯುತ್ತಿದ್ದ ಗಂಡನ ದುಷ್ಟ ಸಾಹಸ ನೋಡಿ ನೋವು ನುಂಗಬೇಕಾದ ಪರಿಸ್ಥಿತಿ. ಆಗ ಆಕೆ ಗರ್ಭಿಣಿ. ಗಂಡ ಎಷ್ಟು ಹೊತ್ತಾದರೂ ಮನೆಗೆ ಬರುತ್ತಲೇ ಇರಲಿಲ್ಲ. ಆತನಿಗೀಗ ಮದುವೆಯಾ[...] ಹೆಂಡತಿ ಬೇಕಿರಲಿಲ್ಲ. ಹೊಸ ಆಕರ್ಷಣೆ ಆತನನ್ನು ಕಟ್ಟಿ ಹಾಕಿತ್ತು.

ಬಸಿರಾದ ಹೆಂಡತಿಯನ್ನು ಮನೆಯಲ್ಲಿ ಒಂಟಿಯಾಗಿ ಕಣ್ಣೀರುಗರೆಯಲ[...] ಬಿಟ್ಟು, ಈ ಪಿಶಾಚಿ ನೆರೆಮನೆಯ ಯುವತಿಯ ಜೊತೆ ಕಾಲ ಕಳೆಯುತ್ತಿ[...] ಗೌರಮ್ಮ ಸಹಿಸಲಾಗದೇ ಗಂಡನನ್ನು ಪ್ರಶ್ನಿಸಿದ್ದೇ ಬಂತು ಗ್ರಹಚಾರ.


ಹೊಡೆತ, ಬಡಿತ, ಕಿರುಕುಳ ನಿತ್ಯದ ಸಂಗತಿ ಆಗಿ ಹೋಯಿತು. ಗಂ[...] ಮನುಷ್ಯನಲ್ಲ ಒಬ್ಬ ರಾಕ್ಷಸ ಎಂದು ತಿಳಿಯುವ ಹೊತ್ತಿಗೆ ಕಾಲ ಮಿಂಚಿತ್ತು. ತ[...] ಯಾತನೆ, ನೋವು ತಂದೆ, ತಾಯಿಯ ಮುಂದೂ ಹೇಳಿಕೊಳ್ಳುವಂತಿರಲಿಲ್ಲ[...] ಅವರ ಇಚ್ಛೆಗೆ ವಿರುದ್ಧವಾಗಿಯೇ ಮದುವೆ ಆಗಿದ್ದರಿಂದ, ಬಂದದ್[...] ಅನುಭವಿಸಬೇಕು ಎಂಬ ನಿರ್ಧಾರ.

ಅದು ಹೇಗೋ ಮಹದೇವನ ದುಸ್ಸಾಹಸಗಳು ಗೌರಮ್ಮನ ತಂ[...] ವೆಂಕಟರಮಣ ಅವರ ಕಿವಿಗೂ ಬಿತ್ತು. ಅಳಿಯನನ್ನು ಅವರು ತರಾಟೆ[...] ತೆಗೆದುಕೊಂಡರು. ಸಂಪೂರ್ಣ ಬದಲಾಗಿದ್ದ ಮಹದೇವ, ಮಾವನ ಮೇಲೆ ತಿರುಗಿಬಿದ್ದ. ತನ್ನ ಶಕ್ತಿ ಪ್ರದರ್ಶನ ಕೂಡ ಮಾಡಿದ. ಇಬ್ಬರೂ ಕೈ ಕ[...] ಮಿಲಾಯಿಸಿಬಿಟ್ಟರು.

ಈ ಘಟನೆ ನಡೆದ ಮೇಲಂತೂ ತವರಿಗೆ ಹೋಗಬಹುದಾಗಿದ್ದ ಒಂದು ಬಾಗಿಲೂ ಬಂದ್ ಆದಂತಾಯಿತು. ಏನಾದರೂ ತವರಿಗೆ ಹೋಗಬಾರದೆಂದು ಗಂಡನ ಕಟ್ಟಪ್ಪಣೆ.

ಸಾಯಬೇಡಿ, ಬದುಕಿರಿ

- ಗೌರಮ್ಮ ಸಂದರ್ಶನ



ಇತ್ತೀಚೆಗೆ ಸಾರ್ಥಕ ಸಾಹಸಕ್ಕಾಗಿ ನೀರಜಾ ಬಾನೋಟ್ ಪ್ರಶಸ್ತಿ ಪಡೆದ ಗೌರಮ್ಮ ಅವರನ್ನು 'ಬದುಕು' ಸಂದರ್ಶಿಸಿದಾಗ ನಡೆದ ಮಾತುಕತೆಯ ಮುಖ್ಯ ಅಂಶ ಇಲ್ಲಿದೆ.

1988ರಲ್ಲಿ 'ವಿಮೋಚನಾ ಸಂಘಟನೆಯ ಸಂಪರ್ಕಕ್ಕೆ ಬಂದ ಗೌರಮ್ಮ, ಈಗ ತನ್ನಂತೆ ನೊಂದ ಹೆಣ್ಣುಗಳ ನೆರವು, ಬೆಂಬಲಕ್ಕೆ ಈಗ ಜೀವನ ಮುಡುಪಾಗಿಸಿದ್ದಾರೆ. ಕಳೆದ ಮೂರು ವರ್ಷಗಳಿಂದ ಮಹಿಳೆಯರ ಅಸಹಜ ಸಾವುಗಳ ಕುರಿತು ಅಧ್ಯಯನ ಆರಂಭಿಸಿದ್ದಾರೆ.

ಬದುಕು : ನಿಮ್ಮ ಕೆಲಸದ ಮುಖ್ಯ ಉದ್ದೇಶ ಏನು?

ಗೌರಮ್ಮ : ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಒಂಟಿಯಾಗಿ, ಅಸಹಾಯಕಿ ಯಾಗುವ ಹೆಣ್ಣುಗಳ ಬೆಂಬಲಕ್ಕೆ ನಿಲ್ಲುವುದು. ಈ ಸಮಾಜದ ನ್ಯೂನತೆ ಅರಿತುಕೊಂಡು ಸರಿಪಡಿಸುವ ಯತ್ನ ನನ್ನದು.

ಬದುಕು : ನಿಮ್ಮ ಈ ಕೆಲಸದಲ್ಲಿ ತೃಪ್ತಿ ತಂದ ಪ್ರಕರಣ ಯಾವುದು?

ಗೌರಮ್ಮ : ಒಡೆದಿದ್ದ ಸಂಸಾರ ಒಂದುಗೂಡಿಸಿದ್ದು. ಆತ ಸಾರ್ವಜನಿಕ ಉದ್ದಿಮೆ ಒಂದರಲ್ಲಿ ಕೆಲಸ ಮಾಡುತ್ತಿದ್ದ. ಕುಡಿತದ ಗೀಳು. ಕೆಲಸಕ್ಕೆ ಹೋಗುತ್ತಾ ಇರಲಿಲ್ಲ. ಸಂಸಾರಕ್ಕೆ ಹಣ ಕೊಡುತ್ತಾ ಇರಲಿಲ್ಲ. ಕೇಳಿದರೆ ಹೆಂಡತಿಗೆ ಹಿಂಸೆ ಕೊಡುತ್ತಿದ್ದ.

ಆತ ಏನು ಮಾಡಿದರೂ ಸರಿ ಎನ್ನುವ ತಾಯಿ ತಂದೆ. ಯಾರದೋ ಮಾತು ತಾನೇಕೆ ಕೇಳಬೇಕು ಎಂಬ ಕೆಟ್ಟ ಹಟ.

ಆತನ ಮನೆಗೆ ತೆರಳಿ, ಆಫೀಸಿಗೆ ತೆರಳಿ ಮಾತಾಡಿ, ತಿಳಿಸಿ ಹೇಳಿದ್ದು ಆಯಿತು. ಕೊನೆಗೆ ಕುಡಿತದ ಚಟ ಬಿಡಿಸಲು ಚಿಕಿತ್ಸೆ ಮಾಡಿಸಲಾಯಿತು.

ಈಗ ಗಂಡ ಹೆಂಡತಿ ಬೇರೆ ಮನೆ ಮಾಡಿಕೊಂಡು ಸುಖವಾಗಿ ಇದ್ದಾರೆ. ಇದು ನನ್ನ ಕೆಲಸದ ಸಾರ್ಥಕ ಪ್ರಕರಣ ಅನ್ನಿಸುತ್ತದೆ.

ಬದುಕು : ನೀವು ಕಂಡ ಅತ್ಯಂತ ದುರದೃಷ್ಟಕರ ಪ್ರಕರಣ ಯಾವುದು?

ಗೌರಮ್ಮ : ಬಹುಷಃ ನಿತ್ಯವೂ ನಾವು ಅಂಥ ಪ್ರಕರಣ ನೋಡ್ತೀವಿ. ಪ್ರತಿ ಅಸಹಜ ಸಾವೂ ಇಂಥ ದುರದೃಷ್ಟಕರ ಪ್ರಕರಣ. ಅಲ್ಲಿ ನೊಂದ ಹಿಂಸೆಗೊಳಗಾಗಿ ಸತ್ತ ಹೆಣ್ಣು ಇರುತ್ತದೆ. ಅಂಥ ಸಂದರ್ಭದಲ್ಲಿ ತಂದೆ ತಾಯಿ ದೂರು ಕೊಡಲು, ಸರಿಯಾದ ಸಾಕ್ಷ್ಯ ನೀಡಲು ಮುಂದಾಗುವುದಿಲ್ಲ. ಎಷ್ಟೇ ಮನ ಒಲಿಸಿದರೂ ಅವರು ನ್ಯಾಯದ ಕರೆಗೆ ಕಿವುಡಾಗಿ ಬಿಡುತ್ತಾರೆ.

ಸತ್ಯ ಮುಚ್ಚಿಟ್ಟಾಗ ದುಃಖವಾಗುತ್ತೆ. ಮೊನ್ನೆ ನಡೆದ ಘಟನೆ. ಹೆಣ್ಣಿನ ದೇಹದ ಮೇಲೆ 42 ಚಾಕುವಿನಿಂದ ಇರಿದ ಗುರುತಿವೆ. ತಂದೆ ತಾಯಿ ಮಗಳಿಗಾದ ಹಿಂಸೆ, ಅನ್ಯಾಯಕ್ಕೆ ಮರುಗದೇ ಸುಮ್ಮನಾಗಿಬಿಟ್ಟರು. ಇಂಥ ಪ್ರಕರಣ ಕಂಡಾಗಲೆಲ್ಲ ಮನಸ್ಸಲ್ಲಿ ವ್ಯಥೆ ತುಂಬಿಕೊಳ್ಳುತ್ತೆ.

ಬದುಕು : ಹೋರಾಟ, ಗೆಲುವು ಎಲ್ಲ ಆಯಿತು. ಈಗ ಹೇಗಿದೆ ನಿಮ್ಮ ಬದುಕು?

ಗೌರಮ್ಮ : ಮಾಡ್ತಾ ಇರೋ ಕೆಲಸದಿಂದ ಸಾರ್ಥಕತೆ ಇದೆ ಅನ್ನಿಸುತ್ತೆ. ನಾಲ್ಕು ಗೋಡೆಯ ನಡುವೆ ನಿಂತು ಅವತ್ತು ಹೋರಾಡಿದೆ. ಇವತ್ತು ಸಮಾಜದ ಬಯಲಲ್ಲಿ ನಿಂತು ಹೋರಾಟ ಮುಂದುವರಿಸಿದೀನಿ. ಇದರಿಂದ ಯಾವುದೋ ಒಂದು ನೊಂದ ಹೆಣ್ಣಿಗೆ ಪರಿಹಾರ ಸಿಗೋದಾದರೆ, ಬದುಕಿನ ಆಶೆ ಮತ್ತೆ ಚಿಗುರೋದಾದರೆ ಅಷ್ಟೇ ಸಾರ್ಥಕ.

ಬದುಕು : ಕಷ್ಟದಲ್ಲಿರುವ ಹೆಣ್ಣುಗಳಿಗೆ ನಿಮ್ಮ ಸಂದೇಶ ಏನು?

ಗೌರಮ್ಮ : ಸಾಯಬೇಡಿ, ಬದುಕಿರಿ. ನಮಗೊಬ್ಬರಿಗೆ ಇಂಥ ಬರಬಾರದ ಕಷ್ಟ ಬಂದಿದೆ ಅಂತ ಯೋಚಿಸಿ ಅಸಹಾಯಕರಾಗೋದು ಬೇಡ. ನೀವು ಒಂಟಿ ಅಲ್ಲ ನಿಮ್ಮ ಹಾಗೆ ನೊಂದ ನೂರಾರು, ಸಾವಿರಾರು ಜನ ಇದಾರೆ. ಸಾಯೋದರಿಂದ ಸಮಸ್ಯೆ ಪರಿಹಾರ ಆಗೋದಿಲ್ಲ. ಅಷ್ಟಕ್ಕೂ ಯಾಕೆ ಸಾಯಬೇಕು? ಬದುಕಿ ಗೆಲ್ಲಬೇಕು. ಅದು ನಾನು ನನ್ನ ಹಾಗೆ ನೊಂದ ಹೆಣ್ಣುಗಳಿಗೆ ನೀಡುವ ಸಂದೇಶ.

ತುಂಬಿದ ಗರ್ಭಿಣಿ. ಒಂಟಿ ಹೆಣ್ಣು. ತವರಿಗೆ ಹೋಗುವಂತಿಲ್ಲ. ಗಂಡ ನೋಡಿದರೆ ಹೀಗೆ. ಕೊನೆಗೆ ರಾಮನಗರದ ಅಜ್ಜಿ ಮನೆಗೆ ಹೋಗಲು ಆಕೆ ನಿರ್ಧರಿಸಿದರು. ಹೆರಿಗೆ ಮುಗಿದು, ಮಗುವನ್ನು ಎತ್ತಿಕೊಂಡು ಮರಳಿ ಬರುವಾಗ ನಾಲ್ಕು ತಿಂಗಳು ಕಳೆದಿದ್ದವು. ಈ ಅವಧಿ ಗಂಡ ಮಹದೇವನಿಗೆ ಸುವರ್ಣ ಅವಕಾಶ ಸಿಕ್ಕಂತೆ ಆಗಿತ್ತು.

ಇದೇ ಸಂದರ್ಭದಲ್ಲಿ ಆತ ಸಬ್ ಇನ್‌ಸ್ಪೆಕ್ಟರ್ ಆಗಿ ನೇಮಕಗೊಂಡಿದ್ದು, ಮೈಸೂರಿಗೆ ತರಬೇತಿಗೆಂದು ಹೋಗಬೇಕಿತ್ತು. ಹೆಂಡತಿ ಇಲ್ಲದಾಗ ಪಕ್ಕದ ಮನೆಯ ಹೆಂಗಸಿನೊಡನೆ ಈತನ ಪ್ರಣಯ ಪರಾಕಾಷ್ಠೆ ಮುಟ್ಟಿತ್ತು. ಇಲಾಖೆಯ ಎಲ್.ಟಿ.ಸಿ. ಸೌಲಭ್ಯ ಪಡೆದು, ಆಕೆಯೊಂದಿಗೆ ಭರ್ಜರಿ ಪ್ರವಾಸ ಕೂಡ ಮುಗಿಸಿ ಬಂದಿದ್ದ ಭೂಪ. ಇದೆಲ್ಲ ಅಜ್ಜಿ ಮನೆಯಿಂದ ಹಿಂದಿರುಗಿ ಬಂದ ಗೌರಮ್ಮನಿಗೆ ತಿಳಿದಾಗ ಹೇಗಾಗಿರಬೇಡ.



ನೀರಜ್ ಬಾನೋಟ್

ಎಲ್ಲೋ ಒಂದು ಸಣ್ಣ ಆಸೆ. ಗಂಡ ತಿದ್ದಿಕೊಳ್ಳಬಹುದು. ಇದೆಲ್ಲ ಏನೋ ಒಂದು ಆಕಸ್ಮಿಕ, ದುಃಸ್ವಪ್ನ ಎಂಬಂತೆ ಕಳೆದು ಹೋಗಬಹುದು ಎಂಬ ಆಸೆ. ಗಂಡನ ಮನಸ್ಸನ್ನು ನೆರೆಮನೆಯಾಕೆ ತನ್ನ ಆಕರ್ಷಣೆಯಿಂದ ಕೆಡಿಸಿರಬಾರದೇಕೆ? ಎಂಬ ಚಿಂತನೆ.

ಇದೆಲ್ಲ ಗಂಡನೆದುರು ಮಾತಾಡುವಷ್ಟರಲ್ಲಿ ಮಹದೇವ ಮಹಾರುದ್ರನಾಗಿ ನಿಂತು ಬಿಟ್ಟ. ಹೊಡೆಯುವ, ಬಡಿಯುವ ಜೊತೆಗೆ ಕೈಕಾಲು ಕತ್ತರಿಸುವ, ಕೊಲ್ಲುವ ಬೆದರಿಕೆಯೂ ಬಂತು. ಇದೆಲ್ಲ ಬಗೆ ಹರಿಯದ ಮಾತು. ಇನ್ನು ಋಣಾನುಬಂಧ ಮುಗಿಯಿತು. ಬದುಕಿಗೆ ಇದ್ದ ಚೂರುಪಾರು ಅರ್ಥ ಕೂಡ ಇಲ್ಲದಂತಾಯಿತು ಎಂದುಕೊಂಡ ಹೆಣ್ಣು. ಇಂಥ ಸಂದರ್ಭದಲ್ಲಿ ತುಳಿಯಬಹುದಾದ್ದು ಎರಡೇ ದಾರಿ. ಒಂದು ಆತ್ಮಹತ್ಯೆ.ಇನ್ನೊಂದು ತಾಯಿಯ ಬಳಿ ಹೋಗುವುದು. ತವರಿನ ದಾರಿ ಮುಚ್ಚಿ ಹೋಗಿತ್ತು. ಇನ್ನು ಉಳಿದದ್ದು ಆತ್ಮಹತ್ಯೆ.

ಒಂದು ದಿನ ಗಂಡ ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ, ಒಂದು ವರ್ಷದ ಕೂಸು ಎತ್ತಿಕೊಂಡು ಮನೆ ಬಿಡುವಾಗ, ಕೈಬೀಸಿ ಕರೆಯಿತು ಪರಿಚಯದ ಬಾವಿ. 'ಮಗುವನ್ನು ಬಾವಿಗೆಸೆದು, ತಾನೂ ಅದರೊಳಗೆ ಧುಮುಕಬೇಕು' ನಿರ್ಧರಿಸಿಯಾಗಿತ್ತು. ಆದೇಕೋ ಹಸುಗೂಸನ್ನು ಕೊಲ್ಲಲು, ತನ್ನೆದುರು ಚಾಚಿ ಇದ್ದ ಬದುಕನ್ನು ಒದ್ದು ಸಾವಿನಾಶ್ರಯ ಪಡೆಯಲು ಮನಸ್ಸಾಗಲಿಲ್ಲ.

ಅದು ಗೌರಮ್ಮನ ಬದುಕಿನ ಮಹತ್ತರ ಕ್ಷಣ. ಸಾವಿಗಭಿಮುಖವಾಗಿದ್ದ ಆಕೆ ಜೀವನೋನ್ಮುಖಿಯಾದರು. ಬೆಂಗಳೂರಲ್ಲಿಯೇ ಇದ್ದ ತಾಯಿಯ ಮನೆಗೆ ಬಂದು ಸೇರಿದ್ದೇ, ವಾತ್ಸಲ್ಯಮಯಿ ತಾಯಿಯನ್ನು ನೋಡಿದ್ದೇ ಕಣ್ಣೀರ ಕಟ್ಟೆಯೊಡೆದು, ಎದೆಯ ಗುಡುಗುಡವೆಲ್ಲ ಪ್ರವಹಿಸತೊಡಗಿತು. ಒಂದೇ ಒಂದು ಮಾತಿಲ್ಲದೇ ತಾಯಿಗೆ ಮಗಳ ದುಃಖ, ಸಂಕಟ ಎಲ್ಲ ಅರ್ಥವಾಗಿಬಿಟ್ಟಿತ್ತು.

ದುಃಖ ಹಗುರಾದ ಮೇಲೆ ಮಗಳು ಹೇಳಿದ ತನ್ನ ಸಂಕಟ, ಯಾತನೆಯ ಕತೆ ಕೇಳಿ ತಾಯಿ ಹೃದಯ ಬೆಂದು ಹೋಯಿತು. ತಾವು ಮಮತೆ ಮುದ್ದಿಂದ ಸಾಕಿ ಬೆಳೆಸಿದ ಒಬ್ಬಳೇ ಮಗಳ ಬದುಕು ಹೀಗಾಯಿತಲ್ಲ ಎಂಬ ವ್ಯಥೆ.

ಇಲ್ಲಿಗೆ ಎಲ್ಲ ಮುಗಿದು, ಗೌರಮ್ಮನ ಬದುಕು ಒಂದು ಘಟ್ಟ ಮುಟ್ಟಿ ಬಿಡಬೇಕಾಗಿತ್ತು. ಏಕೆಂದರೆ ಬೇರೆ ತಂದೆ, ತಾಯಿಗಳ ಹಾಗೆ 'ಹೇಗೋ ಏನೋ ನೀನೇ ಗಂಡನ ಜೊತೆ ಹೊಂದಿಕೊಂಡು ಬಾಳಬೇಕು. ಇದು ಮನೆಯ, ಮನೆತನದ ಮರ್ಯಾದೆಯ ಪ್ರಶ್ನೆ' ಎಂದು ತೌಡು ಕುಟ್ಟುವುದರಲ್ಲಿ ಗೌರಮ್ಮನ ತಂದೆ ತಾಯಿ ಆದರೆ ವಂಚಕ ಗಂಡಸರ ಬುದ್ಧಿ ಕೆಲಸ ಮಾಡುವ ರೀತಿಯೇ ಬೇರೆ. ಅವರಿಗೆ ಎಲ್ಲ ಸವಲತ್ತು ಸುಖ ಬೇಕು. ಅದಕ್ಕಾಗಿ ಇನ್ನೊಂದು ಹೆಣ್ಣು ಜೀವ ಬಲಿಕೊಡುವುದು ಅಗತ್ಯ ಎಂದಾದಾಗ ಸ್ವಲ್ಪವೂ ಮಾನವೀಯತೆ ಇಲ್ಲದೆ, ನಯ ವಂಚಕತನದಿಂದ ಮಾಡಿ ಮುಗಿಸಿಬಿಡುತ್ತಾರೆ. ಗೌರಮ್ಮನ ಗಂಡ ಮಾಡಿದ್ದೂ ಅದೇ.

ಮನೆಯಲ್ಲಿ ಹೆಂಡತಿಯನ್ನು ಕಾಣದೇ ಸೀದಾ ಮಾವನ ಮನೆಗೆ ಹುಡುಕಿ ಬಂದ. ತಾನು ಮಾಡಿದ್ದು ತಪ್ಪು, ಇನ್ನು ಹೊಂದಿಕೊಂಡು ಹೋಗುವುದಾಗಿ ನಂಬಿಸಿದ. ಈ ನಾಟಕವನ್ನು ಗೌರಮ್ಮನ ತಂದೆ ತಾಯಿಯೇ ನಂಬಿದ ಮೇಲೆ ಈಕೆ ಏನೂ ಮಾಡುವಂತಿರಲಿಲ್ಲ. ಜೊತೆಗೆ ಸಣ್ಣದೊಂದು ಆಸೆ 'ಗಂಡ ಬದಲಾಗಬಹುದೇನೋ!'.

ಈ ಭರವಸೆಯಿಂದಲೇ ಮರಳಿ ಗಂಡನ ಮನೆಗೆ ಬಂದ ಗೌರಮ್ಮನಿಗೆ ಗಂಡನ ವಂಚನೆ, ಕ್ರೌರ್ಯ ಎಲ್ಲ ಬಯಲಾಗಲು ಹೆಚ್ಚು ದಿನ ಹಿಡಿಯಲಿಲ್ಲ.

ಮೈಸೂರಿಗೆ ಒಂಬತ್ತು ತಿಂಗಳ ತರಬೇತಿಗೆಂದು ಹೋಗಿದ್ದ ಮಹಾಶಯ. ಅಲ್ಲೇ ಒಂದು ಮಿಕ ಬಲೆಗೆ ಹಾಕಿಕೊಂಡಿದ್ದ. ಆಕೆ ತನ್ನ ಹೆಂಡತಿ, ಒಂಟಿಯಾಗಿ ಬೆಂಗಳೂರಲ್ಲಿ ಇರಲು ಕಷ್ಟ. ತರಬೇತಿ ಅವಧಿಯಲ್ಲಿ ಮೈಸೂರಲ್ಲೇ ಮನೆ ಮಾಡಿಕೊಂಡಿರಲು ಅವಕಾಶ ಕೊಡಿ ಎಂದು ಅರ್ಜಿ ಹಾಕಿ ಅನುಮತಿ ಪಡೆದುಕೊಂಡ. ಆಗ ತನ್ನ ಹೆಂಡತಿ ಎಂದು ಹಾಜರುಪಡಿಸಿದ್ದು ತಾನು ಬಲೆಗೆ ಬೀಳಿಸಿಕೊಂಡಿದ್ದ ಹೊಸ ಮಿಕವನ್ನು.


ಹೆಣ್ಣುಗಳ ಗೀಳು, ಹೊಸ ಹೊಸ ಹೆಣ್ಣು ಪಡೆಯುತ್ತಾ, ಹೊಸ ಸಾಮ್ರಾಜ್ಯ ಗೆದ್ದಂತೆ ಅಟ್ಟಹಾಸ ತೋರುವ ಗಂಡಸರು. ಇಂಥ ಎಲ್ಲ ಹೆಣ್ಣುಗಳನ್ನು ಕೇವಲ ನಿರ್ಜೀವ, ದೈಹಿಕ ಸುಖಕ್ಕೆ ಮಾತ್ರ ಮೀಸಲಾದ ಗೊಂಬೆಗಳೆಂಬಂತೆ ನಡೆಸಿಕೊಳ್ಳುತ್ತಾರೆ. ಮಹದೇವನಿಗೆ ಬೇಕಾದ್ದು ಗೆಲುವು ಸಾಧಿಸಲು ಒಂದು ಹೆಣ್ಣು. ಗೌರಮ್ಮ ಕೂಡ ಇಂಥ ಗೆಲುವಿನ ಒಂದು ಪ್ರಹಸನ. ಆದರೆ ಮದುವೆ ಎಂಬ ತೊಡಕು ಮಾತ್ರ ಅವನನ್ನು ಕಟ್ಟಿ ಹಾಕಿತ್ತು.

ಈ ಮದುವೆ ಗೌರಮ್ಮನ ಪಾಲಿಗೆ ನರಕ ಸೃಷ್ಟಿಸಿದರೆ, ಮಹದೇವನ ಪಾಲಿಗೆ ಹಲವು ಕಾಲ್ತೊಡಕುಗಳನ್ನು ಸೃಷ್ಟಿಸಿತ್ತು. ಅದನ್ನು ನಿವಾರಿಸಿಕೊಳ್ಳುವುದೇ ಆತನ ಮುಂದಿನ ಗುರಿ ಆಯಿತು. ತವರಿಗೆ ಹೆಂಡತಿ ಹೋದಾಗ ಅಲ್ಲಿ ಬಂದು ನಾಟಕ ಆಡಿದ್ದು, ಮರಳಿ ಕರೆದು ತಂದಿದ್ದು ಎಲ್ಲ ಈ ದುಷ್ಟ ಉದ್ದೇಶದಿಂದಲೇ.

ಮೈಸೂರಲ್ಲಿ ತರಬೇತಿ ಮುಗಿಸಿಕೊಂಡು ಬಂದ ಮಹದೇವ ಮತ್ತೊಂದು ವರಾತ ಆರಂಭಿಸಿದ. ತಾನು ಜಯಾನ್ನ ಮದುವೆ ಆಗಬೇಕಿದೆ. ಆ ಕಾರಣಕ್ಕೆ ಒಪ್ಪಿಗೆ ನೀಡುವಂತೆ ಹೆಂಡತಿಯನ್ನು ಪೀಡಿಸಲು ಆರಂಭಿಸಿದ.

ಏನೋ ಒಂದು ಭರವಸೆ ನೆಚ್ಚಿ, ಗಂಡ ಬದಲಾಗಬಹುದು ಎಂದು ಹಿಂತಿರುಗಿ ಬಂದ ಆಕೆಗೆ ಬರಸಿಡಿಲಂತೆ ಈ ಬೇಡಿಕೆ ಎರಗಿತು. ಈ ಗಂಡು ಮೃಗ ಸುಧಾರಿಸುವುದಿಲ್ಲ.

ಶಾಂತಿದೂತರು !



ಗೆಳತಿ...
ಎಲ್ಲೆಲ್ಲಿಯೂ.. ಇಂದು
ಭಯೋತ್ಪಾದನೆ
ತುಂಬಿ ತುಳುಕುತ್ತಿರುವಾಗ...
ಶಾಂತಿ ದೂತರಂತೆ
ಆಗಸದಲ್ಲಿ ಸ್ವಚ್ಛಂದವಾಗಿ
ಹಾರಾಡುವ
ಬಿಳಿ ಪಾರಿವಾಳಗಳ
ಕಂಡು ಮನಸ್ಸು
ಹಗುರವಾಗುತ್ತದೆ!

-ಕ.ಬ. ವೀರಣ್ಣ ಕಣ್ಣಾಗಲ

ಇದನ್ನು ಬೇಟೆಯಾಡಿಯೇ ಪಳಗಿಸಬೇಕು ಎಂದು ಈ ಸಾಮಾನ್ಯ ನೊಂದ ಗೃಹಿಣಿ ನಿಶ್ಚಯಿಸಿದರು.

ಅಲ್ಲಿಂದ ನಿಜವಾದ ಹೋರಾಟ ಆರಂಭವಾಯಿತು.

ಆಕೆ ನೇರವಾಗಿ ನಡೆದಿದ್ದು ಪೊಲೀಸ್ ಠಾಣೆಗೆ. ಅಲ್ಲಿ ಗಂಡನ ವಿರುದ್ಧವೇ ದೂರು ದಾಖಲಿಸಿದರು. ಹಿರಿಯ ಅಧಿಕಾರಿಗಳು ಕರೆದು ಬುದ್ಧಿ ಹೇಳಿದರೆ ಈ ಗಂಡ ಕೆರಳಿ ನಿಂತ. ಪೊಲೀಸ್ ಕಚೇರಿಯ ಆವರಣದಲ್ಲೇ ತಾಳಿ ಕಟ್ಟಿದ ಹೆಂಡತಿಯ ಮೇಲೆ ಎರಗಿ, ಹಲ್ಲೆ ಮಾಡಿದ.

ಅಲ್ಲಿಗೆ ಆತ ತನ್ನ ಗೋರಿ ತಾನೇ ತೋಡಿಕೊಂಡ. ಇವನು ಖಂಡಿತ ಸುಧಾರಿಸುವುದಿಲ್ಲ ಎಂದರಿತ ಮೇಲಾಧಿಕಾರಿಗಳು ಮಹದೇವನನ್ನು ಸೇವೆಯಿಂದ ಸಸ್ಪೆಂಡ್ ಮಾಡಿದರು.

ಹೋರಾಟಕ್ಕೆ ನಿಂತ ಹೆಣ್ಣು ಸಾಧಿಸಿದ ಮೊದಲ ಗೆಲುವು ಅದಾಗಿತ್ತು. ಮನೆಯ ನಾಲ್ಕು ಗೋಡೆಗಳ ನಡುವೆ ಅಸಹಾಯಕ ಪ್ರಾಣಿಯಂತೆ ನೋಯುತ್ತಾ, ಚೀರುತ್ತಾ ತನ್ನ ಹಿಂಸೆ, ಕಿರುಕುಳಗಳಿಗೆ ತೆತ್ತುಕೊಳ್ಳುತ್ತಿದ್ದ ಹೆಣ್ಣು ಗಂಡನಿಗೇ ತಿರುಗಿ ನೀಡಿದ ಮೊದಲ ಪೆಟ್ಟು ಅದಾಗಿತ್ತು.

ಮುಂದಿನದು ಎರಡು ಪ್ರಬಲ ಶಕ್ತಿಗಳ ಹೋರಾಟವಾಯಿತು. ಒಂದು ಕಾನೂನಿನ ಕಣ್ಣಿಗೆ ಮಣ್ಣೆರಚಿ ವಂಚನೆ, ದುಷ್ಟತನ ವಿಜೃಂಭಿಸುವ ಶಕ್ತಿಯಾದರೆ, ಇಂಥ ದುಷ್ಟ ಶಕ್ತಿಯ ವಿರುದ್ಧ ಅದೇ ಕಾನೂನು ಚೌಕಟ್ಟಲ್ಲಿ ಹೋರಾಡುವ ಸಾತ್ವಿಕ ಶಕ್ತಿ ಇನ್ನೊಂದಾಗಿತ್ತು.

ಅಮಾನತ್ತಿನ ಅವಮಾನಕ್ಕೊಳಗಾದ ಮಹದೇವ ಹೇಗಾದರೂ ಮಾಡಿ ಮತ್ತೆ ಕೆಲಸಕ್ಕೆ ಸೇರಲು ಮೊದಲು ಹೂಡಿದ ಉಪಾಯವೆಂದರೆ ಹೆಂಡತಿಯಿಂದ ವಿವಾಹ ವಿಚ್ಛೇದನ ಪಡೆಯುವುದು. ತಾನು ಅದನ್ನು ಒಪ್ಪಿ ಬರೆದುಕೊಟ್ಟರೆ ಗಂಡನ ದುಷ್ಟ ಪ್ರವೃತ್ತಿ ಮಿತಿ ಮೀರುತ್ತದೆ ಎಂದು ತಿಳಿದಿದ್ದ ಗೌರಮ್ಮ, ಗಂಡನ ಹಿಂಸೆ, ಕಾಟಗಳನ್ನು ಸಹಿಸಿದರೇ ಹೊರತು ಮಣಿಯಲಿಲ್ಲ.

ಈ ನಡುವೆ ಆಕೆಯನ್ನು ಕೊಂದು, ಅದೊಂದು ಆತ್ಮಹತ್ಯೆ ಎಂದು ಸಾಬೀತುಗೊಳಿಸುವ ಸಂಚೊಂದು ಮಹದೇವನ ತಲೆಯಲ್ಲಿ ಸುಳಿಯಿತು. ಅದಕ್ಕಾಗಿ 'ತನ್ನ ಸಾವಿಗೆ ತಾನೇ ಕಾರಣ' ಎಂಬಂಥ ಕಾಗದಕ್ಕೆ ರುಜು ಹಾಕುವಂತೆ ಹೆಂಡತಿಯನ್ನು ಪೀಡಿಸಲಾರಂಭಿಸಿದ. ನಿತ್ಯದ ಯಾತನೆಯಿಂದ ಪಾರಾಗಲು ಅವನು ಹೇಳಿದಂತೆ ಬರೆದುಕೊಟ್ಟ ಗೌರಮ್ಮ, ಇನ್ನು ಅಲ್ಲಿದ್ದರೆ ಅಪಾಯ ಎಂದರಿತು ತಾಯಿ ಮನೆ ಸೇರಿ, ಅಲ್ಲಿಂದ ಹೋರಾಟ ಆರಂಭಿಸಿದರು.

ಕುಟುಂಬ ನ್ಯಾಯಾಲಯದ ಮೊರೆ ಹೋದರು. ಈ ಎಲ್ಲ ನಡೆಯುತ್ತ ಇರುವಾಗ ಮಹದೇವ ಎಳ್ಳಷ್ಟೂ ಸುಧಾರಿಸಿರಲಿಲ್ಲ. ಮೊದಲು ಶುರುವಿಟ್ಟುಕೊಂಡಿದ್ದ ಜಯಾನ ಜೊತೆಯ ಸಂಬಂಧ, ಮೈಸೂರಲ್ಲಿ ಕಟ್ಟಿಕೊಂಡವಳು ಎಲ್ಲರಿಗೂ ಕೈಕೊಟ್ಟಿದ್ದು ಹೊಸ ಬೇಟೆ ಆರಂಭಿಸಿದ್ದ.

ತನಗೆ ವಿವಾಹ ವಿಚ್ಛೇದನ ದೊರೆತಿದೆ ಎಂದು ನಂಬಿಸಿ ಲಕ್ಷ್ಮಿ ಎಂಬಾಕೆಯನ್ನು ಮದುವೆಯಾದ. ಈಕೆ ಬಡ ಕುಟುಂಬದವಳು. ತಾಯಿ ಅವರಿವರ ಮನೆಗೆಲಸ ಮಾಡಿಕೊಂಡು ಬದುಕುತ್ತಾ ಇದ್ದವಳು.

ರಾಜಾರೋಷವಾಗಿ ಸಂಸಾರ ಆರಂಭಿಸಿದ ಮಹದೇವ, ಲಕ್ಷ್ಮಿಯಿಂದ ಎರಡು ಮಕ್ಕಳನ್ನೂ ಪಡೆದ. ಇದು ತಿಳಿದ ಗೌರಮ್ಮ ಆಕೆಯನ್ನು ಕಂಡು ಸಾಕ್ಷಿ ಹೇಳಲು ಕೋರಿದರು. ಆಕೆ ಇದೆಲ್ಲ ಉಸಾಬರಿ ಬೇಡವೆಂದೋ, ಗಂಡನ ಭಯದಿಂದಲೋ ಸಾಕ್ಷಿ ಹೇಳಲು ನಿರಾಕರಿಸಿದಳು.

ಛಲ ಹೊತ್ತ ಗೌರಮ್ಮ ಲಕ್ಷ್ಮಿಯ ಹೆರಿಗೆ ಆಗಿದ್ದ ಆಸ್ಪತ್ರೆಯಲ್ಲಿ ಜಾಲಾಡಿ, ಅಲ್ಲಿ ದಾಖಲೆಗಳನ್ನು ಸಂಗ್ರಹಿಸಿದರು. ಲಕ್ಷ್ಮಿ ಮತ್ತು ಮಹದೇವ ಗಂಡ ಹೆಂಡತಿ ಎಂಬಂತೆ ನಮೂದಿಸಲಾಗಿದ್ದ ಅಮೂಲ್ಯ ದಾಖಲೆ ಅದು.

ಈ ದಾಖಲೆ ದೊರಕಿದ ಮೇಲೆ ಉಳಿದ ದಾಖಲೆಗಳನ್ನು ಸಂಗ್ರಹಿಸುತ್ತಾ ಹೋದರು. ಜಯಾಳ ಜೊತೆಗಿದ್ದ ಫೋಟೋ ಎಲ್ಲ ಪತ್ತೆ ಮಾಡುವಾಗ ಇನ್ನೊಂದು ಆಶ್ಚರ್ಯಕರ ಸಂಗತಿ ಬಯಲಾಯಿತು.

ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಸಮಯದಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ್ದ ಮಹದೇವ, ತಾನು ಪರಿಶಿಷ್ಟ ಜಾತಿಯವನೆಂದು ಖೋಟಾ ದಾಖಲೆ ಸೃಷ್ಟಿಸಿ ಸಲ್ಲಿಸಿದ್ದು ಪತ್ತೆ ಆಯಿತು.

ಲಕ್ಷ್ಮಿಯನ್ನು ವಿಚಾರಣೆಗೆ ಪೊಲೀಸರು ಕರೆಸಿದ ಸುದ್ದಿ ತಿಳಿಯುತ್ತಲೇ ಮಹದೇವ ಎಚ್ಚರಗೊಂಡ. ಮಹದೇವ ಯಾರೋ ತನಗೆ ತಿಳಿಯದು, ಆತನಿಗೂ ತನಗೂ ಸಂಬಂಧ ಇಲ್ಲ ಎಂದು ಸಾಕ್ಷ್ಯ ನುಡಿಯುವುದಾದರೆ ಐವತ್ತು ಸಾವಿರ ನೀಡುವುದಾಗಿ ಹೇಳಿ ನಂಬಿಸಿದ. ಬಡತನದಲ್ಲೇ ಹುಟ್ಟಿ ಬೆಳೆದಿದ್ದ ಆ ಹೆಣ್ಣಿಗೆ ಐವತ್ತು ಸಾವಿರ ಎನ್ನುವುದೇ ಬಹಳ ದೊಡ್ಡ ಮೊತ್ತವಾಗಿ ಕಂಡಿತು. ಆದರೆ ವಂಚಕ ಮಹದೇವನ ಬಣ್ಣ ಆಕೆಗೆ ತಿಳಿದಿದ್ದು ಸಾಕ್ಷ್ಯ ಮುಗಿದ ಮೇಲೆ. ವಾಗ್ದಾನ ನೀಡಿದಂತೆ ಹಣವನ್ನೂ ನೀಡದೇ, ಎರಡು ಮಕ್ಕಳನ್ನು ಕೈಗಿತ್ತು ಮಹದೇವ ಮರೆಯಾಗಿಬಿಟ್ಟ.

ಈ ಮುಂಚೆಯೇ ಜಯಾಳನ್ನು ಬೀದಿಪಾಲು ಮಾಡಿದ್ದ ಈ ಮಹಾಶಯ ಲಕ್ಷ್ಮಿಯನ್ನು ಅದೇ ದಾರಿಯಲ್ಲಿ ತಳ್ಳಿದ.

ಕುಟುಂಬ ನ್ಯಾಯಾಲಯದಲ್ಲಿ ನಾಲ್ಕು ವರ್ಷದ ಸುದೀರ್ಘ ಹೋರಾಟ. ಆದರೆ ಕೊನೆಯಲ್ಲಿ ಫಲಿತಾಂಶ ಮಾತ್ರ ಶೂನ್ಯ. ಗೌರಮ್ಮನಿಗೆ ನಿರಾಶೆ. ಆದರೆ ಈ ನಿರಾಶೆಯ ಆಳದಿಂದಲೇ ಛಲ ಮೂಡಿ ಬಂತು. ಗಂಡನ ಮೇಲೆ ಇಲಾಖಾ ತನಿಖೆಗೆ ಅರ್ಜಿ ಸಲ್ಲಿಸಿದರು. ಸಂಗ್ರಹಿಸಿದ್ದ ದಾಖಲೆಗಳ ಕಂತೆಯೇ ಇತ್ತು. ಇಲಾಖೆಗೇ ಆತ ಸುಳ್ಳು ಜಾತಿ ಪತ್ರ ನೀಡಿದ್ದ. ಹಲವು ಹೆಣ್ಣುಗಳನ್ನು ವಂಚಿಸಿದ್ದ. ಅವರೆಲ್ಲರ ಬದುಕೂ ನಾಶವಾಗಿತ್ತು. ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮಹದೇವನ ನಾನಾ ಅವತಾರ ಮೊದಲೇ ತಿಳಿದಿತ್ತು. ಗೌರಮ್ಮ ನೀಡಿದ ವಿವರಣೆ, ಲಕ್ಷ್ಮಿ ನೀಡಿದ ಸಾಕ್ಷ್ಯ, ಎದುರಿದ್ದ ದಾಖಲೆಗಳು ಮಹದೇವ ಎಂಥ ನೀಚ ಎಂಬುದನ್ನು ಸಾಬೀತುಗೊಳಿಸಿದವು. ಐದು ವರ್ಷದ ಸುದೀರ್ಘ ವಿಚಾರಣೆಯ ನಂತರ ಮಹದೇವ ಕೆಲಸದಿಂದ ವಜಾ ಆಗುವ ಆದೇಶ ಹೊರಬಿತ್ತು.


ಅದು ಗೌರಮ್ಮನ ಗೆಲುವಾಗಿತ್ತು.


ಒಂದು ಒಂಟಿ ಹೆಣ್ಣಿನ ಛಲದ ದಿಗ್ವಿಜಯದ ದ್ಯೋತಕವಾಗಿತ್ತು. ಇದಕ್ಕೆ ಒಂದು ಹಂತದಲ್ಲಿ 'ವಿಮೋಚನಾ' ಕೈಗೂಡಿಸಿತು.

ಹಾಗೆ ನೋಡಿದರೆ ಇದು ಗೌರಮ್ಮನ ಹತ್ತಾರು ವರ್ಷಗಳ ಹೋರಾಟಕ್ಕೆ ಸಂದ ವಿಜಯ. ಆದರೆ ಗೆಲುವಿನಿಂದ ಗೌರಮ್ಮ ಬೀಗುತ್ತಾ ಉಳಿಯಲಿಲ್ಲ. ತನ್ನಂತೆ ನೊಂದ ಮಹಿಳೆಯರಿಗೆ ನೆರವಾಗಲೆಂದು ಆಕೆ ವಿಮೋಚನಾ ಸಂಘಟನೆಯಲ್ಲಿ ದುಡಿಯುತ್ತಿದ್ದಾರೆ.

ನೀರಜಾ ಬಾನೋಟ್ ಪ್ರಶಸ್ತಿಯ ಜೊತೆ ದೊರೆತ ಒಂದೂವರೆ ಲಕ್ಷ ರೂಪಾಯಿಗಳಲ್ಲಿ ಐವತ್ತು ಸಾವಿರ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಠೇವಣಿ ಇರಿಸಿದ್ದಾರೆ ಗೌರಮ್ಮ. ಅದರಿಂದ ಬರುವ ಬಡ್ಡಿ ಹಣದಲ್ಲಿ ಬಡವರು, ಅರ್ಹರಾದ ವಿದ್ಯಾರ್ಥಿಗಳಿಗೆ ನೆರವಾಗುವುದು ಆಕೆಯ ಉದ್ದೇಶ.

■ ಮೋಹನ


"ಮ್ಯಾಚಲ್ಲಿ ಯಾರ್‍ಯಾರು ಲಂಚ ತಗೊಂಡಿದ್ದಾರೆಂದು ಹೇಳಲು ಲಂಚ ಕೇಳ್ತಿದ್ದಾನೆ ಭೂಪ...."



ಕತೆಯಲ್ಲ ವ್ಯಥೆ

ಇದು ಒಂದು ಊರಿನ ಕತೆಯಲ್ಲ. ಒಂದು ರಾಜ್ಯದ ಕತೆಯಲ್ಲ. ಮನೆ ಮನೆಯ ಕತೆ. ಕತೆ ಅನ್ನುವುದಕ್ಕಿಂತ ವ್ಯಥೆ ಎನ್ನುವುದೇ ಸರಿ.


ಹೆಣ್ಣುಗಳಿಗೆ, ಅವರನ್ನು ಹೆತ್ತವರಿಗೆ ಮದುವೆ ಎಂಬುದೇ ದುಃಸ್ವಪ್ನದಂತಾಗಿದೆ. ಸುಜಾತಾ ಬೆಂಗಳೂರಿನ ವೈದ್ಯೆ. ಪದವಿಯಲ್ಲಿ ಚಿನ್ನದ ಪದಕ ಪಡೆದಿದ್ದಳು. 1996ರ ಡಿಸೆಂಬರ್‌ನಲ್ಲಿ ನಿಶ್ಚಿತಾರ್ಥ. ವರ ಎಂಜಿನಿಯರ್. ಮಣಿಪಾಲ್ ಮೋಟಾರ್ಸ್ ಸಂಸ್ಥೆಯಲ್ಲಿ ಕೆಲಸ. ನಿಶ್ಚಿತಾರ್ಥದ ಮರುದಿನವೇ ತಕರಾರು ಆರಂಭ. ಒಂದು ಹರಳಿನ ವಜ್ರದುಂಗುರದ ಬದಲು ನಾಲ್ಕು ಹರಳಿನ ಉಂಗುರ ಬೇಕೆಂಬ ಬೇಡಿಕೆ. ದಿನದಿಂದ ದಿನಕ್ಕೆ ಬೇಡಿಕೆ ಬೆಳೆಯಿತು. ಕೊಟ್ಟಷ್ಟೂ ಗೊಣಗು ಹೆಚ್ಚಾಯಿತು. ನಿಶ್ಚಿತಾರ್ಥ ಆಗಿದ್ದ ತಪ್ಪಿಗೆ ಹೆಣ್ಣಿನ ಕಡೆಯವರು ಈ ಬೇಡಿಕೆಗಳನ್ನು ಒಪ್ಪುತ್ತಲೇ ಹೋಗಬೇಕಾಯಿತು.

ಇಂಥ ಕಿರಿಕಿರಿಯ ನಡುವೆಯೂ 1997ರ ಮಾರ್ಚ್‌ನಲ್ಲಿ ವೈಭವದಿಂದ ಮದುವೆ. ವರದಕ್ಷಿಣೆಯ ತಕರಾರಿನಿಂದಾಗಿ ಡಾ.ಸುಜಾತಾ ಮೂರು ತಿಂಗಳು ಗಂಡನ ಮನೆಗೆ ಹೋಗಲಿಲ್ಲ. ಆನಂತರ ಬಂದ ಒಂದು ತಿಂಗಳಿಗೇ ಆಕೆಗೆ ತಾನು ಮದುವೆಯಾದದ್ದು ಗಂಡನನ್ನಲ್ಲ, ಧನ ಪಿಶಾಚಿಯನ್ನು ಎಂಬುದು ಅರಿವಾಯಿತು. ಗಂಡನ ಮನೆಯವರ ನಿತ್ಯ ಅವಹೇಳನ, ಒಂದಲ್ಲ ಒಂದು ಕಿರುಕುಳ. ಸಂಬಳ ಬಂದ ದಿನ ಎಲ್ಲ ಕಿತ್ತುಕೊಳ್ಳುವುದು, ಬೈಗುಳ ಎಲ್ಲ ನಡೆಯಿತು.

ಇದು ಸಾಲದೆಂಬಂತೆ ಗಂಡ ಶ್ರೀಕಾಂತನ ತಮ್ಮ, ಆಕೆ ದುಡಿಯುತ್ತಿದ್ದ ಆಸ್ಪತ್ರೆಗೇ ಹೋಗಿ ಎಲ್ಲರೆದುರು ಕೇಳಲಾರದಂಥ ಬೈಗುಳ ಪ್ರಯೋಗಿಸುತ್ತಿದ್ದ ಅತ್ತಿಗೆಯ ಮೇಲೆ ಕೈ ಮಾಡುತ್ತಿದ್ದ.


ಇತ್ತ ಮದುವೆಯಾಗಿ ಮನೆಗೆ ಬಂದು ಕನಸುಗಳನ್ನೆಲ್ಲ ಕಳೆದುಕೊಂಡ ಈ ವೈದ್ಯೆ ಚಡಪಡಿಸುತ್ತಾ, ನೆಮ್ಮದಿಯ ಬಾಳೂ ಇಲ್ಲದಂತಾಗಿದ್ದರೆ, ಆಕೆಯ ಪತಿ ಮಹಾಶಯ ಬೇರೆ ಹೆಣ್ಣುಗಳ ಜೊತೆಯಾಗಿ ಸ್ವಚ್ಛಂದ ಜೀವನ ನಡೆಸುತ್ತಿದ್ದ. ಡಾ.ಸುಜಾತಾಳ ತಂದೆ ತಾಯಿ ಈ ಎಲ್ಲ ಜಂಜಾಟಗಳಿಂದಾಗಿ ತೀವ್ರ ಅಸ್ವಸ್ಥಗೊಂಡರು. ಇನ್ನು ಇದನ್ನು ಸಹಿಸಲು ಸಾಧ್ಯವಿಲ್ಲ ಎಂಬುದು ಅರಿವಾದಾಗ ಡಾ.ಸುಜಾತಾ ಪೊಲೀಸರಿಗೆ ದೂರು ನೀಡಿದ್ದಾಳೆ.

ಪಶ್ಚಿಮ ದೆಹಲಿಯ ಜ್ಯೋತಿ ಧಾವನ್ ಕತೆ ಇದಕ್ಕಿಂತ ಹೀನ. ಕಳೆದ ಎರಡು ವರ್ಷದಿಂದ ಆಕೆಯನ್ನು ಗಂಡನ ಮನೆಯವರು ಮಹಡಿಯ



ಹಲ್ಲೆಗೀಡಾಗಿರುವ ಪ್ರತಿಭಾ

ಯಾವುದೇ ಜಾತಿ, ಧರ್ಮ, ವರ್ಗ ಆಗಲಿ, ಅವರು ವಿದ್ಯಾವಂತರು, ಅವಿದ್ಯಾವಂತರು ಎಂಬ ಭೇದಭಾವ ಇಲ್ಲದೆಯೇ ದೌರ್ಜನ್ಯಗಳಿಗೆ ಮುಂದಾಗುತ್ತಾರೆ. ಪಟ್ಟಣಗಳಲ್ಲಿ ಇಂಥ ಪ್ರವೃತ್ತಿ ತೀವ್ರವಾಗುತ್ತಿದ್ದು, ಬಹುಪಾಲು ಸಂದರ್ಭಗಳಲ್ಲಿ ಅಸಹಾಯಕ ಹೆಣ್ಣಿನ ಸಾವಿಗೆ ಕಾರಣ ಆಗುತ್ತದೆ.



ಕ್ರಿಕೆಟ್ ಆಟಗಾರ ಗ್ಯಾನೇಂದ್ರ ಪಾಂಡೆ



ತಾಯಿಯ ಕೊಲೆಯನ್ನು ಕಣ್ಣಾರೆ ನೋಡಿದ ಎರಡು ವರ್ಷದ ಹೆಣ್ಣು ಮಗು ತನ್ನ ಅಜ್ಜಿಯೊಂದಿಗೆ

ಕೋಣೆಯೊಂದರಲ್ಲಿ ಕೂಡಿಹಾಕಿದ್ದರು. ಎರಡು ದಿನಕ್ಕೆ ಒಂದು ರೊಟ್ಟಿ, ಒಂದಿಷ್ಟು ನೀರು ಬಿಟ್ಟರೆ ಬೇರೇನೂ ಕೊಡುತ್ತಾ ಇರಲಿಲ್ಲ. ಅದು ಹೇಗೋ ವಿಚಾರ ಪೊಲೀಸರ ಕಿವಿಗೆ ಬಿದ್ದು, ಅವರು ಬಂದು ಬಾಗಿಲೊಡೆದು ನೋಡಿದರೆ, ಇಡೀ ರೂಮಿನ ತುಂಬಾ ಗಬ್ಬು ವಾಸನೆ. ಮೂಳೆ ಚಕ್ಕಳವಾಗಿದ್ದ ಜಯಾ ಧಾವನ್.

ಆಕೆಯ ತಪ್ಪೆಂದರೆ ತಾಯಿಯ ಮನೆಯಿಂದ ಐವತ್ತು ಸಾವಿರ ರೂಪಾಯಿ ವರದಕ್ಷಿಣೆ ತರದೇ ಇದ್ದುದು. ಅವಳ ತಾಯಿ ಸರ್ಕಾರೀ ಸಂಸ್ಥೆಯಲ್ಲಿ ನಾಲ್ಕನೇ ದರ್ಜೆ ನೌಕರಳು.

ಇದೆ ದೆಹಲಿಯ ಪೀತಂಪುರ ಕಾಲನಿಯ ಶಾಲಿನಿ ಅಗರ್‌ವಾಲ್ ತಾಯಿ ಮನೆಯಿಂದ ವರದಕ್ಷಿಣೆ ತರಲಿಲ್ಲವೆಂದು ಆಕೆಯ ಗಂಡ ಗುಂಡಿಟ್ಟು ಕೊಂದೇ ಹಾಕಿದ. ಅದೂ ಅವರಿಬ್ಬರ ಎರಡು ವರ್ಷದ ಹೆಣ್ಣು ಮಗುವಿನ ಎದುರಲ್ಲೇ.



ವರದಕ್ಷಿಣೆಗಂಜಿ ಸಾವಿಗೆ ಶರಣಾದ ಕಾನ್ಪುರದ ಸಹೋದರಿಯರು

ಶಾಲಿನಿಯ ತಂದೆ ತಾಯಿ ಓಪೆಲ್ ಅಸ್ಟ್ರಾ ಬದಲು ಹೀರೋ ಹೋಂಡಾ ಕಾರ್ ಕೊಡಿಸಲಿಲ್ಲ ಎಂಬುದೇ ಈ ಭೀಭತ್ಸ ಕೊಲೆಗೆ ಕಾರಣ. ಮಗಳನ್ನು ಕಳೆದುಕೊಂಡ ಮೋಹಿನಿದೇವಿ ಈಗ ತಾಯಿಯಿಲ್ಲದ ತಬ್ಬಲಿ ಮೊಮ್ಮಗುವನ್ನು ಕೂಡ ನೋಡಿಕೊಳ್ಳಬೇಕಾಗಿದೆ.

ಇತ್ತೀಚೆಗೆ ಕ್ರಿಕೆಟ್ ಆಟಗಾರ ಗ್ಯಾನೇಂದ್ರ ಪಾಂಡೆ ತನ್ನ ಹೆಂಡತಿ ಪ್ರತಿಭಾಳನ್ನು ದಿನ ನಿತ್ಯ ಥಳಿಸುತ್ತಿದ್ದ. ನಾಲ್ಕು ವರ್ಷದ ಹಿಂದೆ ಮದುವೆಯಾದ ಗ್ಯಾನೇಂದ್ರ ಪಾಂಡೆ ಮದುವೆಯ ಮರುದಿನವೇ ಸ್ಕೂಟರ್‌ಗೆ ಬೇಡಿಕೆ ಸಲ್ಲಿಸಿದ. ಆನಂತರ ಐದು ಲಕ್ಷಕ್ಕೆ ಬೇಡಿಕೆ ಬಂತು. ಒಂದು ಕೌಂಟಿ ಮ್ಯಾಚ್ ಆಡಲು ತನಗೆ ಎರಡು ಲಕ್ಷ ರೂಪಾಯಿ ಬೇಕೆಂದು ಹಠ ಹಿಡಿದಿದ್ದ.

ಹೀಗೆ ದಿನದಿಂದ ದಿನಕ್ಕೆ ಬೇಡಿಕೆ ಏರುತ್ತಾ ಹೋಯಿತು. ಪ್ರತಿಭಾಳ ತಂದೆ ತಾಯಿ ಇದ್ದದ್ದೆಲ್ಲ ಕೊಟ್ಟರು. ಎಲ್ಲೆಲ್ಲಿ ಸಾಲ ಸಿಗುತ್ತದೋ ಅದೆಲ್ಲ ಪಡೆದು ಅಳಿಯನ ಬೇಡಿಕೆ ತೀರಿಸಲು ಯತ್ನಿಸಿದರು. ಆದರೆ ಬೇಡಿಕೆಗಳು ಮಾತ್ರ ಏರುತ್ತಲೇ ಹೋದವು. ಇತ್ತೀಚೆಗೆ ಪಾಂಡೆ ಹೆಂಡತಿಯ ಮೇಲೆ ಭೀಕರ ಹಲ್ಲೆ ಮಾಡಿದ. ಇನ್ನೇನು ಆಕೆ ಸತ್ತೇ ಹೋಗಬೇಕು ಹಾಗೆ ಬಡಿದ. ಅವಳ ಚೀರಾಟ, ಅಳುವನ್ನು ಕೇಳಿದ ನೆರೆಹೊರೆಯವರು ಪೊಲೀಸರಿಗೆ ಸುದ್ದಿ ಮುಟ್ಟಿಸಿದರು.

ಈಗ ಪ್ರತಿಭಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಗ್ಯಾನೇಂದ್ರ ಪಾಂಡೆ ಪೊಲೀಸರ ವಶದಲ್ಲಿ ಇದ್ದಾನೆ. ಇಂಥ ಪ್ರಕರಣಗಳನ್ನು ಗಮನಿಸುವಾಗ ಒಂದು ಸಂಗತಿ ಸ್ಪಷ್ಟ. ಯಾವುದೇ ಜಾತಿ, ಧರ್ಮ, ವರ್ಗ ಆಗಲಿ, ಅವರು ವಿದ್ಯಾವಂತರು. ಅವಿದ್ಯಾವಂತರು ಎಂಬ ಬೇಧಭಾವ ಇಲ್ಲದೆಯೇ ಇಂಥ ದೌರ್ಜನ್ಯಗಳಿಗೆ ಮುಂದಾಗುತ್ತಾರೆ. ಪಟ್ಟಣಗಳಲ್ಲಿ ಇಂಥ ಪ್ರವೃತ್ತಿ ತೀವ್ರವಾಗುತ್ತಿದ್ದು, ಬಹುಪಾಲು ಸಂದರ್ಭಗಳಲ್ಲಿ ಅಸಹಾಯಕ ಹೆಣ್ಣಿನ ಸಾವಿಗೆ ಕಾರಣ ಆಗುತ್ತದೆ. ಹಳ್ಳಿಗಳಲ್ಲಿ ಇಂಥ ಸಮಸ್ಯೆ ಇದ್ದರೂ, ಸಮಾಜಕ್ಕೆ ಅಂಜಿ ತಗ್ಗಿ ನಡೆಯುತ್ತಾರೆ. ತೀರಾ ದೊಡ್ಡ ಮನೆಗಳಲ್ಲಾದರೆ ಹೆಣ್ಣಿನ ಗೋಳು, ಕೊನೆಗೆ ಅವಳ ಹತ್ಯೆ ಕೂಡ ಸದ್ದಿಲ್ಲದೇ ನಡೆದು ಹೋಗುತ್ತದೆ.


ಸ್ಥಳೀಯ ಅಧಿಕಾರಿಗಳು, ವೈದ್ಯರು ಎಲ್ಲರನ್ನೂ ಕೈಯಲ್ಲಿ ಇಟ್ಟುಕೊಂಡಿರುವಲ್ಲಿ ಇಂಥವರು, ಹೆಣ್ಣಿನದು ಸಹಜ ಸಾವು ಎಂಬಂತೆಯೇ ದಾಖಲೆ ಸೃಷ್ಟಿಸಿಬಿಡಬಲ್ಲರು.

ಹೆಂಡತಿಯನ್ನು ಚಟ್ಟಕ್ಕಿಟ್ಟ ಮೂರು ತಿಂಗಳೊಳಗೆ ಗಂಡಸು ಮಹಾಶಯ ಮತ್ತೆ ಹಸೆಮಣೆ ಏರುತ್ತಾನೆ. ಎಷ್ಟೋ ಸಂದರ್ಭಗಳಲ್ಲಿ ಕೊಲೆಯಾದ ಹುಡುಗಿಯ ತಂಗಿಯೇ ವಧುವಾಗಿ ಬರುತ್ತಾಳೆ.

ಇಂಥದ್ದೆಲ್ಲ ಬವಣೆ ನೋಡುವುದೇ ಬೇಡ ಎಂದೊ ಏನೋ ಕೆಲವರು ಹೆಣ್ಣು ಹುಟ್ಟುವ ಮುನ್ನವೇ ಕೊನೆಗಾಣಿಸಿಬಿಡುತ್ತಾರೆ. ಇನ್ನು ಕೆಲವರಿಗೆ ಹೆಣ್ಣು ಹುಟ್ಟಿದರೆ ಖರ್ಚು, ಗಂಡು ಎಂದರೆ ಆದಾಯ. ಹಾಗಾಗಿ ಗಂಡುಗಳನ್ನು ಉಳಿಸಿಕೊಂಡು ವ್ಯಾಪಾರಕ್ಕೆ ಮುಂದಾಗುತ್ತಾರೆ.

ಒಂದು ಕಾಲಕ್ಕೆ ವರದಕ್ಷಿಣೆ ಮದುವೆ ಸಮಯಕ್ಕೆ ಮುಗಿಯುವ ವ್ಯವಹಾರ ಆಗಿತ್ತು. ಈಗೀಗ ಮದುವೆಯಾದ ಹೆಣ್ಣು ಗಂಡಿನ ಪ್ರತಿಯೊಂದು ಹಣ ಮತ್ತು ಸಾಮಗ್ರಿಗಳ ಬೇಡಿಕೆ ಪೂರೈಸುವ ಸಾಧ್ವಿ ಆಗುತ್ತಿದ್ದಾಳೆ. ಅದು ಸಾಧ್ಯ ಆಗದೇ ಇದ್ದಾಗ ಆಕೆಯ ಬಲಿ ನಡೆಯುತ್ತಿದೆ. ಬದುಕಿದ್ದರೆ ಆಕೆಗೆ ಸಾವೇ ಮೇಲು ಎಂಬಂಥ ನರಕ ಸದೃಶ ಬಾಳು ಕಾದಿರುತ್ತದೆ.

■



ನೀವು 'ಸ್ವಂತ ಮನೆ' ಕನಸು ಕಾಣುತ್ತಿದ್ದೀರಾ?

ಸ್ವಂತ 'ಮನೆ' ಹೊಂದ ಬಯಸುವವರು ತಿಳಿದಿರಲೇಬೇಕಾದ ಸಂಪೂರ್ಣ ವಿವರಗಳನ್ನು 'ಬದುಕು' ಒದಗಿಸುತ್ತದೆ. ಸ್ವಂತ ಮನೆ ಕಟ್ಟುವವರಿಗಾಗಿಯೇ ''ಸ್ವಂತ ಮನೆ'' ಹೆಸರಿನ ವರ್ಣರಂಜಿತ ಲೇಖನ ಮಾಲೆ ಆರಂಭಿಸುತ್ತಿದ್ದೇವೆ. ಈ ವಿನೂತನ ಲೇಖನಮಾಲೆಯಲ್ಲಿ ಈ ಕೆಳಗಿನ ವಿಷಯಗಳಿರುತ್ತವೆ.

- ನಿವೇಶನ ಆಯ್ಕೆ
- ಬ್ಯಾಂಕ್ ಸಾಲ ಸೌಲಭ್ಯ
- ಮನೆ ಅಂದಕ್ಕಾಗಿ ಸರಳ ಉಪಾಯಗಳು
- ನಿವೇಶನ ನೋಂದಾವಣೆ
- ಕಾಂಟ್ರ್ಯಾಕ್ಟರ್ ಜೊತೆಗಿನ ವ್ಯವಹಾರ
- ಕಟ್ಟಡ ಸಾಮಗ್ರಿಗಳ ಗುಣ ಪರೀಕ್ಷೆ
- ಕಡಿಮೆ ವೆಚ್ಚದ ಮನೆ ನಿರ್ಮಾಣ....

ಇತ್ಯಾದಿ ಪ್ರತಿಯೊಬ್ಬರೂ ತಿಳಿದಿರಬೇಕಾದ ಸರಳ ಮಾಹಿತಿಗಳು

ಮನೆ ಕಟ್ಟುವ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಪ್ರಶ್ನೆ, ಅನುಮಾನ, ಸಂದೇಹಗಳಿದ್ದರೆ ಈ ವಿಳಾಸಕ್ಕೆ ಬರೆಯಿರಿ ತಜ್ಞರ ಮೂಲಕ ಉತ್ತರ ಒದಗಿಸುತ್ತೇವೆ.

ವಿಳಾಸ : ಬಿಸಿಲ ಬದುಕು, 552, 15ನೇ ಮೇನ್, 3ನೇ ಸ್ಟೇಜ್, 4ನೇ ಬ್ಲಾಕ್, ವಾಟರ್ ಟ್ಯಾಂಕ್ ರೋಡ್,
ಬಸವೇಶ್ವರನಗರ, ಬೆಂಗಳೂರು - 560 079 ಫೋನ್ : 3227810,

BISILA BADUKU Kannada Monthly JULY 2000 RNI No. 67406 / 97 Regd. CPMG /KA /BGW-59 / 2000